# ಯಮದೂತರು

ಸುದರ್ಶನ ದೇಸಾಯಿ



# ಯಮದೂತರು

(ಕಾದಂಬರಿ)

ಸುದರ್ಶನ ದೇಸಾಯಿ

ಸಾಹಿತ್ಯ ಪ್ರಕಾಶನ
ಸಿಟಿ ಕ್ಲಿನಿಕ್ ಸಂಕೀರ್ಣ; ದಾಜೀಬಾನ್ ಪೇಟೆ
ಹುಬ್ಬಳ್ಳಿ: ೫೮೦ ೦೨೮

**ಸಾಹಿತ್ಯ ಪ್ರಕಾಶನ**
ಸಿಟಿ ಕ್ಲಿನಿಕ್ ಸಂಕೀರ್ಣ; ದಾಜೀಬಾನ್ ಪೇಟೆ
ಹುಬ್ಬಳ್ಳಿ: ೫೮೦ ೦೨೮

ಸಂಪಾದನ–ಪ್ರಕಾಶನ:
ಎಂ. ಎ. ಸುಬ್ರಹ್ಮಣ್ಯ

ವಿಮರ್ಶೆ-ಮಾರ್ಗದರ್ಶನ:
ಸರ್ವಶ್ರೀ ಮಲ್ಲೇಪುರಂ ಜಿ. ವೆಂಕಟೇಶ, ಬೆಂಗಳೂರು
" ಜಿ. ಜ್ಞಾನಾನಂದ, ಕೆ.ಜಿ.ಎಫ್.
" ಎಂ. ಪದ್ಮನಾಭಯ್ಯ, ಧಾರವಾಡ

YAMADOOTARU; A fiction in Kannada by Sudarshan Desai; Published by Sahitya Prakashana, City Clinic Complex, Dajibanpet, Hubli: 580 028

ಹಕ್ಕುಗಳು: ಶ್ರೀಮತಿ ಸುಜಾತಾ ದೇಸಾಯಿ

ಮೊದಲ ಮುದ್ರಣ: 1988 ಪುಟಗಳು: iv + 188 ಬೆಲೆ: 30–00

ಮುದ್ರಣ: ಅಲ್ಲಮ ಮುದ್ರಣಾಲಯ, ಕಪಪೂರಪೇಟೆ, ಗದಗ 582 101

# ಒ ಡ ನು ಡಿ

ಪ್ರಿಯ ಓದುಗರೆ,

ನನ್ನ ಪ್ರತಿಯೊಂದು ಕಾದಂಬರಿಯಲ್ಲಿಯೂ ಹೊಸತೇನಾದರೊಂದನ್ನು ಕೊಡುತ್ತ ಬಂದಿದ್ದೇನೆ. ಭಿನ್ನ ಭಿನ್ನ ಕಥಾವಸ್ತುವಿನಿಂದ ಒಂದರಿಂದೊಂದು ತೀರ ವಿಭಿನ್ನವೆನಿಸುವ ಶೈಲಿಯೇ ನನ್ನ ವೈಶಿಷ್ಟ್ಯ. ಈ 'ಯಮದೂತರು' ಸಹ ಇದಕ್ಕೆ ಹೊರತಲ್ಲ. ಇದನ್ನು ಸುಮಾರು ಎರಡು ವರ್ಷಗಳ ಹಿಂದೆ ಬರೆಯಲು ಪ್ರಾರಂಭಿಸಿ ಮಧ್ಯೆ ಮಧ್ಯೆ ಕೈಬಿಟ್ಟು ಬೇರೆ ಕಾದಂಬರಿಗಳಲ್ಲಿ ತೊಡಗಿದೆ. ಹೆಚ್ಚು ಕಮ್ಮಿ ಆ ಮಧ್ಯೆ ಏಳು ಕಾದಂಬರಿಗಳು ಬಂದವು. ಇದೀಗ 'ಯಮದೂತರು' ಪೂರ್ಣಗೊಂಡು ಹೊರಬಂದ ಯೋಗ. ನಿಮ್ಮನ್ನು ಖಂಡಿತಕ್ಕೂ ರಂಜಿಸಲಿದೆ ಎಂದು ನನ್ನ ನಂಬಿಕೆ.

ಪುಕ್ಕಟೆಯಾಗಿ ಓದುವ ಸಾಹಿತ್ಯ ಪ್ರೇಮದಿಂದ ಸಾಹಿತ್ಯ ಬೆಳೆಯಲಾರದು. ಕೊಂಡು ಓದುವ ಹವ್ಯಾಸದಿಂದ ಮಾತ್ರ ಕನ್ನಡ ಸಾಹಿತ್ಯ, ಪ್ರಕಾಶಕ, ಲೇಖಕ ಬದುಕಬಲ್ಲರು. ಇದಕ್ಕೆ ತಮ್ಮ ಶ್ರೀರಕ್ಷೆ ಬೇಕು.

ನನ್ನ ಹಲವಾರು ಕಾದಂಬರಿಗಳನ್ನು ಬೆಳಕಿಗೆತಂದ ಮಿತ್ರ ಶ್ರೀ ಸುಬ್ರಹ್ಮಣ್ಯ ಅವರು ತಮ್ಮ ಸಾಹಿತ್ಯ ಪ್ರಕಾಶನದಿಂದ ಈ ಕಾದಂಬರಿಯನ್ನು ಹೊರತಂದಿದ್ದಾರೆ. ಅವರಿಗೂ,

ಅಂದವಾದ ಮುಖಚಿತ್ರ ಬರೆದ ಶ್ರೀ ಚಂದ್ರನಾಥ ಅವರಿಗೂ ಹಾಗೂ

ಸುಂದರ ಮುದ್ರಣಕಾರ್ಯ ನೆರವೇರಿಸಿದ ಗದುಗಿನ ಅಲ್ಲಮ ಮುದ್ರಣಾಲಯದವರಿಗೂ

ಕೃತಜ್ಞತೆಗಳು

'ಹಳದಿ ಜೇಳು'
ಸಾರಸ್ವತಪುರ ಕೊನೇ ಹಂತ
ರೈಲು ಹಳಿ ಸಮೀಪ
ಧಾರವಾಡ: ೫೮೦ ೦೦೨

ತಮ್ಮ
ಸುದರ್ಶನ ದೇಸಾಯಿ

# ಯಮದೂತರು

ಯಮದೂತರು

ಯಮದೂತರು

# ೧

ರಾಜಧಾನಿಯ ಪಶ್ಚಿಮ ಭಾಗ

ಸಮುದ್ರಕ್ಕೆ ಹೊಂದಿಕೊಂಡೇ ಇರುವ "ಸೀಪರ್ಲ್" ರೆಸ್ಟಾರೆಂಟ್ ಇಂದ್ರ ನಗರಿಯನ್ನು ಮೀರಿಸುವಷ್ಟು ಅಲಂಕೃತಗೊಂಡಿತ್ತು. ಬಿಡುವಿನ ದಿನಗಳಾಗಿದ್ದರಿಂದ ಸುತ್ತುಮುತ್ತಲಿನಿಂದ ಬಂದ ದೇಶವಿದೇಶಿ ಪ್ರವಾಸಿಕರಿಂದ ತುಂಬಿ ತುಳುಕುತ್ತಿದ್ದ ಸಮುದ್ರ ಮತ್ತು ರೆಸ್ಟಾರೆಂಟಿನ ಹೊರಭಾಗ ಸಮುದ್ರದವರೆಗೂ ಚಾಚಿತ್ತು.... ಒಂದೊಂದು ಬಾರಿ ಏರಿ ಬಂದ ಭಾರೀ ತೆರೆಗಳು ಪ್ರವಾಸಿಕರ ಪಾದಸ್ಪರ್ಶ ಮಾಡಿ ಕಚಗುಳಿ ಇಟ್ಟು ಮರಳಿದಾಗ ಅವರು ಚಿಕ್ಕಮಕ್ಕಳಂತೆ ಕೇಕೆ ಹಾಕುತ್ತಿದ್ದರು.

ಸಮಯ ರಾತ್ರಿ ಎಂಟು ಗಂಟೆ ಸಮೀಪಿಸಿತ್ತು.

ಎಲ್ಲೆಡೆ ಕತ್ತಲೆ ದಟ್ಟವಾಗಿ ಆವರಿಸಿದ್ದರೂ ಬಗೆ ಬಗೆಯ ಬಣ್ಣಗಳಿಂದ ಕೂಡಿದ ಸೀಪರ್ಲ್ ರೆಸ್ಟಾರೆಂಟಿನ ಅಸಂಖ್ಯ ದೀಪಗಳು ಬೆಳಗಿ ಕತ್ತಲೆಯನ್ನು ಸುಮಾರು ದೂರ ಓಡಿಸಿದ್ದವು. ಸಮುದ್ರದ ತೆರೆಗಳ ಮೇಲೆ ಮಯೂರ ನೃತ್ಯ ಮಾಡುತ್ತಿದ್ದ ದೀಪಮಾಲೆಯ ಸೌಂದರ್ಯ ಸವಿಯುತ್ತ ವಿದೇಶಿ ಪ್ರವಾಸಿಕರು ತಮ್ಮ ತಮ್ಮ ಸಂಗಾತಿಗಳೊಂದಿಗೆ ನರ್ತಿಸಲು ಪ್ರಾರಂಭಿಸಿದರು. ಅದಕ್ಕೆ ಒಮ್ಮೇಳವಾಗಿ ಪಾಶ್ಚಾತ್ಯ ಸಂಗೀತ ಕೇಳಿಬರುತ್ತಿದ್ದಂತೆ ವಾತಾವರಣ ಮಾದಕಮಯವಾಯಿತು. ಪ್ರೇಮಿಗಳು ಆಮೋದ–ಪ್ರಮೋದ ಶೃಂಗಾರ ಚೇಷ್ಟೆಗಳಲ್ಲಿ ತೊಡಗುತ್ತಿದ್ದಂತೆ, ಅಲ್ಲಿಯವರೆಗೂ ಏಕಾಂಗಿಯಾಗಿ ಸಿಗರೇಟು ಉರಿಸುತ್ತ ಕುಳಿತಿದ್ದ ಶೇಖರ ಸಿಗರೇಟನ್ನು ಸೀರಿನೆಡೆ ಚಿಮ್ಮಿ, ಅವರೆಡೆ ಒಂದು ತಾತ್ಸಾರ ದೃಷ್ಟಿ ಬೀರಿ ಮೇಲೆದ್ದ. ಇನ್ನೂರು ಮುನ್ನೂರು ಅಡಿ ದೂರದಲ್ಲಿದ್ದ........ "ಸೀಪರ್ಲ್"ನತ್ತ ಹೆಜ್ಜೆ ಹಾಕಿದ.

ಡೈನಿಂಗ್ ಹಾಲ್ ಖಚಾಖಚ್ ತುಂಬಿಹೋಗಿತ್ತು...ವಿಸ್ಕಿ....ರಮ್... ಶಾಂಪೇನ್ ಸೇವಿಸುತ್ತ ದೊಡ್ಡ ಧ್ವನಿಯಲ್ಲಿ ಅರಚುತ್ತಾ 'ಸ್ಟ್ರಿಪ್ ಡ್ಯಾನ್ಸ್' ಮಾಡುತ್ತಿದ್ದ ನರ್ತಕಿಯೆಡೆ ಹಸಿ ಹಸಿ ದೃಷ್ಟಿ ಬೀರಿ ಅಶ್ಲೀಲ ಸನ್ನೆ ಮಾಡುತ್ತಿದ್ದ ಗಿರಾಕಿಗಳ ಮಧ್ಯೆ ಹಾಯ್ದು ಸ್ಪೆಶಲ್ ರೂಮಿನತ್ತ ನಡೆದ ಶೇಖರ. ಅಲ್ಲಿ ಶೇಖರ ತುಂಬಾ ಪರಿಚಿತನಾಗಿದ್ದರಿಂದಲೋ...ಅಥವಾ ಆತ ನೀಡುವ ದೊಡ್ಡ

ಮೊತ್ತದ 'ಟಿಪ್ಸ್'ನಿಂದಾಗಿಯೋ, ಅವನಿಗೆ ಕೂಡಲೆ ರೂಮು ದೊರೆಯಿತು. ಓಂದೆಯೇ ಬಂದ ವೇಟರನೆಡೆ ಇಪ್ಪತ್ತರ ನೋಟನ್ನು ಚಾಚಿ ಟಿಪ್ ನೀಡಿದ ಶೇಖರ ಡ್ರಿಂಕ್ಸ್‌ಗೆ ಆರ್ಡರ್ ಮಾಡಿದ. ನಂತರ ಡಿನ್ನರ್. ಡಿನ್ನರ್ ಮುಗಿಯುತ್ತಿದ್ದಂತೆ ಲಸ್ಸಿ ಎಂದ. ಲಸ್ಸಿಯೊಂದಿಗೆ ಬಿಲ್ ತಂದಿರಿಸಿದ ವೇಟರ್. ನೂರರ ನೋಟನ್ನು ಮೇಜಿನ ಮೇಲೆ ಇಟ್ಟು ಲಸ್ಸಿಯನ್ನು ಹೀರಿದ. ಒಂದೇ ಒಂದು ಬಾರಿ...

ಮರುಕ್ಷಣ 'ಫುರ್' ಎಂದು ಕಾರಂಜಿಯಂತೆ ಸಿಡಿದು ಬಾಯಿಯಿಂದ ಹೊರಬಂದಿತು ಲಸ್ಸೀ.... ವೇಟರ್ ಗಾಬರಿಯಾಗಿ ಅವನೆಡೆ ನೋಡುತ್ತಿದ್ದಂತೆ ಶೇಖರ ಬಾಂಬಿನಂತೆ ಸಿಡಿದ "ರಾಸ್ಕಲ್....ಎಲ್ಲಾ ಟೇಸ್ಟ್ ಹಾಳು ಮಾಡಿಬಿಟ್ಟೆ ...ಸ್ವೀಟ್ ಲಸ್ಸೀ ತಾ ಎಂದರೆ, ಸಾಲ್ಟ್ ಲಸ್ಸಿ ತಂದೆ...."

"ಸಾರಿ ಸರ್... ತಾವು ಸ್ವೀಟ್ ಎಂದು ಹೇಳಲೇ ಇಲ್ಲ." ಸಮಾಧಾನ ನೀಡಲು ಪ್ರಯತ್ನಿಸಿದ ವೇಟರ್‌ನ ಕೆನ್ನೆ ಕೆಂಪಾಯಿತು. ಶೇಖರನ ಒಂದೇ ಒಂದು ಏಟಿಗೆ ಆತ ತತ್ತರಿಸಿ ಹೋದ..."ನೀನು ಮಾಮೂಲಿ ವೇಟರ್....ನನಗೆ ಎದುರು ನುಡಿಯುತ್ತೀಯಾ... ನಾನಿದರ ಬಗ್ಗೆ ರಿಪೋರ್ಟ್ ಮಾಡಬೇಕು.... ಹೆಡ್ ವೇಟರ್‌ನನ್ನು ಕರೆ."

"ಸಾರಿ ಸರ್.... ನನ್ನಿಂದ ತಪ್ಪಾಯ್ತು. ರಿಪೋರ್ಟ್ ಮಾಡಬೇಡಿ." ನಿಡನಿಡನೆ ಕೇಳಿಕೊಂಡ ವೇಟರನ ವಿನಂತಿ ವ್ಯರ್ಥವಾಯಿತು. ಶೇಖರನದು ಒಂದೇ ಹಟ...ಹೆಡ್ ವೇಟರ್ ಬೇಕು....ಕೊನೆಗೆ ಗೆದ್ದವನೂ ಅವನೇ....

ಐದೇ ನಿಮಿಷಗಳಲ್ಲಿ ಹೆಡ್ ವೇಟರ್ ಹಾಜರಾದ. ನಡೆದ ವಿಷಯ ತಿಳಿದುಕೊಂಡು ವಿಷಾದ ವ್ಯಕ್ತಪಡಿಸಿದ. ಶೇಖರನೆದುರು ಸ್ವೀಟ್ ಲಸ್ಸಿ ಗ್ಲಾಸು ತಂದಿರಿಸಿದ.... ಲಸ್ಸಿ ಕುಡಿಯುತ್ತಿದ್ದಂತೆ ಬಿಲ್ಲಿನ ಉಳಿದ ಹಣ, ರಸೀತಿಯ ಜೆರಾಕ್ಸ್ ಕಾಪಿ ತಂದು ಅವನ ಮುಂದಿರಿಸಿ ವಂದಿಸಿದ... ಅಷ್ಟರಲ್ಲಿ ಶೇಖರನ ಕೋಪವೂ ಶಾಂತವಾಗಿತ್ತು. ಆತನು ತನ್ನ ನಡತೆಗಾಗಿ ಪಶ್ಚಾತ್ತಾಪ ವ್ಯಕ್ತಪಡಿಸಿ ಏಟು ತಿಂದ ವೇಟರ್‌ನಿಗೆ ಐವತ್ತು ರೂಪಾಯಿ ಭಕ್ಷೀಸು ನೀಡಿ ಹೊರಬಂದ.

ಬರುವಾಗ ಹಣದೊಂದಿಗೆ ರಸೀತಿಯ ಪ್ರತಿ ಎತ್ತಿಕೊಂಡು ಬರಲು ಮರೆಯಲಿಲ್ಲ. 'ಸೀಪರ್ಲ್' ರೆಸ್ಟಾರೆಂಟಿನ ಪಾರ್ಕಿನಲ್ಲೀ ಅವನ ಫಿಯಟ್ ಕಾರು ಅವನಿಗಾಗಿ ಕಾಯುತ್ತಿತ್ತು. ಡೋರ್‌ಲಾಕ್ ಓಪನ್ ಮಾಡಿ ಕುಳಿತು ಪುನಃ ಬಾಗಿಲು ಮುಚ್ಚಿಕೊಂಡ. ಒಳಗೆ ಕುಳಿತಲ್ಲಿಂದಲೇ ಸುತ್ತಲೂ ದೃಷ್ಟಿ ಬೀರಿದ. ನಂತರ ನಿಧಾನವಾಗಿ ಜೇಬಿನಿಂದ ಬಿಲ್ಲಿನ ರಸೀದಿ ಹಾಗೂ ಲೈಟರ್

ಹೊರತೆಗೆದ. ಲೈಟರ್ ಉರಿಸಿ ರಸೀದಿಯ ಹಿಂಭಾಗವನ್ನು ತುಸುವೇ ಬಿಸಿ ಮಾಡಿದ. ಬಿಲ್ಲಿನ ಅಂಕಿಗಳು ಮಾಯವಾಗಿ ಬೇರೆ ಎರಡು ಮೂರು ಸಾಲು ಬರಹ ಕಾಣತೊಡಗಿತು.

'ರೂಂ ನಂಬರ್ ಐದುನೂರಾ ಐವತ್ತ್ಯೈದರ ವ್ಯಕ್ತಿ ಸಂದಿಗ್ಧ. ಮೇಲ್ನೋಟಕ್ಕೆ ವ್ಯಾಪಾರಿಯಂತೆ ಕಂಡರೂ ಆತ ವಿದೇಶೀ ಗೂಢಚಾರ ಇರಬೇಕೆನಿಸುತ್ತದೆ....ಯಾವದೋ ಸಂಚಿನ ವಾಸನೆ ಬರುತ್ತಿದೆ.'

ಚೆನ್ನಾಗಿ ಓದಿಕೊಂಡು ನಂತರ ಬಿಲ್ಲಿಗೆ ಅಗ್ನಿ ಸಂಸ್ಕಾರ ಮಾಡಿದ ಶೇಖರ. ಅವನ ಮುಖ ಗಂಭೀರವಾಗಿತ್ತು. ಈ ಸೂಚನೆಯನ್ನು ಹೆಡ್ ಕ್ವಾರ್ಟರ್ಸ್‌ಗೆ ಕಳಿಸುವದು ತೀರಾ ಅವಶ್ಯವಾಗಿತ್ತು. ಫಿಯಟ್ ಕಾರು ಓಡತೊಡಗಿತು ನಗರದತ್ತ...

ಶೇಖರ ಇಪ್ಪತ್ತೆಂಟು ಮೂವತ್ತು ವರ್ಷಗಳ ಸುಂದರ ತರುಣ. ಪೋಲೀಸ್ ಇಲಾಖೆಯಲ್ಲಿ ಕೆಲಸ. ವಿಶೇಷ ತನಿಖಾ ದಳದಲ್ಲಾತ ಇನಸ್ಪೆಕ್ಟರ್. ವಿದೇಶಗಳಿಂದ ಪ್ರವಾಸದ ನೆಪ ಮಾಡಿಕೊಂಡು ರಾಜಧಾನಿಗೆ ಬರುವ ವಿದೇಶೀ ಗೂಢಚಾರರ ಮೇಲೆ ಒಂದು ಕಣ್ಣಿಡುವದೇ ಅವನ ಕೆಲಸ. ಅವನ ಸಹಾಯಕ ರಾದವರು ರಾಜಧಾನಿಯ ಪ್ರತಿಯೊಂದು ಫೈವ್‌ಸ್ಟಾರ್ ಹೊಟೆಲಿನಲ್ಲಿ ವೇಟರ ರಾಗಿ, ಹೆಡ್ ವೇಟರರಾಗಿ ಕೆಲಸ ಮಾಡುತ್ತಿದ್ದರು. ಅವರಿಂದ ಸೂಚನೆ ಬರುತ್ತಲು ಶೇಖರ ಅವರ ಹೊಟೆಲ್‌ಗೆ ಹೋಗಿ ಅವರಿಂದ ಸುದ್ದಿ ಸಂಗ್ರಹಿಸು ತ್ತಿದ್ದ... ಈ ಕಾರ್ಯ ಕಳೆದ ಆರು ವರ್ಷಗಳಿಂದ ನಡೆದು ಬಂದಿತ್ತು.

ಇಂದೂ ಸಹ ಆತ ವೇಟರ್‌ನ ಕೆನ್ನೆಗೆ ಬಾರಿಸಿ ಕಾಲುಕೆದರಿ ಜಗಳ ಕಾಯ್ದು ಹೆಡ್ ವೇಟರ್‌ನನ್ನು ಕರೆಸಿ ಅವನಿಂದ ಐದುನೂರಾ ಐವತ್ತ್ಯೈದನೇ ರೂಮಿನಲ್ಲಿರುವ ಪ್ರವಾಸಿಕನ ಬಗ್ಗೆ ವಿಷಯ ಸಂಗ್ರಹಿಸಿದ ಸೀಪರ್ಲ್ ಹೊಟೆಲ್‌ನಲ್ಲಿ.

ಒಂದು ಮಾತು ದೃಢಪಟ್ಟಿತ್ತು– ಸೀಪರ್ಲ್‌ನಲ್ಲಿರುವ ವ್ಯಕ್ತಿ ವ್ಯಾಪಾರಿ ವೇಷದಲ್ಲಿದ್ದರೂ ಆತ ವ್ಯಾಪಾರಿಯಲ್ಲ; ಗೂಢಚಾರಿ ಎಂದು.... ಅದಕ್ಕೆಂದೆ ಚಿಂತಿತನಾದ ಆತ ತನ್ನ ಬಾಸ್‌ಗೆ ಖುದ್ದಾಗಿ ವರದಿ ಸಲ್ಲಿಸಲು ಹೆಡ್‌ಕ್ವಾರ್ಟರ್ಸ್ ಕಡೆ ನಡೆದಿದ್ದ....ಅವನ ಫಿಯಟ್ ಕಾರು ಕೇವಲ ಇಪ್ಪತ್ತೆಂಟು ನಿಮಿಷಗಳಲ್ಲಿ ಇಪ್ಪತ್ತಾರು ಕಿಲೋಮೀಟರ್ ಚಲಿಸಿ ಅವನನ್ನು ತಲುಪಬೇಕಾದ ಸ್ಥಳ ತಲುಪಿ ಸಿತ್ತು....ಮುಂದೆ ಎರಡೇ ನಿಮಿಷಗಳಲ್ಲಿ ಶೇಖರ ಬಾಸ್ ಮುಂದಿದ್ದ....

ಶೇಖರನಿಂದ ವಿಷಯ ತಿಳಿದ ಬಾಸ್ ಶ್ರೀನಿವಾಸ ಕುಲಕರ್ಣಿ ಅವರು ಒಂದೆರಡು ಕ್ಷಣ ಯೋಚಿಸಿ, ಫೋನಿನಲ್ಲಿ ನಂಬರ್ ಜೋಡಿಸುವಲ್ಲಿ ಮಗ್ನ

ರಾದರು. ಅದೊಂದು ಕೋಡ್‌ನಂಬರ್. ಯಾವ ಡೈರಕ್ಟರಿಯಲ್ಲಿಯೂ ಅದು ಸಿಗುತ್ತಿರಲಿಲ್ಲ. ಎದುರು ಯಾರೇ ಕುಳಿತಿರಲಿ ಅವರಿಗೆ ಸ್ವಲ್ಪವೂ ಸಂಶಯ ಬರದಂತೆ ಫೋನು ಮಾಡಬಹುದಿತ್ತು.

ಮೊದಲು ಒಂದು ಬಾರಿ ನಂಬರು ಜೋಡಿಸಿ ಆ ಕಡೆಯ ಡೈಲ್ ಆಲಿಸುವದು, ನಂತರ ಮತ್ತೆ ಅದೇ ನಂಬರ್ ಜೋಡಿಸುವದು.... ಈ ರೀತಿ ಮೂರು ಬಾರಿ ನಂಬರ್ ಜೋಡಿಸಿದರೆ ಇಚ್ಛಿತ ವ್ಯಕ್ತಿ ದೊರೆಯುತ್ತಿತ್ತು. ನಂಬರ್ ಸಹ ಅತೀ ಸುಲಭವಾದದ್ದು: ಹದಿಮೂರನ್ನು ತಿರುವುಮುರುವಾಗಿ ಮೂರು ಸಾರೆ ಡಯಲ್ ಮಾಡಿದರೆ ಸಾಕು. ಒಂದು ಮೂರು...ಮೂರು ಒಂದು....ಒಂದು ಮೂರು.... ಆ ಕಡೆಯಿಂದ ಭಾರತದ ಗೂಢಚಾರ ಪಡೆಯ ಮುಖ್ಯಸ್ಥ ಮುಖರ್ಜಿ ಫೋನು ಎತ್ತುತ್ತಿದ್ದರು.

ಕೇವಲ ಒಂದೇ ನಿಮಿಷದಲ್ಲಿ ಕುಲಕರ್ಣಿ ಅವರಿಗೆ ಮುಖರ್ಜಿ ಅವರು ದೊರೆತರು. ಫೋನಿನ ಮೇಲೆ ನಾಲ್ಕಾರು ನಿಮಿಷ ಮಾತನಾಡಿ ರಿಸೀವರ್ ಕೆಳಗೆ ಇಟ್ಟು ಕುಲಕರ್ಣಿ ಅವರು ಶೇಖರನ ಕಡೆ ಹೊರಳಿದರು.

"ಮಿಸ್ಟರ್ ಶೇಖರ, ನಾನು ರಿಪೋರ್ಟ್ ಮಾಡಿರುವೆ. ಹೆಡ್ ಆಫೀಸಿನಿಂದ ಒಬ್ಬ ಏಜಂಟ್ ಬಂದು ನಿಮ್ಮಿಂದ ಚಾರ್ಜ್ ತೆಗೆದುಕೊಳ್ಳುವವರೆಗೂ ನೀವು ಅಲ್ಲೇ ಇರಿ."

ಒಪ್ಪಿಗೆ ಸೂಚಿಸಿದ ಶೇಖರ ರೂಮಿನಿಂದ ಹೊರಹೋಗುತ್ತಲೂ ಇಂಟರಕಾಂ ಗುಂಡಿ ಅದುಮಿ ಕುಲಕರ್ಣಿ ಆದೇಶ ನೀಡಿದರು:

'ಕೂಡಲೇ ಮೇಜರ್ ಹೇಮಂತ ಎಲ್ಲಿದ್ದಾರೆ ಹುಡುಕಿ.... ನಂತರ ನನಗೆ ತಿಳಿಸಿ.'

## ೨

ಮೇಜರ್ ಹೇಮಂತನ 'ಕಾಂಟೆಸಾ' ಕಾರು ಗಂಟೆಗೆ ಎಂಭತ್ತು ಕಿಲೋಮೀಟರ್ ವೇಗದಲ್ಲಿ ಓಡುತ್ತಿತ್ತು. ಸ್ವತಃ ಮೇಜರನೇ ಕಾರು ಓಡಿಸುತ್ತಿದ್ದ. ಅವನ ಪಕ್ಕದಲ್ಲೆ ಸುಷಮಾ ಕುಳಿತಿದ್ದಳು. ಕಿಟಕಿಯಿಂದ ನುಗ್ಗಿ ಬಂದ ಗಾಳಿ ಅವಳ ಮುಂಗುರುಳುಗಳನ್ನು ಹಾರಿಸುತ್ತಿದ್ದಂತೆ ಆಕೆ ಎಡಗೈಯಿಂದ ಸರಿಪಡಿಸಿಕೊಳ್ಳುತ್ತಿದ್ದಳು. ಮುಂಗುರುಳುಗಳು ಮತ್ತೆ ಮತ್ತೆ ಹಾರುತ್ತಿದ್ದವು. ಕಾರು

ಓಡಿಸುತ್ತಲೇ ಹೇಮಂತ ಎರಡು ಮೂರು ಬಾರಿ ಸುಷಮಾಳತ್ತ ನೋಡಿದ. ಅಂದು ಆಕೆ ಅವನಿಗೆ ಎಂದಿಗಿಂತ ಸುಂದರವಾಗಿ ಕಂಡಳು. ಓಹ್...... ನನ್ನಾಕೆ ಎಷ್ಟು ಚೆಲುವೆ ಎಂದುಕೊಂಡ ಮನದಲ್ಲಿ. ಸಾಲು ಮರಗಳ ಮಧ್ಯೆ ಕಾರು ಓಡುತ್ತಿತ್ತು. ಒಂದೆಡೆ ಸೇತುವೆ.... ರಿಪೇರಿ ಕಾರ್ಯ ನಡೆದದ್ದರಿಂದ ಕೇವಲ ಒಂದೆಡೆಯಿಂದ ವಾಹನಗಳು ಸಾಗುತ್ತಿದ್ದವು. ಆ ಕಡೆ ವಾಹನಗಳು ದಾಟಿಯಾದ ಮೇಲೆ ಈ ಕಡೆ ವಾಹನಗಳು ಸಾಗಲು ಸಿಗ್ನಲ್ ನೀಡಲಾಗುತ್ತಿತ್ತು. ಹೀಗಾಗಿ ಮೊದಲೇ ನಿಂತಿದ್ದ ಹತ್ತಾರು ವಾಹನಗಳ ಹಿಂದೆ ತನ್ನ ಕಾರು ನಿಲ್ಲಿಸಿ ತುಂಟತನದಿಂದ ಸುಷಮಾಳ ಕಡೆ ನೋಡಿದ ಹೇಮಂತ. ಆ ನೋಟದಲ್ಲಿ ಅಡಗಿದ ರಹಸ್ಯ ಅರಿತ ಸುಷಮಾ ರೋಮಾಂಚಿತಳಾದಳು. ಆದರೂ ಮೇಲ್ನೋಟಕ್ಕೆ ಪ್ರತಿರೋಧ ವ್ಯಕ್ತಪಡಿಸುವ ಸನ್ನಾಹ ಮಾಡಿಕೊಂಡಳು.

"ಸುಷಮಾ ಇಂದು ನೀನು ತುಂಬಾ ಸುಂದರವಾಗಿ ಕಾಣುತ್ತಿರುವೆ. ನಿನ್ನ ಸೌಂದರ್ಯರಸ ಸ್ವಲ್ಪ ಹೀರಲೇ?" ಹೇಮಂತ ಕವಿ ವಾಣಿಯಲ್ಲಿ ಕೇಳಿದ.

"ಬೇಡಪ್ಪ....ನಿನ್ನೆ ತಾನೇ ಹೊಟ್ಟೆ ಬಿರಿಯುವಷ್ಟು ಊಟ ಮಾಡಿರುವಾಗ ಈಗ ಸ್ವಲ್ಪ ರಸ ಸೇವಿಸುವದು ಸರಿಯಲ್ಲ.... ಅದು ಆರೋಗ್ಯಕ್ಕೂ ಹಾನಿ ತಂದೀತು."

"ಮೇಡಂ....ನಾನು ವಿಜ್ಞಾನ ವಿಷಯದಲ್ಲಿ ಪದವೀಧರ ಅನ್ನುವದನ್ನು ನೀನು ಮರೆತಂತಿದೆ....ಒಂದು ಬಾರಿ ಊಟ ಮಾಡಿದ ನಂತರ ಕನಿಷ್ಟಪಕ್ಷ ಆರು ಗಂಟೆ ಕಾಲ ಏನೂ ಸೇವಿಸಬಾರದು ಎಂದು ವಿಜ್ಞಾನ ಹೇಳುತ್ತದೆ. ಈ ಆರು ಗಂಟೆ ಅವಧಿಯಲ್ಲಿ ಊಟ ಮಾಡಿದ್ದು ಪಚನವಾಗಿರುತ್ತದೆ ಎಂದರ್ಥ. ಈಗ ಸಮಯ ಸಾಯಂಕಾಲ ನಾಲ್ಕು....ಅಂದರೆ... ಅಬ್ಬಾ ನಾನು ಊಟ ಮಾಡಿ ಹದಿನೆಂಟು ಗಂಟೆ ಕಳೆದವು. ಆರು ಗಂಟೆಯಂತೆ ಲೆಕ್ಕ ಹಾಕಿದರೆ ಇಷ್ಟರೊಳಗೆ ನಾನು ಮೂರು ಸಾರೆ ಊಟ ಮಾಡಬೇಕಾಗಿತ್ತು...... ಅಯ್ಯೋ ಎಂಥ ಅನರ್ಥವಾಯಿತು?"

ಸುಷಮಾ ಗಾಬರಿಯಾಗಿ ಅವನತ್ತ ನೋಡಿ ಹೇಳಿದಳು, "ಸ್ವಾಮಿ ವಿಜ್ಞಾನವನ್ನು ಅರೆದು ಕುಡಿದು ತೇಗಿದ ಪದವೀಧರರೆ, ಈಗ ನೀವೇನಾದರೂ ಒಂದೇ ಸಾರಿ ಮೂರೂ ಊಟ ಮಾಡಲು ಬಯಸಿದರೆ ಈ ನಮ್ಮ ಕಾಂಟೆಸಾವನ್ನು ನಾಳೆ ಗ್ಯಾರೇಜಿಗೆ ಕಳಿಸಬೇಕಾಗುತ್ತದೆ. ಹುಷಾರ್...."

"ಅಷ್ಟು ಬುದ್ಧಿಯಿಲ್ಲವೇ ನನಗೆ?.... ಕಾಂಟೆಸಾದಲ್ಲಿ ಊಟ ಮಾಡಿದರೆ ಅದು ಊಟ ಮಾಡಿದಂತಾಗುವದಿಲ್ಲ.... ಹಾಂ...ಕಾಂಟೆಸಾದಲ್ಲಿ ಉಪಹಾರ ಸೇವಿಸಬಹುದು...ಇದಕ್ಕೆ ನಿಮ್ಮ ಅಭಿಪ್ರಾಯವೇನು?"

"ಊಟಾನು ಬೇಡ... ಉಪಹಾರನೂ ಬೇಡ ... ಏನು ಬೇಕಾಗಿಲ್ಲ... ಅದೋ ನೋಡಿ ಟ್ರಾಫಿಕ್ ಸ್ಟಾರ್ಟ್ ಆಯಿತು"

"ಆಗಲಿ...ಬೇಡವೆಂದವರಾರು? ಮುಂದಿನ ವಾಹನ ಸರಿಯುವವರೆಗೆ...." ಮಾತನ್ನು ಅರ್ಧಕ್ಕೆ ನಿಲ್ಲಿಸಿ ಒಂದೇ ಎಳೆತಕ್ಕೆ ಸುಷಮಾಳನ್ನು ತನ್ನ ಮಡಿಲಿಗೆ ಎಳೆದುಕೊಂಡ ಹೇಮಂತ........ಕುಂಯೀ ಕುಂಯೀ........ಎಂದ ಸುಷಮಾ ಒಮ್ಮೆಂದೊಮ್ಮೆಲೇ ನಾಚಿ ಮುದ್ದೆಯಾಗಿ ಮೇಣದ ಬೊಂಬೆಯಾಗಿ ತನ್ನನ್ನು ತಾನಾಗಿ ಅವನಿಗೆ ಅರ್ಪಿಸಿಕೊಂಡಳು.

ಮೊದಲು ಕೆಂದಾವರೆಯಂಥ ಅವಳ ಎರಡೂ ಕಣ್ಣುಗಳನ್ನು ಚುಂಬಿಸಿದ ಹೇಮಂತ....ನಂತರ ಅರೆಬಿರಿದ ಕಮಲದ ಮೊಗ್ಗೆಯಂತಿದ್ದ ಅವಳ ಅಧರಗಳ ಮೇಲೆ ತನ್ನ ಅಧರಗಳನ್ನಿಟ್ಟು ಮುದ್ದಿಸಿದಾಗ ಸುಷಮಾಳ ಲತೆಯಂತಹ ದೇಹ ಒಂದೆರಡು ಸೆಕೆಂಡುಗಳ ಕಾಲ ಕಂಪಿಸಿ ಸ್ಥಿರವಾಯಿತು.

'ಪೀಂ....ಪೀಂ...ಪೀಂ...'

ಹಿಂದುಗಡೆಯಿಂದ ಬಂದ ವಾಹನಗಳ ಕರೆ. ಸುಷಮಾಳನ್ನು ಸ್ವತಂತ್ರ ಗೊಳಿಸಿ ಕಾರನ್ನು ಮುಂದಕ್ಕೋಡಿಸಿದ ಹೇಮಂತ. ಪೂರ್ಣ ತೃಪ್ತ ಸುಷಮಾ ತನ್ನ ಇನಿಯನ ಪ್ರೀತಿಯ ಮಳೆಯಲ್ಲಿ ಮಿಂದು ಧನ್ಯಳಾದ ಭಾವನೆಯಲ್ಲಿ ಹೇಮಂತನತ್ತ ನೋಡಿದಳು. ಹೇಮಂತ ತಾನು ಕೈಗೆ ತೆಗೆದುಕೊಂಡ ಕೇಸಿನ ಬಗ್ಗೆ ಯೋಚಿಸತೊಡಗಿದ.

ಕುಖ್ಯಾತ ಅಪರಾಧಿ ಮಂಗಲನನ್ನು ಹುಡುಕಿಕೊಂಡು ಹೇಮಂತ ಹೊರಟಿದ್ದ, ಒಂದು ತಿಂಗಳ ಹಿಂದೆ ಬೆಂಗಳೂರಿನಲ್ಲಿ ನಡೆದ ಬ್ಯಾಂಕ್ ದರೋಡೆ ಘಟನೆ ದೇಶವನ್ನೇ ತಲ್ಲಣಗೊಳಿಸಿತ್ತು...ದರೋಡೆ ಕೋರರನ್ನು ತಡೆಯುವಲ್ಲಿ ಸಾಹಸ ತೋರಿಸಿದ ಬ್ಯಾಂಕ ಸಿಪಾಯಿ ಹಾಗೂ ಸಿಬ್ಬಂದಿಯಲ್ಲಿಯ ಇಬ್ಬರು, ಒಟ್ಟು ಮೂರು ಜನ ತಮ್ಮ ಪ್ರಾಣ ಕಳೆದುಕೊಂಡಿದ್ದರು. ಹೆಚ್ಚು ಕಡಿಮೆ ಎಂಭತ್ತೈದು ಲಕ್ಷ ರೂಪಾಯಿ ಲೂಟಿ ಮಾಡುವಲ್ಲಿ ಯಶಸ್ವಿಯಾದ ದರೋಡೆ ಕೋರರು ಅಲ್ಲಿಂದ ಪಲಾಯನ ಗೈದಿದ್ದರು. ಮಧ್ಯದಾರಿಯಲ್ಲಿ ಅಡ್ಡ ಬಂದ ಪೋಲೀಸ್ ಸಿಬ್ಬಂದಿ ವ್ಯೆಕಿ ಯಾರೂ ಜೀವ ಕಳೆದುಕೊಳ್ಳದಿದ್ದರೂ ಎಂಟು ಜನ ಗಾಯಗೊಂಡು ಆಸ್ಪತ್ರೆ ಸೇರಿದ್ದರು. ಅಪರಾಧಿಗಳನ್ನು ಪೋಲೀಸರು ಬೇಟೆನಾಯಿಯಂತೆ ಬೆನ್ನಟ್ಟಿದರೂ ಅವರ ನೆರಳು ಸಹ ಕಂಡು ಹಿಡಿಯಲಾ ಗಿರಲಿಲ್ಲ. ಕೆಲವೊಂದೆಡೆ ದೊರೆತ ಬೆರಳ ಗುರುತುಗಳಿಂದ ಕೇವಲ ಎರಡು ತಿಂಗಳ ಹಿಂದೆ ಜೈಲಿನಿಂದ ಹೊರಬಂದ ಯಾಕೂಬ್‌ನನ್ನು ಬಂಧಿಸಿದಾಗ ಈ ಕೃತ್ಯ ಕುಖ್ಯಾತ ಅಪರಾಧಿ ಮಂಗಲದೆಂದು ತಿಳಿದು ಬಂದಿತ್ತು. ಮಂಗಲನನ್ನು

ಹಿಡಿದುಕೊಟ್ಟರೆ ಅಥವಾ ಅವನ ಬಗ್ಗೆ ಸುಳಿವು ನೀಡಿದರೆ ಬ್ಯಾಂಕ್ ಪರವಾಗಿ ಒಂದು ಲಕ್ಷ ರೂಪಾಯಿ, ಸರಕಾರದ ಪರವಾಗಿ ಇಪ್ಪತ್ತೈದು ಸಾವಿರ ರೂಪಾಯಿ ಬಹುಮಾನ ಘೋಷಿಸಲಾಗಿತ್ತು....ಆದರೂ ಮಂಗಲ ಎಲ್ಲಿ ಎಂದು ತಿಳಿದು ಬರಲಿಲ್ಲ.

ಎರಡುವಾರ ಕಳೆದರೂ ಯಾವ ಪ್ರಗತಿ ಕಂಡು ಬರದಾದಾಗ ಬ್ಯಾಂಕ್ ಚೇರಮನ್ ರಂಗನಾಥ ಅವರು ಹೇಮಂತನ ಸೇವೆಯನ್ನು ಪಡೆದಿದ್ದರು. ಹೇಮಂತ ಕೆಲಸದಲ್ಲಿ ಪಾದರಸದಷ್ಟೇ ಚುರುಕು....ಕೂಡಲೇ ಕಾರ್ಯೋನ್ಮುಖ ನಾದ. ಯಾಕೂಬನಿಂದ ಮಂಗಲನ ಹೆಸರು ಹೊರಬಂದಿದ್ದರೂ ಆತನಿರುವ ಠಿಕಾಣೆ ತಿಳಿಯದಿದ್ದುದರಿಂದ ಆತ ಮತ್ತೆ ಯಾಕೂಬನನ್ನೇ ಮತ್ತೊಂದು ಬಾರಿ ವಿಚಾರಿಸಲು ನಿಶ್ಚಯಿಸಿ ಆತನನ್ನಿಟ್ಟಿದ್ದ ಬಂದೀ ಗೃಹದತ್ತ ನಡೆದ....

ಹೇಮಂತನನ್ನು ಒಂದು ಬಾರಿ ದೃಷ್ಟಿಸಿ ಗಿಳಿಪಾಠದಂತೆ ಯಾಕೂಬ್ ಮೊದಲಿನ ಪಾಠವನ್ನೇ ಒಪ್ಪಿಸಿದ.

"ನನಗೆ ಗೊತ್ತಿಲ್ಲ ಸಾರ್....ಗೊತ್ತಿದ್ದುದನ್ನು ಹೇಳಿಬಿಟ್ಟಿದ್ದೇನೆ. ಇದರ ಮೇಲೆ ನಿಮ್ಮಿಷ್ಟ....ನಾನಂತೂ ಶಿಕ್ಷೆ ಅನುಭವಿಸಲು ಸಿದ್ಧನಾಗೇ ಬಿಟ್ಟಿದ್ದೇನೆ"

"ಯಾಕೂಬ....ನಿನಗೆ ಯಾವ ಶಿಕ್ಷೆಯನ್ನು ನಾವು ಕೊಡುವದಿಲ್ಲ.... ನಿನ್ನನ್ನು ಬಿಟ್ಟುಬಿಡಬೇಕು'ಅಂತ ನಿಶ್ಚಯಿಸಿದ್ದೇವೆ" ನಂಬಿಕೆಯಾಗದೆ ಯಾಕೂಬ್ ಪಕಪಕ ಕಣ್ಣು ಬಡಿಯುತ್ತ ಹೇಮಂತನನ್ನು ನೋಡಿದ.

"ನಾನು ನಿಜ ಹೇಳುತ್ತಿದ್ದೇನೆ....ನಿನ್ನನ್ನು ಸ್ವತಂತ್ರಗೊಳಿಸುವಂತೆ ಇದೇ ಈಗ ನಾನು ಪೊಲೀಸ್ ಮೇಲಾಧಿಕಾರಿಗಳೊಂದಿಗೆ ಮಾತನಾಡಿ ಬಂದಿರುವೆ. ಸಂಜೆಯೊಳಗೆ ನಿನ್ನ ಬಿಡುಗಡೆಯಾಗುತ್ತದೆ...ನಿನ್ನಿಷ್ಟ ಬಂದಲ್ಲಿ ನೀನು ಹೋಗಬಹುದು."

ಕರಿದ ಹಪ್ಪಳದಂತೆ ಸಂತಸದಿಂದ ಅರಳಿದ ಯಾಕೂಬನ ಮುಖ ಒಮ್ಮೆಂದೊಮ್ಮೆಲೆ ದೋಸೆ ಹಂಚಿನಂತೆ ಕಪ್ಪಾಯಿತು.

"ಮತ್ತೆ...ಮತ್ತೆ....ಮಂಗಲ್ ಬಗ್ಗೆ...."

"ಅವನ ಬಗ್ಗೆ ಏನೂ ತಿಳಿದಿಲ್ಲ ...ಹಾಂ....ಒಂದು ವಿಷಯ....ನೀನು ಮಂಗಲನ ಹೆಸರು ಹೇಳಿದ್ದು ಪತ್ರಿಕೆಯಲ್ಲಿ ಪ್ರಕಟವಾಗಿದೆ....ಆತ ನನ್ನ ಕೈಗೆ ಸಿಗದಿದ್ದರೂ ನೀನು ಮಾತ್ರ ಖಂಡಿತವಾಗಿ ಅವನ ಕೈಗೆ ಸಿಕ್ಕೇ ಸಿಕ್ತೀಯಾ...."

ಚಳಿ ಗಿಂಡವನಂತೆ ಗಡಗಡ ನಡುಗಿ ಧೊಪ್ಪನೆ ಹೇಮಂತನ ಕಾಲ ಮೇಲೆ ಬಿದ್ದು ಯಾಕೂಬ ದಯನೀಯ ಕಂಠದಲ್ಲಿ ಬೇಡಿಕೊಂಡ.

"ಬೇಡಿ ಸಾರ್...ನಿಮಗೆ ಕೈ ಮುಗಿಯುತ್ತೇನೆ. ನನ್ನ ಬಿಡುಗಡೆ ಮಾಡಬೇಡಿ, ನಾನು ಒಳಗೇ ಇರುತ್ತೇನೆ ಸುರಕ್ಷಿತವಾಗಿ..."

"ದಯವಿಟ್ಟು ಕ್ಷಮಿಸು ಯಾಕೂಬ. ಈ ಕೆಲಸ ನನ್ನಿಂದಾಗದು...."

"ಅಯ್ಯೋ ಹಾಗೆನ್ನಬೇಡಿ.... ನಿಮ್ಮ ಕಾಲು ಹಿಡಿದುಕೊಂಡು ಬೇಡಿ ಕೊಳ್ಳುತ್ತೇನೆ. ನಾನು ಒಂಟಿಯಾಗಿ ಸಿಕ್ಕರೆ ಸಾಕು ಮಂಗಲ ನನ್ನನ್ನು ಖೈಮಾ ಮಾಡಿಬಿಡುತ್ತಾನೆ. ನನ್ನ ಬಂಧಿಸಿಡಿ. ಇಲ್ಲೇ ನಾನು ಸುರಕ್ಷಿತವಾಗಿರುತ್ತೇನೆ...."

"ಇದು ನಿನ್ನ ಮಾವನ ಮನೆಯಲ್ಲ ಯಾಕೂಬ್.... ನಿನ್ನಿಷ್ಟ ಬಂದಾಗ ಬಂದು, ನಿನ್ನಿಷ್ಟ ಬಂದಾಗ ಹೋಗೋಕೆ....ಇದು ಬಂದೀಗೃಹ."

"ಅದೆಲ್ಲಾ ನನಗೆ ತಿಳಿಯದು. ಮೊದಲು ಮಂಗಲನನ್ನು ಹಿಡಿದು ಒಳಗೆ ತಳ್ಳಿ. ನಂತರ ನನ್ನನ್ನು ಹೊರಗೆ ಬಿಡಿ....ಈಗಲೇ ಬಿಟ್ಟರೆ ಆ ರಾಕ್ಷಸ ನನ್ನನ್ನ ಜೀವಂತ ಸುಡುತ್ತಾನೆ...."

"ಮಂಗಲನನ್ನು ಹಿಡಯುವದು ನಮ್ಮ ಕೈಯಲ್ಲಿಲ್ಲ ಯಾಕೂಬ್, ನಿನ್ನ ಕೈಯಲ್ಲಿದೆ."

"ನನ್ನ ಕೈಯಲ್ಲಿ?"

"ಹೌದು, ಚೆನ್ನಾಗಿ ನೆನಪು ಮಾಡಿಕೊಂಡು ಹೇಳು....ಮಂಗಲ್ ನಮಗೆಲ್ಲಿ ಸಿಗುತ್ತಾನೆಂದು....ನೀನು ನಿಜ ಹೇಳಿದರೆ ಸಾಕು....ಒಂದೇ ದಿನದಲ್ಲಿ ಅವನನ್ನು ಹಿಡಿದು ಒಳಗೆ ತಳ್ಳುತ್ತೇವೆ...ಅಂದೇ ನಿನ್ನನ್ನು ಹೊರಗೆ ಬಿಡುತ್ತೇವೆ."

ಯಾಕೂಬ್ ಯೋಚನೆಯಲ್ಲಿ ಮುಳುಗಿದ. ಹೇಮಂತ ಅವನ ಮುಖ ವನ್ನೇ ದಿಟ್ಟಿಸುತ್ತಿದ್ದ...ಯಾಕೂಬ್‌ನಿಗೆ ಎಲ್ಲಾ ಗೊತ್ತು. ಆತ ಹೇಳಬೇಕೋ ಬೇಡವೊ ಎಂದು ಚಿಂತಿಸುತ್ತಿದ್ದ....ಕಬ್ಬಿಣ ಕಾಯ್ದಿತ್ತು. ಈಗಲೇ ಇನ್ನೊಂದು ಏಟು ಹಾಕಬೇಕೆಂದು ನಿರ್ಧರಿಸಿದ ಹೇಮಂತ.

"ಹೋಗಲಿ ಬಿಡು ಯಾಕೂಬ್, ನಿನಗೇಕೆ ತೊಂದರೆ...ನನಗೂ ತುಂಬಾ ಕೆಲಸವಿದೆ, ಹೋಗಬೇಕು.... ನೀನು ಸಿದ್ಧನಾಗು... ನನ್ನೊಡನೆ ಹೊರಗೆ ಕರೆದೊಯ್ದು ಬಸ್ ನಿಲ್ದಾಣದಲ್ಲಿ ಬಿಡುತ್ತೇನೆ... ನಿನ್ನಿಷ್ಟ ಬಂದಲ್ಲಿಗೆ ಹೋಗುವಿಯಂತೆ..."

"ಅಯ್ಯೋ ಬೇಡಿ ಸರ್.... ಒಂದ್ನಿಮಿಷ ನಿಲ್ಲಿ.... ಹಾಂ ನೆನಪಾಯ್ತು... ಚಾಂದನಿ ಚೌಕದಲ್ಲಿ ಮಂಗಲ್‌ನ ಗೆಳತಿ ಒಬ್ಬಳಿದ್ದಾಳೆ... ಖಾತೂನ್‌ಬಿ ಅಂತ. ಮೇಲ್ನೋಟಕ್ಕೆ ಪಾಕೀಜಾ ಕ್ಯಾಂಟೀನ್ ನಡೆಸುತ್ತಾಳೆ.... ಅವಳ ಒಳಗಿನ ಕೆಲಸವೇ ಬೇರೆ....ಮಂಗಲ್‌ದಾದಾನಂತೆ ಹಲವರಿಗೆ ಆಕೆ ಸಹಾಯಕಿ. ಸದ್ಯ ಮಂಗಲನ ಗೆಳತಿ.

"ಶಹಬ್ಬಾಶ್ ಯಾಕೂಬ್, ನಮಗಿಷ್ಟೇ ಸಾಕು, ನೀನಿನ್ನು ಹಾಯಾಗಿರು."

ಹೇಮಂತನೊಂದಿಗೆ ಬಂದು ಗೊಂಬೆಯಂತೆ ನಿಂತಿದ್ದ ಪೊಲೀಸ್ ಅಧಿಕಾರಿಗೆ ಅಚ್ಚರಿ. ಅದರೊಂದಿಗೆ ಹೇಮಂತ ಅವರ ಪಾಲಿಗೆ ಒಂದು ಒಗಟಾದ. ಯಾಕೂಬ್‌ನ ಬಾಯಿ ಬಿಡಿಸಲು ಸತತ ಎರಡು ದಿನ ಶ್ರಮಿಸಿದಾಗ್ಯೂ ಆತ ಕೇವಲ ಮಂಗಲನ ಹೆಸರು ಮಾತ್ರ ಹೇಳಿದ್ದ. ಆದರೆ ಈಗ ಹೇಮಂತ? ಚಿಟಿಕೆ ಹೊಡೆಯುವದರಲ್ಲಿ ಆಟವಾಡುತ್ತ ಅವನ ಬಾಯಿ ಬಿಡಿಸಿದ್ದ...

ಖಾತುನ್‌ಬಿ ಬಳಿ ಹೇಮಂತ ಹೋಗಲಿಲ್ಲ. ಸುಷಮಾಳನ್ನು ಕಳಿಸಿದ. ಸುಷಮಾ ಸುಪ್ರಸಿದ್ಧ ಗಯ್ನ್ಯಾಳಿ ಮಹಿಳೆಯಂತೆ ಮೇಕಪ್ ಮಾಡಿಕೊಂಡು ಬೆಂಜ್ ಕಾರಿನಲ್ಲಿ ಪಾಕೀಜಾ ಹೋಟೆಲ್‌ಗೆ ಹೋದಳು. ಆ ಬೆಂಜ್ ಕಾರು, ಅದರಿಂದ ಇಳಿದ ಧನಾಢ್ಯ ಮಹಿಳೆಯನ್ನು ಕಂಡು ಖಾತುನ್‌ಬಿ 'ಬಕರಾ' ದೊರೆಯಿತು ಎಂದು ಖುಶಿ ಪಟ್ಟು ಅವಳನ್ನು ತನ್ನ ಮನೆಗೊಯ್ದು ಸತ್ಕರಿಸಿದಳು. ಸುಷಮಾ ತುಂಬಾ ಚೆನ್ನಾಗಿ ನಟಿಸಿದಳು. ತನ್ನ ಮೂವತ್ತೈದನೇ ಹುಟ್ಟುಹಬ್ಬ. ಮನೆಯಲ್ಲಿ ಸಂಭ್ರಮದ ಪಾರ್ಟಿ ಇದೆ. ಸಮಾಜದ ಧನಾಢ್ಯ ವ್ಯಕ್ತಿಗಳು, ಅಧಿಕಾರಿಗಳು, ರಾಜಕೀಯ ಧುರೀಣರು ಬರುವವರಿದ್ದಾರೆ. ಅವರ ಸೇವೆಗೆ ಪಾರಿವಾಳಗಳು ಬೇಕಾಗಿವೆ ಎಂದಳು. 'ಪಾರಿವಾಳದ' ಅರ್ಥ ತಿಳಿದ ಖಾತುನ್‌ಬಿ ಹಲ್ಲುಕಿರಿದಳು.... ಅಂತೂ ಇಂತೂ ಕೊನೆಗೆ ಪಾರಿವಾಳವೊಂದಕ್ಕೆ ಸಾವಿರ ರೂಪಾಯಿ ನೀಡುವ ಕರಾರಿನ ಮೇಲೆ ಇಪ್ಪತ್ತೈದು ಪಾರಿವಾಳಗಳ ವ್ಯಾಪಾರ ವಾಯಿತು. ಒಂದು ರಾತ್ರಿಗೆ ಸ್ವತಃ ಖಾತುನ್‌ಬಿಯೇ ಮೆಟಡೋರನಲ್ಲಿ ಪಾರಿವಾಳಗಳನ್ನು ತಂದು ಅದರಲ್ಲೇ ಪುನಃ ಮರಳಿ ಒಯ್ಯುವ ಏರ್ಪಾಡಾಯಿತು. ಐದು ಸಾವಿರ ರೂಪಾಯಿ ಅಡ್ವಾನ್ಸ್ ನೀಡಿದ ಸುಷಮಾ ಗುಟ್ಟಾಗಿ ಒಂದು ಮಾತು ಹೇಳಲು ಮರೆಯಲಿಲ್ಲ: "ಈ ವಿಷಯ ತುಂಬಾ ರಹಸ್ಯವಾಗಿರಬೇಕು. ಇದು ಕೆಲವೇ ಜನರಿಗಾಗಿ ಏರ್ಪಡಿಸಿದ ಸಮಾರಂಭ....ಸಾರ್ವಜನಿಕರಿಗಲ್ಲ...."

"ಅಷ್ಟು ನನಗೂ ಅರ್ಥವಾಗುತ್ತೆ ಮೇಡಂ." ಅರ್ಥವತ್ತಾಗಿ ನಕ್ಕಳು ಖಾತುನ್‌ಬಿ.

"ಸರಿಯಾಗಿ ವ್ಯವಸ್ಥೆ ಮಾಡು, ನಿನಗಾಗಿ ಸ್ಪೆಶಲ್ ಟ್ರೀಟ್‌ಮೆಂಟ್ ಇದೆ."

ಖಾತುನ್‌ಬಿಗೆ ಸ್ವರ್ಗ ಮೂರೇ ಗೇಣು ಉಳಿದಿತ್ತು.... ಒಂದೇ ದಿನದಲ್ಲಿ ಇಪ್ಪತ್ತೈದು ಸಾವಿರ.

ಮರುದಿನ ಖಾತುನ್‌ಬಿ ತನ್ನ ಮಾತಿನ ಪ್ರಕಾರ, ಕೈತೊಳೆದುಕೊಂಡು ಮುಟ್ಟುವಂಥ ಇಪ್ಪತ್ತೈದು ತರುಣಿಯರೊಂದಿಗೆ ವ್ಯಾನ್ ತಂದು ನಿಲ್ಲಿಸಿದಳು,

ಸುಷಮಾ ನೀಡಿದ ಅಡ್ರೆಸ್‌ನ ಮನೆ ಎದುರು. ಸುಷಮಾ ಸಂತಸ ಸೂಸುತ್ತ ಅವರನ್ನೆಲ್ಲ ಒಳಗೆ ಕರೆದೊಯ್ದಳು.

"ನೋಡಿ ಮೇಡಮ್....ಇಪ್ಪತ್ತೈದು ಪಾರಿವಾಳ. ಒಂದಕ್ಕಿಂತ...ಒಂದು ಚೆನ್ನಾಗಿವೆ."

"ನಿನ್ನ ಬಗ್ಗೆ ನಾನೆಲ್ಲ ಕೇಳಿಯೇ ನಿನ್ನ ಬಳಿ ಬಂದದ್ದು."

ಅವರೆಲ್ಲರನ್ನು ಒಂದು ಹಾಲ್‌ನಲ್ಲಿ ಕುಳ್ಳಿರಿಸಿ ಖಾತುನ್‌ಬಿಯನ್ನು ತನ್ನ ಜೊತೆ ಕರೆದುಕೊಂಡು ಒಳಗಿನ ಕೋಣೆಗೆ ಬಂದಳು ಸುಷಮಾ. ಅದೊಂದು ಸೌಂಡ್ ಪ್ರೂಫ್ ಕೊಠಡಿ. ಬಾಗಿಲು ಮುಚ್ಚಿ ಬೋಲ್ಟ್ ಏರಿಸಿದ ಸುಷಮಾ ನೇರವಾಗಿ ಒಂದೇ ಮಾತಿನಲ್ಲಿ ಕೇಳಿದಳು.... ಯಾವ ಮುಲಾಜಿಲ್ಲದೆ....

"ಖಾತುನ್‌ಬಿ ಒಳ್ಳೆ ಮಾತಿನಿಂದ ಮಂಗಲ್ ಎಲ್ಲಿ ಅಂತ ಹೇಳು... ಅಂದರೇನೇ ನಿನ್ನ ದೇಹಕ್ಕೆ ಒಳ್ಳೆಯದು.... ಇಲ್ಲದಿದ್ದರೆ ನಿನಗಾಗಿ ಸ್ಪೆಶಲ್ ಟ್ರೀಟ್‌ಮೆಂಟ್ ಕೊಡಬೇಕಾಗುತ್ತದೆ..."

ಕಕ್ಕಾಬಿಕ್ಕಿಯಾದಳು ಖಾತುನ್‌ಬಿ....ಆರಡಿ ಮಹಡಿಯಿಂದ ಎತ್ತಿ ಕೆಳಕ್ಕೆ ಒಗೆದಂತಾಯ್ತು. "ಏನಂದ್ರಿ ಮೇಡಮ್....!"

"ಫಳೀರ್" ಎಂಬ ಸದ್ದು ... ಖಾತುನ್‌ಬಿ ಎಡ ಕೆನ್ನೆ ಚುರುಗುಟ್ಟಿತು. ಸುಷಮಾಳ ಬಲಗೈ ಏಟಿಗೆ ಖಾತುನ್‌ಬಿ ಕಣ್ಣಲ್ಲಿ ನೀರು ಕಾರಂಜಿಯಂತೆ ಚಿಮ್ಮಿತು.

"ಒಂದು ಮಾತು ನೆನಪಿಟ್ಟುಕೋ ಖಾತುನ್‌ಬಿ, ನಾನು ಹೇಳುವದು ಒಂದೇ ಒಂದು ಬಾರಿ. ಎರಡನೇ ಬಾರಿ ಹೇಳಿ ನನಗೆ ಅಭ್ಯಾಸವಿಲ್ಲ. ಹೇಳು ಮಂಗಲ್ ದಾದಾ ಎಲ್ಲಿ?"

"ಯಾವ ಮಂಗಲ್‌ದಾದಾ? ನನಗಾತ ಯಾರೆಂದು ಸಹ ಗೊತ್ತಿಲ್ಲ...."

ಈ ಬಾರಿ ಸುಷಮಾಳ ಬಲಗೈ ಮುಷ್ಟಿ ಪ್ರಹಾರ ಖಾತುನ್‌ಬಿ ಬಾಯಿ ಮೇಲೆ...ಬಳಬಳನೆ ರಕ್ತ ಸುರಿಯಿತು.

"ಮೊದಲೇ ನಾ ಹೇಳಿರುವೆ. ಸರಿಯಾಗಿ ಉತ್ತರಿಸಿದರೆ ನಿನ್ನ ದೇಹಕ್ಕೆ ಉತ್ತಮ ಅಂತ.... ಇನ್ನೂ ಒಂದು ಮಾತು ಕೇಳು... ನಾನು ಮೇಡಂ ಅಲ್ಲ. ಯಾವ ಶ್ರೀಮಂತ ಮಹಿಳೆಯೂ ಅಲ್ಲ... ನನ್ನ ಹುಟ್ಟಿದ ಹಬ್ಬವೂ ಇಲ್ಲ.... ನಾನು ಒಬ್ಬ ಪೊಲೀಸ್ ಆಫೀಸರ್. ಈಗಾಗಲೇ ನಿನ್ನ ಪಾರಿವಾಳಗಳು ಪೊಲೀಸ್ ಠಾಣೆ ಸೇರಿವೆ– ನೀನವುಗಳನ್ನು ಎಲ್ಲಿಂದ ಹಾರಿಸಿ ತಂದಿರುವೆಯೋ ಅಲ್ಲಿಗೆ ಸುರಕ್ಷಿತವಾಗಿ ಮುಟ್ಟಿಸಲಾಗುವದು. ನಿನ್ನ ಅಡ್ಡೆ ಇಂದಿನಿಂದ ಮುಚ್ಚುವದು. ನಿನಗೆ ಎಲ್ಲಿಯೂ ಜಾಗೆ ಇಲ್ಲ. ನಮ್ಮೊಂದಿಗೆ ಸಹಕರಿಸಿದರೆ ಮಾತ್ರ

ನಿಶ್ಚಿಂತೆಯಿಂದ ಬದುಕಲು ಒಂದು ದಾರಿ ಮಾಡಿ ಕೊಡಲಾಗುವದು.... ತಿಳೀತಾ...?"

ಇದನ್ನೆಲ್ಲ ಕೇಳುತ್ತಿದ್ದಂತೆ ಖಾತುನ್‌ಬಿ ಭೂಮಿಗಿಳಿದು ಹೋದಳು. ಅವಳ ಸ್ವಪ್ನಸೌಧ ನುಚ್ಚುನೂರಾಗಿತ್ತು.... ತುರಂಗದ ಬಾಗಿಲಿಗೆ ಬಂದು ನಿಂತಿದ್ದಳು. "ನಾನು ಎಲ್ಲಾ ನಿಜ ಹೇಳುತ್ತೇನೆ.... ನನ್ನನ್ನು ಕಾಪಾಡಿ... ಆ ಮಂಗಲ್‌ಗೆ ಗೊತ್ತಾದರೆ ಆತ ಜೀವ ಸಹಿತ ನನ್ನನ್ನು ಇಡುವದಿಲ್ಲ."

"ಅದರ ಜವಾಬ್ದಾರಿ ನನಗಿರಲಿ. ನೀನು ನಮಗೆ ಸಹಕಾರ ನೀಡಿದರೆ ಮಂಗಲ್‌ನಿಂದ ನಿನ್ನನ್ನು ಕಾಪಾಡುವೆ, ಅಷ್ಟೇ ಅಲ್ಲ, ನಿನ್ನ ಜೀವನಕ್ಕೂ ಒಂದು ಗೌರವದ ಮಾರ್ಗ ಮಾಡಿ ಕೊಡುವೆ. ಹೆದರಬೇಡ...."

ಮುಂದೆ ಖಾತುನ್‌ಬಿ ಬಾಯಿ ಬಿಟ್ಟಳು.

ಬ್ಯಾಂಕ್‌ದರೋಡೆ ಮಾಡುವಲ್ಲಿ ಮಂಗಲ್‌ದಾದಾನ ಕೈವಾಡವಿತ್ತು.... ಆದರೂ ಅವನ ಹಿಂದಿದ್ದ ವ್ಯಕ್ತಿ ಬೇರೆ. ಆ ತಂಡದ ಬಾಸ್ ಬೇರೆ... ಮಂಗಲ್‌ಗೆ ಸಿಕ್ಕಿದ್ದು ಕೇವಲ ಐದು ಲಕ್ಷ ರೂಪಾಯಿ ಮಾತ್ರ. ಸದ್ಯ ಮಂಗಲ್ ತಲೆ ಮರೆಸಿಕೊಂಡು ಕಾರವಾರದ ಸಮೀಪ ಸಮುದ್ರದ ಒತ್ತು ಇರುವ ಒಂದೆಡೆ ಯಲ್ಲಿ ವಾಸವಾಗಿದ್ದಾನೆ. ಆತ ವಾಸವಾಗಿರುವ ಪ್ರದೇಶದ ಹೆಸರು ಹರಿಪುರ... ಹರಿಪುರದ ಹತ್ತಿರ ಸಮುದ್ರಕ್ಕೊಂದು ಚಿಕ್ಕ ಸೇತುವೆ ಕಟ್ಟಿ ಬೆಟ್ಟದ ಮೇಲೆ ದಾರಿ ಮಾಡಲಾಗಿದೆ ಬೆಟ್ಟದ ತುದಿಯಲ್ಲೊಂದು ಬಂಗಲೆಯಿದೆ. ಬೇಸಿಗೆ ಯಲ್ಲಿ ವಿಹಾರಕ್ಕೆ ಉಪಯೋಗಿಸುವ ಬಂಗಲೆ ಅದು. 'ಆಕಾಶ್' ಎಂದೇ ಅದರ ಹೆಸರು. 'ಆಕಾಶದಲ್ಲಿ' ಆತ ಕಳೆದ ಆರು ದಿನಗಳಿಂದ ಇದ್ದಾನೆ...!

ಸುಷಮಾ ಬಾಗಿಲು ತೆರೆದಳು. ಮೇಜರ್... ಅವನ ಹಿಂದೆ ಇಬ್ಬರು ಪೊಲೀಸ್ ಅಧಿಕಾರಿಗಳು ಒಳಗೆ ಪ್ರವೇಶಿಸಿದರು. ಖಾತುನ್‌ಬಿಯನ್ನು ಅವರ ವಶಕ್ಕೆ ಒಪ್ಪಿಸಿದಳು ಸುಷಮಾ.... ಅವಳೆಡೆ ಪ್ರಶಂಸೆಯಿಂದ ನೋಡಿ ನುಡಿದ ಹೇಮಂತ, "ಕಂಗ್ರಾಜ್ಯುಲೇಶನ್.... ಸುಲಭವಾಗಿ ಜಯ ಗಳಿಸಿದೆ."

ಅವಳ ಮೋಹಕ ನಗೆಯೇ ಹೇಮಂತನಿಗೆ ಉತ್ತರವಾಯಿತು.

ಅಂದೇ ಪ್ರಾರಂಭವಾಯಿತು ಪ್ರವಾಸ ಕಾರವಾರದ ಸಮೀಪವಿರುವ ಹರಿಪುರದತ್ತ. ಅಶೋಕನ ಆರೋಗ್ಯ ಸರಿಯಿಲ್ಲದ್ದರಿಂದ ಚಿಕಿತ್ಸೆಗೆಂದು ಆತನನ್ನು ಆಸ್ಪತ್ರೆಗೆ ಸೇರಿಸಲಾಗಿತ್ತು. ಹೀಗಾಗಿ ಇಬ್ಬರೇ ಹೊರಟರು.... ಹೇಮಂತ.... ಸುಷಮಾ.

ಕತ್ತಲೆಯಾಗುತ್ತಿದ್ದಂತೆ ಅವರು ಹರಿಪುರದ ಅರಣ್ಯ ಪ್ರವೇಶಿಸಿದ್ದರು. ಯಾರೋ ಪಕ್ಕೆಗೆ ತಿವಿದಂತಾಯಿತು. ಯೋಚನಾ ಸಮಾಧಿಯಿಂದ ಹೊರಬಂದ

ಹೇಮಂತ ಪಕ್ಕಕ್ಕೆ ನೋಡಿದ ಸುಷಮಾ ಆಕ್ಷೇಪಿಸಿದಳು.

"ಏಕೆ?... ಒಮ್ಮಿಂದೊಮ್ಮೆಲೆ ಮೌನ ತಾಳಿದಿರಿ? ಸರ್ಪವೇನಾದರೂ ಕಚ್ಚಿತಾ?"

"ಸರ್ಪ ಕಚ್ಚಲಿಲ್ಲ.... ಹಳದಿ ಚೇಳು ಕಚ್ಚಿತು".... ಖೊಕ್ ಎಂದು ನಕ್ಕು ನುಡಿದ. ಅವನೊಂದಿಗೆ ಸುಷಮಾ ಸಹ ನಗೆಯಲ್ಲಿ ಪಾಲ್ಗೊಂಡಳು.

ರಾತ್ರಿಯಾಗುತ್ತಾ ಬಂದಿತ್ತು. ಅಪರಿಚಿತ ಪ್ರದೇಶದಲ್ಲಿ ರಾತ್ರಿ ಅಲೆಯುವದು ಅಪಾಯವಾದ್ದರಿಂದ... ಎಲ್ಲಾದರೂ ತಂಗಲು ಒಳ್ಳೆ ವ್ಯವಸ್ಥೆ ಮಾಡಿಕೊಳ್ಳಬೇಕಾಗಿತ್ತು. ರಸ್ತೆ ಪಕ್ಕದ ಕಾಕಾ ಅಂಗಡಿ ಮುಂದೆ ಕಾರು ನಿಲ್ಲಿಸಿದ....

ತನ್ನೆಡೆ ಬರುತ್ತಿರುವ ಸುಂದರ ಜೋಡಿಯನ್ನು ಕಂಡು ಹಲ್ಲುಕಿರಿದ. ಅಂಗಡಿ ಕಾಕಾ. ಸ್ಪೆಶಲ್ ಟೀ ಗೆ ಆರ್ಡರ್ ಮಾಡಿ ಮಾತಿಗಿಳಿದ ಹೇಮಂತ. ಆ ಪ್ರದೇಶದಲ್ಲಿ ಲಾಜಿಂಗಗಳಿಲ್ಲ; ಪ್ರವಾಸಿ ಬಂಗಲೆ ಇದೆ. ಅದರ ಚೌಕಿದಾರ ರಾತ್ರಿ ಊಟಕ್ಕೆ ಇಲ್ಲಿಗೇ ಬರುತ್ತಾನೆ. ಅವನಿಗೆ ಕೇಳಿದರೆ ಮಲಗಲು ರಾತ್ರಿ ವ್ಯವಸ್ಥೆಯಾಗುತ್ತದೆ.... ಇದಕ್ಕಿಂತ ಹೆಚ್ಚಿಗೆ ಬೇಕಾದದ್ದೇನು?

ಅಂಗಡಿ ಕಾಕಾ ಹೇಳಿದಂತೆ ಚೌಕೀದಾರ ಬಂದ...ಹೇಮಂತ ಸಹ ಎರಡು ಊಟಕ್ಕೆ ಆರ್ಡರ್ ಮಾಡಿದ್ದ... ಚೌಕೀದಾರನೊಂದಿಗೆ ಊಟ ಮಾಡುತ್ತ ಅವನ ದೋಸ್ತಿ ಮಾಡಿದರು. ಮೇಲೆ ಹತ್ತು ರೂಪಾಯಿ ಭಕ್ಷೀಸು ಸಹ ದೊರೆಯಿತು.

ಅದರ ಪರಿಣಾಮವಾಗಿ ಪ್ರವಾಸಿ ಬಂಗಲೆಯಲ್ಲೊಂದು ರೂಮು ದೊರೆಯಿತು. ರಾತ್ರಿ ಎಲ್ಲಾ ಮಾತನಾಡಿ ಚೌಕೀದಾರನಿಂದ 'ಆಕಾಶ' ಬಂಗಲೆ ಬಗ್ಗೆ ಮಾಹಿತಿ ಪಡೆದ. ಸುಮಾರು ಇಪ್ಪತ್ತು ವರ್ಷಗಳ ಹಿಂದೆ ಒಬ್ಬ ಬ್ರಿಟಿಶ್ ಲೇಖಕ ಇಲ್ಲಿಗೆ ಬಂದಿದ್ದನಂತೆ. ಆತನೇ ಕಟ್ಟಿಸಿಕೊಂಡ ಮನೆಯಿದು. ಬೆಟ್ಟದಿಂದ ಸಮುದ್ರ ಕೊರೆತದ ಮೇಲೆ ಹಾಯ್ದು ಭೂಭಾಗಕ್ಕೆ ಬರುವ ವರೆಗಿನ ಸುಮಾರು ಅರ್ಧ ಕಿಲೋಮೀಟರ್ ದೂರದ ಸೇತುವೆ ಸಹ ಆತನೇ ಸರಕಾರದ ಒಪ್ಪಿಗೆ ಪಡೆದು ಕಟ್ಟಿಸಿಕೊಂಡಿದ್ದನಂತೆ. ಮೂರು ನಾಲ್ಕು ವರ್ಷ ಅಲ್ಲಿದ್ದು ಆತ ಏನನ್ನೋ ಬರೆಯುತ್ತಿದ್ದನಂತೆ...ಬರೆಯುವ ಕೆಲಸ ಮುಗಿದ ಮೇಲೆ ಆ ಬಂಗಲೆ, ಬ್ರಿಜ್ ಸಹಿತ ಯಾರಿಗೋ ಮಾರಿ ಹೊರಟುಹೋದನಂತೆ.

ಅದರ ಯಜಮಾನ ಯಾರೆಂದು ಗೊತ್ತಿಲ್ಲ.

ಸದ್ಯ....ಒಂದು ವಾರದಿಂದ ಯಾರೋ ಒಬ್ಬರಿದ್ದಾರೆ. ಆಗಾಗ ತಿರುಗಾಡುವದನ್ನು ಕಾಣಲಾಗಿದೆ. ರಾತ್ರಿ ಒಂದೇ ಒಂದು ಬಾರಿ ಕಾಕಾನ ಅಂಗಡಿಗೆ ಬಂದು ಸಾಮಾನು ಕೊಂಡು ಅಲ್ಲೇ ಊಟ ಮಾಡಿಕೊಂಡು ಹೋದ.

ಅವನ ಮುಖಲಕ್ಷಣ ವಿವರಿಸಿದಾಗ ಅದು ಪೂರ್ತಿ ಮಂಗಲ್‌ನನ್ನೇ ಹೋಲುತ್ತಿತ್ತು. ತಮಗೆ ಬೇಕಾದ ಬೇಟೆ ಇದೇ ಎಂದು ತಿಳಿದಾಗ ಮನಕ್ಕೆ ಮುದವಾಯಿತು.... ಅವರು ನಿರ್ದಿಷ್ಟ ಗುರಿ ತಲುಪುವ ಹಂತದಲ್ಲಿದ್ದರು.....

ರಾತ್ರಿ ಸುಖಕರವಾಗಿ ಕಳೆಯಿತು.

ಪ್ರಾಥರ್ವಿಧಿ ತೀರಿಸಿಕೊಂಡು ಇಬ್ಬರೂ ಸಿದ್ಧರಾದಾಗ ಹೊರಗಡೆ ಚೌಕೀದಾರ ಇನ್ನೂ ಗೊರಕೆ ತೆಗೆಯುತ್ತಿದ್ದ. ಸೂರ್ಯ ಪೂರ್ವದ ಬಾಗಿಲು ತಟ್ಟುವ ಸನ್ನಾಹದಲ್ಲಿದ್ದ. ಕಾರು ಬಂದು ಸೇತುವೆ ಬಳಿ ನಿಲ್ಲುತ್ತಿದ್ದಂತೆ ಆತ ಕಾಣಿಸಿಕೊಂಡು ತನ್ನ ಹೊಂಗಿರಣ ಭೂಮಿಯ ಮೇಲೆ ಚೆಲ್ಲತೊಡಗಿದ.

ಕಾರಿನಿಂದ ಕೆಳಗಿಳಿದಾಗ ಹೇಮಂತ ಒಂದು ಕ್ಷಣ ತನ್ನನ್ನೂ ಸಹ ಮರೆತು ಅಗಾಧವಾಗಿ ಹರಡಿದ ಪ್ರಕೃತಿ ಸೌಂದರ್ಯ ಸವಿಯುವದರಲ್ಲಿ ಮುಳುಗಿ ಹೋದ. ಬಲಬದಿಗೆ ವಿಶಾಲವಾಗಿ ಹರಡಿದ ನೀಲರಾಶಿಯ ಅರಬ್ಬೀ ಸಮುದ್ರ....ಎಡಗಡೆ ಸಮುದ್ರದ ಕೊರೆತದಿಂದ ಉಂಟಾದ ಸಮುದ್ರ ಜಲರಾಶಿಯ ಭಾಗ... ಮಧ್ಯದಲ್ಲಿ ಸುಂದರವಾಗಿ ಕಟ್ಟಿದ ಸೇತುವೆ. ಎತ್ತರದ ಗುಡ್ಡ...ಗುಡ್ಡದ ಮೇಲೆ ಮನೆ.. .ಮನೆ ಹಿಂದೆ ನೀಲ್ಯಾಕಾಶ. ನೀಲ್ಯಾಕಾಶದಲ್ಲಿ ತೇಲುತ್ತಿರುವ ಬಿಳಿಮೋಡಗಳು. ಸ್ವಚ್ಛಂದವಾಗಿ ಹಾರುತ್ತಿರುವ ಪಕ್ಷಿಗಳ ಸಮೂಹ. ಆಹಾ! ಎಂಥ ಸುಂದರ ದೃಶ್ಯ!

"ಏನು ಕವಿಗಳು? ....ಸೃಷ್ಟಿಸುಧೆಯಲ್ಲಿ ತನ್ಮಯರಾಗಿದ್ದೀರಿ?"

ಸುಷಮಾಳ ಕೊಂಕು ಮಾತಿಗೆ ಎಚ್ಚೆತ್ತ ಹೇಮಂತ ಸೇತುವೆ ಕಡೆ ನಡೆದ. ಸೇತುವೆ ಬಳಿ ಬಂದು ಕಂಭ ನಿಲ್ಲಿಸಿ ಅದಕ್ಕೊಂದು ಫಲಕ ತೂಗುಹಾಕಲಾಗಿತ್ತು.... ಮಳೆಗಾಳಿಗಳಿಗೆ ಸಿಕ್ಕು ತನ ನಿಜರೂಪವನ್ನು ಕಳೆದುಕೊಂಡ ಅದು ವಿಚಿತ್ರ ರೂಪದಲ್ಲಿ ತೂಗಾಡುತ್ತಿತ್ತು. ಅದರ ಮೇಲೆ ಬರೆದ ಅಕ್ಷರಗಳಲ್ಲಿ ಕೆಲವೊಂದು ಅಲ್ಲಲ್ಲಿ ಕುರೂಪವಾಗಿದ್ದವು. ಅದೆಲ್ಲವನ್ನೂ ಸುಧಾರಿಸಿಕೊಂಡು ಓದಿಕೊಂಡ ಹೇಮಂತ.

"ಇದು ಖಾಸಗಿ ಸಂಪತ್ತು. ಪ್ರವೇಶಕ್ಕೆ ಮುನ್ನ ಒಪ್ಪಿಗೆ ಪಡೆಯುವದು ತೀರ ಅವಶ್ಯ.... ಸೇತುವೆ ಪ್ರವೇಶಕ್ಕೆ ಮೊದಲು ಗಂಟೆ ಬಾರಿಸಿರಿ....ಗಂಟೆಬಾರಿಸದೇ ವಾಹನ ಚಲಾಯಿಸಿದಲ್ಲಿ ಮುಂದಾಗುವ ಅನಾಹುತಕ್ಕೆ ನೀವೇ ಕಾರಣರಾಗುತ್ತೀರಿ. ಎಚ್ಚರಿಕೆ! ಎಚ್ಚರಿಕೆ! ಎಚ್ಚರಿಕೆ!"

ಹೇಮಂತನ ಜೊತೆಗೆ ನಿಂತು ಸುಷಮಾ ಸಹ ಆ ಎಚ್ಚರಿಕೆ ನೋಟೀಸ್ ಓದಿದಳು. ಹೇಮಂತ ಕೈ ಚಾಚಿ ಬೋರ್ಡಿನ ಬದಿಗಿದ್ದ ಗಂಟೆಯನ್ನು ಬಾರಿಸಿದ.... "ಢಣ್...ಢಣ್...ಢಣ್ ಢಣ್" ಕಂಚಿನ ಗಂಟೆ ಸಪ್ಪಳ ದೂರಕ್ಕೂ ಹೋಗಿ

ಬೆಟ್ಟದ ಮೇಲಿನ ಮನೆ ತಲುಪಿ ವಾಪಸಾಯಿತು.... ಗಂಟೆ ಬಾರಿಸುವದನ್ನು ಬಿಟ್ಟು ಹೇಮಂತ ಸರಸರನೆ ಕಾರಿನತ್ತ ಸಾಗಿದ. ಸುಷಮಾ ಹಿಂಬಾಲಿಸಿದಳು. ಕಾರನ್ನು ವೇಗವಾಗಿ ಓಡಿಸುತ್ತ ಕಿಟಕಿಯಿಂದ ಕೂಗಿ ಹೇಳಿದ ಹೇಮಂತ, "ನೀನಿಲ್ಲೇ ಇರು. ನಾನು ಇದೀಗ ಬಂದೆ". ಸುಷಮಾ ನೋಡುತ್ತಿದ್ದಂತೆ ಕಾರು ಸುಮಾರು ದೂರ ಕ್ರಮಿಸಿ ರಸ್ತೆ ಬ್ಲಾಕ್ ಮಾಡಿ ನಿಂತಿತು. ಕೆಳಗಿಳಿದು ಹೇಮಂತ ಕಾರು ಲಾಕ್ ಮಾಡಿ ಸುಷಮಾಳತ್ತ ಓಡುತ್ತ ಬಂದ.

"ಸುಷಮಾ ಬೇಗ....ಕೆಳಗಡೆ ಓಡು ಸಮುದ್ರ ದಂಡೆಯತ್ತ, ಅಲ್ಲೊಂದು ಬೋಟ್ ನಿಂತಿದ್ದನ್ನು ನೋಡಿರುವೆ."

ಸುಷಮಾ ತುಟಿ ಎರಡು ಮಾಡದೇ ಹೇಮಂತನೊಂದಿಗೆ ವೇಗವಾಗಿ ಕೆಳಗಿಳಿಯತೊಡಗಿದಳು. ಈಗವಳಿಗೆ ಹೇಮಂತನ ಪ್ಲಾನ್ ಅರ್ಥವಾಗಿತ್ತು. ಬೆಟ್ಟದ ಮೇಲಿನ ಮನೆ 'ಆಕಾಶಕ್ಕೆ' ಸಾಗಲು ಎರಡು ದಾರಿಗಳು.... ಒಂದು ಸೇತುವೆ, ಎರಡನೆಯದು ಬೋಟು. ಒಂದು ಮಾರ್ಗ ಬ್ಲಾಕ್ ಮಾಡಿದ ಹೇಮಂತ ಎರಡನೇ ಮಾರ್ಗದಿಂದ ಶತ್ರುವಿನ ಮನೆಗೆ ಹೋಗಲು ಸನ್ನಾಹ ನಡೆಸಿದ್ದ. ಗಂಟೆ ಸದ್ದು ಕೇಳಿ ಮಂಗಲ್ ಸೇತುವೆ ದಾರಿ ಬಿಟ್ಟು ಕೆಳಗಿಳಿದು ಬರುತ್ತಾನೆ, ಬೋಟ್ ಮೂಲಕ ಪಾರಾಗುತ್ತಾನೆ. ಎಂಬ ಸಂಶಯ.... ಅದಕ್ಕಾಗಿ ಅವನ ಸುತ್ತ ಈ ರೀತಿ ಬಲೆ ಎಸೆದಿದ್ದ ಹೇಮಂತ.

ನಾಲ್ಕಾರು ನಿಮಿಷಗಳಲ್ಲಿ ತೇಕುತ್ತ ಇಬ್ಬರೂ ಬೋಟು ಇದ್ದಲ್ಲಿಗೆ ಬಂದರು. ಚಾಲಕ ಎಲ್ಲೂ ಕಾಣಲಿಲ್ಲ....ಚಿಂತಿಸದೇ ತಾವೇ ಅದನ್ನು ನೀರಿಗಿಳಿಸಿ ಯಂತ್ರ ಚಾಲೂ ಮಾಡಿದರು. ಬೋಟು ಓಡತೊಡಗಿತು.

"ಮೇಜರ್...ಅಲ್ಲಿ ನೋಡಿ ಮೇಲೆ".

ಸುಷಮಾ ಹರ್ಷದಿಂದ ಮೇಲೆ ಬೆರಳು ಮಾಡಿ ತೋರಿಸಿ ಕೂಗಿ ಕೊಂಡಳು. ಹೇಮಂತ ಅಂದುಕೊಂಡಂತೆ ಆಗಿತ್ತು. ಆತ ಪಾರಾಗಲು ಸಮುದ್ರದತ್ತ ಬರುತ್ತಿದ್ದ ದೂರದಲ್ಲಿದ್ದ ಅವನ ಪರಿಚಯ ಸಿಗುವಂತಿರಲಿಲ್ಲ ವಾದರೂ ಅದು ಗಂಡು ವ್ಯಕ್ತಿ ಎಂದು ತಿಳಿಯಿತು. ಫ್ಯಾಂಟಮ್ ತರಹ ಡ್ರೆಸ್ ಧರಿಸಿದ್ದ ಆತ ಕಣ್ಣಿಗೆ ಪಟ್ಟಿ ಕಟ್ಟಿಕೊಂಡಿದ್ದ. ಬೆನ್ನ ಹಿಂದೆ ಬಟ್ಟೆ ಹಾರಾಡು ತ್ತಿತ್ತು....ಟಾವಲ್ ಹಾಗೆ. ಓಡುತ್ತ ಬಂದ ಆತ ಬೆಟ್ಟದ ತುದಿಗೆ ನಿಂತು ಕೊಂಡ. ಕೆಳಗಡೆ ಸುಮಾರು ಇನ್ನೂರು ಅಡಿ ಕೆಳಗೆ ಸಾಗರ ಭೋರ್ಗರೆಯು ತ್ತಿತ್ತು. ಒಂದು ಬಾರಿ ಮೇಜರನ ಬೋಟಿನತ್ತ ನೋಡಿದ ಆತ ಎರಡೂ ಕೈ ಮೇಲೆತ್ತಿ ಸಮುದ್ರ ಗರ್ಭದಲ್ಲಿ ಹಾರಿದ.

ಸುಷಮಾಳಿಗೆ ಉಸಿರೇ ಸಿಕ್ಕಂತಾಯಿತು. ಇನ್ನೂರು ಅಡಿ ಎತ್ತರದಿಂದ

ಭೋರ್ಗರೆಯುತ್ತಿರುವ ಸಮುದ್ರಗರ್ಭಕ್ಕೆ ಹಾರುವದೆಂದರೆ?....ಎಂಥಾ ಸಾಹಸ?.... ಹೇಮಂತನಿಗೂ ಅಚ್ಚರಿ. ಎಂಥಾ ದಿಟ್ಟವ್ಯಕ್ತಿ. ಅದರೊಂದಿಗೆ ಈತ ಖಂಡಿತವಾಗಿಯೂ ಮಂಗಲ್ ಅಲ್ಲ ಎಂಬುದು ಖಾತ್ರಿಯಾಯಿತು.

ಅವರಿಬ್ಬರೂ ನೋಡುತ್ತಿದ್ದಂತೆ ಗಾಳಿಯಲ್ಲಿ ಮೂರು ನಾಲ್ಕು ಬಾರಿ ಲಾಗಹೊಡೆದ ಆತ. ಒಮ್ಮಿಂದೊಮ್ಮೆಲೆ ಹೇಮಂತನ ತಲೆಯೊಳಗೆ ಎಂಟು ವರ್ಷಗಳ ಹಿಂದೆ ಓಲಿಂಪಿಕ್‌ನಲ್ಲಿ ಸಾಧನೆಗೈದ ಈಜುಗಾರನ ನೆನಪಾಯಿತು. ಆತನೂ ಸಹ ಇದೇ ರೀತಿ ಮೇಲಿನಿಂದ ಡೈವ್ ಹೊಡೆಯುತ್ತಿದ್ದ....ಪೂರ್ತಿ ಅವನದೇ ಹೋಲಿಕೆ....ಆದರೆ...ಆದರೆ...ಹೇಮಂತನಿಗೆ ಚೆನ್ನಾಗಿ ನೆನಪಿತ್ತು, ಕೇವಲ ಎರಡು ತಿಂಗಳ ಹಿಂದೆ ಆ ಈಜುಗಾರ ತೀರಿಕೊಂಡಿದ್ದ.

ನೋಡ ನೋಡುತ್ತಿದ್ದಂತೆ ಇಬ್ಬರ ಕಣ್ಣುಗಳೂ ಆಶ್ಚರ್ಯದಿಂದ ಅರಳಿ ಕೊಂಡವು. ನೀರಿಗೆ ಹತ್ತಿರ ಬರುತ್ತಿದ್ದಂತೆ ಆ ವ್ಯಕ್ತಿ ಕಾಲಿಗೆ ತೊಟ್ಟುಕೊಂಡ ಬೂಟುಗಳ ಹಿಂದೆ ಮತ್ತು ಮುಂದೆ ಸ್ಕೇಟಿಂಗ್ ಮಾಡುವ ಹಲಗೆಯಂತೆ ಎರಡು ನೀಳವಾದ ಪಾದಗಳು ಗೋಚರಿಸಿದವು. ಅದೇ ಕ್ಷಣ ಆತನ ಕಾಲುಗಳು ನೀರು ಸ್ಪರ್ಶಿಸಿದವು. ಚಪ್....ಚಪಕ್ ಸಪ್ಪಳ. ಎರಡು ಮೂರು ಬಾರಿ ನೀರಿ ನಿಂದ ಮೇಲೆ ಜಿಗಿದ ವ್ಯಕ್ತಿ, ನಂತರ, ಸ್ಥಿರವಾಗಿ ನಿಂತು ಸಮುದ್ರದ ಮೇಲೆ ಸ್ಕೇಟಿಂಗ್ ಮಾಡತೊಡಗಿದ....ಅಬ್ಬಾ ಎಷ್ಟು ವೇಗವಾಗಿ, ನೀರ ಮೇಲೆ ತೇಲುತ್ತ ಸ್ಕೇಟಿಂಗ್ ಮಾಡುತ್ತ ಹೇಮಂತನ ಬೋಟ್ ಕಡೆಗೆ ಆತ ಹೊರಳಿದ. ಹೇಮಂತ್ ಅವನನ್ನೇ ನೋಡುತ್ತಿದ್ದ ರೆಪ್ಪೆ ಸಹ ಬಡಿಯದೆ. ಆತನ ಬಲಗಾಲಿನ ಬೂಟಿನ ತುದಿಯಲ್ಲೊಂದು ಬೆಂಕಿ ಕಿಡಿ ಕಾಣಿಸಿಕೊಂಡಿತು. ಸರಕ್‌ನೆ ಬೋಟ್ ತಿರುಗಿಸಿದ ಆತ ಅರಚಿದ: "ಸುಷಮಾ ಬೋಟಿನಲ್ಲಿ ಮಲಗಿಕೊ." ಅದರೊಂದಿಗೆ ತಾನೂ ಸಹ ಬೋಟಿನಲ್ಲಿ ಬಾಗಿದ ... 'ಢಮ್' ಎಂಬ ಸಪ್ಪಳ. ಮೋಟರ್ ಬೋಟಿನಿಂದ ಒಂದೆರಡು ಅಡಿ ಅಂತರದಲ್ಲಿ ಬೆಂಕಿ ಗುಂಡೊಂದು ಬಂದು ಬಿದ್ದು ಸಮುದ್ರದ ನೀರು ಸ್ಫಟಿಕದ ಕಂಬದಂತೆ ಮೇಲೆ ಹಾರಿತು. ಮೇಲೆ ಹಾರಿದ ನೀರು ಕೊತ ಕೊತ ಕುದಿಯುತ್ತಿತ್ತು.... ಎರಡಾಳಿನವರೆಗೂ ಮೇಲೆ ಹಾರಿದ ನೀರು ಹಾಗೆ ಮತ್ತೆ ಸಮುದ್ರಕ್ಕಿಳಿಯುವ ಮುನ್ನ ನಾಲ್ಕಾರು ಹನಿ ಇಬ್ಬರಿಗೂ ಸಿಡಿಯಿತು. ಹಾ....ಅಯ್ಯೋ ಎಂದು ಚೀರಿಕೊಂಡಳು ಸುಷಮಾ. ನೀರು ವಿಪರೀತ ಸುಡುತ್ತಿತ್ತು ಬೆಂಕಿಯಂತೆ.

ಗುರಿ ವಿಫಲವಾಯಿತೆಂದು ತಿಳಿದ ಆ ವ್ಯಕ್ತಿ ಮತ್ತೊಮ್ಮೆ ಆಕ್ರಮಣ ಮಾಡಿತು. ಈ ಬಾರಿ ಎಡಗಾಲಿನ ಬೂಟಿನಿಂದ ಸಿಡಿಯಿತು ಬೆಂಕೀಗುಂಡು.... ಅದರ ಗತಿಯೂ ಮೊದಲಿನ ಗುಂಡಿನಂತೇ ಆಯಿತು. ಹೇಮಂತ ಜಾಣ್ಮೆಯಿಂದ

ಪಾರಾಗಿದ್ದ. ಆದರೆ ಇದೇ ರೀತಿ ಎಷ್ಟು ಬಾರಿ ಪಾರಾಗಲು ಸಾಧ್ಯ?

ಕೊನೆಗೊಂದು ತೀರ್ಮಾನಕ್ಕೆ ಬಂದನಾತ.

"ಸುಷಮಾ ಬೋಟಿನಿಂದ ನೀರಿಗೆ ಹಾರಿ ಈಜುತ್ತ ಕೆಳಭಾಗಕ್ಕೆ ಹೋಗು. ಮೇಲೆ ಬರಲು ಪ್ರಯತ್ನಿಸಬೇಡ... ಶ್ವಾಸಸ್ತಂಭನ ಮಾಡಿಕೊ."

ಸುಷಮಾ ಜಿಗಿಯುತ್ತಿದ್ದಂತೆ ಹೇಮಂತ ಆ ವ್ಯಕ್ತಿಯಡೆ ನೋಡಿದ. ಮತ್ತೊಂದು ಬೆಂಕಿ ಕಿಡಿ ಜಿಗಿದಿತ್ತು... ಹೇಮಂತ ಸಹ ನೀರಿಗೆ ನೆಗೆದ. ಒಂದೇ ಉಸಿರಿಗೆ ನೀರಿನ ಆಳಕ್ಕೆ....ಅತೀ ಆಳಕ್ಕೆ ಇಳಿದ. ಮೇಲೆ ಭಾರೀ ಆಸ್ಫೋಟ ಕೇಳಿಸಿತು.... ಅವರ ಬೋಟು ಬೆಂಕಿಗಾಹುತಿಯಾಗಿತ್ತು. ನೀರಮೇಲೆ ಆ ವ್ಯಕ್ತಿ ಭರಭರನೆ ಹತ್ತಾರು ಸುತ್ತು ಹಾಕಿದ....ಹೇಮಂತ ಆಗಲಿ ಸುಷಮಾ ಆಗಲಿ ಕಾಣಲಿಲ್ಲ...ಕ್ರಮೇಣ ಸದ್ದು ಅಡಗಿ ಶಾಂತಿ ನೆಲೆಸಿತು...ಅಲ್ಲಿಯವರೆಗೂ ಕೆಳಗಡೇ ಶ್ವಾಸಸ್ತಂಭನದೊಂದಿಗೆ ಈಜುತ್ತಿದ್ದ ಹೇಮಂತ ಮೇಲೆ ಬಂದ. ದೂರದಲ್ಲಿ ಆ ವ್ಯಕ್ತಿ ನೀರಮೇಲೆ ವೇಗವಾಗಿ ಹೋಗುತ್ತಿದ್ದುದು ಕಾಣಿಸಿತು.... ನಿಡಿದಾದ ಉಸಿರು ಬಿಟ್ಟ.

ಅದೇ ವೇಳೆಗೆ ಅವನ ಪಕ್ಕದಲ್ಲಿಯೇ ಮೇಲೆದ್ದಳು ಸುಷಮಾ.... ಶ್ವಾಸ ಬಿಗಿ ಹಿಡಿದಿದ್ದರಿಂದಾಗಿ ಅವಳ ಮುಖ ಕೆಂಜಗದಂತೆ ಕೆಂಪಗಾಗಿತ್ತು. ಹೇಮಂತ ನನ್ನು ನೋಡುತ್ತ ಉಸ್ ಎಂದು ಉಸಿರುಬಿಟ್ಟಳು.

"ಅಬ್ಬಾ, ಇಷ್ಟು ವಿಚಿತ್ರ ಮಾನವನನ್ನು ನಾನು ಕಂಡೇ ಇರಲಿಲ್ಲ."

"ಹೌದು ಸುಷಮಾ, ನನಗೂ ಸಹ ಅಷ್ಟೇ ದಿಗ್‌ಭ್ರಮೆಯಾಗಿದೆ. ಸಮುದ್ರ ಎಂದರೆ ಅವನ ಪಾಲಿಗೆ ಹಿಮದ ಮೈದಾನದಂತೆ ಆಯಿತು. ಎಷ್ಟು ಸರಾಗವಾಗಿ ಆತ ನೀರಮೇಲಿ ಓಡುತ್ತಿದ್ದ!"

"ಅವನ ಕಾಲಿನ ಬೂಟುಗಳಿಗೆ ಕೂಡಿಸಿದ ಯಂತ್ರ ಎಂತಹದು? ಅದರಿಂದ ಸಿಡಿದ ಗುಂಡುಗಳು ಎಂತಹವು? ಅಬ್ಬಾ, ನೆನಸಿಕೊಂಡರೆ ಮೈ ಜುಂ ಎನ್ನುತ್ತದೆ. ನಮಗಿಂದು ಪುನರ್ಜನ್ಮ ದೊರೆದಂತಾಯಿತು."

"ಹೌದು ಸುಷಮಾ, ನಮಗಿಬ್ಬರಿಗೂ ಇಂದು ಪುನರ್ಜನ್ಮ. ಆ ವಿಚಿತ್ರ ಮಾನವನಿಂದಾಗಿ ನಾವು ಹೊಸ ಪಾಠ ಕಲಿತೆವು. ಈ ಬಾರಿ ನಮಗೆದುರಾಗಿ ಯಾವುದೋ ಪ್ರತಿಭಾವಂತ ವಿಜ್ಞಾನಿ ಇದ್ದಂತಿದೆ. ಆತನ ಹೊಸ ಬಗೆಯ ಆವಿಷ್ಕಾರದ ಜೀವಂತ ಸಾಕ್ಷಿ ಈ ವಿಚಿತ್ರ ಮಾನವ."

"ಮಾನವನೆಲ್ಲಿ? ಆತ ಮಾನವ ರೂಪದ ಯಮದೂತ" ನಗುತ್ತ ನುಡಿದ ಸುಷಮಾಳೊಂದಿಗೆ ತಾನೂ ನಗುತ್ತ ಹೇಮಂತ ಈಜಿ ಆ ದಡ ಸೇರಲು ತಿಳಿಸಿದ. ಹತ್ತು ನಿಮಿಷಗಳಲ್ಲಿ ಅವರಿಬ್ಬರೂ ಆಚೆ ದಡ ಸೇರಿದ್ದರು. ನಂತರ ಕಡಿದಾದ

ಬೆಟ್ಟ ಏರುವ ಸಾಹಸ... ಯಾವುದಕ್ಕೂ ಹಿಂದೆಗೆಯದ ಸೇನಾನಿಗಳು ಅವರಿಬ್ಬರು. ಬೆಟ್ಟ ಏರಿಯಾಯಿತು. ಏರಿ ಮೇಲೆ ಸಮತಟ್ಟಾದ ಭೂಮಿಗೆ ಬಂದಾಗ ನೂರಿನ್ನೂರು ಅಡಿ ಅಂತರದಲ್ಲಿಯೇ ನಿಂತಿತ್ತು ಬೆಟ್ಟದ ಮನೆ 'ಆಕಾಶ್...'

"ಓಹ್...ಎಷ್ಟು ಸುಂದರವಾದ ಮನೆ! ಎಷ್ಟು ಸುಂದರವಾದ ಮನ ಸೆಳೆಯುವ ನೋಟ!"

ಅಲ್ಲಿಯ ಸೃಷ್ಟಿ ಸೌಂದರ್ಯದಿಂದ ಆಕರ್ಷಿತಳಾದ ಸುಷಮಾ ಉದ್ಗರಿಸಿದಳು.

"ಹೌದು ಅದಕ್ಕೆಂದೇ ಆ ಲೇಖಕ ಪರದೇಶದಿಂದ ಇಲ್ಲಿಗೆ ಬಂದು ನೀರಿನಂತೆ ಹಣ ವೆಚ್ಚ ಮಾಡಿ ಇಲ್ಲಿ ಮನೆ ಕಟ್ಟಿಕೊಂಡದ್ದು... ನಾವು ಅದನ್ನು ಮೈತುಂಬ ಕಣ್ಣಾಗಿಸಿಕೊಂಡು ಸಮೀಪಿಸಬೇಕು. ಸದ್ಯ ಅದು ಸೌಂದರ್ಯದ ಬೀಡಲ್ಲ ...ಶತ್ರುವಿನ ನೆಲೆ. ನಮ್ಮ ಶತ್ರು ಎಂಥವ ಎಂದು ಈಗಾಗಲೇ ನೀನು ನೋಡಿರುವೆ..." ಎಚ್ಚರಿಸಿದ ಹೇಮಂತ.

ಉಪ್ಪಿನ ನೀರಿನಲ್ಲಿ ಇಬ್ಬರೂ ಮಿಂದಿದ್ದರಿಂದಾಗಿ ಗಾಳಿಗೆ ಮೈಮೇಲೇ ಒಣಗಲು ಪ್ರಾರಂಭಿಸಿದ ಬಟ್ಟೆಗಳು ರಟ್ಟಿನಂತೆ ಬಿರುಸಾಗತೊಡಗಿದ್ದವು. ಮಿದುವಾದ ಚರ್ಮಕ್ಕೆ ಅವುಗಳ ಒತ್ತುವಿಕೆ ಬ್ಲೇಡನ್ನು ನೆನಪಿಗೆ ತರುತ್ತಿತ್ತು. ಎಲ್ಲ ಹಿಂಸೆಯನ್ನೂ ಒದಿಗೊತ್ತಿ, ಇಬ್ಬರೂ ಒಂದೊಂದು ದಿಕ್ಕಿನಿಂದ ಮನೆ ಪ್ರವೇಶಿಸಲು ಸಿದ್ಧರಾದರು.

ಸುಮಾರು ದೊಡ್ಡದಾದ ಬಂಗಲೆ. ಸುತ್ತಲೂ ಹೂದೋಟ. ಕಚ್ಚಾ ಕಲ್ಲು ಮಣ್ಣು ಉಪಯೋಗಿಸಿ ಕಟ್ಟಿದ ಕಂಪೌಂಡು ಗೋಡೆ... ಎಲ್ಲಾ ಹಾಳು ಬಿದ್ದಿತ್ತು. ತೋಟದಲ್ಲಿ ಸಾಕಷ್ಟು ಹುಲ್ಲು, ಮುಳ್ಳು, ಕಂಟಿ ಬೆಳೆದು ಹೂವಿನ ಗಿಡಗಳನ್ನು ಕೊಂದು ಹಾಕಿದ್ದವು. ಸುಷಮಾ ಹಿತ್ತಲ ಬಾಗಿಲಿಂದಲೂ ಹೇಮಂತ ಮುಂಭಾಗದಿಂದಲೂ ಕಂಪೌಂಡು ಗೋಡೆ ನೆಗೆದು ಪ್ರವೇಶಿಸಿದರು. ಅವರಿಬ್ಬರ ಊಹೆ ಸುಳ್ಳಾಯಿತು. ಅವರಿಗೆ ಯಾವ ಬಗೆಯ ಅಪಾಯವೂ ಎದುರಾಗಲಿಲ್ಲ. ಹಿತ್ತಲ ಬಾಗಿಲಿಗೆ ಒಳಗಿನಿಂದ ಚಿಲಕ ಹಾಕಿದ್ದರೂ ಮುಂದಿನ ಬಾಗಿಲು ಹಾಗೆಯೇ ಮುಂದೆ ಮಾಡಲಾಗಿತ್ತು. ಬಾಗಿಲಿಗೆ ಒಂದು ಗಂಟೆ ನೇತಾಡುತ್ತಿತ್ತು. ಸೇತುವೆಗೆ ಕಟ್ಟಿದ ಗಂಟೆಯ ಹಾಗೆ.

ಬಾಗಿಲು ತೆರೆದು ಇಬ್ಬರೂ ಒಳಗೆ ಕಾಲಿಟ್ಟರು. ಮನೆ ಹಾಳು ಹಾಳು ಸುರಿಯುತ್ತಿತ್ತು. ಮುರಿದ ಮಂಚ, ಕುರ್ಚಿ, ದೂಳು ತುಂಬಿದ ಪುಸ್ತಕದ ಶೆಲ್ಫುಗಳು, ನೆಲದ ಮೇಲೆಯೂ ಸಹ ಸಾಕಷ್ಟು ಧೂಳು. ನಾಲ್ಕಾರು

ಕೋಣೆಗಳ ನಂತರ ಅಡುಗೆ ಮನೆ ಪ್ರವೇಶಿಸಿದರು. ಅಡುಗೆ ಮನೆ ಶುಭ್ರವಾಗಿತ್ತು. ಕಸ ಗುಡಿಸಿ ಅಲ್ಲಿದ್ದ ಕೆಲವೇ ಪಾತ್ರೆಗಳನ್ನು ತಿಕ್ಕಿ ಇಡಲಾಗಿತ್ತು. ಬ್ರೆಡ್, ಹಣ್ಣು, ಬಿಸ್ಕೀಟು ಮುಂತಾದ ಖಾದ್ಯ ವಸ್ತುಗಳೂ ಅಲ್ಲಿದ್ದವು. ಚೌಕೀದಾರ ಹೇಳಿದ ಮಾತು ಸತ್ಯವಾಗಿತ್ತು. ಮಂಗಲ್‌ನ ಇರುವಿಕೆ ಸ್ಪಷ್ಟವಾಗಿತ್ತು. ಅತೀ ಎಚ್ಚರಿಕೆಯಿಂದ ಪಕ್ಕದ ಕೋಣೆಗೆ ಇಣುಕಿದರು. ಅದು ಬಾತ್ ರೂಮ್. ಬಾತ್ ರೂಮಿನಲ್ಲಿ ಎರಡು ಮೂರು ಜೊತೆ ಹಳೆ ಬಟ್ಟೆಗಳು, ಪಾದರಕ್ಷೆಗಳು. ಅವುಗಳಲ್ಲಿ ಒಂದು ಜೊತೆಯನ್ನು ಹೇಮಂತ ಗುರುತಿಸಿದ. ಬ್ಯಾಂಕ್ ದರೋಡೆ ಸಮಯದಲ್ಲಿ ಮಂಗಲ್ ಧರಿಸಿದ ಬಟ್ಟೆ ಹಾಗೂ ಪಾದರಕ್ಷೆಗಳು.

ಅಲ್ಲಿಂದ ಮುಂದೊಂದು ಖಾಲಿ ಕೋಣೆ. ಮತ್ತೊಂದು ಕೋಣೆ ಬಾಗಿಲಿಗೆ ಬಂದರು. ಬಾಗಿಲು ಮುಚ್ಚಿದ್ದರೂ ಒಳಗಡೆಯಿಂದ ಕೊಂಡಿ ಹಾಕಿಲ್ಲವೆಂದು ಪಕ್ಕಕ್ಕೆ ಬಿಟ್ಟ ಬಿರುಕಿನಿಂದ ತಿಳಿಯುತ್ತಿತ್ತು. ಮೂಗಿನ ಹೊರಳೆ ಉಬ್ಬಿಸಿ ವಾಸನೆ ತೆಗೆದುಕೊಂಡ ಹೇಮಂತ ಜೇಬಿನಿಂದ ವಸ್ತ್ರ ತೆಗೆದು ಮೂಗು ಮುಚ್ಚಿಕೊಂಡ. ಸುಷಮಾ ಸಹ ಮೂಗು ಮುಚ್ಚಿಕೊಂಡಳು ತನ್ನ ಪುಟ್ಟ ವಸ್ತ್ರದಿಂದ.

"ಥೂ ...ಕೆಟ್ಟ ವಾಸನೆ....ಓಕರಿಕೆ ಬರುವಂತಿದೆ...."

"ಇದು ಚರ್ಮ ಸುಡುತ್ತಿರುವ ವಾಸನೆ ಸುಷಮಾ.... ವಿಚಿತ್ರ ಬಗೆಯ ಸುಡುವಿಕೆ. ಬೆಂಕಿಯಿಂದ ಹತ್ತಿ ಉರಿಯುತ್ತಿದ್ದರೆ ಜ್ವಾಲೆ ಬೆಳಕು ಹೊಗೆ ಇರುತ್ತಿತ್ತು. ಅದಾವುದೂ ಇಲ್ಲ. ಏನೇ ಆಗಲಿ ಒಳಗಡೆ ನಮಗಾಗಿ ಮತ್ತೊಂದು ಅದ್ಭುತ ಕಾದಿದೆ, ಎದುರಿಸಲು ಸಿದ್ಧಳಾಗು."

ತನ್ನ ಪರ್ಸ್‌ನಿಂದ ಪುಟ್ಟ ರಿವಾಲ್ವರ್ ಹೊರ ತೆಗೆದು ಕೈಲಿ ಹಿಡಿದಳು ಸುಷಮಾ. ಅವಳ ಹಿಂದೆ ಮರೆಯಾಗಿ ನಿಂತ ಹೇಮಂತ ಬಾಗಿಲು ದೂಡಿದ. 'ಕಿರ್‍ರ್‍ರ್‍' ಕರ್ಕಶ ಸಪ್ಪಳ ಮಾಡುತ್ತ ಪುರಾತನ ಬಾಗಿಲು ಒಳಗಡೆ ತೆರೆದುಕೊಂಡಿತು. ಎದುರಿಗೆ ಎರಡು ಮೂರು ಕಪಾಟುಗಳು, ಗೋಡೆಗೆ ಹೊಂದಿ ಊಟದ ಟೇಬಲ್, ನಾಲ್ಕು ಕುರ್ಚಿಗಳು. ಕಣ್ಣಿಗೆ ಯಾರೂ ಬೀಳದಿದ್ದರೂ ದುರ್‌ವಾಸನೆ ಹೆಚ್ಚಾಯಿತು.

ಇಬ್ಬರೂ ಮೆಲ್ಲನೆ ಒಳಗೆ ಹೆಜ್ಜೆ ಇಟ್ಟರು.

ಒಲ ಬದಿಗೊಂದು ಕಟ್ಟಿಗೆ ಮಂಚ. ಮಂಚಕ್ಕೆ ಸೊಳ್ಳೆ ಪರದೆ. ಅದನ್ನು ಒಗೆದು ಸ್ವಚ್ಛ ಮಾಡಿ ಎಷ್ಟು ವರ್ಷಗಳಾಗಿದ್ದವೋ ಏನೋ.... ಆ ಸೊಳ್ಳೆ ಪರದೆಯಿಂದ ನಿಧಾನವಾಗಿ ಸಿಗರೇಟಿನ ಹೊಗೆಯಂತೆ ಹೊಗೆ ಹೊರಬರುತ್ತಿತ್ತು.

ಅದೇ ಸುಡುತ್ತಿರುವ ವಾಸನೆ. ಒಳಗೆ ಯಾರೋ ಮಲಗಿದ್ದು ಅಸ್ಪಷ್ಟವಾಗಿ ಕಾಣುತ್ತಿತ್ತು. ತಾನು ಮಲಗಿದಲ್ಲಿಯೇ ಹೊಗೆ ಎದ್ದು ಹಾಸಿಗೆ ಸುಡುತ್ತಿದ್ದರೂ ಆ ವ್ಯಕ್ತಿ ಮಿಸುಕದೆ ಇದ್ದದ್ದು ಅಚ್ಚರಿ ಉಂಟು ಮಾಡಿತು. ಅದರೊಂದಿಗೆ ಆ ವ್ಯಕ್ತಿ ಬಹುಶಃ ಬದುಕಿರಲಿಕ್ಕಿಲ್ಲ ಎಂಬ ಸಂಶಯ ಮೂಡಿ ಹೇಮಂತ ಸರಸರನೆ ಮಂಚ ಸಮೀಪಿಸಿ ಸೊಳ್ಳೆ ಪರದೆ ಮೇಲೆತ್ತಿದ.

ಮಂಚದ ಮೇಲೆ ದೃಷ್ಟಿ ಬೀಳುತ್ತಲೂ ಬೆಚ್ಚಿ ಒಂದು ಹೆಜ್ಜೆ ಹಿಂದೆ ಸರಿದ. ಅವನ ಹಿಂದೆಯೇ ಬಂದ ಸುಷಮಾ ಅಂತೂ ಆ ದೃಶ್ಯ ನೋಡಿ ಕಿಟಾರನೆ ಕಿರುಚಿಕೊಂಡು ಹಿಂದಕ್ಕೋಡಿದಳು.

ಅದೊಂದು ಭಯಾನಕ, ಅಷ್ಟೆ ಬೀಭತ್ಸ್ಯ ದೃಶ್ಯ.

ಮಂಗಲ್ ಮಂಚದ ಮೇಲೆ ಮಲಗಿದ್ದ. ಆತ ಜೀವಂತವಾಗಿಯೇ ಇದ್ದ. ಕಣ್ಣುಗಳು ತೆರೆದಿದ್ದವು. ತುಟಿ ಅಲುಗುತ್ತಿದ್ದವು. ಆದರೆ ಆತ ಚಲಿಸುವಂತಿರ ಲಿಲ್ಲ. ದೇಹದ ನಾಲ್ಕಾರು ಕಡೆ ಮೊಳೆ ಹೊಡೆದು ಚಲಿಸದಂತೆ ಮಾಡಿದ್ದರು. ಅಷ್ಟೆ ಅಲ್ಲ, ಅವನ ದೇಹದ ಬೇರೆ ಬೇರೆ ಕಡೆ ಆ್ಯಸಿಡ್ ಸುರುವಿದ್ದರಿಂದಾಗಿ ಸುಟ್ಟು ಕರಕಾಗುತ್ತಿತ್ತು. ದುರ್ವಾಸನೆ ಹೊರಡುತ್ತಿತ್ತು. ಹಿಂಸೆಯಿಂದಾಗಿ ಆತ ಅಪಾರ ನೋವನ್ನು ಅನುಭವಿಸುತ್ತಿದ್ದ. ಯಾರಿಗೂ ಇಂಥ ಸಾವು ಬರ ಬಾರದು ಎಂದಿತು ಹೇಮಂತನ ಮನಸ್ಸು.

ಅವನ ಬಳಿ ಸರಿದು ಮೆಲುವಾಗಿ ನುಡಿದ, "ಮಂಗಲ್ ನೋಡಿದೆಯಾ ನಿನ್ನ ಕೆಟ್ಟ ಕೆಲಸದ ಪರಿಣಾಮವನ್ನು. ದೇಶಘಾತುಕರ ಮಾತುಗಳಿಗೆ ಬಲಿ ಬಿದ್ದು ಬ್ಯಾಂಕ್ ದರೋಡೆ ಮಾಡಿದೆ. ಅದಕ್ಕಾಗಿ ನಿನಗೆ ದೊರೆತ ಬಹುಮಾನ ಇದು. ಸಾಯುವ ಮುಂಚೆ ನಿಜ ಹೇಳು ಯಾರ ಕೆಲಸ ಇದು? ನೀನು ಸರಿಯಾಗಿ ಉತ್ತರಿಸಿದರೆ ನಿನ್ನನ್ನಂತೂ ಬದುಕಿಸಿಕೊಳ್ಳಲು ಸಾಧ್ಯವಿಲ್ಲವಾದರೂ ನಿನಗೆ ಸುಖಕರವಾದ ಮರಣ ಬರುವಂತೆ ಮಾಡುತ್ತೇನೆ."

ಅಷ್ಟೊತ್ತಿಗೆ ಧೈರ್ಯ ತೆಗೆದುಕೊಂಡ ಸುಷಮಾ ಅವನ ಬಳಿ ಬಂದಿದ್ದಳು. ಮಂಗಲನ ಕಣ್ಣುಗುಡ್ಡೆಗಳು ನಿಧಾನವಾಗಿ ಚಲಿಸಿದವು. ತುಟಿ ಕಂಪಿಸಿತು. ಅಸ್ಪಷ್ಟ ಸ್ವರದಲ್ಲಿ ಆತ ನುಡಿದ.

"ಯಮದೂತ.. ಯ.ಮ...ದೂ....ತ..." ಅಷ್ಟೇ ಅವನ ಜೀವ ಗಂಟಲಿಗೆ ಬಂದು ಚಡಪಡಿಸಲಾರಂಭಿಸಿದ. ಅದನ್ನು ನೋಡಲಾರದೆ ಹೇಮಂತ ಸುಷಮಾ ಕೈಯಿಂದ ರಿವಾಲ್ವರ್ ಇಸಿದುಕೊಂಡು ಅವನೆಡೆ ಗುರಿ ಹಿಡಿದ.

ಮಂಗಲ್‌ನ ಮುಖದ ಮೇಲೆ ಸಂತಸದ ಆನಂದದ ಲಕ್ಷಣಗಳು ಕಂಡವು. ಕಣ್ಣಂಚಿನಲ್ಲಿ ನೀರೂ ಕಾಣಿಸಿಕೊಂಡಿತು. ಫಿಟ್....ಫಿಟ್....ಸದ್ದು. ಸೈಲನ್ಸರ್

ತಗುಲಿಸಿದ ರಿವಾಲ್ವರ್‌ನಿಂದ ಸಿಡಿದ ಎರಡು ಗುಂಡುಗಳು ಅವನೆದೆ ಸೇರಿದವು. ಆತನ ಬಾಯಿಂದ ಬಂದ ಕೊನೆ ಶಬ್ದ ಸ್ಪಷ್ಟವಾಗಿ ಕೇಳಿಸಿತು, "ಥ್ಯಾಂಕ್ಸ್."

ಭಾರವಾದ ಹೃದಯದೊಂದಿಗೆ ಮನೆ ಜಾಲಾಡಿಸಿದರು. ದರೋಡೆ ಮಾಡಿದ ಹಣದ ಸ್ವಲ್ಪ ಭಾಗ ಮಾತ್ರ ಹಾಸಿಗೆ ಬುಡದಲ್ಲಿ ದೊರೆಯಿತು. ಅದನ್ನೆಲ್ಲ ಜೇಬಿಗೆ ಸೇರಿಸಿದ. ಬೇರೆ ಏನೂ ದೊರೆಯಲಿಲ್ಲ. ಅತ್ತಿತ್ತ ನೋಡುತ್ತಿದ್ದಂತೆಯೇ ಗೋಡೆಗುಂಟ ಹಾದು ಹೋದ ಜಿನುಗಾದ ವಾಯರು ಕಣ್ಣಿಗೆ ಬಿದ್ದು ಬೆಚ್ಚಿದ ಹೇಮಂತ ಒಮ್ಮೆಲೆ ದೊಡ್ಡ ಧ್ವನಿಯಲ್ಲಿ ಕೂಗಿಕೊಂಡ. "ಸುಷಮಾ ಬೇಗ ಹೊರಗೆ ನಡೆ ಇಲ್ಲಿ ಟೈಮ್ ಬಾಂಬ್ ಕೂಡಿಸಿದ್ದಾರೆ."

ಜೀವದ ಹಂಗುದೊರೆದು ಅವರಿಬ್ಬರೂ ಹೊರಗೋಡಿ ಬಂದರು. ಈ ಬಾರಿ ಸೇತುವೆಯತ್ತ. ಸೇತುವೆ ತಲುಪಿ ಅರ್ಧ ದಾರಿ ಕ್ರಮಿಸಿರಬೇಕು. ಹಿಂದಿನಿಂದ ಭಾರೀ ಆಸ್ಫೋಟ ಕೇಳಿಸಿತು. ಹೊರಳಿ ನೋಡಿದರು. ಬೆಟ್ಟದ ಮನೆ ಆಕಾಶ್ ಅಗ್ನಿ ನಾರಾಯಣನ ಅತಿಥಿಯಾಗಿ ಭಗಭಗನೆ ಉರಿಯುತ್ತಿತ್ತು.

ಕಾರಿನ ಬಳಿ ಬಂದರು ಇಬ್ಬರು. ಸುಷಮಾ ಕುಳಿತುಕೊಳ್ಳುತ್ತಿದ್ದಂತೆಯೇ ಕಾರನ್ನು ಸರಿಪಡಿಸಿದ ಹೇಮಂತ, ಹಾಗೇ ಹಿಂಬದಿಯಿಂದ ನಿಧಾನವಾಗಿ ನಡೆಸುತ್ತ ಸೇತುವೆ ಬಾಗಿಲಿಗೆ ಬಂದ. ಅಲ್ಲಿಂದ ಕಾರು ಹೊರಳಿಸಿ ನೇರವಾಗಿ ಓಡಿಸತೊಡಗಿದ. ಗೆಸ್ಟ್‌ಹೌಸಿಗೆ ಹೋಗುವ ಅವಶ್ಯಕತೆಯೂ ಇರಲಿಲ್ಲ. ಕಾಕಾ ಅಂಗಡಿ ಎದುರಿಗೆ ಬಂದಾಗ ಹತ್ತಾರು ಜನ ನಿಂತು ಬೆಟ್ಟದ ಕಡೆ ನೋಡು ತ್ತಿದ್ದುದು ಗಮನಕ್ಕೆ ಬಂತು. ಕಾರನ್ನು ಅಲ್ಲಿ ನಿಲ್ಲಿಸದೆಯೇ ಹೇಮಂತ ವೇಗ ವಾಗಿ ಓಡಿಸಿಕೊಂಡು ಹೋದಾಗ ಕಾಕಾನ ಸಂಶಯದ ದೃಷ್ಟಿ ಕಾರನ್ನು ಹಿಂಬಾಲಿಸದೆ ಇರಲಿಲ್ಲ.

ಹತ್ತು ಘಂಟೆಯ ಸುಮಾರಿಗೆ ಸುಮಾರಾದ ದೊಡ್ಡ ಊರಿಗೆ ಅವರು ಬಂದು ತಲುಪಿದ್ದರು. ಅಲ್ಲಿಯ ಹೊಟೆಲ್ ಮುಂದೆ ಕಾರು ನಿಲ್ಲಿಸಿ ತಿಂಡಿ ತಿಂದು ಕಾಫಿ ಕುಡಿದರು. ಸಮೀಪದ ಬಂಕಿನಲ್ಲಿ ಪೆಟ್ರೋಲ್ ತುಂಬಿಸಿಕೊಂಡು ಅವನಿಗೆ ಹಣ ಕೊಟ್ಟು ಸಿಗರೇಟೊಂದನ್ನು ಉರಿಸಿದ ಹೇಮಂತ. ಎಷ್ಟೋ ಸಮಯದಿಂದ ಆತ ಸಿಗರೇಟ್ ಸೇದಿರಲಿಲ್ಲ.

"ಪೀಂ...ಪೀಂ...ಪೀಂಪ್" ಸುಮಧುರ ಸ್ವರ ವಾಚಿನಿಂದ ಹೊರಬಂತು. ಸುಷಮಾ ಸಹ ಅವನತ್ತ ಆಕರ್ಷಿತಳಾದಳು. ಕೂಡಲೇ ಹೇಮಂತ ವಾಚಿನ ಕೀ ಗುಂಡಿ ಜಗ್ಗಿದ. ತೆಳುವಾದ ಜಿನುಗಾದ ತಂತಿ....ಗುಂಡಿ ಬಾಯಿಗೆ ತಂದ.

"ಹಲ್ಲೋ.... ಎಕ್ಸ್ ಸ್ಪೀಕಿಂಗ್.... ಹಲ್ಲೊ.... ಎಕ್ಸ್"

"ಹಲ್ಲೋ.... ವಾಯ್ ಕಾಲಿಂಗ್....ವಾಯ್" ಅತ್ತ ಕಡೆಯಿಂದ ಅಶೋಕ

ಮಾತನಾಡಿದ.

"ಏನು ಅಶೋಕ ಅರ್ಜಂಟಾ?"

"ಮುಖರ್ಜಿಯವರು ನಿಮ್ಮನ್ನ ಕೂಡಲೇ ಕಾಣಬೇಕಂತೆ."

"ಸರಿ.... ಇಂದು ರಾತ್ರಿ ತಲುಪುತ್ತೇನೆ.... ನೀನು ಹೇಗಿದ್ದೀಯಾ?"

"ಹುಷಾರಾಗಿದ್ದೇನೆ. ಥ್ಯಾಂಕ್ಸ್."

ಪುನಃ ವಾಚನ್ನು ಮುನ್ನಿನ ಸ್ಥಿತಿಗೆ ತಂದ ಹೇಮಂತ ಕಾರಿನಲ್ಲಿ ಕೂಡುತ್ತ ನುಡಿದ, "ಮುಖರ್ಜಿಯವರಿಂದ ಕರೆ ಬಂದಿದೆ ಎಂದರೆ ಮತ್ತೊಂದು ಅಪಾಯಕ್ಕೆ ನಾಂದಿ ಅಂದಂತಾಯಿತು."

"ಅದುವಿನಿರ ಬಹುದು?"

"ಅಲ್ಲಿ ಹೋದಮೇಲೆಯೇ ಗೊತ್ತಾದೀತು"

ಹೇಮಂತನ ಕಾರು ರಾಜಧಾನಿಯತ್ತ ಓಡತೊಡಗಿತು. ಸುಷಮಾ ಹೇಮಂತನ ಹೆಗಲಿಗೆ ತಲೆ ಆನಿಸಿ ಕಣ್ಣು ಮುಚ್ಚಿದಳು.

## ೩

ಕೆಲಿಯಾನ್ ತನ್ನ ಊಟ ಮುಗಿಸಿ ವೇಟರ್ ತಂದಿರಿಸಿದ್ದ ಹದವಾಗಿ ಕಾಯ್ದ ನಿಂಬುನೀರಿನಲ್ಲಿ ಕೈ ತೊಳೆದು ನ್ಯಾಪಕಿನ್‌ನಿಂದ ಒರೆಸಿಕೊಂಡ. ಅದೇಕ್ಷಣ ಬಿಸಿಬಿಸಿಯಾದ, ಹಬೆಯಾಡುವ ಕಾಫಿ ಬಟ್ಟಲನ್ನು ಅವನ ಮುಂದಿರಿಸಿ, ಅದರೊಂದಿಗಿದ್ದ ಬಿಲ್ಲು ಅವನಿಗೆ ಕಾಣುವಂತೆ ಸರಿಸಿ, ವೇಟರ್ ಗೌರವದಿಂದ ಎರಡು ಹೆಜ್ಜೆ ಹಿಂದಕ್ಕಿಟ್ಟು ನಿಂತುಕೊಂಡ. ಅವನ ವಿನಮ್ರ ಸೇವೆಗೆ ಕಣ್ಣಲ್ಲೇ ಮೆಚ್ಚುಕೆ ಸೂಚಿಸಿದ ಕೆಲಿಯಾನ್ ಜೇಬಿದಿಂದ ನೋಟಿನ ಸುರುಳಿ ಹೊರತೆಗೆದು ಅದರಿಂದ ನೂರರ ನೋಟೊಂದನ್ನು ಆಯ್ದು ಬಿಲ್ ಬಳಿ ಇಟ್ಟ....ವೇಟರನೆಡೆ ಅರ್ಥಪೂರ್ಣದೃಷ್ಟಿ ಬೀರಿ ಬಿಲ್ಲಿಗೆ ಸಹಿ ಮಾಡುತ್ತಲೇ ಮುಂದೆ ಬಂದ ವೇಟರ್ ಬಿಲ್ಲಿನೊಂದಿಗೆ ನೋಟನ್ನೂ ಎತ್ತಿಕೊಂಡು, ಭರ್ಜರಿ ಸೆಲ್ಯೂಟ್ ನೀಡಿ ಅಲ್ಲಿಂದ ಕಣ್ಮರೆಯಾದ.

ಪೂರ್ಣ ತೃಪ್ತಿಯೊಂದಿಗೆ ಕಾಫಿ ಕುಡಿದು ಸಿಗರೇಟು ಉರಿಸಿದ ಕೆಲಿಯಾನ್. ಸಿಗರೇಟು ಕರಗುತ್ತ ಕರಗುತ್ತ ಬೆರಳು ಸಮೀಪಿಸುತ್ತಿದ್ದಾಗ ಮತ್ತೆ

ಅದೇ ವೇಟರ್ ಅವನನ್ನು ಸಮೀಪಿಸಿದ. ಸ್ವಲ್ಪ ಕೆಲಿಯಾನ್ ಬಳಿ ಬಾಗಿ ಮೆಲುವಾಗಿ ಏನನ್ನೋ ನುಡಿದ...'ಗುಡ್....ಗುಡ್' ಎಂದ ಉದ್ಗರಿಸುತ್ತ ಕೆಲಿಯಾನ್ ಚಿಟಿಕೆ ಬಾರಿಸುತ್ತ ಮೇಲೆದ್ದು ಲಿಫ್ಟ್ ಕಡೆ ಹೆಜ್ಜೆ ಹಾಕಿದ. ಅವನಿಂದ ಮೂರು ಟೇಬಲ್ ಆಚೆ ಕುಳಿತಿದ್ದ ಶೇಖರ ಸಹ ಬಿಲ್ ಹಣ ಮೇಜಿನ ಮೇಲಿರಿಸಿ ಕೆಲಿಯಾನ್‌ನನ್ನು ಹಿಂಬಾಲಿಸಿದ. ಆದರೆ ಲಿಫ್ಟ್ ಮೂಲಕ ಅಲ್ಲ...ಮೆಟ್ಟಿಲು ಮೂಲಕ.

ಶೇಖರ ಐದನೇ ಮಹಡಿಗೆ ಬಂದಾಗ ಕೆಲಿಯಾನ್ ತನ್ನ ರೂಮ್ ಸೇರಿಯಾಗಿತ್ತು.... ಬಾಗಿಲಿನ ಕೆಳಗೆ ಬಿದ್ದ ಬೆಳಕಿನ ರೇಖೆಯಿಂದಾಗಿ ಆತ ಇದೀಗ ಬಂದಿರುವನೆಂಬುದು ಸ್ಪಷ್ಟವಾಗುತ್ತಿತ್ತು. ಶೇಖರ ಹಾಗೇ ನಡೆಯುತ್ತ ಒಂದು ಕೊನೆ ತುದಿಗಿರುವ ಕಿಟಕಿ ಬಳಿ ನಿಂತ.

ಅವನ ಹಾವಿನ ಕಿವಿಗಳು ಏನನ್ನೋ ಕೇಳಲು ಕಾತರವಾಗಿದ್ದವು. ಆ ಸಮಯ ಬಂದೇ ಬಿಟ್ಟಿತು. ಲಿಫ್ಟ್ ಬಾಗಿಲು ತೆರೆದ ನಂತರ ಮತ್ತೆ ಮುಚ್ಚಿದ ಸದ್ದು. ಅನಂತರ ಟಕ್.... ಟಕ್... ಟಕ್.... ಹೈ ಹೀಲ್ಡ್ ಶೂಗಳ ಸದ್ದು. ಹಿಂದೆ ಹೊರಳಿ ಲಿಫ್ಟ್‌ನಿಂದ ಹೊರಬಂದ ವ್ಯಕ್ತಿಗೆದುರಾಗಿ ಹೆಜ್ಜೆ ಹಾಕಿದ ಶೇಖರ. ಹತ್ತಾರು ಹೆಜ್ಜೆಗಳಲ್ಲೇ ಆತ ಆ ವ್ಯಕ್ತಿಯನ್ನು ದಾಟಿ ಮುಂದೆ ಹೋದಾಗ ಮೂಗಿಗೆ ಬಡಿದದ್ದು ಉತ್ತಮ ದರ್ಜೆಯ ಸೇಂಟ್ ವಾಸನೆ.... ಅದರೊಂದಿಗೆ ಆತ ಅಂದುಕೊಂಡದ್ದು ಅಬ್ಬಾ.... ಎಷ್ಟು ಸುಂದರ.

ಹೌದು, ಶೇಖರನ ಉದ್ಗಾರ ಸಂಪೂರ್ಣ ಸತ್ಯವಾಗಿತ್ತು.

ಹೈಹೀಲ್ಡ್ ಶೂ ತೊಟ್ಟ....ಬೆಲೆ ಬಾಳುವ ಸೇಂಟ್ ನಿಂಪಡಿಸಿಕೊಂಡ ಆ ತರುಣಿ ಆಧುನಿಕ ಮೇನಕೆಯಂತಿದ್ದಳು. ಟೂಪೀಸ್ ಮಿಡಿ ಧರಿಸಿದ್ದ ಆಕೆಯ ವಯಸ್ಸು ಬಹುಶಃ ಇಪ್ಪತ್ತು ದಾಟಿರಲಿಕ್ಕಿಲ್ಲ. ತುಟಿಗೆ ಲೇಪಿಸಿಕೊಂಡಿದ್ದ ಬಣ್ಣದೊಂದಿಗೆ ಆಕೆಯ ಕೆನ್ನೆಗಳು ಸ್ಪರ್ಧೆಗಿಳಿದಿದ್ದವು. ಮೀನಿನ ಕಣ್ಣು, ನೀಳ ನಾಸಿಕ, ತೆಳು ದೇಹ, ಎತ್ತರ ಎನ್ನಬಹುದಾದ ಆಕೆಯ ದೇಹಕ್ಕೆ ಅವಳ ಕುಚದ್ವಯಗಳೇ ಭಾರವೆನಿಸುವಂತಿದ್ದವು. ಅವಳ ಸೌಂದರ್ಯಕ್ಕಿಂತ ಅವಳ ಕುಂಭಸ್ತನಗಳೇ ಹೆಚ್ಚು ಪ್ರಭಾವ ಬೀರುತ್ತಿದ್ದವು. ಎದುರಿಗಿದ್ದವರ ದೃಷ್ಟಿ ಮೊತ್ತಮೊದಲು ಅವಳ ಎದೆಯ ಮೇಲೆ ಹರಿದಾಡಿ ಅಲ್ಲಿಂದ ಕದಲಲಾರದೇ ಕದಲಿ ಮುಖದ ಮೇಲೆ ಮೂಡುತ್ತಿತ್ತು....ಶೇಖರ ಸಹ ಅವಳ ಅಂಗಸೌಷ್ಟವಕ್ಕೆ ಮನಸೋಲದೆ ಇರಲಿಲ್ಲ....ಮೂರು ನಾಲ್ಕು ಸೆಕೆಂಡುಗಳಲ್ಲೇ ಅವನ ಕಣ್ಣುಗಳು ಆ ಮೇನಕೆಯ ದೇಹದ ಸರ್ವೆ ಮಾಡಿ ಮುಗಿಸಿದ್ದವು. ಓಹ್ ಬ್ಯೂಟಿಫುಲ್! ಫಾರ್ಟಿ, ಟ್ವೆಂಟಿಏಟ್, ಥರ್ಟಿಸಿಕ್ಸ್ ಎಂದುಕೊಂಡ ಮನದಲ್ಲೇ....ಆತ ಹೊರಳು

ತ್ತಿದ್ದಂತೆ ಆಕೆ ಐದನೂರಾಐವತ್ತೈದನೇ ರೂಮನ್ನು ಪ್ರವೇಶಿಸಿದಳು. ಅಟೋಮೆಟಿಕ್ ಬಾಗಿಲು ತನ್ನಷ್ಟಕ್ಕೆ ತಾನೇ ಮುಚ್ಚಿಕೊಂಡಿತು. ಇನ್ನು ಕನಿಷ್ಟ ಪಕ್ಷ ನಾಲ್ಕಾರು ಗಂಟೆ ಆದರೂ ಆ ಬಾಗಿಲು ತೆರೆಯಲಾರದು ಎಂದು ಊಹಿಸಿದ ಆತ ಮೆಟ್ಟಿಲು ಮೂಲಕ ಕೆಳಗಿಳಿಯತೊಡಗಿದ. ಇತ್ತ....

ಹಾಸಿಗೆಯ ಮೇಲೆ ಅರ್ಧ ಒರಗಿ ಸಿಗರೇಟು ಕುಡಿಯುತ್ತಿದ್ದ ಕೆಲಿಯಾನ್ ರೂಮಿನೊಳ ಬಂದ ರೂಪಸಿಯನ್ನು ಕಂಡು ಅವಾಕ್ಕಾಗಿ ಎದ್ದು ಕುಳಿತ. ಭಾರತೀಯ ತರುಣಿಯರು ಇಷ್ಟು ಸುಂದರ ಇಷ್ಟು ಆಕರ್ಷಿತರಾಗಿರುತ್ತಾರೆಂದು ಆತ ಕನಸಲ್ಲೂ ನೆನೆದಿರಲಿಲ್ಲ...

ಕೈಲಿದ್ದ ವ್ಯಾನಿಟಿ ಬ್ಯಾಗನ್ನು ಸೋಫಾದ ಮೇಲೆಸೆದ ಆಕೆ ಕೆಲಿಯಾನ್ ಕಡೆ ಒಂದು ಸಮ್ಮೋಹನ ದೃಷ್ಟಿ ಬೀರಿ ವಿಶ್ ಮಾಡಿದಳು.

"ಹಲ್ಲೋ....ಮಾಯ್‌ನೇಮ್....ರೋಜೀ"

"ಓಹ್ ಬ್ಯೂಟಿಫುಲ್"... ಉದ್ಗರಿಸುತ್ತ ಮೇಲೆದ್ದ ಆತ ಅವಳ ಕೈ ಕುಲುಕಿಸಿ "ಮಾಯ್ ನೇಮ್ ಕೆಲಿಯಾನ್...." ಎಂದ.

ಯಾವ ಸಂಕೋಚವೂ ಇಲ್ಲದೆ ರೋಜೀ ತನ್ನ ಮಿಡಿಯ ಹುಕ್ಕು ಸಡಿಲಿಸಿದಳು. ಅದರೊಂದಿಗೆ ಕೋಟಿನಂತಿದ್ದ ಮೇಲ್ಭಾಗ ಕಳೆದು ಸೋಫಾದ ಕಡೆ ತೂರಿದಳು. ಮಿಡಿ ಸರಕ್‌ನೆ ಕೆಳಗಿಳಿಯಿತು.

ಕೆಲಿಯಾನ್‌ನ ಉಸಿರೆ ಸಿಕ್ಕಂತಾಯಿತು.

ರೋಜಿ ಈಗ ಅವನೆದುರು ಕೇವಲ ಬಿಕಿನಿ ಮೇಲೆ ನಿಂತಿದ್ದಳು. ಬೆಡ್ ರೂಮಿನಲ್ಲಿದ್ದ ಹಾಲುಬೆಳಕಿನಲ್ಲಿ ಆಕೆ ಮೇಣದ ಬೊಂಬೆಯಂತೆ ಕಂಡಳು ಮುಂದೆ ಬಂದು ಅವಳ ಮೈಮೇಲೆ ಹತ್ತಾರು ಮುದ್ದನ್ನಿತ್ತ ಆತ ಅವಳನ್ನು ಅನಾಮತ್ ಎತ್ತಿ ಮಂಚದ ಮೇಲೆ ಉರುಳಿಸಿದ. ಫೋಮ್ ಬೆಡ್.... ಮಲ್ಲಿಗೆಯ ರಾಶಿಯ ಮೇಲೆ ಉರುಳಿದಂತಾಯಿತು.

ಅದೇ ಕ್ಷಣ ಗೋಡೆ ಮೇಲೆ ದೃಷ್ಟಿ ಹರಿಸಿದ ರೋಜೀ ಮೆಲುವಾಗಿ ಚೀತ್ಕರಿಸಿದಳು. ಅವಳ ಮುಖ ವಿವರ್ಣವಾಯಿತು. ಅವಳ ದೃಷ್ಟಿಯನ್ನೇ ಅನುಸರಿಸಿದ ಕೆಲಿಯಾನ್ ಗೋಡೆ ಕಡೆ ನೋಡಿ ನಕ್ಕು ನುಡಿದ ಇಂಗ್ಲೀಷಿನಲ್ಲಿ;

"ಹೆದರಬೇಡ. ಅದು ಸತ್ತಿದೆ....ಜೀವಂತವಾಗಿಲ್ಲ ..."

ಅಚ್ಚರಿ ತುಂಬಿದ ದೃಷ್ಟಿಯಿಂದ ರೋಜೀ ಮತ್ತೊಂದು ಬಾರಿ ಗೋಡೆಯ ಕಡೆ ನೋಡಿದಳು.

ಕನಿಷ್ಟ ಪಕ್ಷ ಆರಡಿ ಉದ್ದವಿರುವ ದೊಡ್ಡ ತಲೆಯ ಕರಿನಾಗರವೊಂದು ಗೋಡೆಗೆ ಅಂಟಿಕೊಂಡಿತ್ತು... ನೋಡಿದರೆ ಭಯದಿಂದ ಜೀವ ಹಾರಿ ಹೋಗು

ವಷ್ಟು ಭಯಾನಕವಾಗಿತ್ತದು ಅಲ್ಲಿಂದ ಮೆಲ್ಲನೆ ಬೇರೆಡೆ ದೃಷ್ಟಿ ಹರಿಸಿದರೆ ಇನ್ನೊಂದು ಗೋಡೆ ಮೇಲೆ ಹುಲಿ ಮುಖ. ಮತ್ತೊಂದರ ಮೇಲೆ ಸಾರಂಗ... ಇನ್ನೊಂದು ಕಾಡುಕೋಣದ್ದು....ಸುತ್ತಲೂ ಕ್ರೂರಮೃಗಗಳದೇ ನೆರಳು.

ಅತ್ಯಂತ ಸುಂದರವಾಗಿ ಅಷ್ಟೇ ವೈಭವಶಾಲಿ ರೀತಿಯಲ್ಲಿ ನಿರ್ಮಿತವಾದ ಹೊಟೆಲ್ ಸೀಪರ್ಲ್‌ದ ವೈಶಿಷ್ಟ್ಯವೇ ಅದಾಗಿತ್ತು. ಪ್ರತಿಯೊಂದು ಕೊಠಡಿಯಲ್ಲಿ ಪುರಾತನ ವಸ್ತುಗಳು, ಚಿತ್ರ ವಿಚಿತ್ರ ಜಂತುಗಳ, ಪ್ರಾಣಿಗಳ, ಪಶು ಪಕ್ಷಿಗಳ ನಿರ್ಜೀವ ಮುಖಗಳು ಗೋಡೆಯನ್ನು ಅಲಂಕರಿಸಿದ್ದವು. ಯಾವುದೇ ಪ್ರವಾಸಿ ಅದನ್ನೆಲ್ಲ ನೋಡಿ ಮೊದಲು ಭೀತನಾದರೂ ಮುಂದೆ ಸರಿ ಹೋಗುತ್ತಿದ್ದ. ಅವೇ ವಸ್ತುಗಳು ಅವನಿಗೆ ಕೊನೆ ಕೊನೆಯಲ್ಲಿ ಪ್ರೀತಿಪಾತ್ರವಾಗುತ್ತಿದ್ದವು.

ಕೆಲಿಯಾನ್ ಸಹ ಇದಕ್ಕೆ ಹೊರತಾಗಿರಲಿಲ್ಲ.

ಆತ ಬಂದುದು ರೇಶಿಮೆ ವ್ಯಾಪಾರಕ್ಕೆ.... ಸೀಪರ್ಲ್‌ಗೆ ಬಂದು ಎಂಟು ಹತ್ತು ದಿನಗಳಾಗಿದ್ದವು. ಮೊದಲೆರಡು ದಿನ ಆ ಹಾವು, ಸಾರಂಗ ಮುಂತಾದವುಗಳಿಂದಾಗಿ ಸರಿಯಾಗಿ ನಿದ್ದೆಯನ್ನೇ ಮಾಡಿರಲಿಲ್ಲ.... ಮುಂದೆ ಸರಿ ಹೋಗಿತ್ತು...ಆದರೆ ರೋಜೀ?

ಅನುಪಮ ಸುಂದರಿ ರೋಜಿ ತನ್ನ ಸೌಂದರ್ಯಪಾಶ ಬೀಸಿ ನೂರಾರು ಜನರನ್ನು ಮೂರ್ಛಿತಗೊಳಿಸಿದ್ದಳು....ಸದ್ಯ ಇಲ್ಲಿ ಆಕೆಯೇ ಮೂರ್ಛೆಹೋಗುವ ಸನ್ನಿವೇಶ ಉಂಟಾಗಿತ್ತು.

ಕೆಲಿಯಾನ್‌ಗೆ ಖುಶಿಯೇ ಖುಶಿ. ಅಸಾಧ್ಯ ಸುಂದರಿಯನ್ನು "ಭೀತಿ ಪಡದಿರು ನೀರೆ" ಎಂದು ರಮಿಸಿ ಸಮಾಧಾನಪಡಿಸುವದೆಂದರೆ ಅದೊಂದು ರಸಮಯ ಕೆಲಸವಲ್ಲವೆ?... ಅವಳ ಗದ್ದ...ತುಟಿ...ಗಲ್ಲ ಮುದ್ದಿಸಿ ಅಂಗಾಂಗ ತಡವಿ ಕುಚ....ನಿತಂಬ ಮರ್ದಿಸಿ ಸಿಹಿ ಸಿಹಿ ಮಾತುಗಳಿಂದ ರಮಿಸಿ ಅವಳಲ್ಲಿ ಕಾಮ ಉಂಟಾಗುವಂತೆ ಮಾಡಿದ....

ಮುಂದೆ....ಆತನಿಂದೇನೂ ಮಾಡಲಾಗಲಿಲ್ಲ.

ಎಲ್ಲಾ ಅವಳೇ ಮಾಡಿ ಮುಗಿಸಿದಳು.

ಹೊಟ್ಟೆ ಬಿರಿಯುವಷ್ಟು ಸುಖ ಸವಿದಾದಾಗ ನಸುಕಿನ ನಾಲ್ಕು ಗಂಟೆ ಸಮೀಪಿಸಿತ್ತು. ಅವನ ಮಗ್ಗುಲಲ್ಲಿ ಮಲಗಿದ್ದ ರೋಜಿ ಎದ್ದು ನಗ್ನಳಾಗೇ ಬಾತ್‌ರೂಮ್ ಸೇರಿ ಸ್ನಾನ ಮಾಡಿದಳು....ಟವೆಲ್‌ನಿಂದ ಚೆನ್ನಾಗಿ ಮೈ ಒರೆಸಿಕೊಂಡು ಬಂದ ಆಕೆ ಎರಡೇ ನಿಮಿಷಗಳಲ್ಲಿ ಬಟ್ಟೆ ತೊಟ್ಟು ಕೆಲಿಯಾನ್ ಕಡೆ ನೋಡಿದಳು...ಆತ ಸಂತೃಪ್ತ ನಗೆಸೂಸಿ ದಿಂಬಿನಡಿಯಲ್ಲಿದ್ದ ಪಾಕೇಟ್ ತೆಗೆದು

ಅದರಿಂದ ಕೈಗೆ ಸಿಕ್ಕಷ್ಟು ನೋಟುಗಳನ್ನು ಹಿರಿದು ಅವಳೆಡೆ ಚಾಚಿದ. ನೋಟು ಇಸಿದುಕೊಳ್ಳಲು ಆಕೆ ಮುಂದೆ ಬಂದಾಗ ಕೈಹಿಡಿದೆಳೆದು ಮುದ್ದಿಸಿದ. ಆತ ನೋಟುಗಳನ್ನು ಅವಳ ಬಲ ಕುಚದಲ್ಲಿ ತೂರಿಸಿ ಖಿಕ್–ಖಿಕ್ ಎಂದು ನಕ್ಕ. ಪ್ರತಿಯಾಗಿ ಮುಗುಳು ನಗೆ ನಕ್ಕ ರೋಜಿ ಕೊಠಡಿಯಿಂದ ಹೊರ ಬಂದಳು.

ಕೆಲಿಯಾನ್ ಮೇಲೆದ್ದು ಒಳಗಿನಿಂದ ಲಾಕ್ ಮಾಡಿ ಬೋಲ್ಟ್ ಏರಿಸಿ ಹಾಸಿಗೆ ಮೇಲೆ ಉರುಳಿದ. ಕೆಲವೇ ನಿಮಿಷಗಳಲ್ಲಿ ಅವನ ಗೊರಕೆ ಕೇಳಿ ಬರಲಾರಂಭಿಸಿತು.

ಹತ್ತು ಹದಿನೈದು ನಿಮಿಷಗಳು ಉರುಳಿದವು.

ಗೋಡೆಯ ಮೇಲೆ ಅಂಟಿಸಿದ್ದ ಕರಿನಾಗರದ ಕೆಂಪು ಕಣ್ಣುಗಳು ಒಮ್ಮೆಲೆ ಫಳಕ್ ಎಂದು ತೆರೆದವು. ಮುಂದಿನ ಕ್ಷಣ ಅದು ಗೋಡೆಯಿಂದ ಕೆಳಗಿಳಿಯ ಲಾರಂಭಿಸಿತ್ತು. ಕೆಲವೇ ಕ್ಷಣಗಳ ಹಿಂದೆ ನಿರ್ಜೀವವಾಗಿದ್ದ ಅದು ಈಗ ಸಜೀವವಾಗಿ ಸರಸರ ಹರಿಯುತ್ತ ಕೆಲಿಯಾನ್ ಪವಡಿಸಿದ್ದ ಮಂಚವನ್ನೇರಿತು. ಆಮೇಲೆ ಕಾಲಿನ ಮೇಲೆ ಸರಿಯುತ್ತ ಎದೆಯ ಮೇಲೆ ಬಂದು ಸುರುಳಿ ಸುತ್ತಿ ಎರಡು ಮೂರು ಬಾರಿ ಭಯಾನಕವಾಗಿ 'ಭುಸ್‌ಭುಸ್' ಎಂದು ಫೂತ್ಕರಿಸಿತು. ಆ ಫೂತ್ಕಾರಕ್ಕೆ ಬೆಚ್ಚಿದ ಕೆಲಿಯಾನ್ ಕಣ್ತೆರೆದ. ಎದೆಯ ಮೇಲೆ ಭಯಾನಕ ಕರಿನಾಗರ. ಚೀರಬೇಕೆಂದು ಬಾಯಿ ತೆರೆಯುತ್ತಲೆ ಮಿಂಚಿನ ವೇಗದಲ್ಲಿ ಸರ್ಪ ಆಕ್ರಮಣ ಮಾಡಿತ್ತು. ನಾಲಿಗೆಯ ಮೇಲೆ ಒಂದೇ ಒಂದು ಪ್ರಹಾರ. ಚೀತ್ಕಾರ ಗಂಟಲಲ್ಲೇ ಉಳಿಯಿತು. ಒಂದೆರಡು ಕ್ಷಣ ವಿಲವಿಲನೆ ಒದ್ದಾಡಿದ ಆತ ಕೊನೆಯುಸಿರು ಎಳೆದಿದ್ದ.

ದುಂಡುಸುತ್ತಿ ಕುಳಿತಿದ್ದ ಸರ್ಪ ಮತ್ತೆ ಮಂಚದಿಂದ ಕೆಳಗಿಳಿದು ಬಂದು ಗೋಡೆ ಏರಿತು. ಮೊದಲು ಅದು ಯಾವ ಸ್ಥಳದಲ್ಲಿತ್ತೋ ಅಲ್ಲಿಗೆ ಬಂದು ಮೊದಲಿನ ಸ್ಥಿತಿಯಲ್ಲಿಯೇ ಸ್ಥಿರವಾಗುತ್ತಿದ್ದಂತೆ ಅದರ ತೆರೆದ ಕಣ್ಣುಗಳು ಮುಚ್ಚಿಕೊಂಡವು.

ಭಯಾನಕ ಕರಿನಾಗರ ಮತ್ತೆ ನಿರ್ಜೀವವಾಗಿತ್ತು.

ಅಷ್ಟೇ ನಿರ್ಜೀವವಾಗಿದ್ದ ಕೆಲಿಯಾನ್‌ನ ಶರೀರ ವಿರೂಪವಾಗತೊಡಗಿತ್ತು. ಕಟಬಾಯಿಯಿಂದ ಹರಿದು ಬಂದ ನೀಲವರ್ಣದ ಬುರುಗು ಎದೆಯ ಮೇಲೆ ತಟತಟ ಬೀಳತೊಡಗಿತ್ತು. ದೇಹದ ಬಣ್ಣ ಸಹಿತ ತನ್ನ ಮೊದಲಿನ ರೂಪ ಕಳೆದುಕೊಂಡು ನೀಲಿಯಾಗತೊಡಗಿತ್ತು.

'ಥೂ....' ಎಂದು ಕ್ಯಾಕರಿಸಿದ ವ್ಯಕ್ತಿ ಇದನ್ನೆಲ್ಲ ರಿವಾಲ್ವರಿಂಗ್ ಚೇರಿನಲ್ಲಿ

ಕುಳಿತು ಟೀವಿಯಲ್ಲಿ ನೋಡುತ್ತ ಉಗುಳಿ ತನ್ನ ಎದುರಿಗಿದ್ದ ಮೇಜಿನ ಮೇಲಿದ್ದ ಹತ್ತಾರು ಗುಂಡಿಗಳಲ್ಲಿ ಒಂದು ಗುಂಡಿ ಅದುಮಿತು. ಟಿ.ವಿ.ಯಲ್ಲಿ ಇದೂವರೆಗೂ ಕಾಣುತ್ತಿದ್ದ ಥ್ರಿಬಲ್‌ಫೈವ್ ರೂಮಿನ ದೃಶ್ಯ ಮಾಯವಾಗಿ ಟಿ. ವಿ. ಮೂಕವಾಯಿತು.

"ಬಾಸ್ ಇದೇನು? ತಾವು ನಮ್ಮ ಎಜಂಟನನ್ನೇ ಕೊಂದುಬಿಟ್ಟಿರಲ್ಲ?" ಚೇರ್ ಹಿಂದೆ ಕೈಕಟ್ಟಿ ನಿಂತಿದ್ದ ಆರೂವರೆ ಫೂಟಿಗೂ ಹೆಚ್ಚು ಎತ್ತರದ ಬಾಡಿಗಾರ್ಡ ಕೇಳಿದಾಗ ಬಾಸ್ ಭೀಭತ್ಸ ನಗೆ ನಕ್ಕ.

"ಮಿಸ್ಟರ್ ಹ್ಯೂವ್ಯಾನ್, ಆತ ನಮ್ಮಿಂದ ಬೀಳ್ಕೊಡುವ ಮುನ್ನ ನಮ್ಮ ಎಜಂಟನಾಗಿದ್ದ. ಆದರೆ ಭಾರತದ ಗುಪ್ತ ಪೊಲೀಸರ ದೃಷ್ಟಿಗೆ ಬೀಳುತ್ತಲೇ ಆತ ನಮ್ಮ ಎಜಂಟನಾಗಿ ಉಳಿಯಲಿಲ್ಲ. ಅದಕ್ಕೆ ಅವನನ್ನು ದಾರಿಯಿಂದ ಸರಿಸಿ ನಮ್ಮ ದಾರಿ ಸುಗಮ ಮಾಡಿಕೊಳ್ಳಬೇಕಾಯಿತು. ತಿಳಿಯಿತಾ?"

ಘೇಂಡಾ ಮೃಗದಂತಿರುವ ದೇಹಕ್ಕೆ ನಿಂಬೆಕಾಯಿ ಗಾತ್ರದ ತಲೆ. ಅದರಲ್ಲಿ ಇರುವ ಮಿದುಳಾದರೂ ಎಷ್ಟಿದೆಯೋ ಏನೋ? ಅಂಥ ರಾಕ್ಷಸಾ ಕಾರದ ಹ್ಯೂವ್ಯಾನ್‌ಗೆ ಇಷ್ಟು ಸೂಕ್ಷ್ಮ ವಿಷಯ ತಿಳಿಯುವದಾದರೂ ಹೇಗೆ?

ಆತ ತಲೆಯಾಡಿಸಿದ ತಿಳಿಯಲಿಲ್ಲವೆಂದು.

"ರೋಜೀ ಲಿಫ್ಟ್‌ನಿಂದ ಹೊರಬರುತ್ತಲೂ ಅವಳ ಎದುರು ಹಾಯ್ದು ಹೋದನಲ್ಲ ಬಿಸ್ಕಿಟ್ ಕಲರ್ ಸೂಟ್ ಧರಿಸಿದ ವ್ಯಕ್ತಿ, ಅವನೇ ಸಿಕ್ರೆಟ್ ಸರ್ವಿಸ್‌ಗೆ ಸೇರಿದ ವ್ಯಕ್ತಿ ಇನಸ್ಪೆಕ್ಟರ್ ಶೇಖರ್. ಅವನ ದೃಷ್ಟಿಗೆ ಕೆಲಿಯಾನ್ ಬಿದ್ದ ಎಂದ ಮೇಲೆ ನಾವು ಅಪಾಯದಲ್ಲಿ ಬಿದ್ದಂತಾಯಿತು. ಈಗ ಉಳಿದ ಇನ್ನೊಂದು ವ್ಯಕ್ತಿ ರೋಜೀ. ಅವಳನ್ನೂ ದಾರಿಯಿಂದ ಸರಿಸಿದರೆ ದಾರಿ ಇನ್ನೂ ಸುಗಮವಾದೀತು. ಆ ಕೆಲಸ ನಿನಗೆ ಸೇರಿದ್ದು. ಅದಕ್ಕೂ ಮೊದಲು ರೋಜಿಯಿಂದ..." ಅರ್ಥಪೂರ್ಣವಾಗಿ ನಕ್ಕ ಬಾಸ್. ಈಗ ಹೊಳೆದಿತ್ತು ಘೇಂಡಾ ಮನುಷ್ಯನಿಗೆ.... ಬಾಸ್‌ನ ಮೆದುಳಿನಲ್ಲಿ ಏನಿದೆ ಎಂದು. ಮರು ಮಾತಾಡದೇ ಆತ ಹೊರನಡೆದ. ಬಾಸ್ ಮೇಜಿನ ಮೇಲಿದ್ದ ಹಸಿರು ವರ್ಣದ ಗುಂಡಿ ಅದುಮಿ ಮೇಲೆದ್ದು ನಿಂತ. 'ಗರ್‌ಗರ್‌ಗರ್' ಸದ್ದಿನೊಂದಿಗೆ ಆತ ನಿಂತಿದ್ದ ರೂಮಿನ ನಾಲ್ಕೂ ಗೋಡೆಗಳು ಚಲಿಸತೊಡಗಿದವು. ನಿಂತಿದ್ದ ಫ್ಲೋರ್ ಸಹ ತಿರುಗಲಾರಂಭಿಸಿತು. ಒಂದೇ ಒಂದು ನಿಮಿಷದಲ್ಲಿ ಎಲ್ಲಾ ಮಾಯವಾಗಿ ಆತ ಸುಸಜ್ಜಿತವಾದ ಒಂದು ಹೊಟೆಲ್ ರೂಮಿನಲ್ಲಿದ್ದ. ಬಾಗಿಲು ಲಾಕ್ ತೆಗೆದು ಹೊರಬಂದು ಕಾರಿಡೋರ್ ಉದ್ದಕ್ಕೂ ನಡೆಯುತ್ತ

ಲಿಫ್ಟ್ ಕಡೆ ಹೊರಳಿ ಸಹ ನೋಡದೇ ರಾತ್ರಿ ಪ್ರವಾಸಿಕರಿಗಾಗಿಯೇ ನಿರ್ಮಿತವಾದ ಕಳ್ಳ ದಾರಿಯಿಂದ ಹೊಟೆಲ್ ಹಿಂಭಾಗಕ್ಕೆ ಬಂದ. ಅಲ್ಲಿ ಅವನಿಗಾಗಿ ಕಾಯುತ್ತಿತ್ತು 'ಟೊಯೋಟಾ'.

ಮುಂದಿನ ಕ್ಷಣ ಅವನ 'ಟೊಯೋಟಾ' ಮಾಯವಾಗಿತ್ತು.

## ೪

ಸರಿಯಾಗಿ ಬೆಳಗಿನ ಆರು ಗಂಟೆಗೆ ಹಾಜರಾದ ಶೇಖರ್.

ಹೊಟೆಲ್ ವರಾಂಡಾದಲ್ಲಿ ಕುಳಿತು ಬಿಸಿಬಿಸಿ ಕಾಫಿ ಕುಡಿದು ಅಂದಿನ ಪತ್ರಿಕೆ ಮೇಲೆ ಕಣ್ಣಾಡಿಸಿದ. ಹಿಂದಿನ ದಿನ ಕಾರವಾರದ ಬಳಿ ಹರಿಪುರದಲ್ಲಿ ನಡೆದ ಸ್ಫೋಟದ ವಿಷಯ ಪ್ರಕಟವಾಗಿತ್ತು. ಸಮುದ್ರ ದಂಡೆಗಿದ್ದ ಸುಂದರವಾದ ಬಂಗಲೆ ಆಕಾಶ್ ಸಹ ನಾಶವಾಗಿದ್ದನ್ನು ವಿಶೇಷವಾಗಿ ಉಲ್ಲೇಖಿಸಿದ ವರದಿಗಾರ ಇದೊಂದು ವಿಧ್ವಂಸಕಾರೀ ಕೃತ್ಯ ಎಂದು ಬರೆದಿದ್ದ. ಇದಕ್ಕೆ ಕಾರಣರಾರು ಎಂಬುದು ಸ್ಪಷ್ಟವಾಗದಿದ್ದರೂ ಒಂದು ರಾತ್ರಿ ಪ್ರವಾಸಿ ಬಂಗಲೆಯಲ್ಲಿ ತಂಗಿದ ಸುಂದರ ಜೋಡಿಯೇ ಇದಕ್ಕೆ ಕಾರಣವಿರಬಹುದೆಂಬ ಸಂಶಯ ವ್ಯಕ್ತಪಡಿಸಿದ್ದ.

ಶೇಖರ್ ಮುಗುಳುನಗೆ ನಕ್ಕ.

ಆ ಸುಂದರ ಜೋಡಿ ಯಾವುದೆಂದು ಅವನಿಗೆ ತಿಳಿದಿತ್ತು.

ಸರಕ್‌ನೆ ವಾಚಿನೆಡೆ ನೋಡಿ ಮೇಲೆದ್ದ. ನೇರವಾಗಿ ಕೌಂಟರ್ ಬಳಿ ಬಂದು ಟೆಲಿಫೋನ್ ಮೇಲೆ ಬೆರಳು ಕುಣಿಸಿದ. ಆ ಕಡೆಯಿಂದ ರಿಸೀವರ್ ಎತ್ತುತ್ತಲೂ ಅವಸರವಸರವಾಗಿ ಮಾತನಾಡಿದ.

"ಗುಡ್ ಮಾರ್ನಿಂಗ್ ಸರ್. ನಾನು ಮಿಸ್ಟರ್ ಫಂಟೂಶ್. ಕಾರವಾರದಿಂದ ಎರಡು ಅಕ್ಕಿ ಮೂಟೆ ರಾತ್ರಿಯೇ ಬರಬೇಕಾಗಿತ್ತು. ಬಂದಿವೆಯೆ? ಏನು? ಲಾರಿ ಮಧ್ಯೆ ಟ್ರಬಲ್ ಕೊಟ್ಟಿತೆ? ಓಹ್... ಸರಿ ಸರಿ. ಹತ್ತು ಗಂಟೆಗೆ ಬರುತ್ತಾ? ಆಯ್ತು ಬರುತ್ತಲೂ ದಯವಿಟ್ಟು ತಿಳಿಸಿ. ನಮಸ್ಕಾರ."

ಕಾಫಿ ಬಿಲ್ಲಿನೊಂದಿಗೆ ಟೆಲಿಫೋನ್ ಬಿಲ್ ಸೇರಿಸಿ ಕೊಟ್ಟು ಲಿಫ್ಟ್ ಕಡೆ ನಡೆದ. ಒಂದು ಮಾತು ನಿಶ್ಚಿತವಾಗಿತ್ತು. ರಾತ್ರಿಯೇ ಕಾರವಾರದಿಂದ ಬರಬೇಕಾಗಿದ್ದ ಮೇಜರ್ ಹಾಗೂ ಸುಷಮಾ ರಾತ್ರಿ ಬರಲಿಲ್ಲ. ಅವರ ಕಾರು

ಮಧ್ಯದಾರಿಯಲ್ಲಿ ಕೆಟ್ಟಿದ್ದರಿಂದಾಗಿ ಇಂದು ಹತ್ತು ಗಂಟೆಗೆ ಬರುತ್ತಾರೆ. ಅವರು ಬರುವವರೆಗೂ ಕೆಲಿಯಾನ್ ಜವಾಬ್ದಾರಿ ಅವನಿಗೆ ಸೇರಿದ್ದು.

ಥ್ರಿಬಲ್ ಫೈವ್ ರೂಮು ತೆರೆದಿರಲಿಲ್ಲ. ಕೆಲಿಯಾನ್ ಇನ್ನೂ ಎದ್ದೇ ಇಲ್ಲ ಎಂಬುದಕ್ಕೆ ಹೊರಗಡೆ ಇದ್ದ ಪೇಪರ್ ಹಾಗೂ ಮಾರ್ನಿಂಗ್ ಫ್ಲಾವರ್ ಬುಕೆಗಳೇ ಸಾಕ್ಷಿಯಾಗಿದ್ದವು. 'ಡೋಂಟ್ ಡಿಸ್ಟರ್ಬ್' ಫಲಕ ಇನ್ನೂ ಹೊರಗಡೆ ಕಾಣಿಸುತ್ತಿತ್ತು. ಹಾಗೇ ಸುತ್ತುತ್ತ ಬಾಲ್ಕನಿ ಬಳಿ ಬಂದು ನಿಂತ.

ಒಂದರ ಮೇಲೆ ಒಂದರಂತೆ ಎರಡು ಸಿಗರೇಟುಗಳು ಉರಿದು ಪ್ರಾಣಾರ್ಪಣೆ ಮಾಡಿದವು. ಮೂರನೇ ಸಿಗರೇಟಿಗೆ ಅಗ್ನಿ ಸ್ಪರ್ಶ ಮಾಡುತ್ತಿರುವಾಗಲೇ ಹೊಟೆಲ್ ಮುಂದೆ ಬಂದು ನಿಂತ ನೀಲವರ್ಣದ 'ಬ್ಯೂಗಲ್' ಕಾರಿನ ಮೇಲೆ ಅವನ ದೃಷ್ಟಿ ನಾಟಿತು. ಡ್ರೈವ್ ಮಾಡುತ್ತಿದ್ದ ಆರೂವರೆ ಅಡಿಗೂ ಎತ್ತರವಾಗಿದ್ದ ಫೇಂಡಾಥರ ಇರುವ ವ್ಯಕ್ತಿ ಹೊರಬಂದು ಹೊಟೆಲ್ ಕಡೆ ಹೆಜ್ಜೆ ಹಾಕುತ್ತಿದ್ದಂತೆ ಉಫ್ ಎಂದು ಊದಿ ಬೆಂಕಿ ಆರಿಸಿ ಸಿಗರೇಟ್ ಹಾಗೆ ಎಸೆದು ಸರಸರ ನಡೆದು ಲಿಫ್ಟ್ ಪಕ್ಕದ ಸಿಮೆಂಟ್ ಕಂಬದ ಹಿಂದೆ ಮರೆಯಾದ.

ಅವನ ಸಂಶಯ ನಿಜವಾಗಲು ಎಂಟು ಹತ್ತು ನಿಮಿಷಗಳೇ ಬೇಕಾದವು. ಅಲ್ಲಿಯವರೆಗೂ ಆತ ತಾಳ್ಮೆಯಿಂದ ಕಾಯ್ದ. ಲಿಫ್ಟ್ ಬಾಗಿಲು 'ಸರಕ್' ಎಂದು ಸರಿಯುತ್ತಲು ಅದೇ ಫೇಂಡಾ ಮಾನವ ಹೊರಬಂದ. ಅತ್ತಿತ್ತ ನೋಡಿದ. ಕಾರಿಡಾರ್ ತುದಿಯಲ್ಲಿದ್ದ ವೇಟರ್‌ನನ್ನು ಕರೆದು ಏನೋ ವಿಚಾರಿಸಿದ, ನಂತರ ಧಪ್‌ಧಪ್ ಹೆಜ್ಜೆ ಹಾಕುತ್ತಾ ಮತ್ತೊಂದು ತುದಿಗೆ ನಡೆದ. ವೇಟರ್ ಲಿಫ್ಟ್ ಸೇರುತ್ತಲು ಸರಕ್‌ನೆ ಹೊರಳಿ ಸರಸರನೆ ಥ್ರಿಬಲ್ ಫೈವ್‌ನತ್ತ ನಡೆದ. ಅತ್ತಿತ್ತ ಎರಡು ಬಾರಿ ಹದ್ದಿನ ದೃಷ್ಟಿ ಬೀರಿ ನಂತರ ಜೇಬಿನಿಂದ ತಂತಿಯೊಂದನ್ನು ಹೊರತೆಗೆದು ಕೀಲಿಯ ರಂಧ್ರದಲ್ಲಿ ತೂರಿಸಿದ. ನಾಲ್ಕಾರು ಸೆಕೆಂಡುಗಳು ಅಷ್ಟೇ, ಅಥವಾ ಅದಕ್ಕೂ ಕಡಿಮೆ ಸಮಯ. ಅಷ್ಟರಲ್ಲೇ ಬಾಗಿಲು ತೆರೆದಿತ್ತು. ಆತ ಒಳಗಿದ್ದ. ಬಾಗಿಲು ಪುನಃ ಮುಚ್ಚಿಕೊಂಡಿತು. ಮುಗುಳುನಗೆ ನಕ್ಕ ಶೇಖರ್ ಕೋಟಿಗೆ ಕೈ ಇಳಿಬಿಟ್ಟ. ಅದು ಹೊರಬಂದಾಗ ಬೆಂಕೀ ಪೊಟ್ಟಣಕ್ಕಿಂತಲೂ ಚಿಕ್ಕದಾದ ಕ್ಯಾಮರಾ ಕಾಣಿಸಿಕೊಂಡಿತು. ಕ್ಯಾಮರಾ ಮುಖ ಥ್ರಿಬಲ್‌ಫೈವ್ ರೂಮಿನತ್ತ ಹೊರಳಿಸಿದ.

ಆತ ಹೊರಬರಲು ಐದಾರು ನಿಮಿಷಗಳು ಹಿಡಿದವು. ಹೊರ ಬಂದು ಬಾಗಿಲು ಮುಚ್ಚಿ ಅತ್ತಿತ್ತ ನೋಡಿ ಲಿಫ್ಟ್ ಕಡೆ ನಡೆದ. ಲಿಫ್ಟ್ ಇನ್ನೂ ಕೆಳಗಡೆಯೇ ಇದ್ದುದರಿಂದ ಮೆಟ್ಟಲು ದಾರಿ ಹಿಡಿದ.

ಅಷ್ಟರಲ್ಲೇ ಶೇಖರ್‌ನ ಮಿನಿ ಕ್ಯಾಮರಾ ಅವನ ನಾಲ್ಕಾರು ಫೋಟೋ ಸೆರೆ ಹಿಡಿದಿತ್ತು.

ಲಿಫ್ಟ್ ಬಾಗಿಲು ತೆರೆಯಿತು. ಈ ಮೊದಲು ಕೆಳಗೆ ಹೋಗಿದ್ದ ವೇಟರ್ ಕೈಲಿ ಟ್ರೇ ಹಿಡಿದು ಬಂದ ಬೇಕೆಂತಲೇ ಅವನನ್ನು ತಡೆದು ಅವನಿಂದ ಬೆಂಕಿ ಪೊಟ್ಟಣ ಇಸಿದುಕೊಂಡು ಸಿಗರೇಟ್ ಉರಿಸಿ ಫೇಂಡಾ ಮನುಷ್ಯನ ಬಗ್ಗೆ ವಿಚಾರಿಸಿದ. ಆತ 'ರೋಜೀ' ಬಗ್ಗೆ ವಿಚಾರಿಸಿದ ಎಂಬುದು ತಿಳಿಯಿತು. ಹಾಗಾದರೆ ಆತ ಬಂದದ್ದು ಕೆಲಿಯಾನ್‌ಗಾಗಿ ಅಲ್ಲ ರೋಜೀಗಾಗಿ. ಬಹುಶಃ ರಾತ್ರಿ ಅವಳನ್ನು ಬುಕ್ ಮಾಡಿರಬೇಕು. ಆಕೆ ಕೈಕೊಡುತ್ತಲೂ ಕ್ಷುದ್ರನಾಗಿ ಅವಳನ್ನು ಹುಡುಕಿ ಬಂದಿದ್ದ. ಆಕೆ ಇದ್ದರೆ ತಾನೇ ಸಿಗುವದು?

ಹಾಗೂ ಹೀಗೂ ಹತ್ತು ಗಂಟೆಗೆ ಸಮೀಪಿಸಿತು.

ಕೆಲಿಯಾನ್‌ನ ರೂಮಿನ ಸುತ್ತಮುತ್ತ ಅಲೆದೂ ಅಲೆದೂ ಶೇಖರಗೆ ಸಾಕಾಯಿತು. ಅಲ್ಲಿದ್ದವರೆಲ್ಲರೂ ಅವನನ್ನು ಸಂಶಯದ ದೃಷ್ಟಿಯಿಂದ ನೋಡುವಂತಾಯಿತು. ಮನದಲ್ಲೇ ಕರಕರ ಹಲ್ಲು ಕಡಿದ ಶೇಖರ್.

ಕೆಲಿಯಾನ್ ರೂಮಿನ ಬಾಗಿಲು ತೆರೆಯದಾಗಲು ಆತ ಕೊನೆಗೆ ಕಳ್ಳತನ ದಿಂದ ಅವನ ರೂಮ್ ಪ್ರವೇಶಿಸಲು ನಿರ್ಧರಿಸಿದ. ಸೂಕ್ತ ಸಮಯ ಕಾಯ್ದು ಮಾಸ್ಟರ್ ಕೀಯಿಂದ ಬೀಗ ತೆರೆದು ಒಳಗೆ ಕಾಲಿಟ್ಟ. ಒಳಗಿನ ದೃಶ್ಯ ನೋಡುತ್ತಲೂ ಒಂದು ಕ್ಷಣ ಎದೆ ಝಲ್ ಎಂದರೂ ಕೂಡಲೇ ಸುಧಾರಿಸಿ ಕೊಂಡು ಸರಸರ ರೂಮಿನ ಶೋಧನೆ ಪ್ರಾರಂಭಿಸಿದ. ಕೆಲಿಯಾನ್‌ನ ಸೂಟ್ ಕೇಸ್, ಏರ್‌ಬ್ಯಾಗ್, ಪಾಕೀಟು ಎಲ್ಲಾ ತಿರುವಿ ಹಾಕಿದ. ಸಂಶಯಕ್ಕೆ ಆಸ್ಪದ ನೀಡುವ ಯಾವ ಸುಳಿವೂ ದೊರೆಯಲಿಲ್ಲ. ಅವನ ಪಾಸ್‌ಪೋರ್ಟ್ ಹಿಡಿದು ಸೂಕ್ಷ್ಮವಾಗಿ ಪರೀಕ್ಷಿಸುತ್ತಿರುವಂತೆಯೇ ಹೊರಗಿನಿಂದ ಬಾಗಿಲು ತೆರೆದ ಆದರೊಂದಿಗೆ ನಾಲ್ಕಾರು ಜನ ಒಳಗೆ ನುಗ್ಗಿದ ಶಬ್ದ ಕೇಳಿ ಬೆಚ್ಚಿಬಿದ್ದ. ಕೈಲಿದ್ದ ಪಾಸ್‌ಪೋರ್ಟ್ ಸರಕ್ಕನೆ ಕೋಟಿನ ಜೇಬು ಸೇರಿತು.

ಒಳಗೆ ಬಂದವರು ಐದಾರು ಜನ. ಎಲ್ಲರಿಗಿಂತ ಮುಂದೆ ಮ್ಯಾನೇಜರ್. ಅವನ ಹಿಂದೆ ರೂಮ್ ಸರ್ವರ್. ನಂತರ ಬೇರೆ ನಾಲ್ಕು ಜನ ಪ್ರವಾಸಿಕರು. ಅವರೆಲ್ಲರ ದೃಷ್ಟಿ ಮೊದಲು ಶೇಖರ್‌ನ ಮೇಲೆ ನಂತರ ಕೆಲಿಯಾನ್‌ನ ಶವದ ಮೇಲೆ ಹೊರಳುತ್ತಲೂ ಭಯದಿಂದ ಥರಥರ ಕಂಪಿಸುತ್ತ ಶೇಖರ್ ಕಡೆ ನೋಡಿದರು.

ಆದರರ್ಥ ತಿಳಿಯಲಾರದಷ್ಟು ಮುಠ್ಠಾಳನಲ್ಲ ಶೇಖರ್. ತಟಕ್ಕನೆ ನುಡಿದ.

"ನೋ ನೋ. ನಾನೀ ಕೊಲೆ ಮಾಡಿಲ್ಲ. ದಯವಿಟ್ಟು ತಪ್ಪು ತಿಳಿಯಬೇಡಿ."

"ಹಾಗಾದರೆ ನೀನು ಯಾರು? ನೀನು ಒಳಗೆ ಹೇಗೆ ಬಂದೆ?" ಗಡಸಾಗಿ ಕೇಳಿದ ಮ್ಯಾನೇಜರ್.

"ನಾನಿವರ ಫ್ರೆಂಡ್. ವ್ಯಾಪಾರದ ಬಗ್ಗೆ ಮಾತಾಡಲು ಬಂದಿದ್ದೆ."

"ನೋ ಸರ್. ಇವರು ಸುಳ್ಳು ಹೇಳುತ್ತಿದ್ದಾರೆ. ನಾನು ಒಂದು ಬಾರಿಯೂ ಇವರನ್ನು ಸಾಬ್ ಜೊತೆ ನೋಡಿಲ್ಲ. ಇಷ್ಟು ದಿನ ನಾನೇ ಸಾಬ್‌ಗೆ ಸರ್ವೀಸ್ ನೀಡಿದ್ದು." ಮಧ್ಯೆ ಬಾಯಿ ಹಾಕಿದ ರೂಮ್ ಸರ್ವರ್. ಅದಕ್ಕೆ ಮತ್ತೊಬ್ಬನ ಪುಷ್ಟಿಯೂ ದೊರೆಯಿತು.

"ಹೌದು ಸರ್. ನಾನು ಯಾವಾಗಲೂ ಇವರು ಇಲ್ಲೇ ಸುತ್ತುವದನ್ನು ನೋಡಿದ್ದೇನೆ. ಒಂದು ಬಾರಿಯೂ ಇವರು ರೂಮಿನ ಒಳಗೆ ಹೋಗಿಲ್ಲ. ಇಂದೂ ಸಹ ಬೆಳಗಿನ ಆರೂವರೆಯಿಂದ ಹೊರಗೇ ಸುತ್ತುತ್ತಿದ್ದರು.

ಮುಂದೇನು?

ಮುಂದೆ ಶೇಖರ್‌ಗೆ ಮಾತಾಡಲು ಯಾರೂ ಅವಕಾಶ ಕೊಡಲಿಲ್ಲ. ಅಲ್ಲಿಂದ ಓಡಿ ಹೋಗಲೂ ಆಗಲಿಲ್ಲ.

ಪೊಲೀಸ್ ಸ್ಟೇಶನ್‌ಗೆ ಫೋನ್ ಹೋದ ಹತ್ತೇ ನಿಮಿಷಗಳಲ್ಲಿ ಆತ ಬಂದಿಯಾಗಿದ್ದ. ಇನ್‌ಸ್ಪೆಕ್ಟರ್ ರವಿಚಂದ್ರಗೆ ಗೊತ್ತು ಶೇಖರ್ ಯಾರೆಂದು?

ಅದನ್ನು ಎಲ್ಲರ ಮುಂದೂ ಪ್ರಕಟಿಸುವಂತಿರಲಿಲ್ಲ. ಅದಕ್ಕಾಗಿ ಶೇಖರ್‌ನನ್ನು ಬಂಧಿಸಿ ಪೋಲೀಸ್ ಕಸ್ಟಡಿಯಲ್ಲಿ ಹೊರಗೆ ಕಳಿಸಿದ. ಶವದ ನಿರೀಕ್ಷಣೆಗೆ ಅಣಿಯಾದ. ಪಂಚನಾಮೆ ಮುಂತಾದ ಕಾರ್ಯಕ್ರಮಗಳು ಮುಗಿದವು. ಬೆರಳಚ್ಚು ತಜ್ಞರು ತಮ್ಮ ಕೆಲಸ ಮಾಡಿ ಮುಗಿಸಿದರು. ಡಾಕ್ಟರರು ಶವವನ್ನು ಪರೀಕ್ಷಿಸಿ ವರದಿ ಮಾಡಿದರು.

"ಈತ ಸತ್ತು ಆರು ಗಂಟೆ ಮೇಲಾಗಿದೆ. ಸಾವಿಗೆ ಭಯಂಕರ ವಿಷವೇ ಕಾರಣ."

ಹಾಗಾದರೆ....ಹಾಗಾದರೆ...

ಮ್ಯಾನೇಜರ್ ಹಣೆಹಣೆ ಒಡಿದುಕೊಂಡ. ಶೇಖರ್ ಬಗ್ಗೆ ಯೋಚಿಸಿದ.

ಅರ್ಧ ಗಂಟೆಯಲ್ಲಿ ಕೆಲಸವೆಲ್ಲ ಮುಗಿದು ಶವ ಪರೀಕ್ಷೆಗೆಂದು ಆಸ್ಪತ್ರೆಗೆ ಸಾಗಿಸಲಾಯಿತು. ರೂಮಿಗೆ ಬೀಗ ಹಾಕಿ ಸೀಲ್ ಮಾಡಿ ಇಬ್ಬರನ್ನು ಕಾವಲು ಹಾಕಿ ರವಿಚಂದ್ರ ಠಾಣೆ ಕಡೆ ಬಂದ.

ಆಗ ಶೇಖರ್‌ಗೆ ಮುಕ್ತಿ ದೊರೆಯಿತು.

ರವಿಚಂದ್ರನಿಂದ ಎಲ್ಲ ವಿಷಯ ತಿಳಿದುಕೊಂಡು ತನ್ನ ಗುಟ್ಟು ಬಿಟ್ಟುಕೊಡದೇ ಅಲ್ಲಿಂದ ಜಾಗ ಖಾಲಿ ಮಾಡಿದ.

ಆಗ ಸಮಯ ಹನ್ನೆರಡೂವರೆ.

ಶ್ರೀನಿವಾಸ ಕುಲಕರ್ಣಿಯವರ ಆಫೀಸನ್ನು ಶೇಖರ್ ಪ್ರವೇಶಿಸಿದಾಗ ವಾತಾವರಣ ಕಾವೇರಿದ್ದು ಅವನ ಗಮನಕ್ಕೆ ಬಂದಿತು. ಅವರೆದುರು ಕುಳಿತಿದ್ದ ಆ ಸುಂದರ ಜೋಡಿಯನ್ನು ಗಮನಿಸಿದ ಶೇಖರ್. ಅವರೇ ಹೇಮಂತ ಸುಷಮಾ ಇರಬೇಕೆಂದು ಊಹಿಸಿದ. ಹೇಮಂತನ ಹೆಸರು ಶೇಖರ್‌ಗೆ ಪರಿಚಿತವಾಗಿದ್ದರೂ ಅವನನ್ನು ಪ್ರತ್ಯಕ್ಷ ಕಂಡಿರಲಿಲ್ಲ. ಇಂದು ಆ ಸಮಯ ಒದಗಿತ್ತು.

ಶೇಖರ್‌ನನ್ನು ನೋಡುತ್ತಲೂ ಕುಲಕರ್ಣಿಯವರ ಹಣೆಯ ಮೇಲೆ ಮೂಡಿದ್ದ ನೀರಿಗೆಗಳು ಕರಗಿದವು. ಕಣ್ಣಲ್ಲಿ ಜೀವ ಬಂದಂತಾಯಿತು. ಆತನ ನಮಸ್ಕಾರಕ್ಕೆ ಪ್ರತಿ ನಮಸ್ಕಾರ ಸಲ್ಲಿಸದೇ ಕೋಪದಿಂದ ಕೇಳಿದರು.

"ಮಿಸ್ಟರ್ ಶೇಖರ್. ಏನಿದು ಅವಾಂತರ? ನೀನೇಕೆ ಬಂದಿಯಾದೆ?"

"ಸರ್, ಅದನ್ನು ತಿಳಿಸಲೆಂದೇ ಬಂದಿರುವೆ." ಶೇಖರ್ ವಿನಯದಿಂದಲೇ ಉತ್ತರಿಸುತ್ತ ಹೇಮಂತನೆಡೆ ಗೌರವದಿಂದ ನೋಡಿ ವಂದಿಸಿದ. ನಂತರ ಸುಷಮಾಳೆಡೆ ನೋಡಿ ತಲೆಯಾಡಿಸಿ 'ಹಲೊ' ಎಂದ.

ಶ್ರೀನಿವಾಸ ಕುಲಕರ್ಣಿ ಸುಧಾರಿಸಿಕೊಂಡು ಶೇಖರ್‌ನ ಪರಿಚಯ ಮಾಡಿಕೊಟ್ಟರು. ಶೇಖರ್‌ನ ಊಹೆ ನಿಜವಾಗಿತ್ತು.

"ಮಿಸ್ಟರ್ ಶೇಖರ್ ನಡೆದ ವಿಷಯವನ್ನು ವಿವರವಾಗಿ ತಿಳಿಸುವಿರಾ?"

ಹೇಮಂತ ಮಿದುವಾಗಿ ಕೇಳಿದಾಗ ಅವನ ವಿನಮ್ರ ಭಾವನೆಗೆ ಶೇಖರ್ ಮನದಲ್ಲೇ ತಲೆದೂಗಿದ, ಎಷ್ಟೇ ಉನ್ನತ ಹುದ್ದೆಯಲ್ಲಿದ್ದರೂ ಖ್ಯಾತಿ ಆಕಾಶದೆತ್ತರಕ್ಕೆ ಬೆಳೆದಿದ್ದರೂ ಎಷ್ಟು ವಿನಯ? ತುಂಬಾ ಅಪರೂಪ.

ಶೇಖರ್ ಹೇಳಲಾರಂಭಿಸಿದ. ಹೆಡ್‌ವೇಟರ್ ನೀಡಿದ ಸೂಚನೆಯಿಂದ ಪ್ರಾರಂಭಿಸಿ ತಾನು ಪೋಲೀಸ್ ಕಸ್ಟಡಿಯಿಂದ ಬಿಡುಗಡೆಯಾಗುವವರೆಗೂ ಆತ ವಿವರವಾಗಿ ಹೇಳಿ ಮುಗಿಸಿದ.

ಅಷ್ಟರಲ್ಲಿ ಕಾಫಿ ಬಂದಿತು. ಯೋಚಿಸುತ್ತಲೇ ಕಾಫಿ ಕುಡಿದ ಮೇಜರ್. ಕುಲಕರ್ಣಿಯವರ ಕಡೆ ಹೊರಳಿ ನುಡಿದ.

"ಕೆಲಿಯಾನ್ ಯಾರೆಂದು ತಿಳಿಯಿತೆ?"

"ಇಲ್ಲ. ಆತ ವಿದೇಶೀ ಯಾತ್ರಿಕ ಅನ್ನುವದಷ್ಟೇ ಗೊತ್ತು."

ಶೇಖರ್ ಜೇಬಿಗೆ ಕೈಹಾಕಿ ಪಾಸ್‌ಪೋರ್ಟ ತೆಗೆದು ಅವರ ಮುಂದಿಟ್ಟ. ಕೆಲಿಯಾನ್ ಭಾರತಕ್ಕೆ ಬಂದದ್ದು ಹಾಂಕಾಂಗ್ ಮೂಲಕವಾಗಿ. ಆತ ಚೀನೀ

ಅಲ್ಲದಿದ್ದರೂ ಚೀನೀ ನಾಗರಿಕತ್ವ ಪಡೆದವನಾಗಿದ್ದ. ವಯಸ್ಸು ನಲವತ್ತಾರು. ವೃತ್ತಿಯಲ್ಲಿ ವ್ಯಾಪಾರಿ. ಅವನ ಹಾಂಕಾಂಗ್ ವಿಳಾಸ ಸಹ ಅದರಲ್ಲಿತ್ತು.

ಪಾಸ್‌ಪೋರ್ಟ್ ನಿರೀಕ್ಷಿಸುತ್ತಿದ್ದಂತೆ ಹೇಮಂತನ ಹುಬ್ಬುಗಳು ಗಂಟಾದವು.

"ಸರ್, ಸ್ವಲ್ಪ ಸೂಕ್ಷ್ಮ ಕನ್ನಡಿ ಕೊಡುವಿರಾ?"

ಒಂದು ಕ್ಷಣ ಹೇಮಂತನ ಮಾತಿಗೆ ವಿಸ್ಮಿತರಾದರೂ ಏನೋ ವಿಶೇಷ ವಿರಬೇಕೆಂದುಕೊಂಡ ಕುಲಕರ್ಣಿ ಡ್ರಾದಿಂದ ಸೂಕ್ಷ್ಮದರ್ಶಕ ಕನ್ನಡಿ ತೆಗೆದು ಅವನ ಕೈಗಿತ್ತರು. ಕನ್ನಡಿಯಿಂದ ಐದ್ಹತ್ತು ನಿಮಿಷ ನಿರೀಕ್ಷಿಸಿದ ಹೇಮಂತ ಕನ್ನಡಿ ಮೇಜಿನ ಮೇಲಿಟ್ಟು ನಿರ್ದಿಷ್ಟವಾಗಿ ಉತ್ತರಿಸಿದ.

"ಸರ್, ಈತ ಜಾಲಿ ಮನುಷ್ಯ."

"ಏನೆಂದಿರಿ? ಜಾಲೀನಾ? ಅಂದ್ರು.

"ಪಾಸ್‌ಪೋರ್ಟ್ ನಕಲಿ ಅಲ್ಲ, ಆದರೆ ಫೋಟೋ ನಕಲಿ. ಸತ್ತ ವ್ಯಕ್ತಿ ಕೆಲಿಯಾನ್ ಅಲ್ಲ, ಕೆಲಿಯಾನ್‌ನ ಪಾಸ್‌ಪೋರ್ಟ್‌ಗೆ ಈ ವ್ಯಕ್ತಿಯ ಫೋಟೋ ಅಂಟಿಸಲಾಗಿದೆ."

"ಹಾಗಾದರೆ ಕೆಲಿಯಾನ್ ಫೋಟೋ?"

ಕಿತ್ತಿ ಬೀಸಾಡಿರಬಹುದು. ಇದರಿಂದ ಎರಡು ವಿಷಯಗಳು ತಿಳಿದು ಬರುತ್ತವೆ. ಒಂದು ಈತ ವ್ಯಾಪಾರಿಯಲ್ಲ. ಈತನ ಹೆಸರು ಕೆಲಿಯಾನ್ ಅಲ್ಲ. ಎರಡನೇದಾಗಿ ಕೆಲಿಯಾನ್ ಇವರೊಂದಿಗೆ ಕೂಡಿ ಕೆಲಸ ಮಾಡುತ್ತಿರ ಬಹುದು. ಅಥವಾ ಆತನನ್ನು ಬಂಧಿಸಿ ಇಲ್ಲ.... ಅವನ ಕೊಲೆ ಮಾಡಿ ಈ ಪಾಸ್‌ಪೋರ್ಟ್ ವಶಪಡಿಸಿಕೊಂಡಿದ್ದಾರೆ.

"ಇದನ್ನು ಕೂಲಂಕಶವಾಗಿ ತಿಳಿಯುವ ಬಗೆ ಹೇಗೆ?"

"ತುಂಬಾ ಸುಲಭ ಸರ್." ಹೇಮಂತ ಮುಗುಳುನಗೆ ನಗುತ್ತ ಹೇಳಿದ. "ಹಾಂಕಾಂಗ್‌ದಲ್ಲಿರುವ ತಮ್ಮ ಎಜಂಟ್‌ಗೆ ಈ ಪಾಸ್‌ಪೋರ್ಟ್ ಕಾಪಿ ಕಳಿಸಿ ಮಾಹಿತಿ ತರಿಸಿಕೊಡಿ."

"ಓಹ್ ಗಾಡ್. ಹಣೆಯನ್ನು ಬಲವಾಗಿ ತಿಕ್ಕಿಕೊಳ್ಳುತ್ತ ಕುಲಕರ್ಣಿ ತಮ್ಮ ಕಷ್ಟ ಹೇಳಿಕೊಂಡರು.

"ನನಗೆ ಏನಾಗಿದೆಯೋ ಏನೋ ಎರಡು ಮೂರು ದಿನಗಳಿಂದ ನಾನು ಮೊದಲಿನ ಮನುಷ್ಯನೇ ಆಗಿಲ್ಲ. ಬೇಗನೇ ವಿನಾಕಾರಣ ಸಿಟ್ಟಿಗೇಳುತ್ತೇನೆ. ಮೆದುಳಿಗೆ ಜಂಗು ಹತ್ತಿದಂತಾಗಿದೆ. ಬುದ್ಧಿ ಎಳ್ಳಷ್ಟೂ ಕೆಲಸ ಮಾಡುತ್ತಿಲ್ಲ. ಡಾಕ್ಟರ್‌ರಿಗೆ ತೋರಿಸಿ ಆಯಿತು. ಅವರು ಹೇಳಿದಂತೆ ಮಾತ್ರೆಗಳನ್ನು ನಿಯಮಿತವಾಗಿ ನುಂಗುತ್ತಿದ್ದೇನೆ. ಆದರೂ ಗುಣ ಕಾಣುತ್ತಿಲ್ಲ."

ಅದರಿಂದ ಕೈಗೆ ಸಿಕ್ಕಷ್ಟು ನೋಟುಗಳನ್ನು ಹಿರಿದು ಅವಳೆಡೆ ಚಾಚಿದ. ನೋಟು ಇಸಿದುಕೊಳ್ಳಲು ಆಕೆ ಮುಂದೆ ಬಂದಾಗ ಕೈಹಿಡಿದೆಳೆದು ಮುದ್ದಿಸಿದ. ಆತ ನೋಟುಗಳನ್ನು ಅವಳ ಬಲ ಕುಚದಲ್ಲಿ ತೂರಿಸಿ ಖಿಕ್–ಖಿಕ್ ಎಂದು ನಕ್ಕ. ಪ್ರತಿಯಾಗಿ ಮುಗುಳು ನಗೆ ನಕ್ಕ ರೋಜಿ ಕೊಠಡಿಯಿಂದ ಹೊರ ಬಂದಳು.

ಕೆಲಿಯಾನ್ ಮೇಲೆದ್ದು ಒಳಗಿನಿಂದ ಲಾಕ್ ಮಾಡಿ ಬೋಲ್ಟ್ ಏರಿಸಿ ಹಾಸಿಗೆ ಮೇಲೆ ಉರುಳಿದ. ಕೆಲವೇ ನಿಮಿಷಗಳಲ್ಲಿ ಅವನ ಗೊರಕೆ ಕೇಳಿ ಬರಲಾರಂಭಿಸಿತು.

ಹತ್ತು ಹದಿನೈದು ನಿಮಿಷಗಳು ಉರುಳಿದವು.

ಗೋಡೆಯ ಮೇಲೆ ಅಂಟಿಸಿದ್ದ ಕರಿನಾಗರದ ಕೆಂಪು ಕಣ್ಣುಗಳು ಒಮ್ಮೆಲೆ ಫಳಕ್ ಎಂದು ತೆರೆದವು. ಮುಂದಿನ ಕ್ಷಣ ಅದು ಗೋಡೆಯಿಂದ ಕೆಳಗಿಳಿಯ ಲಾರಂಭಿಸಿತ್ತು. ಕೆಲವೇ ಕ್ಷಣಗಳ ಹಿಂದೆ ನಿರ್ಜೀವವಾಗಿದ್ದ ಅದು ಈಗ ಸಜೀವವಾಗಿ ಸರಸರ ಹರಿಯುತ್ತ ಕೆಲಿಯಾನ್ ಪವಡಿಸಿದ್ದ ಮಂಚವನ್ನೇರಿತು. ಆಮೇಲೆ ಕಾಲಿನ ಮೇಲೆ ಸರಿಯುತ್ತ ಎದೆಯ ಮೇಲೆ ಬಂದು ಸುರುಳಿ ಸುತ್ತಿ ಎರಡು ಮೂರು ಬಾರಿ ಭಯಾನಕವಾಗಿ 'ಭುಸ್‌ಭುಸ್' ಎಂದು ಫೂತ್ಕರಿಸಿತು. ಆ ಫೂತ್ಕಾರಕ್ಕೆ ಬೆಚ್ಚಿದ ಕೆಲಿಯಾನ್ ಕಣ್ತೆರೆದ. ಎದೆಯ ಮೇಲೆ ಭಯಾನಕ ಕರಿನಾಗರ. ಚೀರಬೇಕೆಂದು ಬಾಯಿ ತೆರೆಯುತ್ತಲೆ ಮಿಂಚಿನ ವೇಗದಲ್ಲಿ ಸರ್ಪ ಆಕ್ರಮಣ ಮಾಡಿತ್ತು. ನಾಲಿಗೆಯ ಮೇಲೆ ಒಂದೇ ಒಂದು ಪ್ರಹಾರ. ಚೀತ್ಕಾರ ಗಂಟಲಲ್ಲೇ ಉಳಿಯಿತು. ಒಂದೆರಡು ಕ್ಷಣ ವಿಲವಿಲನೆ ಒದ್ದಾಡಿದ ಆತ ಕೊನೆಯುಸಿರು ಎಳೆದಿದ್ದ.

ಡಾಂಡುಸುತ್ತಿ ಕುಳಿತಿದ್ದ ಸರ್ಪ ಮತ್ತೆ ಮಂಚದಿಂದ ಕೆಳಗಿಳಿದು ಬಂದು ಗೋಡೆ ಏರಿತು. ಮೊದಲು ಅದು ಯಾವ ಸ್ಥಳದಲ್ಲಿತ್ತೋ ಅಲ್ಲಿಗೆ ಬಂದು ಮೊದಲಿನ ಸ್ಥಿತಿಯಲ್ಲಿಯೇ ಸ್ಥಿರವಾಗುತ್ತಿದ್ದಂತೆ ಅದರ ತೆರೆದ ಕಣ್ಣುಗಳು ಮುಚ್ಚಿಕೊಂಡವು.

ಭಯಾನಕ ಕರಿನಾಗರ ಮತ್ತೆ ನಿರ್ಜೀವವಾಗಿತ್ತು.

ಅಷ್ಟೇ ನಿರ್ಜೀವವಾಗಿದ್ದ ಕೆಲಿಯಾನ್‌ನ ಶರೀರ ವಿರೂಪವಾಗತೊಡಗಿತ್ತು. ಕಟಬಾಯಿಯಿಂದ ಹರಿದು ಬಂದ ನೀಲವರ್ಣದ ಬುರುಗು ಎದೆಯ ಮೇಲೆ ತಟತಟ ಬೀಳತೊಡಗಿತ್ತು. ದೇಹದ ಬಣ್ಣ ಸಹಿತ ತನ್ನ ಮೊದಲಿನ ರೂಪ ಕಳೆದುಕೊಂಡು ನೀಲಿಯಾಗತೊಡಗಿತ್ತು.

'ಥೂ....' ಎಂದು ಕ್ಯಾಕರಿಸಿದ ವ್ಯಕ್ತಿ ಇದನ್ನೆಲ್ಲ ರಿವಾಲ್ವರಿಂಗ್ ಚೇರಿನಲ್ಲಿ

ಕುಳಿತು ಟೀವಿಯಲ್ಲಿ ನೋಡುತ್ತ ಉಗುಳಿ ತನ್ನ ಎದುರಿಗಿದ್ದ ಮೇಜಿನ ಮೇಲಿದ್ದ ಹತ್ತಾರು ಗುಂಡಿಗಳಲ್ಲಿ ಒಂದು ಗುಂಡಿ ಅದುಮಿತು. ಟಿ.ವಿ.ಯಲ್ಲಿ ಇದೂವರೆಗೂ ಕಾಣುತ್ತಿದ್ದ ಥ್ರಿಬಲ್‌ಫೈವ್ ರೂಮಿನ ದೃಶ್ಯ ಮಾಯವಾಗಿ ಟಿ. ವಿ. ಮೂಕವಾಯಿತು.

"ಬಾಸ್ ಇದೇನು? ತಾವು ನಮ್ಮ ಎಜಂಟನನ್ನೇ ಕೊಂದುಬಿಟ್ಟಿರಲ್ಲ?" ಚೇರ್ ಹಿಂದೆ ಕೈಕಟ್ಟಿ ನಿಂತಿದ್ದ ಆರೂವರೆ ಫೂಟಿಗೂ ಹೆಚ್ಚು ಎತ್ತರದ ಬಾಡಿಗಾರ್ಡ ಕೇಳಿದಾಗ ಬಾಸ್ ಭೀಭತ್ಸ ನಗೆ ನಕ್ಕ.

"ಮಿಸ್ಟರ್ ಹ್ಯೂವ್ಯಾನ್, ಆತ ನಮ್ಮಿಂದ ಬೀಳ್ಕೊಡುವ ಮುನ್ನ ನಮ್ಮ ಎಜಂಟನಾಗಿದ್ದ. ಆದರೆ ಭಾರತದ ಗುಪ್ತ ಪೊಲೀಸರ ದೃಷ್ಟಿಗೆ ಬೀಳುತ್ತಲೇ ಆತ ನಮ್ಮ ಎಜಂಟನಾಗಿ ಉಳಿಯಲಿಲ್ಲ. ಅದಕ್ಕೆ ಅವನನ್ನು ದಾರಿಯಿಂದ ಸರಿಸಿ ನಮ್ಮ ದಾರಿ ಸುಗಮ ಮಾಡಿಕೊಳ್ಳಬೇಕಾಯಿತು. ತಿಳಿಯಿತಾ?"

ಘೇಂಡಾ ಮೃಗದಂತಿರುವ ದೇಹಕ್ಕೆ ನಿಂಬೆಕಾಯಿ ಗಾತ್ರದ ತಲೆ. ಆದರಲ್ಲಿ ಇರುವ ಮಿದುಳಾದರೂ ಎಷ್ಟಿದೆಯೋ ಏನೋ? ಅಂಥ ರಾಕ್ಷಸಾ ಕಾರದ ಹ್ಯೂವ್ಯಾನ್‌ಗೆ ಇಷ್ಟು ಸೂಕ್ಷ್ಮ ವಿಷಯ ತಿಳಿಯುವದಾದರೂ ಹೇಗೆ?

ಆತ ತಲೆಯಾಡಿಸಿದ ತಿಳಿಯಲಿಲ್ಲವೆಂದು.

"ರೋಜೀ ಲಿಫ್ಟಿನಿಂದ ಹೊರಬರುತ್ತಲೂ ಅವಳ ಎದುರು ಹಾಯ್ದು ಹೋದನಲ್ಲ ಬಿಸ್ಕಿಟ್ ಕಲರ್ ಸೂಟ್ ಧರಿಸಿದ ವ್ಯಕ್ತಿ, ಅವನೇ ಸಿಕ್ರೆಟ್ ಸರ್ವಿಸ್‌ಗೆ ಸೇರಿದ ವ್ಯಕ್ತಿ ಇನಸ್ಪೆಕ್ಟರ್ ಶೇಖರ್. ಅವನ ದೃಷ್ಟಿಗೆ ಕೆಲಿಯಾನ್ ಬಿದ್ದ ಎಂದ ಮೇಲೆ ನಾವು ಅಪಾಯದಲ್ಲಿ ಬಿದ್ದಂತಾಯಿತು. ಈಗ ಉಳಿದ ಇನ್ನೊಂದು ವ್ಯಕ್ತಿ ರೋಜೀ. ಅವಳನ್ನೂ ದಾರಿಯಿಂದ ಸರಿಸಿದರೆ ದಾರಿ ಇನ್ನೂ ಸುಗಮವಾದೀತು. ಆ ಕೆಲಸ ನಿನಗೆ ಸೇರಿದ್ದು. ಆದಕ್ಕೂ ಮೊದಲು ರೋಜಿಯಿಂದ..." ಅರ್ಥಪೂರ್ಣವಾಗಿ ನಕ್ಕ ಬಾಸ್. ಈಗ ಹೊಳೆದಿತ್ತು ಘೇಂಡಾ ಮನುಷ್ಯನಿಗೆ.... ಬಾಸ್‌ನ ಮೆದುಳಿನಲ್ಲಿ ಏನಿದೆ ಎಂದು. ಮರು ಮಾತಾಡದೇ ಆತ ಹೊರನಡೆದ. ಬಾಸ್ ಮೇಜಿನ ಮೇಲಿದ್ದ ಹಸಿರು ವರ್ಣದ ಗುಂಡಿ ಅದುಮಿ ಮೇಲೆದ್ದು ನಿಂತ. 'ಗರ್‌ಗರ್‌ಗರ್' ಸದ್ದಿನೊಂದಿಗೆ ಆತ ನಿಂತಿದ್ದ ರೂಮಿನ ನಾಲ್ಕೂ ಗೋಡೆಗಳು ಚಲಿಸತೊಡಗಿದವು. ನಿಂತಿದ್ದ ಫ್ಲೋರ್ ಸಹ ತಿರುಗಲಾರಂಭಿಸಿತು. ಒಂದೇ ಒಂದು ನಿಮಿಷದಲ್ಲಿ ಎಲ್ಲಾ ಮಾಯವಾಗಿ ಆತ ಸುಸಜ್ಜಿತವಾದ ಒಂದು ಹೊಟೆಲ್ ರೂಮಿನಲ್ಲಿದ್ದ. ಬಾಗಿಲು ಲಾಕ್ ತೆಗೆದು ಹೊರಬಂದು ಕಾರಿಡೋರ್ ಉದ್ದಕ್ಕೂ ನಡೆಯುತ್ತ

ಲಿಫ್ಟ್ ಕಡೆ ಹೊರಳಿ ಸಹ ನೋಡದೇ ರಾತ್ರಿ ಪ್ರವಾಸಿಕರಿಗಾಗಿಯೇ ನಿರ್ಮಿತ ವಾದ ಕಳ್ಳ ದಾರಿಯಿಂದ ಹೊಟೆಲ್ ಹಿಂಭಾಗಕ್ಕೆ ಬಂದ. ಅಲ್ಲಿ ಅವನಿಗಾಗಿ ಕಾಯುತ್ತಿತ್ತು 'ಟೋಯೋಟಾ'.

ಮುಂದಿನ ಕ್ಷಣ ಅವನ 'ಟೋಯೋಟಾ' ಮಾಯವಾಗಿತ್ತು.

ಲ

ಸರಿಯಾಗಿ ಬೆಳಗಿನ ಆರು ಗಂಟೆಗೆ ಹಾಜರಾದ ಶೇಖರ್.

ಹೊಟೆಲ್ ವರಾಂಡಾದಲ್ಲಿ ಕುಳಿತು ಬಿಸಿಬಿಸಿ ಕಾಫಿ ಕುಡಿದು ಅಂದಿನ ಪತ್ರಿಕೆ ಮೇಲೆ ಕಣ್ಣಾಡಿಸಿದ. ಹಿಂದಿನ ದಿನ ಕಾರವಾರದ ಬಳಿ ಹರಿಪುರದಲ್ಲಿ ನಡೆದ ಸ್ಫೋಟದ ವಿಷಯ ಪ್ರಕಟವಾಗಿತ್ತು. ಸಮುದ್ರ ದಂಡೆಗಿದ್ದ ಸುಂದರ ವಾದ ಬಂಗಲೆ ಆಕಾಶ್ ಸಹ ನಾಶವಾಗಿದ್ದನ್ನು ವಿಶೇಷವಾಗಿ ಉಲ್ಲೇಖಿಸಿದ ವರದಿಗಾರ ಇದೊಂದು ವಿಧ್ವಂಸಕಾರೀ ಕೃತ್ಯ ಎಂದು ಬರೆದಿದ್ದ. ಇದಕ್ಕೆ ಕಾರಣರಾರು ಎಂಬುದು ಸ್ಪಷ್ಟವಾಗದಿದ್ದರೂ ಒಂದು ರಾತ್ರಿ ಪ್ರವಾಸಿ ಬಂಗಲೆಯಲ್ಲಿ ತಂಗಿದ ಸುಂದರ ಜೋಡಿಯೇ ಇದಕ್ಕೆ ಕಾರಣವಿರಬಹುದೆಂಬ ಸಂಶಯ ವ್ಯಕ್ತಪಡಿಸಿದ್ದ.

ಶೇಖರ್ ಮುಗುಳುನಗೆ ನಕ್ಕ.

ಆ ಸುಂದರ ಜೋಡಿ ಯಾವುದೆಂದು ಅವನಿಗೆ ತಿಳಿದಿತ್ತು.

ಸರಕ್ಕನೆ ವಾಚಿನೆಡೆ ನೋಡಿ ಮೇಲೆದ್ದ. ನೇರವಾಗಿ ಕೌಂಟರ್ ಬಳಿ ಬಂದು ಟೆಲಿಫೋನ್ ಮೇಲೆ ಬೆರಳು ಕುಣಿಸಿದ. ಆ ಕಡೆಯಿಂದ ರಿಸೀವರ್ ಎತ್ತುತ್ತಲೂ ಅವಸರವಸರವಾಗಿ ಮಾತನಾಡಿದ.

"ಗುಡ್ ಮಾರ್ನಿಂಗ್ ಸರ್. ನಾನು ಮಿಸ್ಟರ್ ಫಂಟೂಶ್. ಕಾರವಾರ ದಿಂದ ಎರಡು ಅಕ್ಕಿ ಮೂಟೆ ರಾತ್ರಿಯೇ ಬರಬೇಕಾಗಿತ್ತು. ಬಂದಿವೆಯೆ? ಏನು? ಲಾರಿ ಮಧ್ಯೆ ಟ್ರಬಲ್ ಕೊಟ್ಟಿತೆ? ಓಹ್... ಸರಿ ಸರಿ. ಹತ್ತು ಗಂಟೆಗೆ ಬರುತ್ತಾ? ಆಯ್ತು ಬರುತ್ತಲೂ ದಯವಿಟ್ಟು ತಿಳಿಸಿ. ನಮಸ್ಕಾರ."

ಕಾಫಿ ಬಿಲ್ಲಿನೊಂದಿಗೆ ಟೆಲಿಫೋನ್ ಬಿಲ್ ಸೇರಿಸಿ ಕೊಟ್ಟು ಲಿಫ್ಟ್ ಕಡೆ ನಡೆದ. ಒಂದು ಮಾತು ನಿಶ್ಚಿತವಾಗಿತ್ತು. ರಾತ್ರಿಯೇ ಕಾರವಾರದಿಂದ ಬರಬೇಕಾಗಿದ್ದ ಮೇಜರ್ ಹಾಗೂ ಸುಷಮಾ ರಾತ್ರಿ ಬರಲಿಲ್ಲ. ಅವರ ಕಾರು

ಮಧ್ಯದಾರಿಯಲ್ಲಿ ಕೆಟ್ಟಿದ್ದರಿಂದಾಗಿ ಇಂದು ಹತ್ತು ಗಂಟೆಗೆ ಬರುತ್ತಾರೆ. ಅವರು ಬರುವವರೆಗೂ ಕೆಲಿಯಾನ್ ಜವಾಬ್ದಾರಿ ಅವನಿಗೆ ಸೇರಿದ್ದು.

ಥ್ರಿಬಲ್ ಫೈವ್ ರೂಮು ತೆರೆದಿರಲಿಲ್ಲ. ಕೆಲಿಯಾನ್ ಇನ್ನೂ ಎದ್ದೇ ಇಲ್ಲ ಎಂಬುದಕ್ಕೆ ಹೊರಗಡೆ ಇದ್ದ ಪೇಪರ್ ಹಾಗೂ ಮಾರ್ನಿಂಗ್ ಫ್ಲಾವರ್ ಬುಕೆಗಳೇ ಸಾಕ್ಷಿಯಾಗಿದ್ದವು. 'ಡೋಂಟ್ ಡಿಸ್ಟರ್ಬ್' ಫಲಕ ಇನ್ನೂ ಹೊರಗಡೆ ಕಾಣಿಸುತ್ತಿತ್ತು. ಹಾಗೇ ಸುತ್ತುತ್ತ ಬಾಲ್ಕನಿ ಬಳಿ ಬಂದು ನಿಂತ.

ಒಂದರ ಮೇಲೆ ಒಂದರಂತೆ ಎರಡು ಸಿಗರೇಟುಗಳು ಉರಿದು ಪ್ರಾಣಾರ್ಪಣೆ ಮಾಡಿದವು. ಮೂರನೇ ಸಿಗರೇಟಿಗೆ ಅಗ್ನಿ ಸ್ಪರ್ಶ ಮಾಡುತ್ತಿರುವಾಗಲೇ ಹೊಟೆಲ್ ಮುಂದೆ ಬಂದು ನಿಂತ ನೀಲವರ್ಣದ 'ಬ್ಯೂಗಲ್' ಕಾರಿನ ಮೇಲೆ ಅವನ ದೃಷ್ಟಿ ನಾಟಿತು. ಡ್ರೈವ್ ಮಾಡುತ್ತಿದ್ದ ಆರೂವರೆ ಅಡಿಗೂ ಎತ್ತರವಾಗಿದ್ದ ಫೇಂಡಾಥರ ಇರುವ ವ್ಯಕ್ತಿ ಹೊರಬಂದು ಹೊಟೆಲ್ ಕಡೆ ಹೆಜ್ಜೆ ಹಾಕುತ್ತಿದ್ದಂತೆ ಉಫ್ ಎಂದು ಊದಿ ಬೆಂಕಿ ಆರಿಸಿ ಸಿಗರೇಟ್ ಹಾಗೆ ಎಸೆದು ಸರಸರ ನಡೆದು ಲಿಫ್ಟ್ ಪಕ್ಕದ ಸಿಮೆಂಟ್ ಕಂಬದ ಹಿಂದೆ ಮರೆಯಾದ.

ಅವನ ಸಂಶಯ ನಿಜವಾಗಲು ಎಂಟು ಹತ್ತು ನಿಮಿಷಗಳೇ ಬೇಕಾದವು. ಅಲ್ಲಿಯವರೆಗೂ ಆತ ತಾಳ್ಮೆಯಿಂದ ಕಾಯ್ದ. ಲಿಫ್ಟ್ ಬಾಗಿಲು 'ಸರಕ್' ಎಂದು ಸರಿಯುತ್ತಲು ಅದೇ ಫೇಂಡಾ ಮಾನವ ಹೊರಬಂದ. ಅತ್ತಿತ್ತ ನೋಡಿದ. ಕಾರಿಡಾರ್ ತುದಿಯಲ್ಲಿದ್ದ ವೇಟರ್‌ನನ್ನು ಕರೆದು ಏನೋ ವಿಚಾರಿಸಿದ, ನಂತರ ಧಪ್‌ಧಪ್ ಹೆಜ್ಜೆ ಹಾಕುತ್ತಾ ಮತ್ತೊಂದು ತುದಿಗೆ ನಡೆದ. ವೇಟರ್ ಲಿಫ್ಟ್ ಸೇರುತ್ತಲು ಸರಕ್‌ನೆ ಹೊರಳಿ ಸರಸರನೆ ಥ್ರಿಬಲ್ ಫೈವ್‌ನತ್ತ ನಡೆದ. ಅತ್ತಿತ್ತ ಎರಡು ಬಾರಿ ಹದ್ದಿನ ದೃಷ್ಟಿ ಬೀರಿ ನಂತರ ಜೇಬಿನಿಂದ ತಂತಿಯೊಂದನ್ನು ಹೊರತೆಗೆದು ಕೀಲಿಯ ರಂಧ್ರದಲ್ಲಿ ತೂರಿಸಿದ. ನಾಲ್ಕಾರು ಸೆಕೆಂಡುಗಳು ಅಷ್ಟೇ, ಅಥವಾ ಅದಕ್ಕೂ ಕಡಿಮೆ ಸಮಯ. ಅಷ್ಟರಲ್ಲೇ ಬಾಗಿಲು ತೆರೆದಿತ್ತು. ಆತ ಒಳಗಿದ್ದ. ಬಾಗಿಲು ಪುನಃ ಮುಚ್ಚಿಕೊಂಡಿತು. ಮುಗುಳುನಗೆ ನಕ್ಕ ಶೇಖರ್ ಕೋಟಿಗೆ ಕೈ ಇಳಿಬಿಟ್ಟ. ಅದು ಹೊರಬಂದಾಗ ಬೆಂಕೀ ಪೊಟ್ಟಣಕ್ಕಿಂತಲೂ ಚಿಕ್ಕದಾದ ಕ್ಯಾಮರಾ ಕಾಣಿಸಿಕೊಂಡಿತು. ಕ್ಯಾಮರಾ ಮುಖ ಥ್ರಿಬಲ್‌ಫೈವ್ ರೂಮಿನತ್ತ ಹೊರಳಿಸಿದ.

ಆತ ಹೊರಬರಲು ಐದಾರು ನಿಮಿಷಗಳು ಹಿಡಿದವು. ಹೊರ ಬಂದು ಬಾಗಿಲು ಮುಚ್ಚಿ ಅತ್ತಿತ್ತ ನೋಡಿ ಲಿಫ್ಟ್ ಕಡೆ ನಡೆದ. ಲಿಫ್ಟ್ ಇನ್ನೂ ಕೆಳಗಡೆಯೇ ಇದ್ದುದರಿಂದ ಮೆಟ್ಟಿಲು ದಾರಿ ಹಿಡಿದ.

ಅಷ್ಟರಲ್ಲೇ ಶೇಖರ್‌ನ ಮಿನಿ ಕ್ಯಾಮರಾ ಅವನ ನಾಲ್ಕಾರು ಫೋಟೋ ಸೆರೆ ಹಿಡಿದಿತ್ತು.

ಲಿಫ್ಟ್ ಬಾಗಿಲು ತೆರೆಯಿತು. ಈ ಮೊದಲು ಕೆಳಗೆ ಹೋಗಿದ್ದ ವೇಟರ್ ಕೈಲಿ ಟ್ರೇ ಹಿಡಿದು ಬಂದ. ಬೇಕೆಂತಲೇ ಅವನನ್ನು ತಡೆದು ಅವನಿಂದ ಬೆಂಕಿ ಪೊಟ್ಟಣ ಇಸಿದುಕೊಂಡು ಸಿಗರೇಟ್ ಉರಿಸಿ ಫೇಂಡಾ ಮನುಷ್ಯನ ಬಗ್ಗೆ ವಿಚಾರಿಸಿದ. ಆತ 'ರೋಜೀ' ಬಗ್ಗೆ ವಿಚಾರಿಸಿದ ಎಂಬುದು ತಿಳಿಯಿತು. ಹಾಗಾದರೆ ಆತ ಬಂದದ್ದು ಕೆಲಿಯಾನ್‌ಗಾಗಿ ಅಲ್ಲ ರೋಜೀಗಾಗಿ. ಬಹುಶಃ ರಾತ್ರಿ ಅವಳನ್ನು ಬುಕ್ ಮಾಡಿರಬೇಕು. ಆಕೆ ಕೈಕೊಡುತ್ತಲೂ ಕ್ಷುದ್ರನಾಗಿ ಅವಳನ್ನು ಹುಡುಕಿ ಬಂದಿದ್ದ. ಆಕೆ ಇದ್ದರೆ ತಾನೇ ಸಿಗುವದು?

ಹಾಗೂ ಹೀಗೂ ಹತ್ತು ಗಂಟೆಗೆ ಸಮೀಪಿಸಿತು.

ಕೆಲಿಯಾನ್‌ನ ರೂಮಿನ ಸುತ್ತಮುತ್ತ ಅಲೆದೂ ಅಲೆದೂ ಶೇಖರಗೆ ಸಾಕಾಯಿತು. ಅಲ್ಲಿದ್ದವರೆಲ್ಲರೂ ಅವನನ್ನು ಸಂಶಯದ ದೃಷ್ಟಿಯಿಂದ ನೋಡುವಂತಾಯಿತು. ಮನದಲ್ಲೇ ಕರಕರ ಹಲ್ಲು ಕಡಿದ ಶೇಖರ್.

ಕೆಲಿಯಾನ್ ರೂಮಿನ ಬಾಗಿಲು ತೆರೆಯದಾಗಲು ಆತ ಕೊನೆಗೆ ಕಳ್ಳತನದಿಂದ ಅವನ ರೂಮ್ ಪ್ರವೇಶಿಸಲು ನಿರ್ಧರಿಸಿದ. ಸೂಕ್ತ ಸಮಯ ಕಾಯ್ದು ಮಾಸ್ಟರ್ ಕೀಯಿಂದ ಬೀಗ ತೆರೆದು ಒಳಗೆ ಕಾಲಿಟ್ಟ. ಒಳಗಿನ ದೃಶ್ಯ ನೋಡುತ್ತಲೂ ಒಂದು ಕ್ಷಣ ಎದೆ ಝಲ್ ಎಂದರೂ ಕೂಡಲೇ ಸುಧಾರಿಸಿಕೊಂಡು ಸರಸರ ರೂಮಿನ ಶೋಧನೆ ಪ್ರಾರಂಭಿಸಿದ. ಕೆಲಿಯಾನ್‌ನ ಸೂಟ್‌ಕೇಸ್, ಏರ್‌ಬ್ಯಾಗ್, ಪಾಕೀಟು ಎಲ್ಲಾ ತಿರುವಿ ಹಾಕಿದ. ಸಂಶಯಕ್ಕೆ ಅಸ್ಪದ ನೀಡುವ ಯಾವ ಸುಳಿವೂ ದೊರೆಯಲಿಲ್ಲ. ಅವನ ಪಾಸ್‌ಪೋರ್ಟ್ ಹಿಡಿದು ಸೂಕ್ಷ್ಮವಾಗಿ ಪರೀಕ್ಷಿಸುತ್ತಿರುವಂತೆಯೇ ಹೊರಗಿನಿಂದ ಬಾಗಿಲು ತೆರೆದ ಅದರೊಂದಿಗೆ ನಾಲ್ಕಾರು ಜನ ಒಳಗೆ ನುಗ್ಗಿದ ಶಬ್ದ ಕೇಳಿ ಬೆಚ್ಚಿಬಿದ್ದ. ಕೈಲಿದ್ದ ಪಾಸ್‌ಪೋರ್ಟ್ ಸರಕ್ಕನೆ ಕೋಟಿನ ಜೇಬು ಸೇರಿತು.

ಒಳಗೆ ಬಂದವರು ಐದಾರು ಜನ. ಎಲ್ಲರಿಗಿಂತ ಮುಂದೆ ಮ್ಯಾನೇಜರ್. ಅವನ ಹಿಂದೆ ರೂಮ್ ಸರ್ವರ್. ನಂತರ ಬೇರೆ ನಾಲ್ಕು ಜನ ಪ್ರವಾಸಿಕರು. ಅವರೆಲ್ಲರ ದೃಷ್ಟಿ ಮೊದಲು ಶೇಖರ್‌ನ ಮೇಲೆ ನಂತರ ಕೆಲಿಯಾನ್‌ನ ಶವದ ಮೇಲೆ ಹೊರಳುತ್ತಲೂ ಭಯದಿಂದ ಥರಥರ ಕಂಪಿಸುತ್ತ ಶೇಖರ್ ಕಡೆ ನೋಡಿದರು.

ಅದರರ್ಥ ತಿಳಿಯಲಾರದಷ್ಟು ಮುಠ್ಠಾಳನಲ್ಲ ಶೇಖರ್. ತಟಕ್ಕನೆ ನುಡಿದ.

"ನೋ ನೋ. ನಾನೀ ಕೊಲೆ ಮಾಡಿಲ್ಲ. ದಯವಿಟ್ಟು ತಪ್ಪು ತಿಳಿಯಬೇಡಿ."

"ಹಾಗಾದರೆ ನೀನು ಯಾರು? ನೀನು ಒಳಗೆ ಹೇಗೆ ಬಂದೆ?" ಗಡಸಾಗಿ ಕೇಳಿದ ಮ್ಯಾನೇಜರ್.

"ನಾನಿವರ ಫ್ರೆಂಡ್. ವ್ಯಾಪಾರದ ಬಗ್ಗೆ ಮಾತಾಡಲು ಬಂದಿದ್ದೆ."

"ನೋ ಸರ್. ಇವರು ಸುಳ್ಳು ಹೇಳುತ್ತಿದ್ದಾರೆ. ನಾನು ಒಂದು ಬಾರಿಯೂ ಇವರನ್ನು ಸಾಬ್ ಜೊತೆ ನೋಡಿಲ್ಲ. ಇಷ್ಟು ದಿನ ನಾನೇ ಸಾಬ್‌ಗೆ ಸರ್ವೀಸ್ ನೀಡಿದ್ದು." ಮಧ್ಯೆ ಬಾಯಿ ಹಾಕಿದ ರೂಮ್ ಸರ್ವರ್. ಅದಕ್ಕೆ ಮತ್ತೊಬ್ಬನ ಪುಷ್ಟಿಯೂ ದೊರೆಯಿತು.

"ಹೌದು ಸರ್. ನಾನು ಯಾವಾಗಲೂ ಇವರು ಇಲ್ಲೇ ಸುತ್ತುವದನ್ನು ನೋಡಿದ್ದೇನೆ. ಒಂದು ಬಾರಿಯೂ ಇವರು ರೂಮಿನ ಒಳಗೆ ಹೋಗಿಲ್ಲ. ಇಂದೂ ಸಹ ಬೆಳಗಿನ ಆರೂವರೆಯಿಂದ ಹೊರಗೇ ಸುತ್ತುತ್ತಿದ್ದರು.

ಮುಂದೇನು?

ಮುಂದೆ ಶೇಖರ್‌ಗೆ ಮಾತಾಡಲು ಯಾರೂ ಅವಕಾಶ ಕೊಡಲಿಲ್ಲ. ಅಲ್ಲಿಂದ ಓಡಿ ಹೋಗಲೂ ಆಗಲಿಲ್ಲ.

ಪೊಲೀಸ್ ಸ್ಟೇಶನ್‌ಗೆ ಫೋನ್ ಹೋದ ಹತ್ತೇ ನಿಮಿಷಗಳಲ್ಲಿ ಆತ ಬಂದಿಯಾಗಿದ್ದ. ಇನ್‌ಸ್ಪೆಕ್ಟರ್ ರವಿಚಂದ್ರಗೆ ಗೊತ್ತು ಶೇಖರ್ ಯಾರೆಂದು?

ಅದನ್ನು ಎಲ್ಲರ ಮುಂದೂ ಪ್ರಕಟಿಸುವಂತಿರಲಿಲ್ಲ. ಆದಕ್ಕಾಗಿ ಶೇಖರ್‌ನನ್ನು ಬಂಧಿಸಿ ಪೋಲೀಸ್ ಕಸ್ಟಡಿಯಲ್ಲಿ ಹೊರಗೆ ಕಳಿಸಿದ. ಶವದ ನಿರೀಕ್ಷಣೆಗೆ ಅಣಿಯಾದ. ಪಂಚನಾಮೆ ಮುಂತಾದ ಕಾರ್ಯಕ್ರಮಗಳು ಮುಗಿದವು. ಬೆರಳಚ್ಚು ತಜ್ಞರು ತಮ್ಮ ಕೆಲಸ ಮಾಡಿ ಮುಗಿಸಿದರು. ಡಾಕ್ಟರರು ಶವವನ್ನು ಪರೀಕ್ಷಿಸಿ ವರದಿ ಮಾಡಿದರು.

"ಈತ ಸತ್ತು ಆರು ಗಂಟೆ ಮೇಲಾಗಿದೆ. ಸಾವಿಗೆ ಭಯಂಕರ ವಿಷವೇ ಕಾರಣ."

ಹಾಗಾದರೆ....ಹಾಗಾದರೆ...

ಮ್ಯಾನೇಜರ್ ಹಣೆಹಣೆ ಒಡೆದುಕೊಂಡ. ಶೇಖರ್ ಬಗ್ಗೆ ಯೋಚಿಸಿದ.

ಅರ್ಧ ಗಂಟೆಯಲ್ಲಿ ಕೆಲಸವೆಲ್ಲ ಮುಗಿದು ಶವ ಪರೀಕ್ಷೆಗೆಂದು ಆಸ್ಪತ್ರೆಗೆ ಸಾಗಿಸಲಾಯಿತು. ರೂಮಿಗೆ ಬೀಗ ಹಾಕಿ ಸೀಲ್ ಮಾಡಿ ಇಬ್ಬರನ್ನು ಕಾವಲು ಹಾಕಿ ರವಿಚಂದ್ರ ಠಾಣೆ ಕಡೆ ಬಂದ.

ಆಗ ಶೇಖರ್‌ಗೆ ಮುಕ್ತಿ ದೊರೆಯಿತು.

ರವಿಚಂದ್ರನಿಂದ ಎಲ್ಲ ವಿಷಯ ತಿಳಿದುಕೊಂಡು ತನ್ನ ಗುಟ್ಟು ಬಿಟ್ಟುಕೊಡದೇ ಅಲ್ಲಿಂದ ಜಾಗ ಖಾಲಿ ಮಾಡಿದ.

ಆಗ ಸಮಯ ಹನ್ನೆರಡೂವರೆ.

ಶ್ರೀನಿವಾಸ ಕುಲಕರ್ಣಿಯವರ ಆಫೀಸನ್ನು ಶೇಖರ್ ಪ್ರವೇಶಿಸಿದಾಗ ವಾತಾವರಣ ಕಾವೇರಿದ್ದು ಅವನ ಗಮನಕ್ಕೆ ಬಂದಿತು. ಅವರೆದುರು ಕುಳಿತಿದ್ದ ಆ ಸುಂದರ ಜೋಡಿಯನ್ನು ಗಮನಿಸಿದ ಶೇಖರ್. ಅವರೇ ಹೇಮಂತ ಸುಷಮಾ ಇರಬೇಕೆಂದು ಊಹಿಸಿದ. ಹೇಮಂತನ ಹೆಸರು ಶೇಖರ್‌ಗೆ ಪರಿಚಿತವಾಗಿದ್ದರೂ ಅವನನ್ನು ಪ್ರತ್ಯಕ್ಷ ಕಂಡಿರಲಿಲ್ಲ. ಇಂದು ಆ ಸಮಯ ಒದಗಿತ್ತು.

ಶೇಖರ್‌ನನ್ನು ನೋಡುತ್ತಲೂ ಕುಲಕರ್ಣಿಯವರ ಹಣೆಯ ಮೇಲೆ ಮೂಡಿದ್ದ ನೆರಿಗೆಗಳು ಕರಗಿದವು. ಕಣ್ಣಲ್ಲಿ ಜೀವ ಬಂದಂತಾಯಿತು. ಆತನ ನಮಸ್ಕಾರಕ್ಕೆ ಪ್ರತಿ ನಮಸ್ಕಾರ ಸಲ್ಲಿಸದೇ ಕೋಪದಿಂದ ಕೇಳಿದರು.

"ಮಿಸ್ಟರ್ ಶೇಖರ್. ಏನಿದು ಅವಾಂತರ? ನೀನೇಕೆ ಬಂದಿಯಾದೆ?"

"ಸರ್, ಅದನ್ನು ತಿಳಿಸಲೆಂದೇ ಬಂದಿರುವೆ." ಶೇಖರ್ ವಿನಯದಿಂದಲೇ ಉತ್ತರಿಸುತ್ತ ಹೇಮಂತನೆಡೆ ಗೌರವದಿಂದ ನೋಡಿ ವಂದಿಸಿದ. ನಂತರ ಸುಷಮಾಳೆಡೆ ನೋಡಿ ತಲೆಯಾಡಿಸಿ 'ಹಲೊ' ಎಂದ.

ಶ್ರೀನಿವಾಸ ಕುಲಕರ್ಣಿ ಸುಧಾರಿಸಿಕೊಂಡು ಶೇಖರ್‌ನ ಪರಿಚಯ ಮಾಡಿಕೊಟ್ಟರು. ಶೇಖರ್‌ನ ಊಹೆ ನಿಜವಾಗಿತ್ತು.

"ಮಿಸ್ಟರ್ ಶೇಖರ್ ನಡೆದ ವಿಷಯವನ್ನು ವಿವರವಾಗಿ ತಿಳಿಸುವಿರಾ?"

ಹೇಮಂತ ಮೃದುವಾಗಿ ಕೇಳಿದಾಗ ಅವನ ವಿನಮ್ರ ಭಾವನೆಗೆ ಶೇಖರ್ ಮನದಲ್ಲೇ ತಲೆದೂಗಿದ, ಎಷ್ಟೇ ಉನ್ನತ ಹುದ್ದೆಯಲ್ಲಿದ್ದರೂ ಖ್ಯಾತಿ ಆಕಾಶದೆತ್ತರಕ್ಕೆ ಬೆಳೆದಿದ್ದರೂ ಎಷ್ಟು ವಿನಯ? ತುಂಬಾ ಅಪರೂಪ.

ಶೇಖರ್ ಹೇಳಲಾರಂಭಿಸಿದ. ಹೆಡ್‌ವೇಟರ್ ನೀಡಿದ ಸೂಚನೆಯಿಂದ ಪ್ರಾರಂಭಿಸಿ ತಾನು ಪೋಲೀಸ್ ಕಸ್ಟಡಿಯಿಂದ ಬಿಡುಗಡೆಯಾಗುವವರೆಗೂ ಆತ ವಿವರವಾಗಿ ಹೇಳಿ ಮುಗಿಸಿದ.

ಅಷ್ಟರಲ್ಲಿ ಕಾಫಿ ಬಂದಿತು. ಯೋಚಿಸುತ್ತಲೇ ಕಾಫಿ ಕುಡಿದ ಮೇಜರ್. ಕುಲಕರ್ಣಿಯವರ ಕಡೆ ಹೊರಳಿ ನುಡಿದ.

"ಕೆಲಿಯಾನ್ ಯಾರೆಂದು ತಿಳಿಯಿತೆ?"

"ಇಲ್ಲ. ಆತ ವಿದೇಶೀ ಯಾತ್ರಿಕ ಅನ್ನುವದಷ್ಟೇ ಗೊತ್ತು."

ಶೇಖರ್ ಜೇಬಿಗೆ ಕೈಹಾಕಿ ಪಾಸ್‌ಪೋರ್ಟ್ ತೆಗೆದು ಅವರ ಮುಂದಿಟ್ಟ. ಕೆಲಿಯಾನ್ ಭಾರತಕ್ಕೆ ಬಂದದ್ದು ಹಾಂಕಾಂಗ್ ಮೂಲಕವಾಗಿ. ಆತ ಚೀನೀ

ಅಲ್ಲದಿದ್ದರೂ ಚೀನೀ ನಾಗರಿಕತ್ವ ಪಡೆದವನಾಗಿದ್ದ. ವಯಸ್ಸು ನಲವತ್ತಾರು. ವೃತ್ತಿಯಲ್ಲಿ ವ್ಯಾಪಾರಿ. ಅವನ ಹಾಂಕಾಂಗ್ ವಿಳಾಸ ಸಹ ಅದರಲ್ಲಿತ್ತು.

ಪಾಸ್‌ಪೋರ್ಟ್ ನಿರೀಕ್ಷಿಸುತ್ತಿದ್ದಂತೆ ಹೇಮಂತನ ಹುಬ್ಬುಗಳು ಗಂಟಾದವು.

"ಸರ್, ಸ್ವಲ್ಪ ಸೂಕ್ಷ್ಮ ಕನ್ನಡಿ ಕೊಡುವಿರಾ?"

ಒಂದು ಕ್ಷಣ ಹೇಮಂತನ ಮಾತಿಗೆ ವಿಸ್ಮಿತರಾದರೂ ಏನೋ ವಿಶೇಷ ವಿರಬೇಕೆಂದುಕೊಂಡ ಕುಲಕರ್ಣಿ ಡ್ರಾದಿಂದ ಸೂಕ್ಷ್ಮದರ್ಶಕ ಕನ್ನಡಿ ತೆಗೆದು ಅವನ ಕೈಗಿತ್ತರು. ಕನ್ನಡಿಯಿಂದ ಐದ್ಹತ್ತು ನಿಮಿಷ ನಿರೀಕ್ಷಿಸಿದ ಹೇಮಂತ ಕನ್ನಡಿ ಮೇಜಿನ ಮೇಲಿಟ್ಟು ನಿರ್ದಿಷ್ಟವಾಗಿ ಉತ್ತರಿಸಿದ.

"ಸರ್, ಈತ ಜಾಲಿ ಮನುಷ್ಯ."

"ಏನೆಂದಿರಿ? ಜಾಲೀನಾ? ಅಂದ್ರೆ.

"ಪಾಸ್‌ಪೋರ್ಟ್ ನಕಲಿ ಅಲ್ಲ, ಆದರೆ ಫೋಟೋ ನಕಲಿ. ಸತ್ತ ವ್ಯಕ್ತಿ ಕೆಲಿಯಾನ್ ಅಲ್ಲ, ಕೆಲಿಯಾನ್‌ನ ಪಾಸ್‌ಪೋರ್ಟ್‌ಗೆ ಈ ವ್ಯಕ್ತಿಯ ಫೋಟೋ ಅಂಟಿಸಲಾಗಿದೆ."

"ಹಾಗಾದರೆ ಕೆಲಿಯಾನ್ ಫೋಟೋ?"

ಕಿತ್ತಿ ಬೀಸಾಡಿರಬಹುದು. ಇದರಿಂದ ಎರಡು ವಿಷಯಗಳು ತಿಳಿದು ಬರುತ್ತವೆ. ಒಂದು ಈತ ವ್ಯಾಪಾರಿಯಲ್ಲ. ಈತನ ಹೆಸರು ಕೆಲಿಯಾನ್ ಅಲ್ಲ. ಎರಡನೇದಾಗಿ ಕೆಲಿಯಾನ್ ಇವರೊಂದಿಗೆ ಕೂಡಿ ಕೆಲಸ ಮಾಡುತ್ತಿರಬಹುದು. ಅಥವಾ ಆತನನ್ನು ಬಂಧಿಸಿ ಇಲ್ಲ.... ಅವನ ಕೊಲೆ ಮಾಡಿ ಈ ಪಾಸ್‌ಪೋರ್ಟ್ ವಶಪಡಿಸಿಕೊಂಡಿದ್ದಾರೆ.

"ಇದನ್ನು ಕೂಲಂಕಶವಾಗಿ ತಿಳಿಯುವ ಬಗೆ ಹೇಗೆ?"

"ತುಂಬಾ ಸುಲಭ ಸರ್." ಹೇಮಂತ ಮುಗುಳುನಗೆ ನಗುತ್ತ ಹೇಳಿದ. "ಹಾಂಕಾಂಗ್‌ದಲ್ಲಿರುವ ತಮ್ಮ ಎಜಂಟ್‌ಗೆ ಈ ಪಾಸ್‌ಪೋರ್ಟ್ ಕಾಪಿ ಕಳಿಸಿ ಮಾಹಿತಿ ತರಿಸಿಕೊಡಿ."

"ಓಹ್ ಗಾಡ್. ಹಣೆಯನ್ನು ಬಲವಾಗಿ ತಿಕ್ಕಿಕೊಳ್ಳುತ್ತ ಕುಲಕರ್ಣಿ ತಮ್ಮ ಕಷ್ಟ ಹೇಳಿಕೊಂಡರು.

"ನನಗೆ ಏನಾಗಿದೆಯೋ ಏನೋ ಎರಡು ಮೂರು ದಿನಗಳಿಂದ ನಾನು ಮೊದಲಿನ ಮನುಷ್ಯನೇ ಆಗಿಲ್ಲ. ಬೇಗನೇ ವಿನಾಕಾರಣ ಸಿಟ್ಟಿಗೇಳುತ್ತೇನೆ. ಮೆದುಳಿಗೆ ಜಂಗು ಹತ್ತಿದಂತಾಗಿದೆ. ಬುದ್ಧಿ ಎಳ್ಳಷ್ಟೂ ಕೆಲಸ ಮಾಡುತ್ತಿಲ್ಲ. ಡಾಕ್ಟರ್‌ರಿಗೆ ತೋರಿಸಿ ಆಯಿತು. ಅವರು ಹೇಳಿದಂತೆ ಮಾತ್ರೆಗಳನ್ನು ನಿಯಮಿತವಾಗಿ ನುಂಗುತ್ತಿದ್ದೇನೆ. ಆದರೂ ಗುಣ ಕಾಣುತ್ತಿಲ್ಲ."

"ಹಾಗಾದರೆ ತಮಗೆ ವಿಶ್ರಾಂತಿಯ ಅವಶ್ಯಕತೆ ತುಂಬಾ ಇದೆ ಸರ್. ಅಂದ ಹಾಗೆ ಸ್ವಲ್ಪ ಮಾತ್ರೆ ಯಾವದು ಎಂದು ತೋರಿಸಿ ನೋಡೋಣ."

ಕುಲಕರ್ಣಿ ತಮ್ಮ ಬ್ಯಾಗಿನಿಂದ ಎರಡು ಚಿಕ್ಕ ಚಿಕ್ಕ ಸೀಸೆ ತೆಗೆದು ಅವರ ಮುಂದಿಟ್ಟರು. ಎರಡು ಮೂರು ನಿಮಿಷ ಅವನ್ನು ನಿರೀಕ್ಷಿಸಿದ ಹೇಮಂತ ಒಮ್ಮೆಲೆ ಬೆಚ್ಚಿಬಿದ್ದು ನುಡಿದ.

"ಅರೆ, ನಾನು ಅಶೋಕನಿಗೆ ಫೋನು ಮಾಡುವದನ್ನೇ ಮರೆತೆ. ಆತ ನಮ್ಮ ದಾರಿ ಕಾಯುತ್ತಿರಬೇಕು."

ಕುಲಕರ್ಣಿಯವರ ಒಪ್ಪಿಗೆ ಪಡೆದು ಫೋನ್ ಮಾಡಿದ.

ಅಶೋಕನೇ ರಿಸೀವರ್ ಎತ್ತಿದ್ದು. ಅವನಿಗೆ ಕೂಡಲೇ ಸೀಪರ್ಲ್‌ಗೆ ಬರಲು ತಿಳಿಸಿ ಮೇಲೆದ್ದ ಹೇಮಂತ. ಯಾರ ಕಣ್ಣಿಗೂ ಬೀಳದಂತೆ ಮೇಜರ್ ಆ ಎರಡೂ ಸೀಸೆ ತನ್ನ ಕೋಟಿನ ಜೇಬಿಗೆ ಇಳಿಸಿದ್ದು ಕೇವಲ ಸುಷಮಾಳ ಗಮನಕ್ಕಷ್ಟೇ ಬಂದಿತ್ತು. ಅವಳ ಮೀನದಂಥ ಕಣ್ಣುಗಳು ತುಂಟತನದಿಂದ ನಕ್ಕವು. ಆ ತುಂಟತನದಲ್ಲಿ ಮೆಚ್ಚುಕೆ ಬೆರೆತಿತ್ತು.

ಮೇಜರ್‌ನೊಂದಿಗೆ ಶ್ರೀನಿವಾಸ ಕುಲಕರ್ಣಿ ಸಹ ಮೇಲೆದ್ದರು. ಬಾಗಿಲ ವರೆಗೂ ಬಂದ ಅವರು ಹೇಳಿದರು. "ನಾನೀಗಲೇ ಎಸ್.ಪಿ. ಅವರಿಗೆ ಫೋನ್ ಮಾಡುತ್ತೇನೆ. ಅಲ್ಲಿ ನಿಮಗಾಗಿ ಯಾರಾದರೂ ಕಾಯುತ್ತಿರುತ್ತಾರೆ. ಬೇಕೆಂದರೆ ಶೇಖರ್ ಸಹ ನಿಮ್ಮ ಜೊತೆ ಬರುತ್ತಾನೆ. ನೀವು...."

ಅವರ ಮಾತು ಪೂರ್ತಿಯಾಗಿರಲಿಲ್ಲ. ಮಧ್ಯದಲ್ಲೇ ಬಾರಿಸಿದ ಟೆಲಿಫೋನ್ ಗಂಟೆ ಅವರನ್ನು ತಡೆದಿತ್ತು. ದೊಡ್ಡ ದೊಡ್ಡ ಹೆಜ್ಜೆ ಇಡುತ್ತ ಮೇಜಿನ ಬಳಿ ಹೋದ ಅವರು ರಿಸೀವರ್ ಎತ್ತಿ ಕಿವಿಗೆ ಆನಿಸಿದರು. ಅವರು ಆಡಿದ್ದು ಎರಡೇ ಎರಡು ಮಾತುಗಳು. "ಅವರಿಗೆ ಹೇಗೆ ತಿಳಿಯಿತು? ವಿಷಯ ಗಂಭೀರವಾಗಿದೆ. ಸರಿ ಸರ್." ನಂತರ ರಿಸೀವರ್ ಯಥಾಸ್ಥಾನದಲ್ಲಿರಿಸಿ ಬಾಗಿಲೆಡೆ ಹೊರಳಿ ಎಲ್ಲರನ್ನೂ ಉದ್ದೇಶಿಸಿ ನುಡಿದರು. "ಕೆಲಿಯಾನ್ ಮರಣ ವಾರ್ತೆ ಒಂದು ಗಂಟೆ ಹಿಂದೆ ಬಿ.ಬಿ.ಸಿ. ವರದಿ ಮಾಡಿತಂತೆ ಅದನ್ನು ಕೇಳಿ ಚೀನೀ ದೂತಾವಾಸ ಭಾರತ ಸರಕಾರಕ್ಕೆ ಸ್ಪಷ್ಟೀಕರಣ ಕೇಳಿದೆ. ಇಷ್ಟು ಬೇಗ. ಅದೂ ಕೆಲಿಯಾನ್‌ನ ಸಾವಿನ ಸುದ್ದಿ ನಗರದ ಜನತೆ ಕಿವಿಗೆ ಬೀಳುವ ಮುನ್ನವೇ ಪೀಕಿಂಗ್ ತಲುಪಬೇಕೆಂದರೆ."

ಬೇಕೆಂತಲೇ ಶ್ರೀನಿವಾಸ ತಮ್ಮ ಮಾತು ಅಪೂರ್ಣ ಮಾಡಿದರು.

ಮೇಜರ್‌ಗೆ ಅವರ ಮಾತಿನ ಪೂರ್ಣ ಅರ್ಥ ಹೊಳೆದಿತ್ತು. ಆತ ಗಂಭೀರನಾಗಿದ್ದ. ಕಣ್ಣುಗಳು ಕಿರಿದಾಗಿ ಮೂಗಿನ ಹೊರಳೆ ನಿಧಾನವಾಗಿ

ಉಬ್ಬಿದುದನ್ನು ಸುಷಮಾ ಗಮನಿಸಿದಳು. "ಶತ್ರುವಿಗೆ ಬಂತು ಯಮನ ವಾರಂಟ್" ಎಂದುಕೊಂಡಳು ಮನದಲ್ಲಿ.

"ಸೀಪರ್ಲ್" ಹೋಟೆಲ್ ಮುಟ್ಟುವತನಕ ಮಧ್ಯದಲ್ಲಿ ಹೇಮಂತ ತುಟಿ ಬಿಡಲೇ ಇಲ್ಲ. ದಾರಿಯುದ್ದಕ್ಕೂ ಆತ ಯೋಚಿಸುತ್ತಲೇ ಇದ್ದ. ಸುಷಮಾ ಆಗಲೀ, ಶೇಖರ್ ಆಗಲಿ ಅವನನ್ನು ಮಾತನಾಡಿಸುವ ಪ್ರಯತ್ನ ಮಾಡಲಿಲ್ಲ. ಮೇಜರ್ ಹೋಟೆಲ್ ಪಾರ್ಕಿಂಗ್‌ನಲ್ಲಿ ಕಾರು ನಿಲ್ಲಿಸುತ್ತಿದ್ದಂತೆ 'ಸೈರನ್' ಕೂಗುತ್ತ ಬಂದ ಕಾರು ಪಕ್ಕದಲ್ಲೇ ನಿಂತಿತು. ಅದು ಎಸ್.ಪಿ. ಅವರ ಕಾರು. ರಾಮನಾಥ ಖುದ್ದಾಗಿ ಬಂದಿದ್ದರು. ಹೇಮಂತನನ್ನು ಅವರು ಕಂಡಿದ್ದೇ ಇಲ್ಲ. ಹೇಮಂತನೂ ಅಷ್ಟೇ. ಆದರೆ ಶೇಖರ್‌ಗೆ ಎಸ್.ಪಿ. ಅವರ ಪರಿಚಯವಿದ್ದುದರಿಂದ ಆತನೇ ಸೆಲ್ಯೂಟ್ ನೀಡಿ ಅವರಿಗೆ ಅಭಿವಂದನೆ ಸಲ್ಲಿಸಿ ನಂತರ ಹೇಮಂತ ಹಾಗೂ ಸುಷಮಾರ ಪರಿಚಯ ಮಾಡಿಕೊಟ್ಟ. ರಾಮನಾಥ ಅತಿ ಉತ್ಸಾಹದಿಂದ ಹೇಮಂತನ ಕೈ ಕುಲುಕಿದರೆ, ಅಷ್ಟೇ ಸಭ್ಯತೆಯಿಂದ ಸುಷಮಾಳಿಗೆ ವಂದಿಸಿದರು.

ಸೈರನ್ ಕೇಳುತ್ತಲೇ ಮತ್ತಾವ ಅಪಾಯ ಬಂತೋ ಎಂದು ಹೆದರಿದ ಮ್ಯಾನೇಜರ್ ತೇಕುತ್ತ ಧಾವಿಸಿದ. ಎಸ್.ಪಿ. ಅವರ ಜೊತೆ ಶೇಖರ್ ಯಾರನ್ನು ತಾನು ಕೊಲೆಗಾರ ಎಂದು ತಿಳಿದಿದ್ದನೋ ಆತ ಕೈಕೈಕುಲುಕಿ ಮಾತನಾಡುವದನ್ನು ಕಂಡು ಗೊಂದಲದಲ್ಲಿ ಮುಳುಗಿದ. ಬಲವಂತದ ನಗೆ ನಕ್ಕು ಎಲ್ಲರನ್ನು ಸ್ವಾಗತಿಸಿದ. ರಾಮನಾಥ ಗಂಭೀರವಾಣಿ ಅವನನ್ನು ಎಚ್ಚರಿಸಿತು.

"ನೀವು ಮ್ಯಾನೇಜರ್ರೋ?"

"ಹೌ... ಹೌದು ಸರ್." ತಡವರಿಸುತ್ತ ನುಡಿದ ಆತ.

"ಥ್ರಿಬ್ಬಲ್ ಫೈವ್ ರೂಮ್ ಪರೀಕ್ಷಿಸಲು ನಾವು ಬಂದಿದ್ದೇವೆ. ನಮ್ಮ ಜೊತೆಗೆ ಬಂದವರಿಗೆ ಅವರು ಕೇಳಿದ ಎಲ್ಲಾ ಮಾಹಿತಿ ನೀಡಿ. ನಿಮ್ಮಿಂದ ಸಂಪೂರ್ಣ ಸಹಕಾರ ಬೇಕು."

"ಖಂಡಿತವಾಗಿ ಸರ್. ತಾವು ಎಳ್ಳಷ್ಟೂ ಚಿಂತಿಸಬೇಡಿ."

ಮೆರವಣಿಗೆ ಹೊರಟಿತು ಐದನೇ ಮಹಡಿಗೆ.

ಲಿಫ್ಟಿನಿಂದ ಅವರೆಲ್ಲ ಹೊರಬಿದ್ದಾಗ ಮೊದಲು ರೂಮಿನ ಕಾವಲಿಗೆ ನಿಂತಿದ್ದ ಕಾನ್‌ಸ್ಟೇಬಲ್ ಯಾವ ಪ್ರತಿಕ್ರಿಯೆ ತೋರಿಸಲಿಲ್ಲ. ಆದರೆ ಎಸ್.ಪಿ. ಅವರನ್ನು ನೋಡುತ್ತಲೇ ಸಟಕ್‌ನೆ ಎದ್ದು ನಿಂತು ಸೆಲ್ಯೂಟ್ ನೀಡಿದ.

"ರೂಮಿನ ಬಾಗಿಲು ತೆಗೆ" ರಾಮನಾಥ ಆಜ್ಞಾಪಿಸಿದರು. ಸೀಲ್ ಒಡೆದ ಎರಡನೇ ನಿಮಿಷದಲ್ಲಿ ಅವರೆಲ್ಲ ರೂಮಿನ ಒಳಗಿದ್ದರು. ಶೇಖರ್

ಮತ್ತು ಮ್ಯಾನೇಜರ್ ತಮಗೆ ತಿಳಿದದ್ದನ್ನು ಹೇಳುತ್ತ ನಡೆದರು. ರಾಮನಾಥ ಮಧ್ಯೆ ಮಧ್ಯೆ ಚಿಕ್ಕದಾಗಿ ಪ್ರಶ್ನಿಸುತ್ತಿದ್ದರು. ಹೇಮಂತ ಮಾತ್ರ ಎಲ್ಲೆಡೆ ಸೂಕ್ಷ್ಮದೃಷ್ಟಿ ಬೀರುತ್ತ ಸೂಟು ಪರೀಕ್ಷಿಸತೊಡಗಿದ. ರೂಮಿನ ವಾತಾವರಣವೇ ಅವನಿಗೆ ಅತೀ ರಹಸ್ಯಮಯವೆನಿಸುತ್ತಿತ್ತು. ಆ ಭಯಾನಕ ಸರ್ಪ, ಪ್ರಾಣಿ ತಲೆ, ಸಾರಂಗ ಮುಂತಾದವೂ ಫೈವ್ ಸ್ಟಾರ್ ಹೋಟೆಲ್‌ನ ವೈಭವಶಾಲಿ ರೂಮಿಗೆ ಕಾಡಿನ ಭಯದ ಛಾಯೆ ನೀಡಿದ್ದವು. ಎರಡು ಮೂರು ಬಾರಿ ವಾಸನೆ ತೆಗೆದುಕೊಂಡಾಗ ಅತೀ ಕಡಿಮೆ ಪ್ರಮಾಣದಲ್ಲಿ ಬೆರೆತಿದ್ದ ವೈಭವಶಾಲೀ 'ಸೇಂಟಿ'ನ ವಾಸನೆ ಮೂಗಿಗೆ ಬಡಿಯಿತು. ಅದು 'ರೋಜಿ'ಯ ನೆನಪು ಹಸಿರು ಮಾಡಿತು. ಸುಷಮಾ ಹೇಮಂತನ ಗತಿವಿಧಿಗಳನ್ನೇ ಗಮನಿಸುತ್ತ ಮನದಲ್ಲೇ ಏನೋ ಹೇಳಲು ಚಡಪಡಿಸುತ್ತಿದ್ದಳು. ಅಶೋಕ ಸಹ ಒಂದು ಬಗೆಯ ವಿಚಿತ್ರ ಸ್ಥಿತಿಯಲ್ಲಿದ್ದ. ಹೇಳಲಾಗದ ತಿಳಿಸಲಾಗದ ಬಣ್ಣಿಸಲಾಗದ ಸ್ಥಿತಿ ಅದು. ಹೇಮಂತ ಒಮ್ಮಿಂದೊಮ್ಮೆಲೇ ಬದಲಾದ. ಅವನ ಪಂಚೇಂದ್ರಿಯಗಳು ಜಾಗೃತವಾದವು. ಅವನಲ್ಲಾದ ಆಕಸ್ಮಿಕ ಬದಲಾವಣೆಯನ್ನು ಅವನ ಸಹಾಯಕರಿಬ್ಬರೂ ಗಮನಿಸಿದರು. ಸುಷಮಾ ಮುಂದಾಗಿ ಕೇಳಿದಳು. "ನಿಮಗೂ ನನಗಾಗುತ್ತಿರುವ ಅನುಭವವಾಗುತ್ತಿರುವದಲ್ಲವೆ?"

ಹೇಮಂತ ಸುಷಮಾ ಕಡೆ ಹೊರಳಿದ. ಆತ ಉತ್ತರಿಸುವ ಮೊದಲೇ ಎಸ್.ಪಿ. ಕೇಳಿದರು. "ಎಂಥ ಅನುಭವ?"

ಉತ್ತರ ದೊರೆತದ್ದು ಸುಷಮಾಳಿಂದಲ್ಲ, ಅಶೋಕನಿಂದ. "ಯಾವ ಅನುಭವ ನನಗಾಗುತ್ತಿದೆಯೋ ಅಂಥ ಅನುಭವ."

ಈ ಒಗಟಿನ ಮಾತು, ಒಗಟಿನ ಉತ್ತರ ಎಸ್.ಪಿ. ಅವರಿಗೆ ಅರ್ಥವಾಗಲಿಲ್ಲವೆಂದು ಅವರ ಮುಖಚರ್ಯೆಯೇ ಸಾರಿ ಹೇಳುತ್ತಿತ್ತು. ಸುಷಮಾ ಅವರ ಸಹಾಯಕ್ಕೆ ಬಂದಳು.

"ಎಸ್.ಪಿ. ಸಾಹೇಬರೆ, ಈ ರೂಮಿಗೆ ಬಂದಾಗಿನಿಂದಲೂ ನಮಗೆ ವಿಚಿತ್ರ ಅನುಭವವಾಗುತ್ತದೆ. ಏನೋ ಅಳುಕು. ಏನೋ ವಿಮಂಚನೆ. ಯಾವದೋ ತಳಮಳ."

"ಓಹ್ ಹೀಗೋ, ಕೆಲಿಯಾನ್‌ನ ಸಾವಿನಿಂದಾಗಿ ಹಾಗಾಗುತ್ತಿರಬೇಕು."

"ಅದಕ್ಕಾಗಿ ಅಲ್ಲ ಸಾಹೇಬರೆ, ನಮ್ಮಷ್ಟಕ್ಕೆ ನಾವೇ ನಾಚಿ ಮುದ್ದೆಯಾಗುವಂತೆ ಆಗುತ್ತದೆ. ನಾವು ಇಲ್ಲಿ ಬತ್ತಲೆಯಾಗಿದ್ದೇವೆ ಅನಿಸುತ್ತದೆ." ಮಧ್ಯೆ ಪ್ರವೇಶಿಸಿ ನುಡಿದ ಅಶೋಕನೆಡೆ ಆಶ್ಚರ್ಯದಿಂದ ನೋಡಿದರು ಎಸ್.ಪಿ. "ಇದೆಂಥ ಮಾತು. ಮೈತುಂಬ ಬೆಲೆ ಬಾಳುವ ಬಟ್ಟೆ ಇದ್ದರೂ

ಬೆತ್ತಲೆಯೇ?"

ಮೇಜರ್ ನಗುತ್ತ ಅವರ ಸಂಶಯ ಪರಿಹರಿಸಿದ. "ದಯವಿಟ್ಟು ಕ್ಷಮಿಸಿ ರಾಮನಾಥ್ ಅವರೆ. ನಾನೆಷ್ಟು ಜಾಗೃತನೋ ಅಷ್ಟೇ ನನ್ನ ಈ ಸಹಾಯಕರೂ ಸದೈವ ಜಾಗೃತರಾಗಿರುತ್ತಾರೆ. ಅವರಿಗಾಗುತ್ತಿರುವ ಅನುಭವವೇ ನನಗೂ ಆಗುತ್ತದೆ. ನಾನೂ ಸಹ ಬಯಲಲ್ಲಿ ಬೆತ್ತಲೆ ನಿಂತಿದ್ದೇನೆ ಅನಿಸುತ್ತದೆ. ನಾನಷ್ಟೇ ಅಲ್ಲ. ನೀವೂ ಈ ರೂಮಿನಲ್ಲಿದ್ದವರು ಎಲ್ಲರೂ ಬೆತ್ತಲೆಯಾಗಿದ್ದಾರೆ. ತಿಳಿಯಿತಾ?"

ಎಸ್.ಪಿ. ರಾಮನಾಥರಿಗೆ ಹುಚ್ಚು ಹಿಡಿಯುವಂತಾಯಿತು. "ಇದೆಂಥ ಮಾತು? ತಾನು ಬೆತ್ತಲೆ ಎನ್ನುವದರ ಜೊತೆಗೆ ಜಗತ್ತೆಲ್ಲ ಬೆತ್ತಲೆ ಎನ್ನುತ್ತಿದ್ದಾನಲ್ಲ ಈ ವಿಚಿತ್ರ ಮನುಷ್ಯ?"

"ಒಂದು ನಿಮಿಷ ಇರಿ. ನಿಮಗೇ ಅರ್ಥವಾಗುತ್ತದೆ." ಹೇಮಂತ ವಿಷಯವನ್ನು ಅಲ್ಲೇ ಮುಗಿಸಿ ತನ್ನ ಕಾರ್ಯದಲ್ಲಿ ಮಗ್ನನಾದ. ಕೋಣೆಯ ಮಧ್ಯದಲ್ಲಿ ನಿಂತು ರೂಮಿನ ತುಂಬೆಲ್ಲ ದೃಷ್ಟಿ ಹರಿಸಿದ. ಅವನ ಕಣ್ಣುಗಳು ಕೂದಲೆಳೆಯಷ್ಟು ಜಾಗ ಬಿಡದೇ ಪ್ರತಿಯೊಂದನ್ನು ಕೂಲಂಕಶವಾಗಿ ಪರೀಕ್ಷಿಸತೊಡಗಿದವು. ಐದಾರು ನಿಮಿಷಗಳಲ್ಲಿ ಹೇಮಂತನ ಮುಖದ ಮೇಲೆ ಸಫಲತೆಯ ಕಿರಣ ಮಿಂಚಿತ್ತು.

"ಸ್ವಲ್ಪ ಅತ್ತ ನೋಡಿ" ಆತ ಬೆರಳು ಮಾಡಿ ತೋರಿಸಿದತ್ತ ಎಲ್ಲರ ದೃಷ್ಟಿ ಹರಿಯಿತು.

"ಅದು. ಅದೇ ಭಾರೀ ತಲೆಯ ಕರಿನಾಗರ. ಅದರಲ್ಲೇನಿದೆ ವಿಶೇಷ?" ರಾಮನಾಥ ಪ್ರಶ್ನಿಸಿದರು.

"ನೀವು ತಿಳಿದಷ್ಟು ಸಾಮಾನ್ಯವಾದುದಲ್ಲ ಸಾಹೇಬರೆ ಈ ಕರಿನಾಗರ. ಈ ಕರಿನಾಗರವೇ ಮಿಸ್ಟರ್ ಕೆಲಿಯಾನ್‌ರ ಕೊಲೆಗಾರ ಎಂದರೆ ನೀವು ನಂಬುತ್ತೀರಾ?"

"ಅಂ, ಏನೆಂದಿರಿ? ಈ ನಿರ್ಜೀವ ಹಾವು ಕೆಲಿಯಾನ್‌ನನ್ನು ಕೊಂದಿತೆ?"

"ಹೌದು. ಸ್ವಲ್ಪ ಲಕ್ಷ್ಯಗೊಟ್ಟು ನೋಡಿ. ಗೋಡೆಯ ಮೇಲೆ ಸರ್ಪವಿದ್ದ ಪಕ್ಕದಲ್ಲೇ ಅತೀ ಸೂಕ್ಷ್ಮವಾದ ಗೆರೆಯೊಂದು ಕಾಣುತ್ತದೆ. ಆ ಗೆರೆಯೇ ನನ್ನ ಮಾತಿಗೆ ಪುಷ್ಟಿ. ಇದು ಸಾಮಾನ್ಯರು ಗುರುತಿಸಲಿಕ್ಕಾಗದ ಸುಳಿವು. ಕೊಲೆ ನಡೆಯುವ ಮುನ್ನ ಈ ಸರ್ಪ ಮೊದಲಿದ್ದ ಜಾಗೆಯಲ್ಲೇ ಅಂದರೆ ಈಗ ಕಾಣುತ್ತಿರುವ ಗುರುತಿನಲ್ಲೇ ಇತ್ತು. ಕೊಲೆಯಾದ ನಂತರ ಅದರ ಸ್ಥಾನ ಕೂದಲೆಳೆಯಷ್ಟು ಬದಲಾಗಿದೆ."

"ಅಂದರೆ....ಅಂದರೆ ನಿಮ್ಮ ಮಾತಿನ ಅರ್ಥವೇನು? ಈ ಸತ್ತ ಹಾವು ಜೀವಂತವಾಗಿ ಗೋಡೆಯಿಂದಿಳಿದು ಬಂದು ಕೆಲಿಯಾನ್‌ನನ್ನು ಕಚ್ಚಿ ಮತ್ತೆ ಗೋಡೆಯೇರಿ ತನ್ನ ಜಾಗೆಯಲ್ಲಿ ಕೂಡುತ್ತಿದ್ದಂತೆ ಪುನಃ ಸತ್ತು ಹೋಯಿತೆ?" ಅಣಕು ಧ್ವನಿಯಲ್ಲಿ ಕೇಳಿದರು ರಾಮನಾಥ.

"ಹೌದು. ನಿಮ್ಮ ಮಾತು ನೂರಕ್ಕೆ ನೂರು ಸತ್ಯ."

ಮೈಯೆಲ್ಲಾ ಪರಚಿಕೊಳ್ಳುವಂತಾಯಿತು ರಾಮನಾಥರಿಗೆ. ಇವನ ಜೊತೆ ಮಾತನಾಡುತ್ತಿದ್ದರೆ ಖಂಡಿತವಾಗಿ ತಾವೂ ಹುಚ್ಚರಾಗುತ್ತೇವೆಂಬ ಸಂಶಯ ಮೂಡಿದ್ದರಿಂದ ಅವರು ಬಾಯಿ ಮುಚ್ಚಿಕೊಂಡು ತೆಪ್ಪಗಾದರು. ಸುಷಮಾಳಿಗೆ ತಡೆಯಲಾರದಷ್ಟು ನಗೆ ಬಂದದ್ದನ್ನು ಪ್ರಯಾಸಪಟ್ಟು ತಡೆದದ್ದು ಅಶೋಕನ ಗಮನಕ್ಕೆ ಬರದಿರಲಿಲ್ಲ. ಆತನ ಮುಖದ ಮೇಲೆ ಮಂದಹಾಸ ಮೂಡಿ ಮಾಯವಾಯಿತು.

"ನಾವೀಗ ಈ ಸರ್ಪವನ್ನು ಕೆಳಗಿಳಿಸಬೇಕು." ಹೇಮಂತ ಗಟ್ಟಿಯಾಗಿ ನುಡಿದ.

ರಾಮನಾಥ ತಮ್ಮ ಜೊತೆಗಿದ್ದ ಕಾನ್‌ಸ್ಟೇಬಲ್ ಕಡೆ ನೋಡಿದರು. ಅವರ ದೃಷ್ಟಿಯಲ್ಲಿ ಅಡಗಿದ ಆದೇಶ ತಿಳಿದುಕೊಂಡ ಆತ ಮೂಲೆಯಲ್ಲಿದ್ದ ಮೇಜನ್ನು ತಂದು ಸರ್ಪವಿದ್ದ ಗೋಡೆಗೆ ಆನಿಸಿದ. ನಂತರ ಒಂದು ಕುರ್ಚಿ ಎತ್ತಿ ಮೇಜಿನ ಮೇಲಿಟ್ಟ. ಇನ್ನೇನು ಆತ ಮೇಜು ಹತ್ತಿ ನಂತರ ಕುರ್ಚಿ ಮೇಲೇರಿ ಸರ್ಪಕ್ಕೆ ಕೈ ಹಾಕಬೇಕು ಅನ್ನುವಷ್ಟರಲ್ಲಿ ಕಿಟಾರನೇ ಕಿರುಚಿಕೊಂಡು ಹಿಂದಕ್ಕೆ ಸರಿದ. ಆಯತಪ್ಪಿ ಕುರ್ಚಿಯೊಂದಿಗೆ ಆತ ಕಾರ್ಪೆಟ್ ಮೇಲೆ ಉರುಳಿದ.

ರಾಮನಾಥ, ಶೇಖರ್ ಹಾಗೂ ಹೋಟೆಲ್ ಮ್ಯಾನೇಜರ್ ಭಯದಿಂದ ಸರ್ಪದೆಡೆ ನೋಡತೊಡಗಿದರು. ಕಾರ್ಪೆಟ್ ಮೇಲೆ ಬಿದ್ದುದರಿಂದ ಹೆಚ್ಚೇನೂ ಪೆಟ್ಟು ತಾಗಿರದ ಆ ಕಾನ್‌ಸ್ಟೇಬಲ್ ಸಹ ಎದ್ದು ನಿಂತ. ಕರಿನಾಗರದತ್ತಲೇ ನೋಡತೊಡಗಿದ.

ನಿರ್ಜೀವವಾಗಿ ಒಂದು 'ಮಾಡೆಲ್'ನಂತಿದ್ದ ಭಯಾನಕ ಕರಿನಾಗರಕ್ಕೆ ಈಗ ಜೀವ ಮರುಕಳಿಸಿತ್ತು. ಮುಚ್ಚಿದ್ದ ಅದರ ಕೆಂಪುಕಣ್ಣುಗಳು ತೆರೆದು ಕೊಂಡಿದ್ದವು. ಬಾಯಿ ತೆರೆದು 'ಭುಸ್‌ಭುಸ್' ಎಂದು ಅದು ಫೂತ್ಕರಿಸಿತು. ಅದರ ಸೀಳುನಾಲಿಗೆ ನಾಲ್ಕಾರು ಬಾರಿ ಹೊರಗೆ ಬಂದು ಒಳಸೇರಿದಾಗ ಎಲ್ಲರೂ ಬೆವೆತಿದ್ದರು.

ಮೇಜರ್ ಮೈಯೆಲ್ಲ ಕಣ್ಣಾಗಿ ಜಾಗೃತನಾದ.

ಅಶೋಕ ಮತ್ತು ಸುಷಮಾ ಸಹ ಎಚ್ಚೆತ್ತರು.

ಎಸ್.ಪಿ. ರಾಮನಾಥ ಅವರು ಯಾವದು ಅಸಾಧ್ಯವೆಂದು ತಿಳಿದು ಮೇಜರ್ ಹೇಮಂತನನ್ನು ಹುಚ್ಚ ಎಂದು ತೀರ್ಮಾನಿಸಿದ್ದರೋ ಆ ಅಸಾಧ್ಯ ಘಟನೆ ಅವರ ಕಣ್ಣೆದುರೇ ಸಾಧ್ಯವಾಗಿತ್ತು.

ಕರಿನಾಗರ ಗೋಡೆಯಿಂದ ಕೆಳಗಿಳಿಯುತ್ತ ಬರುತ್ತಿತ್ತು. ಅದರ ಉದ್ದೇಶವನ್ನರಿತ ಮೇಜರ್ ಎಲ್ಲರಿಗೂ ಆದೇಶ ನೀಡಿದ.

"ಇದು ಭಯಾನಕ ಸರ್ಪ. ಜೀವಂತವಾಗಿಲ್ಲವೆಂದು ಭಾವಿಸಬೇಡಿ. ಇದು ಸತ್ತಿದ್ದರೂ ಜೀವಂತವಾಗಿರುವದೇ ಇದರ ವಿಶೇಷ. ಇದರ ಉಸಿರು ಒಡಿದರೂ ಸಾವು ಖಂಡಿತ. ಎಲ್ಲರೂ ಹಿಂದೆ ಸರಿಯಿರಿ.

ಮುಂದಿನ ಕ್ಷಣ ಹೇಮಂತನ ಕೈಯಲ್ಲಿ ರಿವಾಲ್ವರ್ ಕಾಣಿಸಿತ್ತು.

ಕರಿನಾಗರದ ಹೆಡೆಗೆ ಗುರಿಯಿಟ್ಟ ಆತ ಕುದುರೆ ಅದುಮಿದ. 'ಪಟ್... ಪಟ್' ಸೈಲೆನ್ಸರ್ ರಿವಾಲ್ವರ್‌ನಿಂದ ಹೊರಟ ಗುಂಡುಗಳು ಗೋಡೆಯ ಪ್ಲಾಸ್ಟರ್ ಹಾರಿಸಿದವೇ ವಿನಃ ಸರ್ಪಕ್ಕೆ ತಗಲಲಿಲ್ಲ. ಆಶ್ಚರ್ಯಕರ ರೀತಿ ಯಲ್ಲದು ತಲೆ ಅಲ್ಲಾಡಿಸಿ ಗುಂಡಿನಿಂದ ತಪ್ಪಿಸಿಕೊಂಡ ಕರಿನಾಗರ ನೆಲದಿಂದ ಎರಡೇ ಗೇಣು ಅಂತರದಲ್ಲಿರುವಂತೆ ಹೇಮಂತ ಬೇರೊಂದು ಉಪಾಯ ಮಾಡಿದ್ದ. ರಿವಾಲ್ವರ್ ಜೇಬಿಗಿಳಿಸಿದ ಆತ ಕಾಟ್ ಮೇಲಿದ್ದ ಬ್ಲ್ಯಾಂಕೆಟ್ ತೆಗೆದು ಬಿಡಿಸಿ ಅದನ್ನು ಕೈಲಿ ಹಿಡಿದ ಆತ ನಿಧಾನವಾಗಿ ಸರ್ಪದತ್ತ ನಡೆಯ ತೊಡಗಿದ.

ಎಲ್ಲರೂ ಅವಾಕ್ಕಾಗಿ ಅವನತ್ತಲೇ ನೋಡುತ್ತಿದ್ದರು.

ಹೇಮಂತನನ್ನು ಅತಿಯಾಗಿ ಪ್ರೀತಿಸುತ್ತಿದ್ದ ಸುಷಮಾಳ ಎದೆ ಭಯ ದಿಂದ ಡವಡವ ಒಡಿದುಕೊಳ್ಳಲಾರಂಭಿಸಿತು.

ಇದೊಂದು ಅಪಾಯಕಾರೀ ಹೆಜ್ಜೆ.

ಕರಿನಾಗರ ತಲೆ ಎತ್ತಿ ಹೇಮಂತನತ್ತ ಆಕ್ರಮಣ ಮಾಡುವದಕ್ಕೂ ಆತ ತನ್ನ ಕೈಲಿದ್ದ ಬ್ಲ್ಯಾಂಕೆಟ್ ಅದರ ಮೇಲೆ ಚೆಲ್ಲಿಬಿಟ್ಟಿದ್ದ. ಒಂದೆರಡು ಕ್ಷಣ ಕರಿನಾಗರ ವಿಲಿವಿಲಿ ಒದ್ದಾಡಿ ಭುಸ್‌ಭುಸ್ ಎನ್ನುತ್ತ ಮನ ಬಂದೆಡೆ ಹೆಡೆ ಹೊಡೆಯಿತು. ಒಂದು ಸಾರಿ ಹೆಡ ನೆಲಕ್ಕೆ ಬಡಿಯುತ್ತಿದ್ದಂತೆ 'ಮೊಜಾಯಿಕ್ ಟೈಲ್' ಫಟ್ ಎಂದು ಪೆಣಕೆ ಹಾರಿತು. ಅದರೊಂದಿಗೆ ಬಂದ 'ಫಳಕ್' ಎಂಬ ಸದ್ದು ಕಿವಿಗೆ ಬಿಡಿದಾಗ ಹೇಮಂತ ಮುಗುಳು ನಗೆ ನಕ್ಕು ತನ್ನಷ್ಟಕ್ಕೆ ತಾನೇ ಗೊಣಗಿಕೊಂಡ "ಹಾವಿನ ಅವತಾರ ಇನ್ನು ಮುಗಿಯಿತು."

ಕೆಳಗೆ ಬಾಗಿದ ಮೇಜರ್ ಸರ್ಪವನ್ನು ಬ್ಲ್ಯಾಂಕೆಟಿನಲ್ಲಿ ಸುತ್ತಿ ಅದನ್ನು

ಮೇಲೆತ್ತಿ ಕೆಳಗೆ ಮೋಜಾಯಿಕ್ ಕಲ್ಲಿಗೆ ನಾಲ್ಕಾರು ಬಾರಿ ಬಡಿದ. ಆಗಸ ಒಟ್ಟೆ ಒಡಿಯುಂವಂತೆ.

ಎಲ್ಲರೂ ಬೊಂಬೆಯಂತೆ ಅವನನ್ನೇ ನಿರೀಕ್ಷಿಸುತ್ತಿದ್ದರು. ಅವನನ್ನು ತಡೆಯುವ ಶಕ್ತಿ ಯಾರಲ್ಲಿಯೂ ಇರಲಿಲ್ಲ.

ಬ್ಲ್ಯಾಂಕೆಟ್ ಕೆಳಗೆ ಚೆಲ್ಲಿದ ಹೇಮಂತ ನಿಧಾನವಾಗಿ ಅದನ್ನು ಬಿಡಿಸಿದ. ಮುದ್ದೆ ಮುದ್ದೆಯಾದ ಕರಿನಾಗರ ತಲೆಯೊಡೆದುಕೊಂಡು ಅಸುನೀಗಿತ್ತು. ಕೆಳಗೆ ಕುಳಿತ ಆತ ಅದರ ಒಂದೊಂದೇ ಅಂಗಾಂಗ ಪರೀಕ್ಷಿಸತೊಡಗಿದ.

ಇನ್ನು ಕರಿನಾಗರದಿಂದ ಅಪಾಯವಿಲ್ಲವೆಂದು ಮನದಟ್ಟಾದಾಗ ಒಬ್ಬೊಬ್ಬರಾಗಿ ಮುಂದೆ ಬಂದು ಅವನೊಂದಿಗೆ ತಲೆತೂರಿಸತೊಡಗಿದರು. ಅವರನ್ನುದ್ದೇಶಿಸಿ ಹೇಳಿದ ಮೇಜರ್ ಸುಷಮಾಳತ್ತ ನೋಡುತ್ತ, "ಸುಷಮಾ ಈ ಬಾರಿ ನಮ್ಮ ವೈರಿ ಒಬ್ಬ ವಿಜ್ಞಾನಿ ಎಂದು ನಾನು ಹೇಳಿದ್ದು ನಿನಗೆ ನೆನಪಿರ ಬಹುದು. ಅದಕ್ಕೆ ಇದು ಎರಡನೇ ಪುಷ್ಟಿ. ಇದು ನಿಜವಾದ ಹಾವೇ, ಆದರೆ ನಿರ್ಜೀವವಾದದ್ದು. ಈ ಕರಿನಾಗರ ಸತ್ತ ಮೇಲೆ ಅದರ ನಿಜವಾದ ತಲೆ ಕೊಯ್ದು ಮಿದುಳನ್ನು ಹೊರತೆಗೆಯಲಾಗಿದೆ. ಅದರ ಜಾಗೆಯಲ್ಲಿ ಯಾಂತ್ರಿಕ ಮೆದುಳು ಜೋಡಿಸಲಾಗಿದೆ. ಯಾವ ರೀತಿ ಯಂತ್ರಮಾನವನಿಗೆ ಜೋಡಿಸು ತ್ತಾರೋ ಅದೇ ರೀತಿ. ಯಾವ ರೀತಿ ಯಂತ್ರಮಾನವ ತನ್ನ ಯಜಮಾನನ ಆಜ್ಞೆ ಪಾಲಿಸುತ್ತಾನೋ ಅದೇ ರೀತಿ ಈ ಕರಿನಾಗರ ಸಹಿತ ಆಜ್ಞೆ ಪಾಲಿಸು ತ್ತದೆ. ಇದರ ಚಟುವಟಿಕೆಗಳನ್ನು ಇದರ ಯಜಮಾನ ತನ್ನ ಪ್ರಯೋಗ ಶಾಲೆಯ ಕೊಠಡಿಯಲ್ಲಿ ಕುಳಿತು ನಿರೀಕ್ಷಿಸುತ್ತಾನೆ. ಅದರೊಂದಿಗೆ ನಿಯಂತ್ರಿ ಸುತ್ತಾನೆ. ಇದರ ಕಣ್ಣುಗಳಲ್ಲಿ ಜೋಡಿಸಿದ ಸೂಕ್ಷ್ಮ ಕ್ಯಾಮರಾಗಳ ಮುಖಾಂತರ ಆತ ಈ ಕೋಣೆಯ ದೃಶ್ಯವನ್ನು ಸಂಪೂರ್ಣವಾಗಿ ನೋಡಬಲ್ಲ. ನನಗೆನಿಸುವ ಮಟ್ಟಿಗೆ ನಾಲ್ಕೂ ಗೋಡೆಗೆ ಜೋಡಿಸಿದ ಈ ಸಾರಂಗ, ಹುಲಿ ಮುಖ ಮುಂತಾದವುಗಳ ಕಣ್ಣುಗಳಲ್ಲೂ ಕ್ಯಾಮರಾ ಜೋಡಿಸಲಾಗಿದೆ. ಅದಕ್ಕಾಗಿಯೇ ನಾನು ಹೇಳಿದ್ದು. ಈ ರೂಮಿನಲ್ಲಿ ಬೆತ್ತಲೆ ನಿಂತಿದ್ದೇವೆ ಅಂತ.

"ಹೌದು. ನಮ್ಮನ್ನೆಲ್ಲ ಯಾವದೋ ಅದೃಷ ಕಣ್ಣುಗಳು ನೋಡುತ್ತಿವೆ ಎಂದು ನನಗೆ ಅನ್ನಿಸತೊಡಗಿತ್ತು." ಅಶೋಕ ತಟಕ್‌ನೆ ನುಡಿದ.

"ನನಗೂ ಅಷ್ಟೇ." ಮೊಟಕಾಗಿ ಉತ್ತರಿಸಿದಳು ಸುಷಮಾ.

ಅದನ್ನೆಲ್ಲ ನೋಡುತ್ತ...ಕೇಳುತ್ತ ನಿಂತಿದ್ದ ಎಸ್.ಪಿ. ಹಾಗೂ ಇತರರು ಮಾತನಾಡಲು ಸಹ ಧೈರ್ಯವಿಲ್ಲದೇ ನಿಂತಿದ್ದರು. ಅದೇ ಕ್ಷಣ....

'ಚಿಕ್...ಚಿಕ್...ಚಟಾರ್...' ಎಂದು ಒಂದೇ ಸವನೆ ಒಂದೇ ಬಾರಿ

ಹಿಡಿದ ಆಯಾ ಪ್ರಾಣಿಗಳ ಕಣ್ಣುಗಳು ಬೆಂಕಿ ಕಿಡಿ ಕಾರತೊಡಗಿದವು. ಬ್ಲಾಂಕೆಟಿನಲ್ಲಿದ್ದ ಕರಿನಾಗರ ಸಹ. ಎರಡೇ ನಿಮಿಷಗಳಲ್ಲಿ ಅವೆಲ್ಲ ಸುಟ್ಟು ಭಸ್ಮವಾಗಿದ್ದವು.

"ರಾಮನಾಥ ಅವರೆ, ಈಗಲಾದರೂ ತಮಗೆ ಇಲ್ಲಿಯವರೆಗೂ ನಾನಾಡಿದ ಮಾತುಗಳ ಅರ್ಥವಾಯಿತೆ?"

ರಾಮನಾಥ ತಲೆಯಾಡಿಸಿದರು.

"ಈಗ ದಯವಿಟ್ಟು ತಾವು ಇನ್ನೊಂದು ಕೆಲಸ ಮಾಡಿ. ಈ ಹೋಟೆಲ್‌ನಲ್ಲಿದ್ದ ಎಲ್ಲ ಇಂಥ ವಿಚಿತ್ರ ಭಯಾನಕ ವಸ್ತುಗಳನ್ನು, ಫ್ಲಾವರ್‌ಪಾಟ್‌ಗಳನ್ನು ಚೀನೀ-ಜಪಾನೀ 'ಝೂಮರ್' ಲ್ಯಾಂಪ್‌ಗಳನ್ನು ಪರೀಕ್ಷಿಸಿ. ತಮಗೆ ಪ್ರತಿಯೊಂದರಲ್ಲೂ ಗುಪ್ತವಾಗಿ ಅಡಗಿಸಲ್ಪಟ್ಟ ಕ್ಯಾಮರಾಗಳು ದೊರೆಯುತ್ತವೆ. ಈ ಹೋಟೆಲ್‌ನ್ನೇ ತನ್ನ ಒಂದು ಕೇಂದ್ರವನ್ನಾಗಿ ಮಾಡಿಕೊಂಡಿದ್ದ ನಮ್ಮ ವೈರಿ ಇದರಿಂದಾಗಿ ಪರಾಜಿತನಾಗುತ್ತಾನೆ."

ಶೇಖರ್‌ನ ಕಡೆ ಹೊರಳಿ ನುಡಿದ ಹೇಮಂತ, "ಬನ್ನಿ ಶೇಖರ್. ನಾವಿನ್ನು ಆಸ್ಪತ್ರೆಗೆ ಹೋಗಿ ಶವಾಗಾರದಲ್ಲಿದ್ದ ಕೆಲಿಯಾನ್‌ನ ಶವ ಪರೀಕ್ಷಿಸಬೇಕಾಗಿದೆ."

ಹೇಮಂತ ಬಾಗಿಲೆಡೆ ಭರಭರ ಹೆಜ್ಜೆ ಹಾಕಿದಾಗ ಉಳಿದವರೂ ಯಂತ್ರಚಾಲಿತರಂತೆ ಅವನ ಹಿಂದೆ ನಡೆದರು.

## ೫

ಶೇಖರ್‌ನ ಜೊತೆ ಮೇಜರ್ ಸರಕಾರಿ ಆಸ್ಪತ್ರೆಗೆ ಬಂದ. ಶವ ಪರೀಕ್ಷೆಯಾಗಿ ಶವ ಶವಾಗಾರಕ್ಕೆ ಕಳಿಸಲಾಗಿದೆ ಎಂದು ತಿಳಿದುಬಂದಿತು. ಅವರು ನೇರವಾಗಿ ಡಾಕ್ಟರ್ ದಿವಾಕರರ ರೂಮಿಗೆ ಬಂದರು. ಶೇಖರ್ ಅವರಿಗೆ ಹೇಮಂತನ ಪರಿಚಯ ಮಾಡಿಕೊಟ್ಟಾಗ ದಿವಾಕರರಿಗೆ ಮೊದಲು ನಂಬಿಕೆಯಾಗಲೇ ಇಲ್ಲ. ಹೇಮಂತನ ಹೆಸರು, ಖ್ಯಾತಿ ಕೇಳಿ ಅರಿತಿದ್ದ ಅವರಿಗೆ ಅವನನ್ನು ಪ್ರತ್ಯಕ್ಷ ಸಂಧಿಸುತ್ತಲೂ ಆದ ಆನಂದ ಹೇಳಲಾಗದಷ್ಟು. ಪ್ರೀತಿಯಿಂದ ಸ್ವಾಗತಿಸಿದರು. "ಬನ್ನಿ ಮೇಜರ್. ನಿಮ್ಮ ಬಗ್ಗೆ ತುಂಬಾ ಕೇಳಿದ್ದೆ. ಪ್ರತ್ಯಕ್ಷ ನಿಮ್ಮನ್ನು ಸಂಧಿಸುವ ಅವಕಾಶ ಇಂದು ದೊರೆಯಿತು."

ಹೇಮಂತ ಅವರ ಕೈಕುಲುಕಿದ. ಅವರು ತೋರಿಸಿದ ಕುರ್ಚಿಯಲ್ಲಿ ಆಸೀನನಾದ. ಅಶೋಕ, ಸುಷಮಾರ ಪರಿಚಯ ಹೇಮಂತ ಮಾಡಿಕೊಟ್ಟ ಮೇಲಂತೂ ದಿವಾಕರರಿಗಾದ ಸಂತಸ ಎಣೆ ಇಲ್ಲದಷ್ಟು.

"ನಿಜವಾಗಿಯೂ ನನಗಿಂದು ಸುದಿನ. ನನ್ನ ಜೀವನದ ಮರೆಯಲಾರದ ಸುಂದರ ಕ್ಷಣಗಳಿದ್ದ ದಿನ. ನಿಜವಾಗಿಯೂ ನಾನಿಂದು ಧನ್ಯತೆ ಅನುಭವಿಸು ತ್ತಿದ್ದೇನೆ."

ಬೆಲ್ ಮಾಡಿ ಸಿಪಾಯಿಯನ್ನು ಕರೆದ ಅವರು ಕಾಫಿಗೆ ಆರ್ಡರ್ ಮಾಡಿ ದರು. ಕಾಫಿ ಬರುವವರೆಗೂ ಅವರಲ್ಲಿ ವಾರ್ತಾಲಾಪ ಆರಂಭವಾಯಿತು. ಹೇಮಂತನೇ ಮಾತು ಮೊದಲು ಪ್ರಾರಂಭಿಸಿದ.

"ಡಾಕ್ಟರ್ ದಿವಾಕರ್, ನೀವು ಈಗಾಗಲೇ ಕೆಲಿಯಾನ್‌ನ ಶವ ಪರೀಕ್ಷೆ ಮಾಡಿದ್ದೀರಿ. ಏನಾದರೂ ಮಹತ್ವದ ಅಂಶಗಳು ದೊರೆತವೆ?"

"ಮೇಜರ್, ನಾನು ಶವ ಪರೀಕ್ಷೆಯನ್ನೇನೋ ಮಾಡಿದೆ. ಮಹತ್ವದ ಅಂಶಗಳು ದೊರೆಯುವದು ದೂರ. ನಾನು ಸಮಸ್ಯೆಯ ಸುಳಿಯಲ್ಲೇ ಸಿಲುಕಿ ಹೋದೆ."

"ಏಕೆ? ಅಂತಹದೇನಾಯಿತು?" ಅಚ್ಚರಿಯಿಂದ ಕೇಳಿದ ಹೇಮಂತ.

"ನನಗೆ ಕೆಲಿಯಾನ್‌ನ ಸಾವಿಗೆ ಕಾರಣವೇ ತಿಳಿಯಲಿಲ್ಲ?"

"ಏನೆಂದಿರಿ?" ಮಧ್ಯೆ ಬಾಯಿ ಹಾಕಿದ ಶೇಖರ್ "ಅವನಿಗೆ ವಿಷಪ್ರಾಶನ ದಿಂದ ಸಾವು ಸಂಭವಿಸಲಿಲ್ಲವೆ?"

"ಖಂಡಿತ. ಖಂಡಿತವಾಗಿ ವಿಷದಿಂದಲೇ ಸತ್ತಿದ್ದಾನೆ. ಅದೂ ಸಹ ಭಯಾನಕವಾದ ಸರ್ಪದ ವಿಷದಿಂದ. ಸಾವು ಬೆಳಗು ಮುಂಜಾನೆ ಮೂರೂವರೆ ಯಿಂದ ನಾಲ್ಕರ ಮಧ್ಯೆ ಸಂಭವಿಸಿದೆ."

"ಮತ್ತೆ? ಮತ್ತೆ ಇದರಲ್ಲೇನು ಸಮಸ್ಯೆ ಇದೆ." ಹೇಮಂತನ ಪ್ರಶ್ನೆ ಬಂದಿತು.

"ವಿಷಪ್ರಾಶನ ಹೇಗಾಯಿತು? ಎಂಬುದೇ ತಿಳಿಯದಂತಾಗಿದೆ. ಸರ್ಪ ಕಚ್ಚಿದರೆ ದೇಹದ ಮೇಲೆ ಎಲ್ಲಿಯಾದರೂ ಸರ್ಪ ಕಚ್ಚಿದ ಗುರುತು ಇರಬೇಕಲ್ಲವೆ? ನಾನು ಶರೀರದ ಒಂದೊಂದು ಅಂಗುಲ ಪರೀಕ್ಷಿಸಿದೆ. ಅವನ ಗುದದ್ವಾರ ಸಹ ಬಿಟ್ಟಿಲ್ಲ. ಆದರೂ ನನಗೆ ಎಲ್ಲಿಯೂ ಸಾವಿಗೆ ಕಾರಣವಾದ ಸರ್ಪದ ಹಲ್ಲಿನ ಗುರುತು ಸಿಗಲಿಲ್ಲ. ಯಾರಾದರೂ ಅವನಿಗೆ ಬಲವಂತವಾಗಿ ಕುಡಿಸಿದ್ದಾರೆ ಎಂಬುದನ್ನು ನಾವು ಯೋಚಿಸುವಂತಿಲ್ಲ. ಏಕೆಂದರೆ ಆತ ಸರ್ಪ ದೃಷ್ಟಿಯಿಂದಲೂ ಸುರಕ್ಷಿತವಾದ ಅಷ್ಟೇ ಭದ್ರವಾದ ಕೊಠಡಿಯಲ್ಲಿದ್ದ. ಇದೇ

ಸಮಸ್ಯೆ ಕಾಡುತ್ತಿದೆ ನನಗೆ."

"ದಿವಾಕರ್, ಇದು ಸಮಸ್ಯೆಯಲ್ಲ. ನಮಗೆ ಬೇಕಾದ ಮಹತ್ವದ ಸುಳಿವು ಇದೇ. ಇದನ್ನು ಹಿಡಿದುಕೊಂಡು ಹೋದಾಗಲೇ ನಾವು ಶತ್ರುವಿನ ಹೆಜ್ಜೆ ಗುರುತು ಕಂಡುಹಿಡಿಯುವುದು. ತಿಳಿಯಿತಾ? ನಡೆಯಿರಿ. ನನ್ನನ್ನೂ ಕೆಲಿಯಾನ್‌ನ ಶವದ ಬಳಿ ಕರೆದುಕೊಂಡು ನಡೆಯಿರಿ. ನಾನೊಂದು ಬಾರಿ ಪರೀಕ್ಷಿಸುತ್ತೇನೆ."

ಹೇಮಂತನ ಸ್ವಭಾವವೇ ದಿವಾಕರನಿಗೆ ಒಗಟಾಯಿತು. ಯಾವುದನ್ನು ತಿಳಿಯಲು ಆತ ಆಕಾಶ–ಪಾತಾಳ ಒಂದು ಮಾಡಿದನೋ ಅದೇ ಮಹತ್ವದ ಅಂಶ ಅಂದರೆ ಏನು ಹೇಳುವದು? ಇದೊಳ್ಳೆ ಮೂರ್ಖನ ಸಹವಾಸವಾಯಿತಲ್ಲ ಎಂದುಕೊಳ್ಳುತ್ತ ಮೇಲೆದ್ದ. ಅವರೊಂದಿಗೆ ಉಳಿದವರೂ....

ನಾಲ್ಕಾರು ಹಾಲ್ ದಾಟಿ ಒಂದೆರಡು ಪ್ಯಾಸೇಜನ್ನು ಹಾಯ್ದು ಅವರು ಕೊನೆಗೆ ಶವಾಗಾರಕ್ಕೆ ಬಂದರು. ಸಾಲಾಗಿ ಮಲಗಿಸಿದ ಹತ್ತಾರು ಶವಗಳು, ಅವುಗಳ ಕೊರಳಲ್ಲಿ ನಂಬರಿನ ಚೀಟಿಗಳು. "ನೂರಾಎಂಟನೇ ನಂಬರಿನದೇ ಅವನ ಶವ" ಎಂದರು ದಿವಾಕರ್. ಬಿಳಿ ಅರಿವೆಯ ಚೀಲದಲ್ಲಿ ತುರುಕಿ ತಲೆಯ ಬಳಿ ಬಿಗಿದ ಶವಗಳು. ಮೇಜರ್ ಒಂದೊಂದೇ ಶವದ ಕೊರಳಲ್ಲಿಯ ಚೀಟಿ ನೋಡುತ್ತ ಒಂದುನೂರಾ ಎಂಟಕ್ಕೆ ನಿಂತುಬಿಟ್ಟ.

ಅದೇ ಕೆಲಿಯಾನ್‌ನ ಶವ. ಅದರ ಗಂಟು ಬಿಚ್ಚುತ್ತಿದ್ದಂತೆ ಶೇಖರ್ ಒಂದು ಹೆಜ್ಜೆ ಹಿಂದೆ ಸರಿದದ್ದು ಕಂಡು ಅಶೋಕ ಹಾಗೂ ಸುಷಮಾ ಗಮನಿಸಿ ಮನದಲ್ಲೇ ನಕ್ಕರು. ಭಯಾನಕ ಕರಿನಾಗರದ ನೆನಪು ಬಂದಿರಬೇಕು ಅವನಿಗೆ; ಎಂದುಕೊಂಡರು.

ಶವದ ಮೇಲಿನ ಬಿಳಿ ಅರಿವೆಯ ಚೀಲ ತೆಗೆದು ಬದಿಗಿಟ್ಟ ಹೇಮಂತ. ಈಗ ಅವರೆಲ್ಲರ ಎದುರು ಕೆಲಿಯಾನ್‌ನ ಬಲಿಷ್ಠವಾದ ನಗ್ನ ಶರೀರ ಬಿದ್ದುಕೊಂಡಿತ್ತು ಅನಾಥವಾಗಿ. ಸುಷಮಾಳಿಗೆ ತುಸು ಮುಜುಗರವೆನಿಸಿದರೂ ಅದನ್ನು ಬದಿಗಿಟ್ಟು ಎಲ್ಲರೊಂದಿಗೆ ತಾನೂ ಶವದ ಮೇಲೆ ದೃಷ್ಟಿ ಚೆಲ್ಲಿದಳು

ಪೂರ್ತಿಯಾಗಿ ನೀಲವರ್ಣಕ್ಕೆ ತಿರುಗಿದ ಶರೀರ. ಮುಖದ ಮೇಲೆ ವೇದನೆಯ ಲಕ್ಷಣಗಳು. ಸತ್ತು ಇಪ್ಪತ್ತನಾಲ್ಕು ಗಂಟೆಗಳು ಕಳೆದಿದ್ದರಿಂದಾಗಿ ಕಟ್ಟಿಗೆಯಂತೆ ಸೆಟೆದ ದೇಹದ ತುಂಬೆಲ್ಲ ಕಣ್ಣಾಡಿಸಿದ ಹೇಮಂತ. ಕೂದಲಲ್ಲಿ ಬೆರಳಾಡಿಸಿದ. ಕಿವಿ, ಕಣ್ಣುರೆಪ್ಪೆ, ಅಂಗೈ, ಅಂಗಾಲು, ಬೆನ್ನು, ಎದೆ, ಹಣೆ ಎಲ್ಲಾ ಪರೀಕ್ಷಿಸಿಯಾಯಿತು. ಎಲ್ಲಿಯೂ ಹಾವಿನ ಕಡಿತದ ಗುರುತಿಲ್ಲ. ನಿರಾಶನಾಗಿ ಎದ್ದುನಿಂತ ಮೇಜರ್. ದಿವಾಕರ್ ಹೇಳಿದಂತೆ ಅದೊಂದು ಸಮಸ್ಯೆ.

"ನಾನು ನಿಮಗೆ ಮೊದಲೇ ಹೇಳಿದ್ದೆ. ದೇಹದ ಪ್ರತಿಯೊಂದು ಅಂಗುಲ ಅಂಗುಲ ಪರೀಕ್ಷಿಸಿದೆ ಎಂದು. ಎಷ್ಟಾದರೂ ನೀವು ಪತ್ತೆದಾರರಾಗಬಹುದು. ಗೂಢಚಾರಿಗಳಾಗಬಹುದು. ಡಾಕ್ಟರರಾಗಲು ಸಾಧ್ಯವೆ?"

ಗೆಲುವಿನಿಂದ ನುಡಿದ ದಿವಾಕರನ ಮಾತು ಚಾಟೀ ಏಟಿನಂತೆ ಬಂದಿತು. ಮೈಯೆಲ್ಲಾ ಉರಿದರೂ ತಾಳಿಕೊಂಡರು ಸುಷಮಾ, ಅಶೋಕ. ಮೇಜರ್ ಮಾತ್ರ ನಗುತ್ತಲೇ ಶಾಂತವಾಗಿ ನುಡಿದ.

"ಹೌದು ಮಿಸ್ಟರ್ ದಿವಾಕರ್. ನಾನು ಡಾಕ್ಟರ್ ಆಗಲು ಸಾಧ್ಯವಿಲ್ಲ. ಅದರಂತೆ ನೀವು ಗೂಢಚಾರಿ, ಪತ್ತೇದಾರ, ಇನ್‌ಸ್ಪೆಕ್ಟರ್ ಆದೂ ಹೋಗಲಿ ಒಬ್ಬ ಕಾನ್‌ಸ್ಟೇಬಲ್ ಸಹ ಆಗಲಾರಿರಿ, ಅಲ್ವೇ? ನಿಮ್ಮ ಜ್ಞಾನ, ನಿಮ್ಮ ದೃಷ್ಟಿ ನಿಮಗೆ; ನಮ್ಮ ಜ್ಞಾನ, ನಮ್ಮ ದೃಷ್ಟಿ ನಮಗೆ, ಅಲ್ಲವೆ?"

ಅತೀ ತಣ್ಣಗೇ ಬಂದ ವಿದ್ಯುತ್ ಅಲೆಯ ಶಾಖದಂಥ ಮಾತಿಗೆ ತಣ್ಣಗಾದ ದಿವಾಕರ. ಅಶೋಕನಿಗೆ ಕೇಕೆ ಹೊಡೆಯಬೇಕೆನಿಸಿದರೆ ಸುಷಮಾಳಿಗೆ ಚಿಕ್ಕ ಹಸುಗೂಸಿನ ತರಹ ಚಪ್ಪಾಳೆ ತಟ್ಟಬೇಕು ಅನಿಸಿತು.

ಹೇಮಂತ ಸರಿಯಾದ ಮಾತಿನ ಪೆಟ್ಟು ಕೊಟ್ಟಿದ್ದ.

ಶೇಖರ್ ಯಾವ ಮಾತೂ ಆಡದೇ ತಟಸ್ಥನಾಗಿದ್ದ. ಆತ ಯಾರ ಸ್ನೇಹ ವನ್ನೂ ಕೆಡಿಸಿಕೊಳ್ಳುವಂತಿರಲಿಲ್ಲ.

"ಹೌದು, ನಿಮ್ಮ ಮಾತು ನೂರಕ್ಕೆ ನೂರು ನಿಜ ಹೇಮಂತ. ಆದರೂ ಅತೀ ಸೂಕ್ಷ್ಮ ದೃಷ್ಟಿಗಾರ ಎಂದು ಹೆಸರು ಪಡೆದ ನಿಮಗೆ ಸೋಲಾಯಿತಲ್ಲ?"

"ಸೋಲಾದದ್ದು ನಿಮಗೆ ದಿವಾಕರ, ನನಗಲ್ಲ."

"ಅಂದ್ರೆ, ಅಂದ್ರೆ ಏನಿದರ ಅರ್ಥ?"

"ಸಮಸ್ಯೆಯ ಸುಳಿಯಲ್ಲಿ ಸಿಲುಕಿಕೊಂಡವರು ನೀವು, ನಾನಲ್ಲ. ನಾನಾ ಗಲೇ ಆ ಸಮಸ್ಯೆಗೆ ಪರಿಹಾರ ಕಂಡು ಹಿಡಿದಿರುವೆ."

ಸುಷಮಾಳ ಸುಂದರ ಮುಖ ಹೂವಿನಂತೆ ಅರಳಿತು.

ದಿವಾಕರ ಪೆಚ್ಚಾದ.

"ಸಾವಿಗೆ ಕಾರಣ ತಿಳಿಯಿತೆ?"

"ತಿಳಿಯಿತು"

"ಹೇಳಿ ಹಾಗಾದರೆ, ಸಾವು ಹೇಗೆ ಸಂಭವಿಸಿದೆ."

"ಸರ್ಪದ ವಿಷದಿಂದ"

ಅಟ್ಟಹಾಸ ಮಾಡಿ ನಕ್ಕ ದಿವಾಕರ.

"ಅಷ್ಟು ನನಗೂ ತಿಳಿದಿದೆ. ನೀವು ಏನು ತಿಳಿದಂತಾಯಿತು. ಸರ್ಪದ

ವಿಷ ದೇಹದಲ್ಲಿ ಹೇಗೆ ಸೇರಿತು ಎಂಬುದನ್ನು ಹೇಳಿ."

"ಸರ್ಪ ಕಚ್ಚಿ ವಿಷ ದೇಹದಲ್ಲಿ ಪ್ರವೇಶಿಸಿದೆ."

"ಸರ್ಪ ಕಚ್ಚಿದ ಹಲ್ಲಿನ ಗುರುತು ನನಗೆಲ್ಲಿಯೂ ಕಂಡು ಬಂದಿಲ್ಲವಲ್ಲ?"

"ನಿಮಗೆ ಕಂಡಿರಲಿಕ್ಕಿಲ್ಲ. ನನಗೆ ಕಂಡಿದೆ."

"ಇಂಪಾಸಿಬಲ್" ಉದ್ಗರಿಸಿದ ದಿವಾಕರ ಕೆಳಗೆ ಕುಳಿತು ಮತ್ತೊಂದು ಬಾರಿ ಕೆಲಿಯಾನ್‌ನ ಶವ ಪರೀಕ್ಷಿಸಿ ಮೇಲೆದ್ದ.

"ಸಾರಿ ಮೇಜರ್, ನೀವು ನಿಮ್ಮ ಮಾತು ಸಿದ್ಧಮಾಡಿ ಕೊಡಿ. ನಾನೆಲ್ಲಾ ದೇಹವನ್ನು ಪರೀಕ್ಷಿಸಿರುವೆ. ಎಲ್ಲೂ ಹಾವಿನ ಹಲ್ಲಿನ ಗುರುತಿಲ್ಲ."

"ನಾನು ದೇಹದ ಮೇಲಿನ ಗುರುತು ಹೇಳುತ್ತಿಲ್ಲ. ದೇಹದ ಒಳಗಿನ ಗುರುತಿನ ಬಗ್ಗೆ ಹೇಳುತ್ತಿರುವೆ." ಒಂದು ಕ್ಷಣ ಹೇಮಂತನೆಡೆ ವಿಚಿತ್ರವಾಗಿ ನೋಡಿದ ದಿವಾಕರ.

"ನಾನು ಮೊದಲೇ ಹೇಳಿರುವೆ" ನಾನು ಗುದದ್ವಾರ ಸಹ ಬಿಟ್ಟಿಲ್ಲ ಎಂದು. ಅವನ ಕಣ್ಣು, ಎದೆ, ಹೊಟ್ಟೆ, ಕಿವಿ ಎಲ್ಲಾ ನೀವು ಪರೀಕ್ಷಿಸಿದ್ದೀರಿ. ಎಲ್ಲೂ ಗುರುತು ಕಂಡು ಬಂದಿಲ್ಲ."

"ನಿಮಗೆ ಕಂಡಿಲ್ಲ ಮಿಸ್ಟರ್ ದಿವಾಕರ, ನನಗೆ ಕಂಡಿದೆ."

ಎವೆಯಿಕ್ಕದೇ ಹೇಮಂತನೆಡೆ ನೋಡಿದ ದಿವಾಕರ.

"ಮಿಸ್ಟರ್ ದಿವಾಕರ, ಕೆಲಿಯಾನ್‌ನ ಬಾಯಿ ತೆರೆಯಿರಿ. ಅವನ ನಾಲಿಗೆ ಮೇಲೆ ಹಲ್ಲಿನ ಗುರುತು ಮೂಡಿದ್ದು ಸ್ಪಷ್ಟವಾಗಿ ಕಾಣುತ್ತದೆ."

ಮಿಂಚಿನಂತೆ ಕೆಳಗೆ ಬಾಗಿದ ದಿವಾಕರ್ ಬಿಗಿದ ಬಾಯಿಯನ್ನು ಎಳೆದು ಅಗಲಿಸಿದ. ಕಂಡಿತು ಅಲ್ಲೇ ಎರಡು ಹಲ್ಲುಗಳ ಗುರುತು. ನಸುಗೆಂಪಗಿನ ಗುರುತು. ಅವನ ಬಾಯಿಯಿಂದ ಮಾತೇ ಹೊರಡಲಿಲ್ಲ. ಮೂಕನಂತಾದ ಆತ ಎರಡು ಕ್ಷಣ ಬಿಟ್ಟು ಸುಧಾರಿಸಿಕೊಂಡು ಹೇಳಿದ.

"ಕ್ಷಮಿಸಿ ಹೇಮಂತ. ಈ ಮೊದಲು ಆಡಿದ ನನ್ನೆಲ್ಲ ಮಾತುಗಳನ್ನೂ ನಾ ವಾಪಸ್ ತೆಗೆದುಕೊಳ್ಳುತ್ತೇನೆ. ನೀವು ನಿಜವಾಗಿಯೂ ಪ್ರತಿಭಾವಂತರು, ಸೂಕ್ಷ್ಮದೃಷ್ಟಿಗಾರರು, ಜೀನಿಯಸ್. ನಿಮ್ಮ ಸ್ನೇಹವಾದುದಕ್ಕೆ ನನ್ನನ್ನು ನಾನು ಪರಮ ಭಾಗ್ಯಶಾಲಿ ಎಂದು ಕರೆದುಕೊಳ್ಳುವೆ."

ಹೇಮಂತನ ಕೈಕುಲುಕಿ ಬಲವಾಗಿ ಅಪ್ಪಿಕೊಂಡ ದಿವಾಕರ.

ಸುಷಮಾಳ ತುಂಬಿದೆದೆ ಹೆಮ್ಮೆಯಿಂದ ಬೀಗಿತು.

"ಇನ್ನೂ ಒಂದು ವಿಷಯ ಡಾಕ್ಟರ್ ದಿವಾಕರ್. ಆದರೆ ನೇರವಾಗಿ ಇದು ನಿಮಗೆ ಸಂಬಂಧಿಸಿಲ್ಲ. ಶೇಖರಗೆ ಸಂಬಂಧಿಸಿದ್ದು. ಆದರೂ ಹೇಳುತ್ತೇನೆ.

ಈಗ ನಾವು ನೋಡುತ್ತಿದ್ದುದು ಕೆಲಿಯಾನ್‌ನ ನಿಜವಾದ, ಸೃಷ್ಟಿಯಿಂದ ಪ್ರಾಪ್ತವಾದ ಜನ್ಮರೂಪದಲ್ಲಿ. ಇದು ಕೃತ್ರಿಮವಾದ ಮೇಕಪ್ ಮಾಡಿದ ಶರೀರ. ಸರಿಯಾಗಿ ತೈಲದಿಂದ ತೊಳೆದರೆ ನಿಜರೂಪ ಕಣ್ಣಿಗೆ ಬರುತ್ತದೆ."

ಈ ಬಾರಿ ಬೆಚ್ಚಿಬಿದ್ದ ಶೇಖರ್. ಶವದ ಕಡೆ ನಂಬಲಾಗದ ದೃಷ್ಟಿ ಬೀರಿ ನುಡಿದ.

"ಥ್ಯಾಂಕ್ಸ್ ಮೇಜರ್. ನನಗಿದರ ಬಗ್ಗೆ ಕಲ್ಪನೆ ಇರಲಿಲ್ಲ; ನಾನೀಗಲೇ ಮುಂದಿನ ವ್ಯವಸ್ಥೆ ಮಾಡುತ್ತೇನೆ. ದಯವಿಟ್ಟು ತಾವು ಒಂದು ಕಾಲು ಗಂಟೆ ದಿವಾಕರ್ ಅವರ ಆಫೀಸಿನಲ್ಲಿ ನನ್ನ ಕಾಯುತ್ತೀರಾ ?"

ಅತ್ಯಂತ ವಿನಯದಿಂದ ಆತ ವಿನಂತಿಸಿಕೊಂಡಾಗ ಹೇಮಂತನಿಗೆ ಅವನ ಮೇಲೆ ಪ್ರೀತಿ ಉಕ್ಕಿ ಬಂದಿತು. ಅವನ ಮಾತು ತಿರಸ್ಕರಿಸಲಾಗಲಿಲ್ಲ. "ಓಕೆ ಶೇಖರ್. ನಿಮ್ಮ ಮಾತು ಕೇಳಿದರೆ ನಮಗೇನೂ ಹಾನಿಯಾಗುವದಿಲ್ಲ. ದಿವಾಕರ್ ಅವರಿಂದ ಮತ್ತೊಂದು ಕಪ್ ಕಾಫಿ ವಸೂಲು ಮಾಡಬಹುದು." ಗಟ್ಟಿಯಾಗಿ ಹೇಮಂತ ನಕ್ಕಾಗ ಅದರಲ್ಲಿ ಉಳಿದವರೂ ಭಾಗಿಯಾದರು.

ಈ ಬಾರಿ ದಿವಾಕರ್ ಕೇವಲ ಕಾಫಿ ತರಿಸಲಿಲ್ಲ. ಅದರೊಂದಿಗೆ ಸ್ವಲ್ಪ ತಿಂಡಿ ತರಿಸಿದ್ದರು. ಎಗ್ ಸ್ಯಾಂಡ್‌ವಿಚ್, ಕೇಕ್ ತಿಂದು ಕಾಫಿ ಕುಡಿಯುತ್ತಿದ್ದಂತೆ, ಶೇಖರ್ ಅವರೊಂದಿಗೆ ಕೂಡಿಕೊಂಡ. ತಿಂಡಿಯ ಪ್ಲೇಟು ಅವನೆಡೆ ಸರಿಸಿದ ಹೇಮಂತ ಅವನ ಮುಖವನ್ನೇ ದಿಟ್ಟಿಸಿ ನೋಡಿದರು. ಅದರರ್ಥ ತಿಳಿಯಲಾರದಷ್ಟು ಮೂಢನಲ್ಲ ಶೇಖರ್. ಉತ್ತರಿಸಿದ...

"ನಿಮ್ಮ ಮಾತು ನಿಜವಾಯ್ತು. ಕೆಮಿಕಲ್ ಉಪಯೋಗಿಸಿದ ನಂತರ ಮುಖ ಹಾಗೂ ದೇಹದ ಬಣ್ಣ ಬದಲಾಯ್ತು. ಈಗ ಆತ ಕೆಲಿಯಾನ್ ಥರ ಕಾಣುತ್ತಿಲ್ಲ."

"ಗುಡ್. ಇದರಿಂದಾಗಿ ನೀವು ಮತ್ತು ನಿಮ್ಮ ಬಾಸ್ ಒಂದು ದೊಡ್ಡ ಸಂಕಟದಿಂದ ಪಾರಾಗಬಲ್ಲಿರಿ."

"ಅದ್ಹೇಗೆ?" ಸ್ಯಾಂಡ್‌ವಿಚ್ ಮೆಲ್ಲುತ್ತ ಕೇಳಿದ ಶೇಖರ್.

"ಈಗಾಗಲೇ ಚೀನೀ ದೂತಾವಾಸದಿಂದ ಕೆಲಿಯಾನ್ ಸಾವಿನ ಬಗ್ಗೆ ವಿಚಾರಣೆ ಆರಂಭವಾಗಿದೆ. ನೀವು ಅವನ ಬಗ್ಗೆ ವಿವರವಾದ ಮಾಹಿತಿ ಕೇಳಿ ಫೋಟೋ ತರಿಸಿಕೊಳ್ಳಿ. ಪಾಸ್‌ಪೋರ್ಟಿನಲ್ಲಿ ಈ ಮೊದಲಿದ್ದ ಫೋಟೋ, ಹೆಸರು ಬಂದರೆ ಆ ವ್ಯಕ್ತಿ ಭಾರತಕ್ಕೆ ಬಂದೇ ಇಲ್ಲ ಎಂದು ತಿಳಿಸಿ. ನಕಲಿ ಹೆಸರಿನಲ್ಲಿ ಬಂದ ಕೆಲಿಯಾನ್‌ನ ಫೋಟೋ ಕಳಿಸಿದರೆ ಆತನ ಕೊಲೆಯೇ ಆಗಿಲ್ಲ; ಕೊಲೆಯಾದ ವ್ಯಕ್ತಿ ಈತ ಎಂದು ಹೇಳಿ ಇದೀಗ ಬಯಲಿಗೆ ಬಂದ

ರೂಪ ಅವರ ಮುಂದಿಡಿ, ಆಯಿತಲ್ಲ?"

"ವಂಡರ್‌ಫುಲ್. ಮೇಜರ್ ನಿಮ್ಮದು ಬ್ರಿಲಿಯಂಟ್ ಮೈಂಡ್." ದಿವಾಕರ್ ಮುಕ್ತ ಹೃದಯದಿಂದ ಪ್ರಶಂಶಿಸಿದರು.

ಹೇಮಂತ ಮೇಲೆದ್ದಾಗ ಶೇಖರ ಕಾಫಿ ಕುಡಿದು ಮುಗಿಸಿದ್ದ.

"ಶೇಖರ. ನಿಮ್ಮ ಜೀಪಿನಲ್ಲಿ ನಮ್ಮನ್ನು ಕಳಿಸಿಕೊಡಿ. ನೀವು ಇಲ್ಲೇ ಇದ್ದು ಅವಶ್ಯಕ ಕೆಲಸ ಮುಗಿಸಿ. ಶವದ ಫೋಟೋ ಅಂದರೆ ಹೊಸ ರೂಪದ ಶವದ ಫೋಟೋ ತೆಗೆಸಿ ಅದನ್ನ ಪ್ರಿಂಟ್ ಹಾಕಿಸಿ ತೆಗೆದುಕೊಂಡು ಬನ್ನಿ."

ಶೇಖರ "ಆಗಲಿ" ಎಂದು ತಲೆಯಾಡಿಸಿದ.

ದಿವಾಕರರ ಕೈಕುಲುಕಿ ವಂದನೆ ಸಲ್ಲಿಸಿದ ಮೇಜರನ ತಂಡ ಅವರಿಂದ ಬೀಳ್ಕೊಟ್ಟಿತು ಶೇಖರನ ಜೀಪಿನಲ್ಲಿ.

ಮನೆ ತಲುಪಿದಾಗ ಆಗಲೇ ಕತ್ತಲೆ ಆವರಿಸಿತ್ತು. ರಾತ್ರಿ ಪ್ರಯಾಣದ ಆಯಾಸದೊಂದಿಗೆ ಇಂದಿನ ಪೂರ್ಣ ದಿನ ಓಡಾಟದಲ್ಲಿ ಕಳೆದಿತ್ತು. ಹೀಗಾಗಿ ದೇಹಕ್ಕೆ ಸ್ವಲ್ಪ ದಣಿವು ಅನಿಸಿದಾಗ ಹೇಮಂತ ಡ್ರಿಂಕ್ಸ್ ತೆಗೆದುಕೊಳ್ಳಲು ನಿರ್ಧರಿಸಿ ಅಶೋಕನಿಗೆ ತಯಾರಿ ಮಾಡಲು ಸೂಚಿಸಿ ಬಾತ್‌ರೂಮ್ ಸೇರಿದ. ಹದಿನೈದು ಇಪ್ಪತ್ತು ನಿಮಿಷಗಳಲ್ಲಿ ಆತ ಸಿದ್ಧವಾಗಿ ಬಂದಾಗ ಟೀಪಾಯ್ ಮೇಲೆ ಸಿದ್ಧವಾಗಿತ್ತು.

ಕರಿದ ಹಪ್ಪಳ, ಚೂಡಾ, ಹುರಿದ ಗೋಡಂಬಿ ಅದರ ಜೊತೆ ಸ್ಕಾಚ್. ಸುಷಮಾ ತನಗಾಗಿ ಲೇಮನ್ ಜೂಸ್ ಆರಿಸಿಕೊಂಡಳು. ಅವರಿಬ್ಬರೂ ವಿಸ್ಕಿ ಗ್ಲಾಸಿಗೆ ಬಗ್ಗಿಸಿಕೊಂಡು, ಸ್ವಲ್ಪ ಆಯಿಸ್ ಬೆರಸಿ, ಹುರಿದ ಗೋಡಂಬಿ ಮೆಲ್ಲುತ್ತ ಗ್ಲಾಸಿಗೆ ತುಟಿ ಅಂಟಿಸಿದರು.

ಮಾತು ಬೇಡವಾಗಿತ್ತು; ದೇಹ ಭಾರವಾಗಿತ್ತು, ಮೌನ ಪ್ರಿಯವಾಗಿತ್ತು. ಹೀಗಾಗಿ ಮೂವರಲ್ಲಿ ಯಾರೂ ಮಾತನಾಡದಿದ್ದರೂ ಒಂದು ಮಾತು ಮಾತ್ರ ನಿಜವಾಗಿತ್ತು. ಮೌನವಾಗಿದ್ದರೂ ಮೂವರ ಮನಸ್ಸು ಈ ವಿಚಿತ್ರ ಘಟನೆಗಳ ಬಗ್ಗೆ ಯೋಚಿಸುತ್ತಿತ್ತು. ಹೀಗೇ ಅರ್ಧ ಗಂಟೆ ಕಳೆದಿರಬಹುದು. ಈ ಮೂವರ ವಿಚಿತ್ರರೀತಿಯ ಮೌನ ಟೆಲಿಫೋನಿಗೆ ಸರಿಬರಲಿಲ್ಲವೇನೋ, ಅದು ಜೋರಾಗಿ ಬಾರಿಸಿ ಮೂವರನ್ನು ಆಕರ್ಷಿಸಿತು. ಸಮೀಪ ಇದ್ದವ ಹೇಮಂತ. ಆತನೇ ರಿಸೀವರ್ ಎತ್ತಿದ. ಆಕಡೆಯಿಂದ ಎಸ್. ಪಿ. ರಾಮನಾಥ ಅವರು ಮಾತನಾಡುತ್ತಿದ್ದರು.

"ಮೇಜರ್, ನೀವು ಮಹಾಪ್ರಚಂಡರು. ನಿಮ್ಮ ಬುದ್ಧಿಯೂ ಹಾಗೆಯೇ, ಯಾವ ದಿಶೆಯಲ್ಲಿ ಹೇಗೆ ಯೋಚಿಸುತ್ತದೆಯೋ ಗೊತ್ತಾಗುವದೇ ಇಲ್ಲ".

"ಏನಾಯಿತೀಗ?"

"ಏನೂ ಆಗಿಲ್ಲ. ನೀವು ಹೇಳಿದ್ದೆಲ್ಲ ನಿಜವಾಯಿತು. ಹೋಟೆಲ್‌ನ ಪ್ರತಿಯೊಂದು ರೂಮಿನಲ್ಲಿ, ಒಂದೋ ಎರಡೋ ಧ್ವನಿಗ್ರಾಹಕಗಳನ್ನು ಮುಚ್ಚಿಡಲಾಗಿದೆ. ಹಾಲ್‌ನಲ್ಲಿ, ಕಾರಿಡಾರ್‌ನಲ್ಲಿ ತೂಗುಹಾಕಿದ ಝೂಮರ್‌ಗಳಲ್ಲಿ ಸಹ. ಅದರೊಂದಿಗೇ ಅತೀ ಸೂಕ್ಷ್ಮವಾದ ಕೆಮರಾ ಸಹ ಬಚ್ಚಿಡಲಾಗಿದೆ. ನೋಡಲು ಅವು ಬಲ್ಬುಗಳಂತೆ ಕಂಡರೂ ಬೆಳಕು ಬೀರುತ್ತ ಬೆಳಕಿನೆಡೆ ಬೆಳಕಿನಡಿಯಲ್ಲಿ ಬರುವ ಸುದ್ದಿಗಳನ್ನೆಲ್ಲ ಸೆರೆ ಹಿಡಿಯುತ್ತವೆ. ರೂಮ್‌ಗಳಲ್ಲಿದ್ದ ಕಾಡುಪ್ರಾಣಿ, ವಿಚಿತ್ರ ವಸ್ತು ಇವೆಲ್ಲವುಗಳೂ ನಿಮ್ಮ ಹೇಳಿಕೆಗೆ ಹೊರತಾಗಿಲ್ಲ. ಇನ್ನೂ ವರೆಗೂ ನಾವು ಶೋಧನೆ ನಡೆಸಿದ್ದೇವೆ. ಒಟ್ಟು ಎಪ್ಪತ್ತೆರಡು ಧ್ವನಿಗ್ರಾಹಗಳು, ಐವತ್ತಾರು ಕೆಮರಾಗಳು ದೊರೆತಿವೆ."

"ಇದು ತುಂಬಾ ಅಪಾಯಕಾರಿ. ಅಷ್ಟೇ ಭಯಾನಕ ವಿಷಯವಾಯಿತು ಎಸ್.ಪಿ.ಸಾಹೇಬರೆ. ಒಂದು ದೃಷ್ಟಿಯಿಂದ ಹೋಟೆಲ್ ಶತ್ರುಗಳ ಗುಪ್ತ ಕಾರಾಸ್ಥಾನವಿದ್ದಂತಾಯಿತು, ಯಾರು ಅದರ ಮಾಲಿಕರು?"

"ಯಶವಂತರಾವ್ ಸರ್‌ದೇಸಾಯಿ ಅಂತ. ಅವರು ಬ್ರಿಟಿಷರ ಕಾಲದಲ್ಲಿ ಇನ್ನೂರು ಗ್ರಾಮಗಳಿಗೆ ಒಡೆಯರಾಗಿದ್ದರು. ಸ್ವಾತಂತ್ರ್ಯನಂತರ ಅವು ಅವರ ಕೈಬಿಟ್ಟು ಹೋದವು. ಸರಕಾರ ಅವರಿಗೆ ಗೌರವ ಧನ ಹಾಗೂ ಮಾಸಾಶನ ಗೊತ್ತುಮಾಡಿತು. ಆ ಹಣದಲ್ಲಿಯೇ ಅವರು ಹೋಟೆಲ್ ಆರಂಭಿಸಿದ್ದು."

"ತುಂಬಾ ಸ್ವಾರಸ್ಯವಾಗಿದೆ. ಅಂದ ಹಾಗೆ ತಾವು ಇನ್ನು ಎಷ್ಟು ಹೊತ್ತು ಅಲ್ಲಿರುತ್ತೀರಿ?"

"ಇನ್ನೂ ಎರಡು ಹಾಲ್, ಹದಿನಾರು ಕೊಠಡಿ ನೋಡಬೇಕಾಗಿದೆ. ಅವನ್ನೆಲ್ಲ ಸೂಕ್ಷ್ಮವಾಗಿ ಪರಿಶೀಲಿಸಲು ಕನಿಷ್ಠ ಮೂರು ಗಂಟೆಯಾದರೂ ಬೇಕು."

"ಆಫೀಸ್ ರೂಮು ಶೋಧಿಸಿದಿರಾ?"

"ಇಲ್ಲ, ಮಾಲಿಕರು ಊರಿನಲ್ಲಿಲ್ಲ, ಮ್ಯಾನೇಜರ್ ನಾಪತ್ತೆ ಆಗಿದ್ದಾರೆ."

"ಆಫೀಸ್ ರೂಮಿಗೆ ಬೀಗ ಹಾಕಿದೆಯೋ ಇಲ್ಲವೋ?"

"ಬೀಗ ಹಾಕಿದೆ. ಅದೂ ಸಹ ಒಂದು ವಿಚಿತ್ರ ಬಗೆಯ ಕೀಲಿ"

"ಒಂದು ಕೆಲಸ ಮಾಡಿ, ನಾನು ಒಂದು ಗಂಟೆಯಲ್ಲಿ ಬರುತ್ತೇನೆ. ದಯವಿಟ್ಟು ಯಾರೂ ಆ ಆಫೀಸ್ ರೂಮಿನತ್ತ ಹೋಗಬೇಡಿ."

"ಏಕೆ? ಏನಾದರೂ...."

"ಈಗಲೇ ಏನೂ ಹೇಳುವುದಿಲ್ಲ, ನಾನು ಬಂದ ಮೇಲೆಯೇ...."

ರಿಸೀವರ್ ಕೆಳಗಿಟ್ಟು ಹೇಮಂತ ಒಂದೆ ಗುಟುಕಿಗೆ ಡ್ರಿಂಕ್ಸ್ ಮುಗಿಸಿ ಮೇಲೆದ್ದ.

"ನಾವೀಗ ಬೇಗ ಬೇಗ ಊಟ ಮಾಡಬೇಕು, ನಡೆಯಿರಿ."

ಮೇಜರ್ ಹೇಮಂತ ತನ್ನ ಸಂಗಡಿಗರೊಂದಿಗೆ "ಸೀಪರ್ಲ್" ರೆಸ್ಟಾರೆಂಟ್ ತಲುಪಿದಾಗ ರಾಮನಾಥರ ಶೋಧನೆ ಇನ್ನೂ ಮುಗಿದಿರಲಿಲ್ಲ. ಆರು ಕೊಠಡಿಗಳು, ಹಾಲ್ ಮತ್ತು ಆಫೀಸ್ ರೂಮ್ ಮಾತ್ರ ಉಳಿದಿದ್ದವು. ಹೊಟೆಲ್‌ನಲ್ಲಿ ವಾಸವಾಗಿದ್ದ ಪ್ರವಾಸಿಕರೆಲ್ಲ ಗಾಬರಿಯಾಗಿ ಅತ್ತಿತ್ತ ಓಡಾಡುತ್ತಿದ್ದರು. ಹೇಮಂತ ಅವರೆಲ್ಲರಿಗೂ ಸಮಾಧಾನ ಹೇಳಿ ರಾಮನಾಥರ ಕೈಗೆ ಹತ್ತಿದ ಎಲ್ಲ ಕೆಮರಾ ಮತ್ತು ಧ್ವನಿಗ್ರಾಹಕಗಳನ್ನು ಪರಿಶೀಲಿಸಿದ. ಅವನ ತುಟಿಗಳು ಗೋಲವಾದವು.

"ಇವೆಲ್ಲಾ ಹಾಂಕಾಂಗದಿಂದ ಇಲ್ಲಿಗೆ ಬಂದಿವೆ. ಹಾಂಕಾಂಗ್ ವ್ಯಾಪಾರಿ ಇಲ್ಲಿಗೆ ಬಂದಾಗ ಮಾರಿರಬಹುದು. ಅಥವಾ ಇಲ್ಲಿಯವರೇ ಹಾಂಕಾಂಗಿಗೆ ಹೋದಾಗ ಕೊಂಡಿರಬಹುದು."

ತಟಕ್ಸೆ ಮೇಜರ್‌ಗೆ ಏನೋ ನೆನಪಾದಂತಾಯಿತು. ರೆಸ್ಟಾರಂಟಿನಲ್ಲಿ ಕೆಲಸ ಮಾಡುವ ತುಂಬಾ ವಯಸ್ಸಾದ ಅನುಭವಿ ಕೆಲಸಗಾರ ಯಾರೆಂದು ವಿಚಾರಿಸಿ ಕರೆ ತರಲು ತಿಳಿಸಿದ. ಐದೇ ನಿಮಿಷಗಳಲ್ಲಿ ಸುಮಾರು ಐವತ್ತು ವರ್ಷಗಳ ವ್ಯಕ್ತಿಯೊಬ್ಬನನ್ನು ಕರೆತಂದು ಅವನ ಮುಂದೆ ನಿಲ್ಲಿಸಲಾಯಿತು. ಹೇಮಂತ ಪ್ರಶ್ನಿಸಿದ.

"ಏನಪ್ಪಾ ನಿನ್ನ ಹೆಸರು?"

"ರಂಗಸ್ವಾಮಿ ಸರ್"

"ನೀನೆಷ್ಟು ವರ್ಷಗಳಿಂದ ಕೆಲಸ ಮಾಡ್ತಿದೀಯಾ?"

"ಹದಿನೆಂಟು ವರ್ಷಗಳಿಂದ ಸರ್"

"ನಿನ್ನ ಕೆಲಸವೇನು?"

"ಆಫೀಸ್‌ರೂಮ್; ಈ ಎರಡು ಹಾಲು ಯಾವಾಗಲೂ ಸ್ವಚ್ಛ ಮಾಡುವದು, ಯಜಮಾನರು ಬಂದಾಗ ಅವರ ಕುಶಲ ಸಮಾಚಾರ ವಿಚಾರಿಸುವದು."

"ನಿಮ್ಮ ಯಜಮಾನರು ಯಾರು?"

"ತಮಗೆ ಯಾರುಬೇಕು ಸರ್?"

ಪ್ರಶ್ನೆಗೆ ಪ್ರಶ್ನೆಯೆ ಬಂದಾಗ ಅದರಲ್ಲಡಗಿದ ರಹಸ್ಯ ಕಂಡು ಚಕಿತನಾದ ಮೇಜರ್.

"ಅಂದ್ರೆ ಇದಕ್ಕೆ ಒಬ್ಬರೇ ಯಜಮಾನರಿಲ್ಲವೇ?"

"ಇಲ್ಲ ಸರ್, ಒಬ್ಬರು ಯಶವಂತರಾಯರು. ಅವರೇ ಸದಾಕಾಲ ಇಲ್ಲಿರುವದು. ಮಧ್ಯೆ ಮಧ್ಯೆ ಒಬ್ಬರು ಬಂದು ಹೋಗುತ್ತಾರೆ ಸರ್. ಅವರ ಬಳಿಯೇ ಈ ಆಫೀಸಿನ ಬೀಗ ಇದೆ. ಅವರಿಗೂ ಒಳ್ಳೇ ರೀತಿಯ ಸತ್ಕಾರ ನೀಡಬೇಕು ಅಂತ ಆದೇಶವಿತ್ತು ಸರ್. ಆಮೇಲೆ ಅವರು ಬಂದಾಗ ಪ್ರತಿಸಾರೆ ರಾಶಿರಾಶಿ ಹಣ ಒಯ್ಯುವದನ್ನ ನೋಡಿ ಅವರೂ ಇದಕ್ಕೆ ಯಜಮಾನರಿರಬೇಕು ಅಂದುಕೊಂಡೆ ಸರ್."

"ಅವರ ಹೆಸರೇನು?"

"ಗೊತ್ತಿಲ್ಲ ಸರ್"

"ನೋಡಲು ಹೇಗಿದ್ದಾರೆ?"

ರಂಗಸ್ವಾಮಿ ಅವರ ಚಹರೆಪಟ್ಟಿ ಹೇಳುತ್ತ ಹೋದಂತೆ ಹೇಮಂತ ಗಂಭೀರವಾಗುತ್ತಾ ನಡೆದ.

"ಇಲ್ಲಿ ಇರುವ ಝೂಮರ್, ಫ್ಲಾವರ್‌ಪಾಟ್, ದೀಪದ ಕಂಬ, ಕಾಡು ಪ್ರಾಣಿ ಇವನ್ನೆಲ್ಲ ನಿಮ್ಮ ಯಶವಂತರಾಯರೇ ಖರೀದಿಸಿ ತಂದರೋ?"

"ಇಲ್ಲ ಸರ್, ಇವೆಲ್ಲವನ್ನು ನಮ್ಮ ಇನ್ನೊಬ್ಬ ಮಾಲಿಕರು ತಂದಿದ್ದಾರೆ ಹಾಂಗ್‌ಕಾಂಗ್‌ನಿಂದ. ಹಾಂಗ್‌ಕಾಂಗ್‌ನಲ್ಲಿ ಅವರ ದೊಡ್ಡ ಬಿಜಿನೆಸ್ ಇದೆ ಯಂತೆ "

ಎಸ್.ಪಿ ರಾಮನಾಥ ಈ ಉತ್ತರ ಕೇಳಿ ಬೆಚ್ಚಿದರು. ಅದೇ ಐದಾರು ನಿಮಿಷಗಳ ಹಿಂದೆ ಹೇಮಂತ ಇದೇ ಅಶಂಕೆ ವ್ಯಕ್ತಪಡಿಸಿದ್ದ. ಅಶಂಕೆ ಸತ್ಯ ವಾಗಿತ್ತು.

"ಏಕೆ ಮೇಜರ್, ನೀವಿಷ್ಟು ಗಂಭೀರರಾದಿರಿ?"

"ಗಂಭೀರವಾಗುವ ಗಂಭೀರ ವಿಷಯವಿರುವದರಿಂದ" ಗಂಭೀರವಾಗಿ ನುಡಿದ ಹೇಮಂತ.

"ದಯವಿಟ್ಟು ಒಗಟಿನಲ್ಲಿ ಮಾತನಾಡಬೇಡಿ. ಬಿಡಿಸಿ ಹೇಳಿ."

"ಎಸ್.ಪಿ.ಸಾಹೇಬರೆ, ಈ ಹೊಟೆಲ್‌ಗೆ ಇಬ್ಬರು ಯಜಮಾನರು ಇರು ವರು. ಅದರಲ್ಲೊಬ್ಬರು ಸ್ಲೀಪಿಂಗ್ ಪಾರ್ಟ್‌ನರ್ ಆಗಿರುವ ವಿಷಯ ತಿಳಿದು ಕೊಂಡಿರಿ. ಅವರೇ ಈ 'ಸೀಪರ್ಲ್'ಗೆ ಬೇಕಾಗುವ ಅಲಂಕಾರಿಕ, ವೈಭವದ ಹಾಗೂ ವಿದ್ಯುತ್ತಿನ ಉಪಕರಣ ತಂದವರೆಂದು ಕೇಳಿದಿರಿ. ನಾನು ವಿಚಾರಿಸಿ ದಾಗ ಅವರ ಮುಖಚರ್ಯೆ ಸಹ ನೀವು ಕೇಳಿದಿರಿ. ಹೀಗಿದ್ದೂ ಗಂಭೀರವಾಗ ಬಾರದೆಂದರೆ ಹೇಗೆ?"

"ಅದೇ ನಾನು ಕೇಳ್ತಾ ಇರೋದು ಗಂಭೀರವಾದ ವಿಷಯ ಯಾವು

ದೆಂಬುದನ್ನು ತಿಳಿಸಿ."

"ತಾವು ಗಂಭೀರವಾದರಲ್ಲವೇ ಆ ಗಂಭೀರ ಸಮಾಚಾರ ತಿಳಿಸುವದು"

"ಗಂಭೀರವಾಗುವದು ಎಂದರೆ ಹೇಗೆ ಎಂಬುದನ್ನು ತಿಳಿಸಿ, ಅಂದರೆ ನಾನು ಖಂಡಿತ ಗಂಭೀರನಾಗುತ್ತೇನೆ."

"ಕೇವಲ ಬಾಯಿಮಾತಿನಿಂದ ಗಂಭೀರ ಎಂದು ಹೇಳಿದರೆ ಆಯಿತೆ?"

ಎಸ್.ಪಿ.ರಾಮನಾಥರಿಗೆ ರೇಗಿ ಹೋಯಿತು. 'ಗಾಂಭೀರದ' ಆಪಾಂತ ರಕ್ಕೆ. ಸಿಟ್ಟಿನಿಂದ ಅವರ ಮುಖ ಕೆಂಪಗಾಗುತ್ತಿದ್ದಂತೆ ಹೇಮಂತ ನಗುತ್ತ ನುಡಿದ.

"ಹಾಂ, ಇದೀಗ ಸರಿಹೋಯಿತು. ನೀವು ನಿಜವಾಗಿಯೂ ಗಂಭೀರ ರಾದಿರಿ."

ರಾಮನಾಥರ ಮುಖ ಪುನಃ ಸಡಿಲಾಯಿತು.

"ಹಾಗಾದರೆ ಈಗಲಾದರೂ ತಿಳಿಸಿ ಗಂಭೀರ ಸಮಾಚಾರ ಯಾವುದೆಂದು"

ಈಗ ಗಂಭೀರನಾದವ ಮೇಜರ್. ತುಸು ಗಡುಸಾದ ಕಂಠದಲ್ಲಾತ ನುಡಿದ.

"ರಾಮನಾಥರೆ, ಆ ಚಹರೆಪಟ್ಟಿಯುಳ್ಳ ವ್ಯಕ್ತಿ ಬೇರೆ ಯಾರೂ ಅಲ್ಲ, ನಮ್ಮ ನೆರೆ ರಾಷ್ಟ್ರಗಳಲ್ಲಿ ಒಂದಾದ ದೇಶಕ್ಕೆ ಸೇರಿದ 'ಚಿನ್‌ಲಿಯೋಲಿನ್' ರಹಸ್ಯಭೇದಿ ಗ್ರುಪ್‌ನ ದ್ವಿತೀಯ ಗ್ರೇಡಿನ ಗೂಢಚಾರಿ ಸಂಸ್ಥೆಯ ಮುಖಂಡ."

"ಆತನಿಗೆ ಇಲ್ಲೇನು ಕೆಲಸ?"

"ಕೆಲಸವಿರುವದರಿಂದಲೇ ಆತ ಬಂದಿರುವದು. ಇಲ್ಲಿ ನಡೆಯುತ್ತಿರುವ ವಿಚಿತ್ರ ಅಷ್ಟೇ ಸತ್ಯ ಘಟನೆಗಳಿಗೆ ಅವನ ಇರುವಿಕೆಯೇ ಸಾಕ್ಷಿ. ತಮಗೆ ಇನ್ನೂ ಒಂದು ಮಾತು ಹೇಳುತ್ತೇನೆ ಕೇಳಿ. ಚಿನ್‌ಲಿಯೋಲಿನ್ ಮೇಧಾವಿ ಬುದ್ಧಿಯ ವಿಜ್ಞಾನಿ. ಅವನ ಬುದ್ಧಿಮತ್ತೆಗೆ ಆತ ಮಾಡಿದ ಪ್ರಯೋಗಗಳಿಗೆ ಕಳೆದ ನಾಲ್ಕು ತಿಂಗಳುಗಳ ಹಿಂದೆ ಜಗತ್ತೇ ತಲೆದೂಗಿದೆ."

"ಆತ ಮಾಡಿದ ಪ್ರಯೋಗಗಳಾವವು?"

"ಅದನ್ನು ಸಂದರ್ಭ ಬಂದಾಗ ತಿಳಿಸುತ್ತೇನೆ. ಆದರೆ ಒಂದು ಮಾತು ಮಾತ್ರ ನಿಜ. ಚಿನ್‌ಲಿಯೋಲಿನ್ ಇಲ್ಲಿ ಒಂಟಿಯಾಗಿಲ್ಲ. ನಮ್ಮವರೇ ಆದ ಯಾವುದೋ ವಿಜ್ಞಾನಿಯ ಸಹಕಾರ ಅವರಿಗೆ ಖಂಡಿತವಾಗಿ ಇರಲೇಬೇಕು."

"ಆತ ಯಾರಿರಬಹುದು?"

"ಅದನ್ನೇ ನಾವೀಗ ಗಂಭೀರವಾಗಿ ಆಲೋಚಿಸಬೇಕಾಗಿದೆ."

ಮತ್ತೆ ಗಂಭೀರದ ಪ್ರಸ್ತಾಪ ಬರಲು ರಾಮನಾಥ್ ಗಂಭೀರರಾದರು.

ಹೇಮಂತನಂತೂ ಮೊದಲೇ ಗಂಭೀರನಾಗಿದ್ದ. ಪಕ್ಕದಲ್ಲಿದ್ದ ಫೋನನ್ನೆತ್ತಿ ಡಾಕ್ಟರ್ ದಿವಾಕರ್‌ರ ಫೋನ್ ನಂಬರ್ ತಿಳಿಸಿ ಸಂಪರ್ಕ ನೀಡಲು ವಿನಂತಿಸಿ ಕೊಂಡ. ಒಂದೇ ನಿಮಿಷದಲ್ಲಿ ಆ ಕಡೆಯಿಂದ ದಿವಾಕರ್‌ರ ಧ್ವನಿ ಕೇಳಿಸಿತು.

"ಡಾಕ್ಟರ್ ದಿವಾಕರ್, ನಾನು ಮೇಜರ್ ಮಾತಾಡ್ತಿರೋದು. ನಿಮ್ಮಿಂದ ನನಗೊಂದು ಅತೀ ಮಹತ್ವದ ಸಹಾಯವಾಗಬೇಕಾಗಿದೆ. ಸಧ್ಯದ ಪರಿಸ್ಥಿತಿ ಯಲ್ಲಿ ನಮಗೆ ಅತೀ ಹೆಚ್ಚು ಸಮೀಪದಲ್ಲಿರುವ ಅತೀ ಹೆಚ್ಚು ಪ್ರತಿಭಾಶಾಲಿ ಯಾಗಿರುವ ವಿಜ್ಞಾನಿ ಅಥವಾ ಸರ್ಜನ್ ಯಾರಿದಾರೆ? ಅಷ್ಟೇ ಅಲ್ಲ ಅವರು ಆಪರೇಟ್ ಮಾಡಿ ಮಿದುಳು ಬದಲಿಸುವಲ್ಲಿ ದಕ್ಷರೂ ಸಹ ಆಗಿರಬೇಕು. ಅಥವಾ ಇದರಲ್ಲಿ ಪ್ರಯೋಗಗಳನ್ನು ಮಾಡಿ ಪರಿಣತಿ ಪಡೆದವರಾಗಿರಬೇಕು."

ಒಂದು ನಿಮಿಷ ಮಧ್ಯೆ ಮೌನ ವ್ಯಾಪಿಸಿತು, ಎರಡನೇ ನಿಮಿಷ ಮೌನದ ಗೋಡೆ ಸೀಳಿ ದಿವಾಕರನ ಧ್ವನಿ ಕೇಳಿಸಿತು.

"ಅಂಥವರು ಒಬ್ಬರೇ ಇದ್ದಾರೆ ಮೇಜರ್"

"ಯಾರವರು?"

"ಸೈಂಟಿಸ್ಟ್ ಕುಮುದನ್. ಅವರಿಗೀಗ ಸುಮಾರು ಎಪ್ಪತ್ತು ವರ್ಷ."

"ಅವರ ವಾಸವೆಲ್ಲಿ?"

"ಇದೇ ಊರಿನಲ್ಲಿ ಅವರ ಸ್ವಂತ ಬಂಗಲೆಯಿದೆ, ಆದರೆ ಅದರಲ್ಲವರು ಹೆಚ್ಚಾಗಿ ಇರುವದಿಲ್ಲ. ಅವರಿರುವದು ತಮ್ಮ ಪ್ರಯೋಗಶಾಲೆಯಲ್ಲಿ."

"ಅವರ ಪ್ರಯೋಗಶಾಲೆ ಎಲ್ಲಿದೆ?"

"ಅದು ನನಗೆ ತಿಳಿಯದು. ಅವರ ಮಗಳನ್ನು ವಿಚಾರಿಸಿದರೆ ತಿಳಿದೀತು. ಆಕೆ ಹೆಸರು ಮಧು. ಅವಳು ಬಂಗಲೆಯಲ್ಲಿ ಒಂಟಿಯಾಗಿರುತ್ತಾಳೆ."

"ಸರಿ. ನಿಮ್ಮಿಂದ ತುಂಬಾ ಉಪಕಾರವಾಯ್ತು. ನಾನು ಮಧುಳನ್ನು ಕಾಣುತ್ತೇನೆ."

"ಹುಷಾರಿ ಮೇಜರ್, ಮಧು ತುಂಬಾ ಅಪಾಯಕಾರಿ. ನೀವೇನಾದರೂ ಅವಳಲ್ಲಿದ್ದ ಮಧು ಹೀರಲು ಹೋದಿರೆಂದರೆ...."

"ಗಾಬರಿಯಾಗಬೇಡಿ. ಅಂಥ ಸಾಹಸ ಮಾಡಲಾರೆ. ವಂದನೆಗಳು."

ರಿಸೀವರ್ ಕೆಳಗಿರಿಸಿದ ಹೇಮಂತ. ಎಲ್ಲರೂ ಅವನನ್ನೇ ಮಂತ್ರಮುಗ್ಧ ರಾಗಿ ನೋಡುತ್ತಿದ್ದರು.

ಎಸ್.ಪಿ. ಅವರತ್ತ ಹೊರಳಿದ ಮೇಜರ್, "ಸಾಹೇಬರೆ, ನಾವೀಗ ಈ ಆಫೀಸ್ ರೂಮನ್ನು ಪ್ರವೇಶಿಸಬೇಕಲ್ಲ?"

"ಅದಕ್ಕಾಗಿ ನಾವು ಬಾಗಿಲು ಮುರಿಯಬೇಕಾಗುತ್ತದೆ."

"ಅದರ ಹೊರತಾಗಿ ಬೇರೆ ದಾರಿಯೇ ಇಲ್ಲ, ತಾವು ಪಂಚರನ್ನು ಕೂಡಿಸಿರಿ. ಅವರ ಸಮಕ್ಷಮ ಬಾಗಿಲು ಮುರಿದರಾಯಿತು."

"ಸಾಧ್ಯವಿಲ್ಲ ಸಾಹೇಬರೆ." ರಂಗಸ್ವಾಮಿ ತಟಕ್‌ನೆ ನುಡಿದ ಭಯದಿಂದ.

"ಏಕೆ ಸಾಧ್ಯವಿಲ್ಲ ರಂಗಸ್ವಾಮಿ?" ಮೇಜರ್ ಪ್ರಶ್ನಿಸಿದ.

"ಸಾಹೇಬರೆ, ಇದು ಮರದ ಬಾಗಿಲಲ್ಲ. ಮರದಂತೆ ಕಾಣುತ್ತಿದ್ದರೂ ಮರವಲ್ಲ, ಕಬ್ಬಿಣದ್ದು ಉಕ್ಕಿನದು. ಇದಕ್ಕೆ ಸ್ಪೆಶಲ್ ಕೀಲಿ ಹಾಕಿದ್ದಾರೆ."

ಅಚ್ಚರಿಯಿಂದ ಬಾಗಿಲತ್ತ ನೋಡಿದ ಹೇಮಂತ.

ಅದ್ಭುತ, ಆಶ್ಚರ್ಯ. ಅಷ್ಟೇ ಸತ್ಯ. ಕಟ್ಟಿಗೆಯಿಂದ ಮಾಡಿದಂತೆ ತೋರುತ್ತಿದ್ದರೂ ಕಟ್ಟಿಗೆ ಅಲ್ಲ ಅಂದರೆ? ಮುಟ್ಟಿ ನೋಡಿದ, ಬಾರಿಸಿದ. 'ಕಟ್ ಕಟ್' ಎಂಬ ಸದ್ದು ಬರಲಿಲ್ಲ. 'ಟಿಂಗ್ ಟಿಂಗ್' ಎಂದು ಸದ್ದಾಯಿತು. ಉಕ್ಕಿನದು. ಕೀಲಿಯನ್ನು ಪರೀಕ್ಷಿಸಿದ. ವರ್ತುಲಾಕಾರದಲ್ಲಿದ್ದ ಗುಪ್ತ ಕೀಲಿ. ನಡುವಿನದು ನಂಬರ್ ಜೋಡಿಸಿದರೆ ಮಾತ್ರ ಅದು ತೆರೆಯುತ್ತದೆ. ರಾಮನಾಥರೆಡೆ ನೋಡಿ ಹೇಳಿದ.

"ನೀವು ಪಂಚರನ್ನು ಸೇರಿಸಿ. ಕಾಗದ ತಯಾರಿಸಿ. ನಾನು ಈ ಬಾಗಿಲು ತೆರೆಯಲು ಪ್ರಯತ್ನಿಸುತ್ತೇನೆ."

ಹೇಮಂತ ನಿಧಾನವಾಗಿ ಬೀಗದತ್ತ ಆಕರ್ಷಿತನಾದ.

## ೬

ರೋಜೀ ಲಿಫ್ಟ್ ಬಳಿ ಬರುತ್ತಿದ್ದಂತೆ ಅವಳಿಗಾಗಿಯೇ ಕಾಯುತ್ತಿದ್ದಂತೆ ಅನಿಸುತ್ತಿದ್ದ ಲಿಫ್ಟ್‌ಬಾಯ್ ಹಲ್ಲು ಕಿರಿದು ಲಿಫ್ಟ್ ಬಾಗಿಲು ತೆರೆದ. ಅವನ ಕೈಗೆ ಇಪ್ಪತ್ತರ ನೋಟೊಂದನ್ನು ತುರುಕಿದಳು ರೋಜೀ. ಲಿಫ್ಟ್ ಗುಂಡಿ ಅದಮುವ ಮುನ್ನ ಆತ ಅರ್ಥಗರ್ಭಿತವಾಗಿ ಅವಳೆಡೆ ನೋಡಿ ಕೇಳಿದ.

"ಮೇಡಂ. ಇನ್ನಿಷ್ಟು ಹಣ ಸಂಪಾದಿಸುವ ಇಚ್ಛೆ ಇದೆಯೆ?"

"ಸಾರಿ. ನನಗಿಂದು ತುಂಬಾ ದಣಿವಾಗಿದೆ. ಈ ರಾಕ್ಷಸ ತುಂಬಾ ಸತಾಯಿಸಿದ."

"ಯೋಚಿಸಿ. ಹಣ ತುಂಬಾ ದೊರೆಯುತ್ತದೆ. ರೂಮ್ ನಂಬರ್ ನೈನ್‌ನೈನ್‌ನೈನ್."

"ಆಗೋದಿಲ್ಲ. ಲಿಫ್ಟ್ ಹಾಕು."

"ನೋಡಿ ಮೇಡಂ. ಒಂದೇ ಬಾರಿ ಹತ್ತು ಸಾವಿರ."

"ಆಂ? ಏನೆಂದೆ?" ಆಚ್ಚರಿಯಿಂದ ಕೇಳಿದಳು.

"ಹಾಂ. ಅದೇ ಹತ್ತು ಸಾವಿರ. ಅದೂ ಕೇವಲ ಕೆಲವೇ ಗಂಟೆಗಳಿಗಾಗಿ ಇಷ್ಟು ಯಾವ ಸಿನೀಮಾ ನಟಿಗೂ ಸಹ ದೊರೆಯಲಾರದು."

ಸ್ವಲ್ಪ ಯೋಚಿಸಿದಳು ರೋಜೀ. ಹತ್ತು ಸಾವಿರ ಯಾರಿಗೆ ಬೇಡ? ಒಂದೇ ಬಾರಿಗೆ.

"ಸರಿ. ನಡೆ ಹಾಗಾದರೆ."

ಒಂಭತ್ತನೇ ಮಹಡಿಗೆ ಗುಂಡಿ ಅದುಮಿದ ಲಿಫ್ಟ್ ಬಾಯ್ ಗುನುಗಿದ.

"ಆದರೆ ಒಂದು ಮಾತು ಮೇಡಂ. ಅವರು ಮೂವರಿದ್ದಾರೆ."

"ವಾಟ್? ಏನೆಂದೆ? ಮೂವರಾ? ನನ್ನನ್ನು ಪಶು ಎಂದು ತಿಳಿದಿಯಾ? ಮುಠ್ಠಾಳಾ. ಲಿಫ್ಟ್ ಕೆಳಗಿಳಿಸು."

ಏಳನೇ ಮಹಡಿಗೆ ಬಂದ ಲಿಫ್ಟ್ ಮತ್ತೆ ಕೆಳಗಿಳಿಯಲಾರಂಭಿಸಿತು. ಆತ ಬಿಡಲಿಲ್ಲ.

"ನಿಮಗೇನೂ ತೊಂದರೆಯಾಗದು ಮೇಡಮ್. ಅವರು ತುಂಬಾ ಸಭ್ಯರು. ಅದರೊಂದಿಗೆ ವೃದ್ಧರು. ಯಾರೂ ಅರವತ್ತು ವರ್ಷಕ್ಕಿಂತ ಕಡಿಮೆಯಿಲ್ಲ, ನಿನ್ನೆ ರಾತ್ರಿ ನಿಮ್ಮನ್ನು ನೋಡಿ ಮೋಹಿತರಾಗಿದ್ದಾರಂತೆ. ಕೇಳಿದಷ್ಟು ಹಣ ಕೊಡುತ್ತಾರೆ. ಇನ್ನೂ ಐದು ಸಾವಿರ. ಅಂದರೆ ಹದಿನೈದು."

ರೋಜೀಯ ಬಾಯಲ್ಲಿ ನೀರೂರಿತು. ಹದಿನೈದು ಸಾವಿರ. ಮೂವರಿದ್ದರೇನಾಯಿತು. ಅರವತ್ತು ವರುಷದವರಂತೆ. ಅವರಿಂದೇನು ಮಾಡಲು ಸಾಧ್ಯ? ಒಪ್ಪಿಕೊಂಡಳು. ಲಿಫ್ಟ್ ಎರಡಕ್ಕಿಳಿದದ್ದು ಮತ್ತೆ ಮೇಲೇರತೊಡಗಿತು. ಒಂಭತ್ತರಿಂದ ಹೊರಬರುತ್ತಿದ್ದಂತೆ ಹೇಳಿದ.

"ಮೇಡಂ, ನನ್ನ ಕಮೀಶನ್ ಎರಡುನೂರು. ಈಗಲೇ...."

ಎರಡು ಮಾತನಾಡದೇ ಬಲ ಕೋಟಿನಲ್ಲಿ ತುರುಕಲ್ಪಟ್ಟ ನೋಟಿನ ಮುದ್ದೆ ಹೊರಗೆ ತೆಗೆದು ಅದರಿಂದ ಐದುನೂರು ಅವನ ಕೈಗಿತ್ತಳು.

ಅವಳ ಕುಚಗಳನ್ನು ಕಣ್ಣುರೆಪ್ಪೆ ಬಡಿಯದೇ ನೋಡುತ್ತಿದ್ದ ಆತ ಜೊಲ್ಲು ಸುರಿಸುತ್ತಾ ಕೇಳಿದ.

"ಮೇಡಂ, ಒಂದು ಬಾರಿ ನಿಮ್ಮ ಕುಚಗಳನ್ನು...."

ಮುಗುಳುನಗೆ ನಕ್ಕ ಆಕೆ.

"ಅದಕ್ಕಾಗಿ ನೀನು ಈ ಐದುನೂರು ಕಳೆದುಕೊಳ್ಳಬೇಕಾಗುತ್ತೆ."

ಆತ ಸಿದ್ಧನಾದ. ಆತ ಕಳೆದುಕೊಂಡ; ರೋಜಿ ಪಡೆದುಕೊಂಡಳು.

ಥ್ರಿಬ್ಬಲ್‌ನೈನ್ ರೂಮಿನಲ್ಲಿದ್ದ ಗಿರಾಕಿಗಳು ರೋಜೀಗಾಗಿ ಆತುರತೆಯಿಂದ ಕಾಯುತ್ತಿದ್ದರೆಂಬುದಕ್ಕೆ ಲಿಫ್ಟ್‌ಬಾಯ್ ಒಂದೇ ಬಾರಿ ಬೆಲ್ ಬಾರಿಸಿದ್ದು ಸಾಕ್ಷಿಯಾಯಿತು. ಕೂಡಲೇ ಬಾಗಿಲು ತೆರೆಯಿತು. ಲಿಫ್ಟ್‌ಬಾಯ್ ಅಲ್ಲಿಂದ ಹಿಂದೆ ಸರಿದ. ತನಗಾಗಿ ಬಾಗಿಲು ತೆರೆದ ಸುಮಾರು ಅರವತ್ತು ಅರವತ್ತೈದು ವರ್ಷಗಳ ತರುಣನತ್ತ ನೋಡಿದಳು ರೋಜೀ. ತಲೆಯಲ್ಲಿದ್ದ ಕೂದಲುಗಳೆಲ್ಲ ಬಿಳಿಯಾಗಿದ್ದವು. ಗಡ್ಡ ಮೀಸೆ ಯಾವುದೂ ಇಲ್ಲ. ಅಷ್ಟು ವಯಸ್ಸಾಗಿದ್ದರೂ ಆತ ಗುಂಡುಗುಂಡಾಗಿದ್ದ. ಆಕೆ ಒಳಗೆ ಪ್ರವೇಶಿಸುತ್ತಿದ್ದಂತೆ ಬಾಗಿಲು ಮುಚ್ಚಲ್ಪಟ್ಟಿತು.

ಅದೊಂದು ಸೌಂಡ್‌ಪ್ರೂಫ್ ಕೊಠಡಿ ಎಂದಾಕೆಗೆ ಅರ್ಥವಾಯಿತು.

ಮುಂದೆ ಒಂದೊಂದೇ ಘಟನೆಗಳು ಚಲನಚಿತ್ರದಂತೆ ನಡೆದುಹೋದವು. ಮೊದಲಿದ್ದ ಮುದುಕನ ಜೊತೆ ಮತ್ತಿಬ್ಬರು ಪ್ರಕಟರಾದರು. ಮೂವರೂ ನೋಡಲು ವಯಸ್ಸಾದವರಂತೆ ಕಂಡರೂ ಶಾರೀರಿಕವಾಗಿ ಆರೋಗ್ಯಶಾಲಿಯಂತೆ ಕಂಡರು. ಅವಳ ಕಣ್ಣುಗಳು ಎಳೆಯತೊಡಗಿದ್ದವು. ಕೆಲಕಾಲ ಅವರಿಗೆ ತನ್ನನ್ನು ಒಪ್ಪಿಸಿಕೊಂಡರಾಯ್ತು, ಮುದಿಚಪಲ ತೀರಿಸಿಕೊಂಡು ಹದಿನೈದು ಸಾವಿರ ಕೊಡುತ್ತಾರೆ. ಎದ್ದು ಹೋದರಾಯ್ತು ಎಂದು ಯೋಚಿಸಿದ ಆಕೆ ಒಮ್ಮೆಲೆ ತನ್ನ ವಿಚಾರ ಬದಲಿಸಿದಳು. ಆಮೇಲೆ ಹಣ ಕೊಡದಿದ್ದರೆ? ಅಥವಾ ಒಂದೋ ಎರಡೋ ಕೊಟ್ಟು ಬಗಲು ಎತ್ತಿದರೆ? ಅದಕ್ಕಾಗಿ ಹಣ ಮುಂಗಡ ವಸೂಲು ಮಾಡಲು ಯೋಚಿಸಿದಳು. ಮೂವರೂ ಆಕೆಯನ್ನು ಸುತ್ತುವರೆದು ಹಸಿದ ತೋಳಗಳಂತೆ ವರ್ತಿಸುತ್ತಿರುವಾಗ ಅವರನ್ನು ಮತ್ತಷ್ಟು ಹುಚ್ಚರನ್ನಾಗಿಸಲು ಒಂದೇ ನಿಮಿಷದಲ್ಲಿ ಮೇಲ್ಬಟ್ಟೆ ಕಳಚಿ ಕೇವಲ ಒಳ ಉಡುಪಿನಲ್ಲಿ ನಿಂತಾಗ ಅವರು ವಿಚಿತ್ರವಾಗಿ ಚೀರತೊಡಗಿದರು. ಒಬ್ಬ ಮೈ ಮುಟ್ಟಲು ಬರುತ್ತಿದ್ದಂತೆ ತಡೆದು ಎಚ್ಚರಿಸಿದಳು.

"ನೋ, ನೋ ಓಲ್ಡ್ ಮ್ಯಾನ್, ಮೊದಲು ಮನಿ. ಮನಿ, ಕ್ಯಾಶ್."

ಕಣ್ಣು ಮುಚ್ಚಿ ಕಣ್ಣು ತೆರೆಯುವಷ್ಟರಲ್ಲಿ ಹದಿನೈದು ಸಾವಿರದ ಗುಡ್ಡೆ ಅವಳ ಮುಂದೆ ಕಾಣಿಸಿಕೊಂಡಿತು. ಮೂರು ಗುಡ್ಡೆ ತನ್ನ ವ್ಯಾನಿಟಿ ಬ್ಯಾಗಿನಲ್ಲಿ ಚೆಲ್ಲಿ ಬಲ ಕುಚದಲ್ಲಿದ್ದ ಚಿಕ್ಕ ಗುಡ್ಡೆಯನ್ನೂ ಅದಕ್ಕೆ ಜೋಡಿಸಿ ಬ್ಯಾಗನ್ನು ಒಂದೆಡೆ ಇರಿಸಿ ಹಾಸಿಗೆಯ ಮೇಲೆ ಉರುಳಿದಳು.

ಮುಂದಿನ ಕ್ಷಣ ಮೂರೂ ಜನ ಅವಳ ಮೇಲೆ ಎರಗಿದರು.

ಎರಡೇ ನಿಮಿಷಗಳಲ್ಲಿ ಆಕೆಗೆ ಅರಿವಾಗಿ ಹೋಯಿತು. ಮೂವರೂ

ಶಾರೀರಿಕವಾಗಿ ಮುದುಕರಲ್ಲವೆಂದು.

ಕ್ರಮೇಣ ದೇಹದ ಹಿಂಸೆ ಹೆಚ್ಚಾಗತೊಡಗಿತು. ಮೂವರೂ ರಾಕ್ಷಸರಾದರು. ಕಿತ್ತಾಟ ಗುದ್ದಾಟ ತಡೆಯಲಾರದೇ ಆಕೆ ಚೀರಿಕೊಂಡಾಗ ಮೂವರೂ ಉನ್ಮತ್ತರಾಗಿ ಕೇಕೆ ಹಾಕಿ ನಕ್ಕರು. ಅವಳ ಚೀರಾಟ ಅವರ ಉನ್ಮಾದಕ್ಕೆ ಪುಷ್ಟಿ ನೀಡಿತು.

ಮತ್ತೆ ಐದು ನಿಮಿಷ ಕಳೆಯುವುದರಲ್ಲಿ ಆಕೆಗೆ ಪೂರ್ಣ ಅರಿವಾಗಿತ್ತು. ಮೂವರೂ ವಯಸ್ಸಾದವರಲ್ಲ. ಅವರು ಮೂವತ್ತೂ ಮೀರಿರದ ತರುಣರೆಂದು. ಹದಿನೈದು ಸಾವಿರದ ಆಶೆಗೆ ಬಲಿ ಬಿದ್ದ ಆಕೆ ಯಮಹಿಂಸೆಗೆ ಗುರಿಯಾಗಬೇಕಾಯಿತು. ಚೀರಿ, ಕೂಗಿ, ಗುದ್ದಾಡಿ ಹೈರಾಣಾದ ಆಕೆ ಹಾಗೇ ಮೂರ್ಛೆ ಹೋಗಿದ್ದಳು.

ಎಚ್ಚರ ಬಂದಾಗ ಮತ್ತೆ ಆಕ್ರಮಣ. ಮತ್ತೆ ಮೂರ್ಛೆ.

ಮೈ ಕೈ ಎಲ್ಲಾ ನೋವು 'ಎಲುಬು' ಕೀಲು ಪುಡಿಪುಡಿ ಆದಂತೆನಿಸಿತು. ಯಾವಾಗಲೋ ಎಚ್ಚರವಾಯಿತು. ಏಳಲಿಕ್ಕಾಗದಿದ್ದರೂ ಏಳಲೇಬೇಕಿತ್ತು. ಎದ್ದಳು. ಮೂವರೂ ಸಂಪೂರ್ಣ ನಗ್ನರಾಗಿ ಎಚ್ಚರವಿಲ್ಲದೇ ಬಿದ್ದುಕೊಂಡಿದ್ದರು. ಎದ್ದು ಬಾತ್‌ರೂಮಿಗೆ ಹೋಗಿ ಬಂದಳು. ಬಟ್ಟೆ ತೊಟ್ಟುಕೊಂಡಳು. ಮೂವರಲ್ಲಿ ಒಬ್ಬರೂ ಏಳಲಿಲ್ಲ. ಬೇಕೆಂತಲೇ ಸಪ್ಪಳ ಮಾಡಿದಳು, ಏಳಲಿಲ್ಲ.

ಅಲ್ಲಿಂದ ಪಾರಾಗುವ ಇಚ್ಛೆ ಪ್ರಬಲವಾಯಿತು. ಹೊರಗೆ ಹಗಲಿದೆಯೋ ರಾತ್ರಿ ಇದೆಯೋ ತಿಳಿಯದು. ಎದ್ದು ಕಿಟಕಿ ಬಳಿ ಬಂದು ಉದ್ದಕ್ಕೂ ಇಳಿಬಿಟ್ಟಿದ್ದ ಪರದೆಯನ್ನು ತುಸು ಸರಿಸಿದಳು. ಕಣ್ಣು ಕುಕ್ಕುವಂತೆ ಬಿಸಿಲು ಪರದೆಯ ಸಂದಿಯಿಂದ ನುಸುಳಿದ ಬಿಸಿಲ ರೇಖೆ ಎಚ್ಚರವಿಲ್ಲದೇ ಬಿದ್ದವನೊಬ್ಬನ ಮುಖ ಚುಂಬಿಸಿದಾಗ ಆತ ಅಲ್ಲೇ ಮುಲುಗಿದ. ಹೆದರಿ ಕಂಗಾಲಾದ ಆಕೆ ಪರದೆಯನ್ನು ಮುನ್ನಿನಂತೆ ಇಳಿಬಿಟ್ಟಳು. ವ್ಯಾನಿಟಿ ಬ್ಯಾಗು ತೆರೆದು ಇಣುಕಿದಳು. ಅವಳ ವಸ್ತುಗಳೆಲ್ಲ ಸುರಕ್ಷಿತವಾಗಿದ್ದವು. ಅತ್ತಿತ್ತ ದೃಷ್ಟಿ ಹರಿಸಿದಳು. ಟೀಪಾಯ್ ಮೇಲೆ ಅನಾಥವಾಗಿ ಬಿದ್ದಿದ್ದವು ಮೂರು ಪಾಕೀಟುಗಳು. ಅವನ್ನೆಲ್ಲ ಖಾಲೀ ಮಾಡಿದಳು. ಕಡಿಮೆ ಕಡಿಮೆ ಎಂದರೂ ಇಪ್ಪತ್ತು ಇಪ್ಪತ್ತೈದು ಸಾವಿರವಾದರೂ ಇರಬೇಕು. ನರಕಸದೃಶವಾದ ಹಿಂಸೆ ಅನುಭವಿಸಿದ್ದಕ್ಕೆ ಸಾಕಷ್ಟು ಪ್ರತಿಫಲ ದೊರೆತಿತ್ತು. ವ್ಯಾನಿಟಿ ಬ್ಯಾಗನ್ನೂ ಹೆಗಲಿಗೆ ಇಳಿಬಿಟ್ಟು ಕೈಯಲ್ಲಿ ಶೂ ಹಿಡಿದು ಬಾಗಿಲವರೆಗೆ ಬಂದಳು. ಬೀಗ ಕೀ ಹೋಲಿನಲ್ಲೇ ಇತ್ತು. ಕೀ ತಿರುವಿ ಬಾಗಿಲು ತೆರೆದಳು. ಇನ್ನೇನು ಹೊರಗೆ ಕಾಲಿಡಬೇಕು ಅನ್ನುವಷ್ಟರಲ್ಲಿ 'ರಪ್' ಎಂದು ಬಿತ್ತು ಬಲಿಷ್ಠವಾದ ಹಸ್ತ ಅವಳ ಹೆಗಲ

ಮೇಲೆ. ಬೆಚ್ಚಿಬಿದ್ದ ಆಕೆ ತಿರುಗಿ ನೋಡಿದಳು. ಬೋಳು ತಲೆಯವ 'ಖೀ ಖೀ' ಎಂದು ನಕ್ಕ.

"ಅರೆ ಮೈನಾ. ಇಷ್ಟು ಬೇಗ ನಮ್ಮಿಂದ ಹಾರಿ ಹೋಗುವುದೇ? ಇನ್ನೂ ಒಂದು ದಿನವಾದರೂ ಇರು."

ಥರಥರ ಕಂಪಿಸಿದಳು ರೋಜೀ ಕಳೆದ ನರಕದ ನೆನಪಾಗಿ.

"ಬೇಡ, ನಾನು ಮನೆಗೆ ಹೋಗಬೇಕು."

"ಇನ್ನೊಂದು ದಿನ. ಹದಿನೈದು ಸಾವಿರ ಬೇಕೆಂದರೆ ಇಂದೂ ಕೊಡಲು ಸಿದ್ಧ."

"ಬೇಡ, ನನಗೆ ಹಣ ಬೇಡ. ನಾನು ಮನೆಗೆ ಹೋಗಬೇಕು." ಚಿಕ್ಕ ಮಗುವಿನಂತೆ ಅಳುತ್ತ ಚಂಡಿ ಮಾಡಿದಳು.

"ಹಾಗಾದರೆ ಕೆಲಿಯಾನ್‌ನ ರೂಮಿನಿಂದ ಹಾರಿಸಿದ ಆ ಪುಟ್ಟ ಹಕ್ಕಿಯನ್ನು ಕೊಟ್ಟು ಹೋಗು."

"ಯಾವ ಪುಟ್ಟ ಹಕ್ಕಿ?"

"ಅದೇ, ಹಾಡುವ ವಾಚು. ಅವನ ಕೈಯಲ್ಲಿತ್ತಲ್ಲ ಅದನ್ನು ನೀನು ಎಗರಿಸಿದ್ದು ನಮಗೆ ತಿಳಿದಿದೆ."

ಈಗವಳಿಗೆ ಅರ್ಥವಾಯಿತು ಅವರೇಕೆ ತನ್ನ ಹಿಂದೆ ಬಿದ್ದಿದ್ದಾರೆಂದು ತಾನು ಮುಚ್ಚಿದ ಕೋಣೆಯಲ್ಲಿ ಕೆಲಿಯಾನ್‌ನೊಂದಿಗೆ ರತಿಕ್ರೀಡೆ ಮಾಡಿದ್ದು, ಅವನ ಹಾಡುವ ಹಕ್ಕಿಯನ್ನು ಅಪಹರಿಸಿದ್ದು ಇವರು ನೋಡಿದ್ದಾರೆಂದರೆ ಸಾಮಾನ್ಯರಂತೂ ಇವರಲ್ಲ. ಇವರಿಂದ ತನ್ನ ಜೀವಕ್ಕೆ ಅಪಾಯ ತಪ್ಪಲಾರದು ಹೇಗಾದರೂ ಮಾಡಿ ಪಾರಾಗಬೇಕು....ಪಾರಾಗಬೇಕು.

ಧೈರ್ಯ ಒಟ್ಟುಗೂಡಿಸಿದ ಆಕೆ ಕೊನೆ ಪ್ರಯತ್ನವೆಂದು ಮೊಣಕಾಲಿನಿಂದ ಅವನ ಕಿಬ್ಬೊಟ್ಟೆಗೆ ಗುದ್ದಿದಳು. ಆತ ಹಿಂದಕ್ಕೆ ಬೀಳುತ್ತಿದ್ದಂತೆ ಬಾಗಿಲು ತೆರೆದು ಹೊರಬಂದಳು. ಪೂರ್ತಿ ನಗ್ನವಾಗಿದ್ದ ಆತ ಬಟ್ಟೆ ತೊಟ್ಟುಕೊಂಡು ಬೆಂಬತ್ತಿ ಬರುವದರೊಳಗೆ ತಾನು ಅಲ್ಲಿಂದ ಪಾರಾಗಬೇಕೆಂದು ಲಿಫ್ಟ್‌ಗಾಗಿ ಕಾಯದೆ ಮೆಟ್ಟಿಲು ಮೂಲಕ ಧಡಧಡನೆ ಕೆಳಗಿಳಿದಳು.

ಎರಡೇ ಮಹಡಿ ಅಷ್ಟೇ, ಮುಂದೆ ದಾರಿ ಬಂದಾಗಿತ್ತು. ಎಲ್ಲೆಡೆ ಗುಂಪಾಗಿ ನಿಂತ ಜನ, ಪೋಲೀಸರ ಭದ್ರಕಾವಲು. ಇಲ್ಲೇನು ಗ್ರಹಚಾರ ಕಾದಿದೆಯೋ ಅಂದುಕೊಂಡು ಸುತ್ತು ಹಾಕಿ ಆಫೀಸ್ ಮುಂದೆ ಬಂದಳು. ಅಲ್ಲಿಯೂ ಹತ್ತಿಪ್ಪತ್ತು ಜನರ ಗುಂಪು. ಸುಂದರ ದೃಢಕಾಯದ ತರುಣನೊಬ್ಬ ಆಫೀಸ್ ಬಾಗಿಲು ಕೀಲಿ ತೆರೆಯಲು ಹೆಣಗುತ್ತಿದ್ದ.

"ಕಳಕ್ ಕಳಕ್" ಬೀಗ ಕಳಚಿತ್ತು. ಸಂತಸದ ಮುಖ ಅರಳಿತು. ಬಾಗಿಲು ದೂಡಲು ಆತ ಮುಂದಾದ.

"ನೋ. ಬಾಗಿಲು ದೂಡಬೇಡಿ."

ತನಗೆ ಅರಿವಿಲ್ಲದೇ ಆಕೆ ನುಡಿದಾಗ ಅಲ್ಲಿದ್ದ ಎಲ್ಲರ ಕಣ್ಣುಗಳೂ ಅವಳತ್ತ ಹರಿದವು. ರೋಜೀಯನ್ನು ಗುರುತಿಸಿದ್ದು ಕೇವಲ ಒಂದು ಜೊತೆ ಕಣ್ಣುಗಳು. ಅವುಗಳ ಯಜಮಾನನೇ ಶೇಖರ್, ಕೀಲಿ ತೆರೆದ ತರುಣ. ಮೇಜರ್ ಸಹ ಶೇಖರ್‌ನತ್ತ ನೋಡಿದ. ಬೆಲೆ ಬಾಳುವ ಸೇಂಟ್ ವಾಸನೆ ಅವನ ಮೂಗಿಗೂ ಬಡಿದಿತ್ತು.

ಅಷ್ಟರಲ್ಲೇ ಆಕೆ ಗುಂಪಿನ ಹಿಂದೆ ಮರೆಯಾಗಿದ್ದಳು.

"ಮೇಜರ್, ಅವಳೇ ರೋಜೀ. ಕೆಲಿಯಾನ್ ಜೊತೆ ರಾತ್ರಿ ಇದ್ದವಳು. ದಯವಿಟ್ಟು ತಾವು ಬಾಗಿಲು ತೆರೆಯದಿರುವುದೇ ಒಳ್ಳೆಯದು.

ಹೇಮಂತ ಬಾಗಿಲು ಹಾಗೂ ಬೀಗವನ್ನು ಸೂಕ್ಷ್ಮವಾಗಿ ಪರಿಶೀಲಿಸ ತೊಡಗಿದ.

ಹೋಲಿನಲ್ಲಿ ಕಣ್ಣಿನ ಸೂಕ್ಷ್ಮದೃಷ್ಟಿ ಹರಿದಾಗ ಮೈಯೆಲ್ಲಾ 'ಜುಂ' ಎಂದಿತು. ಅತೀ ಜಿನುಗಾದ ತಂತಿ ಬಲೆ ಹರಡಿದ್ದು ಗಮನಕ್ಕೆ ಬಂದಿತು. ಅದರೊಂದಿಗೆ ಬಾಗಿಲಿನಿಂದ ಎತ್ತೆತ್ತಲೋ ಹರಿದಾಡಿದ ತಾಮ್ರದ ತಂತಿಗಳು ಗೋಚರಿಸಿದವು. ಬಾಗಿಲ ಹಿಂದೆ ಒಂದು ಜೇಡ ತನ್ನ ಬಲೆಯನ್ನು ಹೆಣೆದಂತಿತ್ತು. ಖಂಡಿತವಾಗಿ ಅದು ವಿದ್ಯುತ್ ಬಲೆ ಎಂದು ಮನಗಂಡ ಆತ ಅದರ ನಿವಾರಣೆಗೆ ದಾರಿ ಯಾವದು ಎಂದು ಯೋಚಿಸುತ್ತಿರುವಾಗಲೇ ಆ ಯುವತಿಯ ನೆನಪಾಯಿತು. ಸನಿಹದಲ್ಲಿದ್ದ ಶೇಖರ್‌ನನ್ನು ಸನ್ನೆಯಿಂದ ಕರೆದು ಕೇಳಿದ.

"ಆ ಯುವತಿ ಯಾರು? ನಿನಗೆ ಪರಿಚಿತಳೆ?"

"ಆಕೆ ಯಾರೆಂಬುದು ನನಗೆ ಗೊತ್ತು. ಆದರೆ ನನಗವಳ ಪರಿಚಯವಿಲ್ಲ."

"ಯಾರವಳು?"

"ರೋಜೀ. ಕೆಲಿಯಾನ್‌ನ ರಾತ್ರಿ ಸಂಗಾತಿ."

"ಓಹ್. ಹಾಗಾದರೆ ಆಕೆ 'ಸೀಪರ್ಲ್' ಹೊಟೆಲ್‌ನ ಎಲ್ಲ ರಹಸ್ಯ ಬಲ್ಲವಳಾಗಿದ್ದಾಳೆ. ಈ ಬಾಗಿಲ ಹಿಂದಿನ ರಹಸ್ಯವೂ ಅವಳಿಗೆ ತಿಳಿದಿದೆ. ಅವಳನ್ನು ಕರೆಯಿರಿ."

ಆದರೆ ರೋಜೀ ಆಗಲೇ ಅಲ್ಲಿಂದ ಮರೆಯಾಗಿದ್ದಳು. ಅವರ ಹುಡುಕಾಟ ವ್ಯರ್ಥವಾಯಿತು. ಹೇಮಂತ ಉಪಾಯ ಸೂಚಿಸಿದ.

"ಶೇಖರ್ ಅವಳ ಮನೆ ಎಲ್ಲಿದೆ ಎಂಬುದನ್ನು ಕಂಡುಹಿಡಿದು ಅವಳನ್ನು ಕರೆದುಕೊಂಡೇ ಬನ್ನಿ." ಮರುಮಾತನಾಡದೇ ಶೇಖರ್ ಅಲ್ಲಿಂದ ಮೇಲೆದ್ದ. ಆತನ ಬೆನ್ನ ಹಿಂದೆಯೇ ಮೇಜರ್ ಅಶೋಕನನ್ನು ಕರೆದು ಪಿಸುಗುಟ್ಟಿದ.

"ರೋಜೀ ಜೀವ ಗಂಡಾಂತರದಲ್ಲಿದೆ. ಕೆಲಿಯಾನ್‌ನನ್ನು ಕೊಂದವರು ಅವಳನ್ನು ಬಿಡಲಾರರು. ನೀನು ಕೂಡಲೇ ಶೇಖರ್‌ನಿಗೆ ತಿಳಿಯದಂತೆ ಅವನನ್ನು ಅನುಸರಿಸು. ನನ್ನ ಮಾತಿನ ಅರ್ಥ ನಿನಗೆ ಆಯಿತಲ್ಲವೆ?"

"ಓಹೋ."

"ಸರಿ, ಹಾಗಾದರೆ ಬೇಗ ಅವನನ್ನು ಹಿಂಬಾಲಿಸು." ಮುಂದಿನ ಗಳಿಗೆ ಅಶೋಕ ಅಲ್ಲಿರಲಿಲ್ಲ. ಹೇಮಂತ ಮತ್ತೆ ಬಾಗಿಲಿನತ್ತ ಆಕರ್ಷಿತನಾದ. ಅಲ್ಲಿದ್ದ ಎಲ್ಲರನ್ನೂ ದೂರ ಸರಿಸಿದ. ಅವನ ಸಮೀಪವಿದ್ದವರು ಇಬ್ಬರು ಜನ ಮಾತ್ರ. ಸುಷಮಾ, ಎಸ್.ಪಿ. ರಾಮನಾಥ್.

"ರಾಮನಾಥ್ ಅವರೆ, ಈ ಬಾಗಿಲಿನಲ್ಲಿ ಏನೋ ರಹಸ್ಯವಿದೆ. ಅದನ್ನರಿಯದೇ ಬಾಗಿಲು ತೆರೆದವರು ಸಾವಿಗೆ ಶರಣಾಗುತ್ತಾರೆ. ಅದ್ಯಾವದು ಎಂಬುದನ್ನು ದಯವಿಟ್ಟು ಕಂಡುಹಿಡಿಯಿರಿ. ಸುಷಮಾ ನೀನೂ ಸಹ ನಮಗೆ ಸಹಾಯ ಮಾಡು."

ಮೂವರೂ ಆಫೀಸ್ ರೂಮಿನ ಬಾಗಿಲ ಮೇಲೆ ಮುಗಿಬಿದ್ದರು. ಬಾಗಿಲ ಮೇಲೆ ಬೆರಳಾಡಿಸಲಾರಂಭಿಸಿದರು. ಐದ್ಹತ್ತು ನಿಮಿಷಗಳ ಅವರ ಪ್ರಯತ್ನಕ್ಕೆ ಫಲ ದೊರೆಯಿತು. ಮೂವರಿಗೂ ಒಂದೊಂದು ಗುಪ್ತ ಮೊಳೆಗಳು ದೊರೆತಿದ್ದವು. ಮೊದಲು ರಾಮನಾಥರಿಗೆ ದೊರೆತ ಮೊಳೆಯನ್ನು ಅದುಮಿದರು. ಅದರಿಂದ ಯಾವುದೇ ರೀತಿಯ ಪ್ರತಿಕ್ರಿಯೆ ಬರಲಿಲ್ಲ. ಬಾಗಿಲ ಹಿಂದಿದ್ದ ವಿದ್ಯುತ್ ಜಾಲ ಹಾಗೇ ದೃಢವಾಗಿ ಉಳಿದಿತ್ತು. ಸುಷಮಾ ತನಗೆ ದೊರೆತ ಮೊಳೆಯನ್ನು ಅದುಮುತ್ತಲೂ ಬಾಗಿಲು ಹಿಡಿದಿದ್ದ ಮೂವರು ಚೀತ್ಕರಿಸಿದರು. ಮರದಂತೆ ಕಾಣುತ್ತಿದ್ದ ಉಕ್ಕಿನ ಬಾಗಿಲಿನಲ್ಲಿ ವಿದ್ಯುತ್ ಹರಿಯತೊಡಗಿತ್ತು. ಮೂವರೂ ಆ ವಿದ್ಯುತ್ ಬಲೆಗೆ ಸಿಲುಕಿಕೊಂಡಿದ್ದರು. ಮೈಯೆಲ್ಲಾ 'ಜುಂ' ಎಂದೆನ್ನುತ್ತ ದೇಹವನ್ನೆಲ್ಲ ಸೆಳೆದು ಮುದ್ದೆ ಮಾಡತೊಡಗಿತು. ಮೂವರ ಕಣ್ಣೆದುರು ಮೃತ್ಯು ತನ್ನ ಸಾವಿರ ನಾಲಿಗೆಗಳೊಂದಿಗೆ ನರ್ತಿಸಲಾರಂಭಿಸಿತು. ಸುಷಮಾಳಿಗೆ ಏನೆನಿಸಿತೋ ಏನೋ. ದೇಹದಲ್ಲಿದ್ದ ಎಲ್ಲ ಶಕ್ತಿ ಒಟ್ಟುಗೂಡಿಸಿ ಅದೇ ಮೊಳೆಯನ್ನು ಮತ್ತೊಂದು ಬಾರಿ ಅದುಮಿದಳು. ತಕ್ಷಣ ವಿದ್ಯುತ್ ಹರಿದಾಟ ನಿಂತು ಅವರು ಮೃತ್ಯುವಿನಿಂದ ಪಾರಾಗಿದ್ದರು. ಮೈತುಂಬ ಬೆವರು ಸುರಿಯುತ್ತಿದ್ದಂತೆ ಎಸ್.ಪಿ. ಅವರು ಹಾಗೇ ನೆಲಕ್ಕೆ ಕುಸಿದರು.

ಕೂಡಲೇ ಅಲ್ಲಿಯೇ ಇದ್ದ ಪೋಲೀಸರು ಅವರತ್ತ ಧಾವಿಸಿದರು. ಹೇಮಂತ ಅವರನ್ನು ಪರೀಕ್ಷಿಸಿ ಯಾವ ಅಪಾಯ ಇಲ್ಲವೆಂದು ತಿಳಿಸಿದ. ಅವರನ್ನೆತ್ತಿ ಫ್ಯಾನ್ ಕೆಳಗಡೆ ಮಲಗಿಸಿದರು, ಮಂಚದ ಮೇಲೆ. ನೀರು ಚಿಮುಕಿಸಿದ ನಂತರ ಅವರು ಮೆಲ್ಲನೆ ಕಣ್ತೆರೆದರು.

"ಓಹ್, ದೇವರೆ ಇದೇನಾಯಿತು?" ಅವರ ಉದ್ಗಾರಕ್ಕೆ ಹೇಮಂತನ ಮುಗುಳ್ನಗೆಯೇ ಉತ್ತರವಾಯಿತು. ಅವರು ಎದ್ದು ಕುಳಿತುಕೊಳ್ಳುತ್ತಲೂ ಆತ ಮತ್ತೆ ಬಾಗಿಲಿನತ್ತ ನಡೆದ. ಸುಷಮಾ ಅವನನ್ನು ಹಿಂಬಾಲಿಸಿದಳು. ಅವಳಿಗೆ ಹಿಂದೆ ಸರಿಯಲು ತಿಳಿಸಿದ ಹೇಮಂತ ತನಗೆ ದೊರೆತ ಮೊಳೆಯನ್ನು ಅದುಮಿದವನೇ ಹಿಂದಕ್ಕೆ ಸರಿದ. ಯಾವ ಪರಿಣಾಮವೂ ಆಗಲಿಲ್ಲ. ಒಂದೆರಡು ನಿಮಿಷ ಪ್ರತೀಕ್ಷೆ ಮಾಡಿದ ಆತ ನಿಧಾನವಾಗಿ ಮುಂದೆ ಬಂದು ಬಾಗಿಲು ಮುಟ್ಟಿದ. ವಿದ್ಯುತ್ ಅಲೆಗಳಿರಲಿಲ್ಲ. ಹಾಗಾದರೆ ಇದೇನಿರಬಹುದು ಆತ ಯೋಚಿಸಲಾರಂಭಿಸಿದ. ಸ್ವಲ್ಪ ಸಮಯ ನಿಂತು ಯೋಚಿಸಿದ ಆತ ಕೀ ಹೋಲಿನಲ್ಲಿ ದೃಷ್ಟಿ ತೂರಿದ. ಉತ್ತರ ಹೊಳೆದಿತ್ತು. ಬಾಗಿಲ ಹಿಂದಿದ್ದ ವಿದ್ಯುತ್ ಜಾಲ ಮಾಯವಾಗಿತ್ತು. ಈಗ ಬಾಗಿಲು ತೆರೆಯಲು ಯಾವ ಅಡೆತಡೆಯೂ ಇಲ್ಲ ಎಂದು ನಿರ್ಧರಿಸಿ ಮೆಲ್ಲನೆ ಬಾಗಿಲು ದೂಡಿದ. ಹಿಂದಿದ್ದವರಲ್ಲಿ ಕೆಲವರು ಎರಡೂ ಕಿವಿಗಳನ್ನು ಕೈಗಳಿಂದ ಮುಚ್ಚಿಕೊಂಡು ಗಟ್ಟಿಯಾಗಿ ಕಣ್ಣು ಮುಚ್ಚಿದರೆ ಕೆಲವರು ಉಸಿರು ಬಿಗಿ ಹಿಡಿದು ಎದೆ ಮೇಲೆ ಕೈ ಇಟ್ಟುಕೊಂಡರು. ಸುಷಮಾಳ ಪುಟ್ಟ ಹೃದಯ ಒಂದೇ ಒಂದು ಸೆಕೆಂಡು ಕಾಲ ಸ್ತಬ್ಧವಾಗಿತ್ತು ಅಷ್ಟೇ.

ಎಲ್ಲರೂ ನಿರೀಕ್ಷಿಸಿದ್ದ ಯಾವ ಭಯಾನಕ ಘಟನೆಗಳು ನಡೆಯಲಿಲ್ಲ. ಬಾಗಿಲು ತೆರೆಯುತ್ತಲು ಒಳಗೆ ಕಾಲಿಟ್ಟ ಹೇಮಂತ ಹಿಂದಿದ್ದವರಿಗೆ ಬರಲು ಸಂಜ್ಞೆ ಮಾಡಿದ. ಸಮಾಧಾನದ ಉಸಿರಿನೊಂದಿಗೆ ಅವರೆಲ್ಲ ಹಿಂಬಾಲಿಸಿದರು.

ಅದೊಂದು ದೊಡ್ಡದಾದ ಹಾಲ್. ಹಾಲ್‌ನ ಒಂದು ಗೋಡೆ ತುಂಬೆಲ್ಲ ಬೀರುಗಳೇ ತುಂಬಿದ್ದವು. ಇನ್ನೊಂದು ಮೂಲೆಯಲ್ಲಿ ಬೆಲೆ ಬಾಳುವ ಅಷ್ಟೇ ವಿಶಾಲವಾದ ಕರಿಮರದ ಮೇಜು. ಮೇಜಿನ ಮೇಲೆ ಮೂರು ಫೋಟೋಗಳು. ಟೇಬಲ್ ಕ್ಯಾಲೆಂಡರ್, ಪೆನ್ ಸ್ಟ್ಯಾಂಡ್. ಮೇಜಿನ ಹಿಂದೆ ಎತ್ತರದ ಕುರ್ಚಿ. ಎದುರು ಕರಿಮರದಲ್ಲೇ ಮಾಡಿದ ನಾಲ್ಕು ಸುಂದರ ಕುರ್ಚಿಗಳು. ಅದರ ಎಡಭಾಗದಲ್ಲಿ ಗೋಡೆಗೆ ಹೊಂದಿ ಸೋಫಾ, ಟೀಪಾಯ್ ಮತ್ತೊಂದು ಮೂಲೆಯಲ್ಲಿ ಟೀವಿ. ಅದರ ಪಕ್ಕದಲ್ಲೇ ಫ್ರಿಜ್. ಫ್ರಿಜ್‌ನಿಂದ ಎರಡೇ ಹೆಜ್ಜೆ ಅಂತರದಲ್ಲಿ ಬಾತ್‌ರೂಮ್. ನೋಡುತ್ತಲೂ ವೈಭವಶಾಲಿ ಎಂದು

ಹೇಳುವ ಹಾಲ್‌ನ ತುಂಬೆಲ್ಲ ಹಾಸಿದ ನೀಲಿ ಬಣ್ಣದ ಇರಾನಿ ಕಂಬಳಿ ಅದಕ್ಕೊಂದು ವಿಶೇಷ ಸೌಂದರ್ಯ ತಂದುಕೊಟ್ಟಿತ್ತು. ತಲೆಯ ಮೇಲೆ ತೂಗುವ ಕೆಂಪು ವರ್ಣದ ಫ್ಯಾನ್. ಮೂರೂ ಗೋಡೆಗಳ ಮೇಲೆ ಸುಂದರ ತೈಲಚಿತ್ರಗಳು.

ಒಂದು ಬಾರಿ ವಿಹಂಗಮ ದೃಷ್ಟಿ ಬೀರಿದ ನಂತರ ಶೋಧನೆಗೆ ಆರಂಭಿಸಿದ. ಬೀರುವಿನ, ಟೇಬಲ್ ಡ್ರಾದ ಎಲ್ಲ ಬೀಗಗಳು ಅವರ ಕೈಯಲ್ಲಿ ಚಟ್‌ಪಟ್ ಬಾಯಿ ತೆರೆದವು. ಎಲ್ಲಾ ತಡಕಾಡಿದ. ಬರೀ ಕಾಗದ ಪತ್ರ ಗಳಿಂದ ತುಂಬಿದ್ದವು. ಅವುಗಳನ್ನು ತಡಕಾಡಿದ. ಹಾಂಕಾಂಗ್‌ದ ಒಂದು ದೊಡ್ಡ ಫ್ಯಾಕ್ಟರಿಗೆ ಸೇರಿದ ಫೈಲ್ ಕಣ್ಣಿಗೆ ಬಿತ್ತು. ಅದರ ಪಕ್ಕದಲ್ಲೇ ಚಿಕ್ಕ ಡೈರಿ. ಅವೆರಡನ್ನೂ ಎತ್ತಿ ಸುಷಮಾ ಕೈಗೆ ನೀಡಿದ. ಇನ್ನೇನು ಹೊರ ಬೀಳಬೇಕು ಅನ್ನುವಷ್ಟರಲ್ಲಿ ಅಕಸ್ಮಿಕವಾಗಿ ಎಂಬಂತೆ ಸುಷಮಾಳ ಕೈಯಲ್ಲಿಯ ಫೈಲ್ ಟಿ.ವಿ. ಮೇಲಿದ್ದ "ಹಾಂಗ್‌ಕಾಂಗ್ ಸುಂದರಿ"ಗೆ ತಗಲಿತು. ಚೀನೀ ಮಣ್ಣಿನಲ್ಲಿ ತಯಾರಿಸಿದ ಗಾಜಿನ ಗೊಂಬೆಯಂತಿದ್ದ ಆ ಸುಂದರಿ ನೆಲಕ್ಕೆ ಬಿದ್ದು ಎಲ್ಲಿ ಹಲವಾರು ಚೂರಾಗುತ್ತಾಳೋ ಎಂದು ಹೆದರಿದ ಸುಷಮಾ ಗಬಕ್‌ನೆ ಅದನ್ನು ಹಿಡಿದಳು.

ಆಶ್ಚರ್ಯ!

ಬೊಂಬೆ ಸ್ವಲ್ಪವೂ ಕದಲಿರಲಿಲ್ಲ.

ಟಿ.ವಿ. ಮೇಲೆ ಆ ಚೀನೀ ಸುಂದರಿ ಶಾಶ್ವತವಾಗಿ ಅಂಟಿಕೊಂಡಿದ್ದಳು.

ಕುತೂಹಲ ತಾಳಲಾರದೆ ಸುಷಮಾ ಅದರಲ್ಲೇನೋ ರಹಸ್ಯವಿರಲೇ ಬೇಕೆಂದು ಹಾಂಕಾಂಗ್ ಸುಂದರಿಯ ನಡುವನ್ನು ತನ್ನ ಮೂರು ಬೆರಳುಗಳಲ್ಲಿ ಹಿಡಿದು ಸೂಕ್ಷ್ಮವಾಗಿ ತಿರುಗಿಸಿದಳು. 'ಗರ್‍ರ್‍ರ್' ಸದ್ದಿನೊಂದಿಗೆ ಕರಿಮರದ ಮಂಚ ಮೂರು ಫೂಟಿನಷ್ಟು ಸರಿಯಿತು. ಎಸ್.ಪಿ. ರಾಮನಾಥ್ ಹಾಗೂ ಅವರ ಜೊತೆ ಇದ್ದ ಪೊಲೀಸರು, ಪಂಚರೂ ತುಸು ಗಾಬರಿಯಿಂದ ಅತ್ತ ನೋಡಿದರು. ಹೇಮಂತನ ಮುಖದ ಮೇಲೆ ಮಾತ್ರ ಮಂದಹಾಸ ಮೂಡಿ ಮಾಯವಾಯಿತು. ಸುಷಮಾಳೆಡೆ ಹೆಮ್ಮೆಯ ದೃಷ್ಟಿ ಬೀರಿ ಕರಿಮರದ ಮೇಜಿನತ್ತ ನಡೆದ. ಅವನ ಕಣ್ಣುಗಳು ಸಂತಸದಿಂದ ಮಿನುಗಿದವು.

ದೊಡ್ಡ ಮೇಜಿನ ಕೆಳಗೆ ಚಿಕ್ಕ ಮೇಜೊಂದು ಕಾಣಿಸಿತು. ಅದಕ್ಕೆ ಮೂರು ಚಿಕ್ಕ ಚಿಕ್ಕ ಬೀರುಗಳು. ಕ್ಷಣ ಮಾತ್ರದಲ್ಲಿ ಮಾಸ್ಟರ್ ಕೀಯಿಂದ ಮೂರೂ ಬೀಗ ತೆರೆದ ಮೇಜರ್. ಅವನಿಗೆ ಗುಪ್ತನಿಧಿಯೇ ದೊರೆತಂತಾ ಯಿತು. ಒಂದೆರಡು ಅಲ್ಬಂ, ಹತ್ತಾರು ಪಾಸ್‌ಪೋರ್ಟ್‌ಗಳು, ಕೆಲವೊಂದು

ಗುಪ್ತ ಕಾಗದಪತ್ರಗಳು, ಆಸ್ತಿ ವಿವರಗಳುಳ್ಳ ನಕಾಶೆಗಳು. ಸುಷಮಾ ಒಂದೊಂದೇ ಪಾಸ್‌ಪೋರ್ಟ್, ಅದಕ್ಕೆ ಲಗತ್ತಿಸಿದ ಫೋಟೋ ನೋಡುತ್ತ ಹೋದಳು ಎಲ್ಲ ನೋಡಿ ಮುಗಿದ ಮೇಲೆ ರಹಸ್ಯ ಹೊರಗೆಡವಿದಳು.

"ಈ ಎಲ್ಲ ಪಾಸ್‌ಪೋರ್ಟ್‌ಗಳು ಒಂದೇ ವ್ಯಕ್ತಿಯವು. ಹೆಸರು ಬೇರೆ. ಮೇಕಪ್ ಬೇರೆ ಅಷ್ಟೇ. ನನಗೆನಿಸುವ ಮಟ್ಟಿಗೆ ಈತನೇ 'ಸೀಪರ್ಲ್'ದ ಸ್ಲೀಪಿಂಗ್ ಪಾರ್ಟನರ್ ಇರಬೇಕು."

"ಅಂದರೆ, ಅಂದರೆ ಈತ ಚಿನ್‌ಲಿಯೋನಿನ್‌ನೇ?" ಸುಷಮಾಳ ಮಾತಿಗೆ ತಟಕ್ಕನೆ ಪ್ರತಿಕ್ರಿಯೆ ವ್ಯಕ್ತಪಡಿಸಿದವರು ಎಸ್.ಪಿ. ರಾಮನಾಥ್ ಅವರು."

"ನಿಮ್ಮ ಮಾತು ನೂರಕ್ಕೆ ನೂರು ಸತ್ಯ ಎಸ್.ಪಿ. ಸಾಹೇಬರೆ. ಈ 'ಸೀಪರ್ಲ್' ಹೊಟೆಲ್‌ಗೆ ಮಾಲಿಕ ಇಲ್ಲಿ ನಡೆದ ರಾದ್ಧಾಂತಗಳಿಗೆ ಹಾಗೂ ಕೆಲಿಯಾನ್‌ನ ಕೊಲೆಗೂ ಈತನೇ ಕಾರಣ." ಹೇಮಂತ ಉತ್ತರಿಸಿದ.

"ಅದ್ಹೇಗೆ ಸಾಧ್ಯ? ಕೆಲಿಯಾನ್ ಹಾಗೂ ಚಿನ್‌ಲಿಯೋಲಿನ್ ಇಬ್ಬರೂ ಒಂದೇ ದೇಶದವರಲ್ಲವೆ?"

"ಅದೇ ಈ ಕೇಸಿನ ರಹಸ್ಯ. ಕೆಲಿಯಾನ್ ಬಂದದ್ದು ಚಿನ್‌ನ ನಿಮಂತ್ರಣದ ಮೇರೆಗೆ. ಯಾರ ನಿಮಂತ್ರಣದ ಮೇರೆಗೆ ಬಂದನೋ ಅವರಿಂದಲೇ ಸಾವಿಗೆ ತುತ್ತಾದ ಕೆಲಿಯಾನ್‌ನ ಹಿಂದಿನ ರಹಸ್ಯ ನಾವೀಗ ಕಂಡು ಹಿಡಿಯಬೇಕಾಗಿದೆ. ಅದಲ್ಲದೆ..."

ಒಮ್ಮೆಂದೊಮ್ಮೆಲೆ ಮಾತು ನಿಲ್ಲಿಸಿದ ಹೇಮಂತ.

ಸೀರೆ ಸೆರಗಿನಿಂದ ಮುಖ, ಕೊರಳು ಒರೆಸಿಕೊಳ್ಳುತ್ತಿದ್ದ ಸುಷಮಾ ತನ್ನ ಕೆಂಪಗಾದ ಮುಖವನ್ನೆತ್ತಿ ಅವನತ್ತ ನೋಡಿದಳು. ರಾಮನಾಥ್ ಸಹ ಗಲ್ಲ, ಕತ್ತು ತುದಿಬೆರಳಿನಿಂದ ಕೆರೆದುಕೊಳ್ಳುತ್ತ ಅವನತ್ತ ಆಕರ್ಷಿತರಾದರು.

"ಸುಷಮಾ, ನನ್ನ ಅಶಂಕೆ ನಿಜವಾಯಿತು. ನಾವೀಗ ಅಪಾಯದಲ್ಲಿದ್ದೇವೆ"

"ಯಾವ ಅಶಂಕೆ? ಯಾವ ಅಪಾಯ?" ಗಾಬರಿಯಾದ ಪಂಚರ ಪೈಕಿ ಒಬ್ಬ ಪ್ರಶ್ನಿಸಿದ.

"ಹೇಳುತ್ತೇನೆ ಕೇಳಿ– ನಮಗೆ ಮೂರು ಮೊಳೆ ಬಾಗಿಲಲ್ಲಿ ಗುಪ್ತವಾಗಿದ್ದ ಸ್ಥಿತಿಯಲ್ಲಿ ದೊರೆತವು. ಒಂದನ್ನು ಎಸ್.ಪಿ. ಸಾಹೇಬರು ಅದುಮಿದರು. ಯಾವ ಪರಿಣಾಮವೂ ಆಗಲಿಲ್ಲ. ಸುಷಮಾ ಒತ್ತಿದ ಮೊಳೆಯಿಂದಾಗಿ ವಿದ್ಯುತ್ ಪ್ರವಹಿಸಿತು. ನಾನು ಒತ್ತಿದ ಮೊಳೆಯಿಂದಾಗಿ ಬಾಗಿಲ ಹಿಂದೆ ಇದ್ದ ವಿದ್ಯುತ್ ತಂತಿ ಜಾಲ ಮಾಯವಾಯಿತು. ನಾನು ಒಳಗೆ ಬಂದರೂ

ಒಂದೇ ವಿಷಯದ ಬಗ್ಗೆ ಚಿಂತಿಸುತ್ತಿದ್ದೆ. ಎಸ್.ಪಿ. ಸಾಹೇಬರು ಒತ್ತಿದ ಮೊಳೆಯಿಂದ ಎಲ್ಲೋ ಒಂದು ಕಡೆ ನಮಗೆ ಅರಿವಾಗದಂತೆ ಪ್ರತಿಕ್ರಿಯೆ ಆಗಿದೆ ಎಂದು. ಅದಾವದು ಎಂದು ಈಗರ್ಥವಾಯಿತು."

"ಯಾವ ಪ್ರತಿಕ್ರಿಯೆಯಾಗಿದೆ? ಎಲ್ಲಿ?" ಎಸ್.ಪಿ.ಯವರ ಪ್ರಶ್ನೆ ಹಿಂದೆಯೇ ಬಂದಿತು

"ಅದರ ಪ್ರತಿಕ್ರಿಯೆ ಇಲ್ಲೇ ಆಗಿದೆ. ಅದಕ್ಕೆ ಸಾಕ್ಷಿ ನೀವು ಮುಖ ಕೆರೆದುಕೊಳ್ಳುತ್ತಿರುವದು. ಬೇಕೆಂದರೆ ಇದರ ಬಗ್ಗೆ ಸುಷಮಾಳನ್ನು ನೀವು ಪ್ರಶ್ನಿಸಬಹುದು. ಏಕೆಂದರೆ ಆಕೆಯೂ ಸಹಿತ ತನ್ನ ಕತ್ತು, ಮುಖ ಒರೆಸಿ ಕೊಳ್ಳುತ್ತಿದ್ದಾಳೆ. ರಾಮನಾಥ್ ಅವರು ಸುಷಮಾಳತ್ತ ನೋಡಿದರು. ಅವಳ ಮುಖ ಕೆಂಜಗದಂತಾಗಿದೆ ಎನಿಸಿತು.

"ಹೌದು ಎಸ್.ಪಿ ಸಾಹೇಬರೇ, ಎರಡು ಮೂರು ನಿಮಿಷಗಳಿಂದ ಈ ಹಾಲ್‌ನಲ್ಲಿಯ ವಾತಾವರಣದಲ್ಲಿ ಉಷ್ಣತೆ ಹೆಚ್ಚಾಗುತ್ತಿದೆ ಎನಿಸುತ್ತಿದೆ."

"ಸುಷಮಾಳ ಮಾತು ನಿಜ. ಈ ಹಾಲ್‌ನಲ್ಲಿ ವಿದ್ಯುತ್ ಮೂಲಕ ಉಷ್ಣತೆ ಹಾಯುತ್ತಿದೆ. ಬಹುಶಃ ಗೋಡೆಗಳಲ್ಲಿ ಸ್ಟೀಲ್ ಚಾದರವಿರಬೇಕು. ನೀವು ಮೊಳೆ ಅದುಮಿದಾಗ ಅವುಗಳಲ್ಲಿ ವಿದ್ಯುತ್ ಹರಿಯಲು ಪ್ರಾರಂಭಿಸಿ ಕೋಣೆಯಲ್ಲಿ ಉಷ್ಣತೆ ಹೆಚ್ಚುತ್ತಿದೆ. ಇದು ಹೆಚ್ಚುತ್ತ ಹೋದರೆ ನಾವು ನಮ್ಮ ಶರೀರವನ್ನು ಪರಪರ ಕೆರೆದುಕೊಳ್ಳತೊಡಗುತ್ತೇವೆ. ದೇಹದ ಮೇಲೆ ಗುಳ್ಳೆಗಳು ಏಳಲಾರಂಭಿಸುತ್ತವೆ. ಕೆರೆದುಕೊಳ್ಳುತ್ತಲೂ ಅವು ಒಡೆದು ರಕ್ತ ಸೋರಲಾರಂಭಿಸುತ್ತದೆ. ಮುಂದೆ ಸಾವು ಖಂಡಿತ. ನಾವು ಕೂಡಲೇ ಹೊರಗೆ ನಡೆಯಬೇಕು."

"ಅದೇ ನಿಮಗೆಲ್ಲರಿಗೂ ಸೂಕ್ತ ಮಾರ್ಗ ಮೇಜರ್."

ಗಡಸು ಕಂಠ ಒಮ್ಮಿಂದೊಮ್ಮೆಲೆ ಕೇಳಿ ಬಂದಾಗ ಎಲ್ಲರೂ ಬಾಗಿಲತ್ತ ಹೊರಳಿದರು. ಫೇಂಡಾ ಮೃಗದಂಥ ಮಾನವನೊಬ್ಬ ನಿಂತಿದ್ದ.

"ಯಾರು ನೀನು? ನಿನ್ನ ವರ್ತನೆಗೆ ನೀನು ಪಶ್ಚಾತ್ತಾಪ ಪಡಬೇಕಾಗುತ್ತದೆ." ಮೇಜರ್ ಎಚ್ಚರಿಸಿದ.

"ಅದು ಮುಂದಿನ ಮಾತು. ಮೊದಲು ಈ ವಿದ್ಯುಲ್ಲತೆಯ ಸಾವಿನ ಪಂಜರದಿಂದ ಪಾರಾಗಿ. ನಿಮ್ಮ ಬಳಿಯಿರುವ ಎಲ್ಲಾ ಫೈಲು, ಅಲ್ಬಮ್, ಪಾಸ್‌ಪೋರ್ಟ್ ನೀಡಿ ಅಂದರೆ ನಿಮ್ಮನ್ನು ಈ ಮೃತ್ಯುಪಂಜರದಿಂದ ಪಾರು ಮಾಡುವೆ."

"ಓಹ್, ಇದೋ ಸಮಾಚಾರ. ಮಿಸ್ಟರ್ ಫೆಂಡಾ ನಿನ್ನ ಮಾತನ್ನು

ನಾ ಕೇಳಲಾರೆ." ಹೇಮಂತನ ಕೈ ಜೇಬಿನತ್ತ ಸರಿಯುತ್ತಿದ್ದಂತೆ ಫೇಂಡಾ ಮನುಷ್ಯ ಸರಕ್‌ನೆ ಬಾಗಿಲು ಎಳೆದುಕೊಂಡು ಮರೆಯಾದ. ಬಾಗಿಲ ಮೇಲೆ ಎರಡು ಬುಲೆಟ್ ಸಿಡಿದು ಹುತಾತ್ಮವಾದವು. ಅವು ಸುಷಮಾಳ ರಿವಾಲ್ವರ್‌ನಿಂದ ಸಿಡಿದವಾಗಿದ್ದವು,

ಅತೀ ವಿಕಟ ಅಷ್ಟೇ ಸಂಕಟ ಪರಿಸ್ಥಿತಿಯಲ್ಲಿ ಅವರೆಲ್ಲ ಸಿಲುಕಿಕೊಂಡರು. ಹಾಲ್‌ನಲ್ಲಿದ್ದ ತಾಪಮಾನ ಏರತೊಡಗಿತು. ಹೊರಗಡೆ ಹೋಗುವ ಬಾಗಿಲು ಬಂದಾಗಿತ್ತು. ಕೀಲಿ ತೆರೆಯಲು ಮತ್ತೆ ಹೇಮಂತ ಭಗೀರಥ ಪ್ರಯತ್ನ ನಡೆಸಬೇಕಿತ್ತು. ಅಷ್ಟರಲ್ಲಿ ಎಲ್ಲರೂ ಸುಟ್ಟು ಭಸ್ಮವಾಗಬಹುದಿತ್ತು. ಭೂತ ಬಡಿದವರಂತೆ ಎಲ್ಲರೂ ಆರ್ತರಾಗಿ ಮೇಜರನತ್ತ ದೃಷ್ಟಿ ಬೀರಿದರು.

"ಭಯಪಡಬೇಡಿ. ಧೈರ್ಯವಾಗಿರಿ. ಇಲ್ಲಿಂದ ಹೊರಗೆ ಹೋಗಲು ಈ ಬಾಗಿಲು ಅಲ್ಲದೇ ಬೇರೆ ದಾರಿ ಇರಬೇಕೆಂದು ನನಗೆನಿಸುತ್ತದೆ. ಬನ್ನಿ ಎಲ್ಲರೂ ಕೂಡಿ ಹುಡುಕೋಣ."

ಎಲ್ಲರೂ ಕೂಡಿ ಒಂದೇ ಬಾರಿ ಹಾಲ್ ಮೇಲೆ ದಾಳಿ ಮಾಡಿದರು. ಕೆಲವೇ ನಿಮಿಷಗಳ ಹಿಂದೆ ವೈಭವಶಾಲಿ ಸುಂದರ ಕೋಣೆಯಾಗಿದ್ದ ಅದು ಈಗ ಕೆಲವೇ ನಿಮಿಷಗಳ ಹಿಂದೆ ಭೂಕಂಪವಾದ ಸ್ಥಿತಿಯಲ್ಲಿತ್ತು. ಅಲ್ಲಿದ್ದ ಎಲ್ಲ ವಸ್ತುಗಳು ಎತ್ತಬೇಕತ್ತ ಚೆಲ್ಲಾಪಿಲ್ಲಿಯಾಗಿ ಹರಡಿದವು. ಏನೇ ಆದರೂ ಎಲ್ಲಿಯೂ ಸುಳಿವು ದೊರೆಯಲಿಲ್ಲ.

ಸೋತು ಬಸವಳಿದು ನೆಲಕ್ಕೆ ಕುಸಿದರು.

ರಾಮನಾಥ್, ಸುಷಮಾ ಹಾಗೂ ಹೇಮಂತ ಇನ್ನೂ ಕಾರ್ಯವಗ್ನರಾಗಿದ್ದರು. ಮತ್ತೆರಡು ನಿಮಿಷಗಳು ಕಳೆಯುವಷ್ಟರಲ್ಲಿ ವಿಪರೀತ ಏರಿದ ಉಷ್ಣತೆಯಿಂದಾಗಿ ಚರ್ಮಕ್ಕೆ ಚುರುಕು ಮುಟ್ಟತೊಡಗಿತು. ಸೋಲೊಪ್ಪಿಕೊಂಡ ಮೂವರೂ ಹಾಲ್ ಮಧ್ಯೆ ತಲೆ ಮೇಲೆ ಕೈಹೊತ್ತು ನಿಂತರು. ಎಸ್.ಪಿ. ರಾಮನಾಥ್ ಅವರು ತಮ್ಮ ಚುರುಕು ದೃಷ್ಟಿ ಸುತ್ತಲೂ ಬೀರಿದರು, ಹೊಸದಾಗಿ ಕಟ್ಟಿದ ಮನೆಗೆ ದೃಷ್ಟಿಯಾಗಬಾರದೆಂದು ತೂಗು ಹಾಕುವ ದೃಷ್ಟಿ ಬೊಂಬೆ ರಾಕ್ಷಸ ಮುಖ ಟೀವಿಯಿಂದ ನಾಲ್ಕು ಫೂಟು ಎತ್ತರದಲ್ಲಿ ಗೋಡೆಗೆ ತೂಗು ಹಾಕಲ್ಪಟ್ಟಿತ್ತು. ಅದರತ್ತ ಬೆರಳು ಮಾಡಿ ತೋರಿಸಿ ಹೇಳಿದರು.

"ಮೇಜರ್, ನನಗೇಕೋ ಆ ರಾಕ್ಷಸ ಮುಖದ ಬಗ್ಗೆ ಸಂಶಯ ಬರುತ್ತಿದೆ."

"ವೆಲ್‌ಡನ್ ಎಸ್.ಪಿ. ಸಾಹೇಬರೆ, ನಿಮ್ಮ ದೃಷ್ಟಿ ತುಂಬಾ ಚುರುಕು. ಖಂಡಿತವಾಗಿ ನಮಗೆ ಈ ರಾಕ್ಷಸನ ಮುಖವೇ ದಾರಿ ತೋರುತ್ತದೆ.

ನೋಡ್ತಾ ಇರಿ."

ಎರಡೇ ಹಾರಿಕೆಗೆ ರಾಕ್ಷಸಮುಖ ಸಮೀಪಿಸಿದ ಹೇಮಂತ ಅದನ್ನು ಕಿತ್ತಲು ಪ್ರಯತ್ನಿಸಿದ. ಅದು ಮಿಸುಕಲಿಲ್ಲ. ಅದರ ತುಂಬ ಕೈಯಾಡಿಸಿದ. ಏನೂ ತಗಲಲಿಲ್ಲ. ಆದರ ಎರಡೂ ಕಣ್ಣು ಮೂಗುಗಳನ್ನು ಬೆರಳಿನಿಂದ ಅದುಮಿದ. 'ಊಂ ಹೂಂ' ಆ ಬೊಂಬೆ ಮಾತನಾಡಲಿಲ್ಲ. ಕೊನೆಯ ಪ್ರಯತ್ನವೆಂದು ಬೊಂಬೆಯನ್ನು ತಿರುಗಿಸಿದ. ಅದು ಯಾವದೇ ರೀತಿಯ ಕಷ್ಟವಿಲ್ಲದೆ ಸರಾಗವಾಗಿ ತಿರುಗಿತು. ಪೂರ್ಣ ಅರ್ಧ ವರ್ತುಳ ತಿರುಗುತ್ತಲೂ ಎಡಭಾಗದ ಸೋಫಾದ ಮೇಲಿನ ತಾರಸಿ ನಿಧಾನವಾಗಿ ಸರಿದು ಅದರಿಂದ ಏಣಿಯೊಂದು ಕೆಳಗಿಳಿಯಿತು.

"ಹುರ‍್ರ್ರ್ರೇ...ಹುರ‍್ರ್ರ್ರ್ರ್ರ" ಎಂದು ಕಿರುಚಿದ ಅಶೋಕ ಏಣಿಯತ್ತ ಓಡಿದ. ತಮ್ಮ ಜೀವಂತ ದಹನವಾಗುವದೇ ಸತ್ಯ ಎಂದು ನಿರ್ಧರಿಸಿದವರೆಲ್ಲ ಪುನರ್ಜನ್ಮ ಬಂದಂತಾಗಿ ಅವನ ಹಿಂದೆ ಓಡಿದರು. ಸುಷಮಾ ಹೆಮ್ಮೆಯಿಂದ ಮೇಜರ್‌ನಡೆ ನೋಡಿದಳು. ಎಸ್.ಪಿ.ಯವರು ಅವನ ಬೆನ್ನು ತಟ್ಟಿದರು.

ಎಲ್ಲರೂ ಮೇಲೆ ಬಂದರು.

ಅದೊಂದು ಕಂಪ್ಯೂಟರ್ ಹಾಲ್. ಕನಿಷ್ಟಪಕ್ಷ ಹತ್ತು ದೊಡ್ಡ ದೊಡ್ಡ ಕಂಪ್ಯೂಟರ್‌ಗಳು ಅದರಲ್ಲಿದ್ದವು. ಅದರ ತುಂಬ ಚಿತ್ರಗಳು ಓಡುತ್ತಿದ್ದವು. ಅದನ್ನು ನೋಡಿ ಎಲ್ಲರಿಗೂ ಅಚ್ಚರಿ, ದಿಗ್ಭ್ರಹ್ಮೆ. 'ಸೀಪರ್ಲ್' ಹೊಟೆಲ್‌ನ ಎಲ್ಲ ಭಾಗಗಳು ಒಂದರ ಹಿಂದೆ ಒಂದರಂತೆ ಅದರಲ್ಲಿ ಮೂಡಿ ಮಾಯವಾಗು ತ್ತಿದ್ದವು.

"ಓ, ಗಾಡ್, ಇದು ಆ ಸೈತಾನ್ ಚಿನ್‌ಲಿಯೋಲಿನ್‌ನ ಪ್ರಯೋಗ ಶಾಲೆ ಇರಬೇಕು."

ಹೇಮಂತ ಉದ್ಗರಿಸಿದ. ಅವನ ಮಾತಿನ್ನೂ ಮುಗಿದಿರಲಿಲ್ಲ ವಿಕಟ ನಗೆ ಅದರ ಹಿಂದೆಯೇ ವ್ಯಂಗ್ಯ ಮಾತುಗಳು ಕೇಳಿಬಂದವು.

"ನಿಜ, ನಿಜ ಮೇಜರ್ ಹೇಮಂತ. ನಿನ್ನ ಮಾತು ನಿಜ. ನೀನು ಮಹಾ ಮೇಧಾವಿ. ಅಭೇದ್ಯ ಗೋಡೆಯನ್ನು ಭೇದಿಸಿ ಅದರೊಳಗಿರುವ ರಹಸ್ಯವನ್ನು ಹೊರತೆಗೆಯಬಲ್ಲ ಮಾಂತ್ರಿಕ ನೀನು ಎಂಬುದನ್ನು ಸಿದ್ಧಪಡಿಸಿದೆ"

"ಯಾರು ನೀನು? ನಿನ್ನ ದನಿ ಎಲ್ಲಿಯೋ ಕೇಳಿದೆಯಂತಿದೆಯಲ್ಲ?"

"ಇದೂ ಸುಳ್ಳಲ್ಲ. ನೀನು ನನ್ನ ದನಿ ಸಹ ಕೇಳಿರುವೆ. ನನ್ನ ಪರಿಚಯು ಸಹ ನಿನಗಿದೆ"

"ಓಹ್. ಹಾಗಾದರೆ ನೀನು....ನೀನು ಚಿನ್‌ಲಿಯೋಲಿನ್"

"ಕರೆಕ್ಟ್. ನೂರಕ್ಕೆ ನೂರು ದಿಟ. ಇಲ್ಲಿಯವರೆಗೂ ಬಂದ ನಿನ್ನನ್ನು ನಾನು ಅಭಿನಂದಿಸಲೇಬೇಕು. ಕಳೆದ ಎಂಟು ವರ್ಷಗಳಿಂದ ನನ್ನ ರಹಸ್ಯ ಕೋಣೆಯಾಗಿದ್ದ ಇದರ ಮೂಲಕ ಹೊಟೆಲ್‌ಗೆ ಬರುವ, ಇಲ್ಲಿ ತಂಗುವ ಭಾರತದ ಪ್ರತಿಷ್ಠಿತ ವ್ಯಕ್ತಿಗಳ ಮಾತು, ಫೋಟೋ ಸೆರೆಹಿಡಿದು ಆ ರಹಸ್ಯವನ್ನು ಪರದೇಶಗಳಿಗೆ ಮಾರುವ ನನ್ನ ವ್ಯಾಪಾರ ಇಂದು ನಿನ್ನಿಂದಾಗಿ ಕೊನೆಗೊಂಡಿತು. ಅಂದರೆ ಇದರರ್ಥ ನನ್ನ ಕೊನೆಯಾಯಿತು ಎಂದಲ್ಲ. ನಾನು ಮತ್ತೆಲ್ಲಿಯಾದರೂ ಈ ವ್ಯಾಪಾರ ಮುಂದುವರೆಸಬಲ್ಲೆ. ಆದರೆ ನೀನು? ನನ್ನ ಹಿಂದೆ ಬಿದ್ದು ನನ್ನ ಮಣ್ಣುಮುಕ್ಕಿಸಲು ಬದುಕಿರಬೇಕಲ್ಲ? ನಿನಗೆ ಕೊನೆ ಇದೇ ಇದೇ ಕ್ಷಣ. ಹಾಗೆ ನೋಡಿದರೆ ನೀನು ನನ್ನ ಆಫೀಸಿನಲ್ಲಿಯೇ ನನ್ನ ವಿದ್ಯುಲ್ಲತೆಯ ಆಲಿಂಗನದಲ್ಲಿ ಮರಣವನ್ನಪ್ಪಬೇಕಿತ್ತು. ದೈವ ಗಟ್ಟಿಯಿದ್ದುದರಿಂದ ಬದುಕಿ ಉಳಿದೆ. ಇನ್ನು ನೀನು ಬದುಕಿ ಉಳಿಯಲಾರೆ. ಕೇವಲ ಮೂರು ನಿಮಿಷ ಮಾತ್ರ ನಿಮಗೆಲ್ಲ ಜೀವದಾನ. ನಾಲ್ಕನೆಯ ನಿಮಿಷ...."

ಚಿನ್‌ಲಿಯೋಲಿನ್ ಮಾತು ಅರ್ಧಕ್ಕೆ ನಿಲ್ಲಿಸಿ ಮತ್ತೆ ನುಡಿದ. "ನಾಲ್ಕನೇ ಕಂಪ್ಯೂಟರ್ ನೋಡು." ಎಲ್ಲರೂ ನಾಲ್ಕನೆ ಕಂಪ್ಯೂಟರ್ ಕಡೆ ಹೊರಳಿದರು. ಅದರಲ್ಲಿ ಕೆಳಗಿದ್ದ ಆಫೀಸ್ ರೂಮಿನ ದೃಶ್ಯ ಮೂಡಿ ಬರುತ್ತಿತ್ತು. ನಾಲ್ಕೂ ಗೋಡೆಗಳು ಕೆಂಪಗೆ ಕಾಯ್ದು ಅದರ ಶಾಖಕ್ಕೆ ಹಾಲ್‌ನಲ್ಲಿದ್ದ ವಸ್ತುಗಳೆಲ್ಲ ಚಟಪಟ ಸಿಡಿಯುತ್ತ ಕರ್ಪೂರದಂತೆ ಉರಿಯತೊಡಗಿದ್ದವು. ಅದನ್ನು ನೋಡುತ್ತಿದ್ದಂತೆ ಆ ಅರಗಿನ ಮನೆಯಿಂದ ಪಾರಾಗಿ ಬಂದವರೆಲ್ಲ ಬೆವರಿನಿಂದ ತಪ್ಪನೆ ತೊಯ್ದು ಹೋದರು. ಎಂಥ ಭಯಾನಕ ದೃಶ್ಯ?

ಮತ್ತೆ ಚಿನ್‌ಲಿಯೋಲಿನ್‌ನ ಗಂಭೀರವಾಣಿ ಮೊಳಗಿತು.

"ಅಲ್ಲಿಂದ ಪಾರಾದ ಮಾತ್ರಕ್ಕೆ ಜೀವ ಉಳಿಯಿತೆಂದು ತಿಳಿಯಬೇಡ. ನೀವು ನಿಂತ ತಾಣ ಸಹ ಮದ್ದಿನ ಬಾವಿಯಾಗಿದೆ. ಪ್ರತಿ ಕಂಪ್ಯೂಟರ್‌ನಲ್ಲೂ ಒಂದೊಂದು ಬಾಂಬ್ ಜೋಡಿಸಲಾಗಿದೆ. ಸರಿಯಾಗಿ ಏಳನೇ ನಿಮಿಷಕ್ಕೆ ಹತ್ತೂ ಬಾಂಬ್‌ಗಳು ಒಂದೇ ಬಾರಿ ಸಿಡಿಯುತ್ತವೆ. ತಿಳಿಯಿತಾ? ನನಗೆ ಸಮಯವಾಯಿತು. ಬೈ ಬೈ."

ಹೋದೆಯಾ ಪಿಶಾಚಿ ಎಂದರೆ ಗವಾಕ್ಷಿಯಿಂದ ಬಂದೆ ಎಂದಿತಂತೆ. ಸಾವು ಮತ್ತೆ ಬೆನ್ನಟ್ಟಿ ಬರುತ್ತಿತ್ತು. ಅದರಿಂದ ಪಾರಾಗಲು ಇರುವ ಸಮಯ ಏಳು ನಿಮಿಷ ಮಾತ್ರ.

"ಸುಷಮಾ, ಮಿಸ್ಟರ್ ರಾಮನಾಥ್ ಕ್ವಿಕ್ ಎಲ್ಲಾ ಕಂಪ್ಯೂಟರ್ ಚೆಕ್

ಮಾಡಿ. ಅಲ್ಲಿ ಎಲ್ಲೋ ಒಂದೆಡೆ ಬಾಂಬ್ ಇರಬೇಕು. ಶೋಧ ಮಾಡಿ."

"ಏನೂ ಉಪಯೋಗವಿಲ್ಲ ಮೇಜರ್. ಪ್ರತಿಯೊಂದು ರಂಗದಲ್ಲೂ ಗೆದ್ದೇ ಗೆದೆಯುತ್ತೇನೆ ಎಂದು ಶೆಡ್ಡು ಹೊಡೆಯುವ ನಿನಗೆ ಇಂದು ಸೋಲು ಅದರೊಂದಿಗೆ ಸಾವು ಕಟ್ಟಿಟ್ಟ ಬುತ್ತಿ. ಬೈ ಅಗೇನ್.

ಮೂವರು ಹುಚ್ಚರಂತೆ ಕಂಪ್ಯೂಟರ್‌ನತ್ತ ಧಾವಿಸುತ್ತಿದ್ದಂತೆ ಅವರೊಂದಿಗಿದ್ದವರು ನೆಲಕ್ಕೆ ಕುಸಿದರು ಒಬ್ಬೊಬ್ಬರಾಗಿ.

ಅವರೆಡೆ ಒಂದು ಚಿಕ್ಕ ದೃಷ್ಟಿ ಬೀರಿ ಮತ್ತೆ ತನ್ನ ಕೆಲಸದಲ್ಲಿ ಮಗ್ನನಾದ ಹೇಮಂತ. ಐದು ನಿಮಿಷಗಳು ಐದು ಸೆಕೆಂಡ್‌ಗಳಂತೆ ಕಳೆದುಹೋದವು. ಬಾಂಬ್ ಎಲ್ಲಿದೆ ಎಂಬುದು ತಿಳಿಯಲಿಲ್ಲ. ಚಿನ್‌ಲಿಯೋಲಿನ್ ಒಬ್ಬ ವಿಜ್ಞಾನಿ ಕಂಪ್ಯೂಟರ್ ತಜ್ಞ ಎಂಬುದನ್ನರಿತಿದ್ದ ಹೇಮಂತ ಒಂದು ನಿರ್ಧಾರಕ್ಕೆ ಬಂದಿದ್ದ. ಚಿನ್‌ಲಿಯೋಲಿನ್ ಹೇಳಿದ ಹಾಗೆ ಕಂಪ್ಯೂಟರ್‌ಗಳಲ್ಲಿ ಬಾಂಬ್‌ಗಳಿರಲಿಲ್ಲ. ಬಾಂಬ್ ಇದ್ದದ್ದೇನೋ ನಿಜವಿರಬಹುದು. ಅವು ಇದ್ದದ್ದೇ ಆದರೆ ಬೇರೆಲ್ಲೋ ಇರಬೇಕು.

ಸಮಯ ಉಳಿದದ್ದು ಒಂದು ನಿಮಿಷ ಮಾತ್ರ.

ಎಸ್.ಪಿ. ರಾಮನಾಥ್, ಸುಷಮಾ ಹೇಮಂತನೆಡೆ ನೋಡಿದರು.

ಅವರ ದೃಷ್ಟಿಯನ್ನು ಓದದಷ್ಟು ದಡ್ಡನಾಗಿರಲಿಲ್ಲ ಹೇಮಂತ.

ತಾನೊಬ್ಬನೇ ಮುಂದಾದ. ಮತ್ತೆ ಹತ್ತು ಸೆಕೆಂಡುಗಳು ಮರಣ ಪಪ್ಪಿದ್ದವು.

ಉಳಿದದ್ದು ಕೇವಲ ಐವತ್ತು ಸೆಕೆಂಡ್‌ಗಳು ಮಾತ್ರ.

ಹೇಮಂತ ವಿಚಲಿತನಾಗಲಿಲ್ಲ. ಎಲ್ಲ ಸ್ಥಳ ಶೋಧಿಸಿಯಾಗಿತ್ತು. ಅವನ ಕಣ್ಣು ಓಡಾಡದ ಸ್ಥಳವಿರಲಿಲ್ಲ. ಸುತ್ತಲು ಮತ್ತೊಂದು ಬಾರಿ ಕಣ್ಣಾಡಿಸಿದ. ಕಂಡುಬಂದದ್ದು ಒಂದೇ ಒಂದು ವಸ್ತು ಚಿಕ್ಕ ಫ್ಲಾವರ್‌ಪಾಟ್. ಅದರಲ್ಲೇಕೆ ಇರಬಾರದು? ಅದನ್ನೆತ್ತಿಕೊಂಡು ಹೂ ಎಲೆ ಎಲ್ಲ ಬೇರೆ ಬೇರೆ ಮಾಡಿದ. ಊಂ ಹೂಂ.

ಮೂವತ್ತು ಸೆಕೆಂಡುಗಳು ಕಳೆದವು.

ತಟಕ್ಕನೆ ಒಂದೆಡೆ ನಿಂತ ಹೇಮಂತ. ಶರೀರದ ಸಮಸ್ತ ಅಂಗಗಳನ್ನು ಶಿಥಿಲಗೊಳಿಸಿ ಎಲ್ಲ ಜ್ಞಾನವನ್ನು ಒಂದೆಡೆ ಕೇಂದ್ರೀಕರಿಸಿದ. ಹತ್ತು ಹದಿನೈದು ಸೆಕೆಂಡುಗಳಲ್ಲಿ ಎಲ್ಲ ವಸ್ತುಗಳು ಅವನ ಸ್ಮೃತಿಪಟಲದ ಮೇಲೆ ಹಾಯ್ದು ಹೋದವು. ಸಮಯ ಉಳಿದದ್ದು ಕೇವಲ ಹದಿನೈದು ಸೆಕೆಂಡು.

ಸಮಸ್ತ ಜನರ ಜೀವನ ಮರಣದ ಮಧ್ಯೆ ಉಳಿದ ಅವಧಿ.

"ಟಣ್" ಎಂದು ನೆಗೆದ ಹೇಮಂತ ಚಿಕ್ಕ ಫ್ಲಾವರ್‌ಪಾಟ್ ಹತ್ತಿರ. ಸುಂದರವಾದ ಚಿಕ್ಕಚಿಕ್ಕ ಬಟನ್‌ಫ್ಲಾವರ್‌ಗಳಿಂದ ಮಾಡಿದ ಹೂದಾನಿ. ಹೇಮಂತನ ಮುಖದ ಮೇಲೆ ಬೆಳದಿಂಗಳಿನಂಥ ಹೂನಗೆ ಅರಳಿತು. ತುಟಿಗಳ ಮೇಲೆ ಮಧುರವಾದ ಸಿಳ್ಳು ಹೊರಬಂತು.

ಸುಷಮಾ ಸಂತಸದಿಂದ ಕೇಕೆ ಹಾಕಿದಳು.

ಅವಳಿಗೆ ತಿಳಿದಿತ್ತು, ಹೇಮಂತ ರಹಸ್ಯ ಭೇದಿಸಿದ ಎಂದು.

ಫ್ಲಾವರ್‌ಪಾಟ್ ಎಲ್ಲರೆಡೆ ತೋರಿಸಿ ಒಡಬಡನೆ ನುಡಿದ ಹೇಮಂತ.

"ಫ್ರೆಂಡ್ಸ್, ಇವು ಹೂಗಳಲ್ಲ. ಹೂವಿನಂತೆ ಕಾಣುವ ಬಟನ್ ಬಾಂಬ್‌ಗಳು, ಕಂಪ್ಯೂಟರ್ ಬಾಂಬ್‌ಗಳು. ಇವೇ ನಮ್ಮೆಲ್ಲರನ್ನು ಮೃತ್ಯುಮುಖಕ್ಕೆ ಒಯ್ಯಲು ಸಿದ್ಧವಾಗಿದ್ದ ಬಾಂಬ್‌ಗಳು. ಇನ್ನು ನಮಗೆ ಯಾವ ಭಯವಿಲ್ಲ."

'ಟಣ್ ಟಣ್ ಟಣ್'

ಮೂರೇ ಹಾರಿಕೆಗೆ ಆತ ಕಿಟಕಿ ಬಳಿ ಬಂದಿದ್ದ.

ಬಾಂಬ್ ಸ್ಫೋಟಗೊಳ್ಳಲು ನಾಲ್ಕೈದು ಸೆಕೆಂಡುಗಳು ಮಾತ್ರ ಉಳಿದಿದ್ದವು.

ಫ್ಲಾವರ್‌ಪಾಟ್‌ನ್ನು ಎತ್ತಿ ಎಷ್ಟು ಸಾಧ್ಯವೋ ಅಷ್ಟು ದೂರ ಕಿಟಕಿಯಿಂದ ದೂರ ಎಸೆದ ಹೇಮಂತ. ಅಷ್ಟರಲ್ಲಿ ಎಲ್ಲರೂ ಕಿಟಕಿ ಬಳಿ ಓಡಿ ಬಂದಿದ್ದರು.

ಅವರೆಲ್ಲ ನೋಡನೋಡುತ್ತಿದ್ದಂತೆ ನೆಲ ಕಚ್ಚಲು ಸಿದ್ಧವಾಗಿದ್ದ ಫ್ಲಾವರ್ ಪಾಟ್ ಭಾರೀ ಸಪ್ಪಳದೊಂದಿಗೆ ಸ್ಫೋಟಗೊಂಡಿತ್ತು. ಬಾಂಬ್‌ನ ಹೊಡೆತಕ್ಕೆ ತುತ್ತಾದ ಮೂರುನಾಲ್ಕು ತೆಂಗಿನ ಮರಗಳು ಕತ್ತರಿಸಿ ಕೆಳಗೆ ಉರುಳುತ್ತಿದ್ದಂತೆ 'ಫುರ್ ಫುರ್' ಎಂದು ಉರಿಯತೊಡಗಿದವು. ಅಗ್ನಿಗೆ ಆಹುತಿಯಾಗಿ.

## ೭

ಕೊಹಿನೂರ ಬೀದಿಯಲ್ಲಿರುವ "ಸಾತಭಾಯಿ ಅಪಾರ್ಟ್‌ಮೆಂಟ್ಸ್" ಎದುರು ಟ್ಯಾಕ್ಸಿಯಿಂದಿಳಿದಳು ರೋಜಿ. ಪಕ್ಕದಲ್ಲೇ ಇದ್ದ ಪಾನ್ ದುಕಾನಿನ ಮಾರವಾಡಿ ಜೊಲ್ಲು ಸುರಿಸುತ್ತ ಅವಳೆಡೆ ನೋಡಿದ. ಟ್ಯಾಕ್ಸಿ ಬಾಡಿಗೆ ತೆತ್ತು ರೋಜಿ ಹೊರಳುತ್ತಿದ್ದಂತೆ ಆತ ಕೂಗಿದ. "ರೋಜೀಬಾಯೀ" ಮುಖ ಕಿವುಚಿ

ಅವನತ್ತ ಹೊರಳಿದಳು ಆಕೆ. "ನಿಮ್ಮನ್ನು ಕೇಳಿಕೊಂಡು ನಿನ್ನೆಯಿಂದ ಒಬ್ಬರು ಓಡಾಡುತ್ತಿದ್ದಾರೆ. ಇದೀಗ ಎರಡು ಗಂಟೆ ಹಿಂದೆ ಸಹ ಬಂದು ಹೋದರು."

ರೋಜಿಯ ಕಾಮನಬಿಲ್ಲಿನಂತಹ ಹುಬ್ಬುಗಳು ಕೂಡಿಕೊಂಡು ಗಂಟಿಕ್ಕಿದವು. ತನ್ನ ಹುಡುಕಿಕೊಂಡು ಬರುವವರಾರು? ಬಂದರೆ ಅದೇ ಶೇಶಪ್ಪ ಬರಬೇಕು. ಯಾವುದಾದರೂ ಬಲಿತ ಗಿರಾಕಿ ದೊರೆತರೆ. ಎಂಟು ದಿನಗಳಿಂದ ಆತ ಮೈ ಹುಷಾರಿಲ್ಲದೇ ಆಸ್ಪತ್ರೆಯಲ್ಲಿ ಮಲಗಿದ್ದಾನೆ. ಮತ್ತೆ ಯಾರಿರಬಹುದು? ಆಸಕ್ತಿ ಕೆರಳಿತು.

"ಹೌದಾ? ಯಾರಂತೆ? ಹೆಸರು ವಿಳಾಸ ಏನಾದರೂ ಹೇಳಿದರೋ?"

"ಕೇಳಿದ್ದೆ, ಆಮೇಲೆ ಬರತೇನೆ ಅಂದರು, ಅವರನ್ನ ನೋಡಿದರೆ....

ಮುಂದಿನ ಮಾತು ಗಂಟಲಲ್ಲೇ ಉಳಿಯಿತು. ಹೇಳಲೋ ಬೇಡವೋ ಎಂಬ ಅನುಮಾನ.

"ಏಕೆ? ಏನಾಯ್ತು?"

"ದಯವಿಟ್ಟು ತಪ್ಪು ತಿಳಿಯಬೇಡಿ ಮೇಡಮ್. ಅವರನ್ನು ನೋಡಿದರೆ ನನಗೇಕೋ ತುಂಬಾ ಭಯವಾಯಿತು. ಒಳ್ಳೆ ಗುಂಡಾ ಥರ ಇದ್ದ. ಅಪಾಯಕಾರಿ ಪ್ರಾಣಿ ಅನಿಸಿತು."

ತನ್ನನ್ನು ಒಂದು ಹಗಲು ಒಂದು ರಾತ್ರಿ ಗೋಳು ಹೊಯ್ದುಕೊಂಡ ಮೂವರೂ ದುಷ್ಟವ್ಯಕ್ತಿಗಳು ಅವಳ ಕಣ್ಣೆದುರು ಹಾಯ್ದು ಹೋದರು. ಆ ಮೂವರಲ್ಲಿ ಒಬ್ಬರೂ ಕೋಣೆ ಬಿಟ್ಟು ಹೊರಗೆ ಹೋಗಿರಲಿಲ್ಲ. ತಾನು ಬರುವಾಗ ಸಹ ಅವರು ರೂಮಿನಲ್ಲೇ ಇದ್ದರು. ನಿನ್ನೆ ಮತ್ತು ಇದೀಗ ಬಂದು ಕೇಳಿ ಹೋಗಬೇಕೆಂದರೆ ಖಂಡಿತವಾಗಿ ಈತ ಬೇರೆಯವನೇ ಇರಬೇಕು.

ಯಾರಿರಬಹುದು? ಕೆಲಿಯಾನ್ ಕಡೆಯವನೆ?

ಕೆಲಿಯಾನ್‌ನ ನೆನಪು ಬರುತ್ತಲೂ ಮೈ ನಡುಗಿತು. ತಾನು ಅವನಿಂದ ಬೇರ್ಪಟ್ಟ ಅರ್ಧ ಗಂಟೆಯೊಳಗೆ ಆತ ಸತ್ತು ಹೋದ ವಾರ್ತೆ ಅವಳಿಗೆ 'ಸೀಪರ್ಲ್' ಎದುರು ಇರುವ ಟ್ಯಾಕ್ಸಿ ಡ್ರೈವರ್‌ನಿಂದ ತಿಳಿದಿತ್ತು. ಅವನ ಹಾಡುವ ಹಕ್ಕಿ ಹಾರಿಸಿದ್ದಕ್ಕೇನಾದರೂ ಬೆನ್ನು ಬಿದ್ದಿದ್ದಾನೋ ಹೇಗೆ ಎಂಬ ಚಿಂತೆ ಕಾಡತೊಡಗಿತು. ಆ ಮೂವರಲ್ಲಿ ಒಬ್ಬ ಈಗಾಗಲೇ ಅದರ ಬಗ್ಗೆ ವಿಚಾರಿಸಿದ್ದ. ಅದೃಷ್ಟದಿಂದಾಗಿ ಪಾರಾಗಿ ಬಂದದ್ದಾಗಿತ್ತು. ಈಗ ಮತ್ತೊಂದು ಅಪಾಯ ಎದುರಾಗಿತ್ತು.

"ಹೂಂ, ಸರಿ. ತುಂಬಾ ಥ್ಯಾಂಕ್ಸ್" ನಿಡಿದಾದ ಉಸಿರು ಬಿಟ್ಟು ಆಕೆ ಹೊರಳಿದಾಗ ಮಾರವಾಡಿ ಸಹ ಹೊಟ್ಟೆ ಮೇಲೆ ಕೈಯಾಡಿಸಿಕೊಳ್ಳುತ್ತ

ಗಾಯಗೊಂಡ ಹಕ್ಕಿ ಹಾಗೆ ಮುಲುಗುಟ್ಟಿದ.

ತನ್ನ ಹದಿನೆಂಟನೇ ನಂಬರಿನ ಫ್ಲ್ಯಾಟ್ ಬೀಗ ತೆಗೆದು ಓಡಿ ಬಂದ ರೋಜಿ ಮೊದಲು ಒಂದು ಬಾರಿ ಮನೆ ತುಂಬೆಲ್ಲ ಓಡಾಡಿ ಪರೀಕ್ಷಿಸಿದಳು. ಅಲ್ಲಿ ಯಾವ ಬದಲಾವಣೆಗಳೂ ಆಗಿರಲಿಲ್ಲ. ಎಲ್ಲ ವಸ್ತುಗಳೂ ಇದ್ದಲ್ಲೇ ಇದ್ದವು. ಒಂದು ಮಾತು ಮಾತ್ರ ನಿಶ್ಚಿತವಾದಂತಾಯಿತು. ಆ ವ್ಯಕ್ತಿ ಯಾರೇ ಆಗಿದ್ದರೂ ಆತ ಒಳಗೆ ಬಂದಿಲ್ಲ. ಅವನಿಗೆ ಮನೆಯೊಳಗಿನ ಯಾವ ವಸ್ತುಗಳೂ ಬೇಕಾಗಿಲ್ಲ, ಅವನಿಗೆ ಬೇಕಾದದ್ದು ಬೇರೆಯೇ ಇರಬೇಕು.

ರಸ ತುಂಬಿದ ತುಟಿಗಳ ಮೇಲೆ ಮಾದಕ ನಗೆ ಲಾಸ್ಯವಾಡಿತು.

ಬಹುಶಃ ಅವನಿಗೆ ತಾನು ಬೇಕಾಗಿರಬೇಕು. ತನ್ನೊಡನೆ ಸುಖಿಸಲು ಆತ ಬಂದಿರಬೇಕು ಎಂದು ನೆನೆದುಕೊಂಡಳು.

ಸ್ನಾನ ಮಾಡಿ ಎರಡು ದಿನಗಳಾಗಿದ್ದವು. ಅದರೊಂದಿಗೆ ಒಬ್ಬರಾದ ಮೇಲೆ ಒಬ್ಬರಂತೆ ಮೂವರೂ ದುಷ್ಟರು ನಾಲ್ಕಾರು ಬಾರಿ ದಾಳಿ ಮಾಡಿ ದೇಹವೆಂಬುದನ್ನು ತಿಪ್ಪೆಗುಂಡಿಯಾಗಿಸಿದ್ದರು. ಬಟ್ಟೆಗೆ ಸೆಂಟ್ ಸಿಂಪಡಿಸಿದ್ದರೂ ದೇಹದಿಂದ ಹೊರಬರುವ ದುರ್ನಾತ ತಡೆಯಲಾಗಿರಲಿಲ್ಲ. ಕೂಡಲೇ ಸ್ನಾನ ಮಾಡಬೇಕೆನಿಸಿತು. ಹಾಡುವ ಹಕ್ಕಿಯನ್ನು ಸುರಕ್ಷಿತವಾದ ಸ್ಥಾನ ಸೇರಿಸಲು ಆಕೆ ಶೋಧನೆ ನಡೆಸಿದಳು. ಅದಕ್ಕೆ ಸೂಕ್ತ ಎಂದು ಕಂಡುಬಂದದ್ದು ಶೋ ಕೇಸ್‌ನಲ್ಲಿರಿಸಿದ ಬಾಂಬೆಯಲ್ಲಿ ಓಡಾಡುವ ಟ್ರ್ಯಾಮ್ ಬಸ್. ಹಾಡುವ ಹಕ್ಕಿಯನ್ನು ಅದರ ಹೊಟ್ಟೆಯೊಳಗೆ ಸೇರಿಸಿ ಮತ್ತೆ ಅದನ್ನು ಸುರಕ್ಷಿತವಾಗಿ ಶೋ ಕೇಸ್‌ನಲ್ಲಿರಿಸಿದಾಗ ನೆಮ್ಮದಿ ಮೂಡಿತು. ಹಾಡುವ ಹಕ್ಕಿಯ ಬಗ್ಗೆ ಅವಳಿಗಿದ್ದ ಒಂದೇ ಒಂದು ಸೆಳೆತವೆಂದರೆ ಅದರ ಸುಶ್ರಾವ್ಯ ಸಂಗೀತ. ಅದಕ್ಕೆಂದೇ ಅದನ್ನವಳು ಹಾರಿಸಿದ್ದಳು. ಆದರೆ ಈಗ? ಈಗದರ ಹಿಂದೆ ಬಿದ್ದ ಮೂವರೂ ದಾಂಡಿಗರ ನೆನಪಾದಾಗ ಹಾಡುವ ಹಕ್ಕಿಗೆ ಬೇರೆಯೇ ಪ್ರಾಮುಖ್ಯವಿದೆ ಎನಿಸಿತು. ಏನೋ ಆಶೆ, ಅದಕ್ಕೆಂದೇ ಅದನ್ನವಳು ಭದ್ರವಾಗಿ ಮುಚ್ಚಿಟ್ಟಳು.

ಒಂದೆಡೆ ನಿಶ್ಚಿಂತೆ ಮೂಡಿದಾಗ ಮನಸ್ಸು ಸ್ನಾನದತ್ತ ಹರಿಯಿತು.

ಮೈಮೇಲಿದ್ದ ಎಲ್ಲ ಬಟ್ಟೆ ಬಿಚ್ಚಿ ಸ್ನಾನಗೃಹದಲ್ಲಿ ಒಂದೆಡೆ ಕೂಡಿ ಹಾಕಿದಳು.

ಪೂರ್ತಿ ನಗ್ನಳಾಗಿ ಮನೆ ತುಂಬಾ ಸಂಚರಿಸಿದಳು. ಬಿಸಿನೀರಿಗಾಗಿ ಗೇಜರ್ ಓಪನ್ ಮಾಡಿದಳು. ಅಡಿಗೆ ಮನೆಗೆ ಬಂದು ಗ್ಯಾಸ್ ಹೊತ್ತಿಸಿ ಕಾಫಿ ಮಾಡಿಕೊಂಡಳು. ಕೈಲಿ ಕಾಫಿ ಕಪ್ ಹಿಡಿದು ನಿಲುಗನ್ನಡಿ ಎದುರು ಬಂದು ನಿಂತು ತನ್ನ ಸುಂದರ ಶರೀರದ ಮೇಲೆ ತಾನೇ ಮೋಹಿತಳಾಗಿ ದೃಷ್ಟಿ

ಬೀರಿದಳು. ಪೂರ್ಣಕುಂಭಗಳಂತಿದ್ದ ದುಂಡು ಸ್ತನಗಳು, ನೀಳವಾದ ಕುತ್ತಿಗೆ, ಚಿಕ್ಕ ಸಣ್ಣಗೆ ಇರುವ ನಡು, ಸುಳಿಯಂಥ ಹೊಕ್ಕಳು, ಸ್ವಲ್ಪವೇ ಸಪೂರಾಗಿದ್ದರೂ ತುಸು ಉಬ್ಬಿದಂತೆ ಕಾಣುವ ಕಿಬ್ಬೊಟ್ಟೆ, ಬಾಳೆ ದಿಂಡಿನಂಥ ಸುಪುಷ್ಟ ತೊಡೆಗಳು.

"ಹಾ....ಹಾ" ಎಂದು ನರಳಿದಳು ರೋಜೀ.

ಈ ದೇಹಕ್ಕಾಗಿಯೇ ಅಲ್ಲವೇ ಪುರುಷ ತೆತ್ತುವ ಹಣ ಒಂದು ರಾತ್ರಿಗೆ ಸಾವಿರ ಸಾವಿರ. ಇದನ್ನಾಕೆ ತುಂಬಾ ಜೋಪಾನವಾಗಿ ಕಾಯ್ದುಕೊಂಡು ಬಂದಿದ್ದರೂ ಆ ಮೂವರು ದುಷ್ಟರು ಸಾಕಷ್ಟು ಹಿಂಸೆ ನೀಡಿದ್ದರು. ಎಡ ಮೊಲೆಯ ಮೇಲೆ ಉಗುರಿನ ಗಾಯ, ಗಾಯದ ಉದ್ದಕ್ಕೂ ಕೆಂಪಗೆ ಕಂಡು ಬಂದ ರಕ್ತ. ಅದರ ಮೇಲೆ ಬೆರಳಾಡಿಸಿದಳು. ವಿಪರೀತ ವೇದನೆಯಿಂದಾಗಿ ಚೀರಿಕೊಂಡು ಮನದಲ್ಲೇ ಈ ದುರ್ಗತಿ ನೀಡಿದ ಅವರ ಬಗ್ಗೆ ನೆನೆದು ಕರಕರ ಹಲ್ಲು ಕಡಿದಳು.

"ಸುಂಯೀ....ಸುಂಯೀ..." ಬಾತ್‌ರೂಮಿನಿಂದ ಸಪ್ಪಳ.

ನೀರು ಕಾದಿದೆ ಎಂಬ ಸಂಕೇತ ಗೇಜರ್‌ನಿಂದ.

ಬಾತ್‌ರೂಮಿಗೆ ಬಂದು ಟಬ್ ನಲ್ಲಿ ತಿರುವಿದಳು. ಬುಳುಬುಳುನೆ ನುಗ್ಗಿತು ಬಿಸಿನೀರಿನ ಪ್ರವಾಹ. ಅದರೊಂದಿಗೆ ಬಿಸಿಬಿಸಿಯಾದ ಹವೆ ಮುಖಕ್ಕೆ ತಗುಲಿದಾಗ ಹಿತವೆನಿಸಿತು. ತಲೆಗೆ ಚೆನ್ನಾಗಿ ಶಾಂಪೂ ಹಾಕಿಕೊಂಡು ಸ್ನಾನ ಮಾಡಬೇಕೆಂದು ಯೋಚಿಸುತ್ತಿದ್ದಂತೆ ಶಾಂಪೂ ಮುಗಿದದ್ದು ನೆನಪಾಯಿತು. ಡ್ರೆಸ್ಸಿಂಗ್ ಟೇಬಲ್ ಡ್ರಾಯರೊಳಗೆ ಚಿಕ್ಕದಾದ ಇನ್ನೊಂದು ಶಾಂಪೂ ಚೀಟಿ ಇದೆ ಎಂದು ಯೋಚಿಸಿದ ಆಕೆ ಪುನಃ ಡ್ರೆಸ್ಸಿಂಗ್ ಟೇಬಲ್ ಬಳಿ ಬಂದಳು. ಬಾಗಿ ಡ್ರಾ ಎಳೆದು ಶಾಂಪೂ ಚೀಟಿ ಎತ್ತಿಕೊಳ್ಳುತ್ತಿರುವಾಗ ಕನ್ನಡಿ ಮೇಲೆ ದೃಷ್ಟಿ ಹರಿಯಿತು.

ಅಹ! ಎಂಥ ಮೋಹಕ ರೂಪ ತನ್ನದು.

ಕೆಳಕ್ಕೆ ಬಾಗಿದಾಗ ಜೋತು ಬಿದ್ದ ಎರಡು ಜೇನು ಹುಟ್ಟುಗಳು ಎಷ್ಟು ಸುಂದರವಾಗಿ ಕಾಣುತ್ತಿವೆ. ತಾನೇ ತನ್ನ ಶರೀರದ ಬಗ್ಗೆ ಇಷ್ಟು ಮೋಹಕ ಳಾಗಬೇಕೆಂದರೆ ಪುರುಷನ ಗತಿ ಏನಾಗಿರಬೇಡ? ತುಟಿ ಮೇಲೆ ತುಂಟ ಮುಂದಹಾಸ ಮೂಡಿತು.

"ಬ್ಯೂಟಿಫುಲ್ ಬ್ಯೂಟಿಫುಲ್" ಮೆಲ್ಲಗೆ ಯಾರೋ ಉಸುರಿದಂತಾಯಿತು.

ಕುತ್ತಿಗೆಯ ಮೇಲೆ ಬಿಸಿಯುಸಿರಿನ ಅನುಭವ. ತನಗರಿವಿಲ್ಲದಂತೆ ಯಾರೋ ಬೀಗ ತೆರೆದು ಒಳಗೆ ಬಂದಿದ್ದಾರೆ. ಅವಳ ದೇಹದ ರೋಮಗಳು

ಭಯದಿಂದ ನಿಮಿರಿದವು. ಆಕೆ ಸರಕ್ಕನೆ ಹಿಂದೆ ಹೊರಳಿದಳು.

ಘೇಂಡಾ ಮೃಗದಂಥ ಒಬ್ಬ ವ್ಯಕ್ತಿ ನಿಂತಿತ್ತು ಹಲ್ಲು ಕಿರಿಯುತ್ತ.

ಕೂಡಲೇ ಆ ಪಾಸ್‌ವಾಲಾ ಹೇಳಿದ ಭಯಾನಕ ವ್ಯಕ್ತಿಯು ನೆನಪಾಯಿತು ಅವಳಿಗೆ.

"ರೋಜೀ, ನೀನು ತುಂಬಾ ಚೆನ್ನಾಗಿದೀಯಾ. ಅದರಲ್ಲೂ ಈ ಅವಸ್ಥೆಯಲ್ಲಿ ನಿನ್ನ ನೋಡಿದರೆ ನಿಜವಾಗಿಯೂ ಹುಚ್ಚು ಹಿಡಿಯುತ್ತದೆ."

"ಯಾರು ನೀನು? ನಿನಗೆ ನನ್ನ ಹೆಸರು ಹೇಗೆ ಗೊತ್ತು? ಇಲ್ಲಿಗೆ ಏಕೆ ಬಂದೆ? ಮನೆ ಬೀಗ ಹೇಗೆ ತೆರೆದೆ?"

ಒಂದೇ ಬಾರಿ ಅವನ ಮೇಲೆ ಪ್ರಶ್ನೆಯ ಮಳೆಗರೆದಳು ರೋಜಿ.

"ಹಾಂ ಹಾಂ ನಿಧಾನ. ಒಂದೊಂದೇ ಪ್ರಶ್ನೆ ಕೇಳು ಮೋಹಿನಿ. ಮೊದಲೇ ನಾನು ನಿನ್ನ ಈ ರೂಪ ಕಂಡು ಅರ್ಧ ಸತ್ತು ಹೋಗಿದ್ದೇನೆ. ಅದರ ಮೇಲೆ ಪಟಪಟನೆ ಪ್ರಶ್ನೆಯ ಬಾಣ ಬಿಟ್ಟರೆ ಬದುಕುವದಾದರೂ ಹೇಗೆ?"

ಕಸಿವಿಸಿಗೊಂಡ ರೋಜಿ ಕೆಟ್ಟದಾಗಿ ಅರಚಿ ಕೇಳಿದಳು.

"ಯಾರು ನೀನು? ನನ್ನ ಹೆಸರು ನಿನಗೆ ಹೇಗೆ ಗೊತ್ತು?"

ಹಲ್ಲು ಕಿರಿದು ನಕ್ಕ ಆತ ನುಡಿದ.

"ಹಾಂ. ಇದೀಗ ಸ್ವಲ್ಪ ಸರಿಹೋಯಿತು. ನಾನೊಬ್ಬ ನಿನ್ನ ಪ್ರೇಮಿ. ನಿನ್ನಂಥ ಸುಂದರ ಹೆಣ್ಣಿನ ಹೆಸರು ನನಗಷ್ಟೇ ಏಕೆ ಅರ್ಧ ಊರಿಗೇ ಗೊತ್ತಿದೆ. ಇನ್ನು ಬೀಗದ ವಿಷಯ. ಒಂದು ಬಾರಿ ನಿನ್ನ ಕೂಡಬೇಕೆಂದು ಬಯಕೆ ಹುಟ್ಟಿದರೆ ಬೀಗ ನನ್ನ ಮುಂದೆ ಹೇಗೆ ಅಡ್ಡ ಬರಲು ಸಾಧ್ಯ? ನೀನೇ ಹೇಳು."

ರೋಜಿ ಯೋಚಿಸಿದ್ದು ನಿಜವಾಯ್ತು. ಆತ ಅವಳ ಪ್ರೇಮಿ.

"ಕ್ಷಮಿಸು ಮಿಸ್ಟರ್. ನಾನು ತುಂಬಾ ದಣಿದಿರುವೆ. ಎರಡು ದಿನ ನನಗೆ ವಿಶ್ರಾಂತಿ ಬೇಕಾಗಿದೆ. ದಯವಿಟ್ಟು ನೀನು ಹೊರಟುಹೋಗು."

"ಛೆ ಛೆ ಛೆ, ಹಾಗೆನ್ನಬೇಡ ಅಪ್ಸರೆ. ನಾನು ತುಂಬಾ ಆಶೆ ಇಟ್ಟುಕೊಂಡು ಬಂದಿರುವೆ. ನಾನು ನಿನಗೆ ಎಳ್ಳಷ್ಟೂ ತೊಂದರೆ ನೀಡಲಾರೆ."

ಆತ ಒಂದೊಂದೇ ಹೆಜ್ಜೆ ಇಡುತ್ತ ಅವಳ ಬಳಿ ಬಂದ.

ರೋಜಿ ಭಯದಿಂದ ತತ್ತರಿಸಿದಳು. ಒಂದು ಬಾರಿ ಅವನ ಹಿಡಿತಕ್ಕೆ ಸಿಕ್ಕರೆ ಸಾಕು ಸಾವೇ ಗತಿ ಅನ್ನಿಸದಿರಲಿಲ್ಲ. ಅವನಿಂದ ಪಾರಾಗಲು ಅತ್ತಿತ್ತ ನೋಡಿದಳು. ಯಾವ ದಾರಿಯೂ ಕಾಣಲಿಲ್ಲ.

"ಚು ಚು ಚು; ನೀನು ಈ ರೀತಿ ಮಾಡಬಾರದು ನನ್ನ ಅರಗಿಣಿ. ನೀನೇ ನನ್ನ ರಾಣಿ ಎಂದು ಬಂದಿರುವ ನನಗೆ ಮೋಸ ಮಾಡಿ ಓಡಲು

ಹವಣಿಸುವೆಯಾ? ಬೇಡ ಬೇಡ.

ಫೇಂಡಾ ಮನುಷ್ಯ ಅವಳನ್ನು ತಲುಪಿದ. ಅವಳ ನೀಳವಾದ ಲತೆಯಂಥ ದೇಹ ಅವನ ಅಪ್ಪುಗೆಯಲ್ಲಿ ನರಳಿತು. ಅವನ ಒರಟಾದ ಕೈಗಳು ರೋಜಿಯ ಕೋಮಲ ದೇಹದ ಮೇಲೆ ಓಡಾಡಿ ಅಂಗಾಂಗಗಳನ್ನು ಮರ್ದಿಸಿದವು. ನೋವಿನಿಂದ ಆಕೆ ಚೀರಿಕೊಳ್ಳಲು ಹಾತೊರೆಯುತ್ತಿದ್ದಂತೆ ಅವಳ ಕುತ್ತಿಗೆ ಅವನ ಬಲಿಷ್ಠ ಹಿಡಿತಕ್ಕೆ ಸಿಲುಕಿಕೊಂಡಿತು.

ಉಸಿರು ಬಿಗಿಯತೊಡಗಿತು. ಮುಖ ಕೆಂಜಗದಂತೆ ಕೆಂಪಗಾಯಿತು. ವಿಲಿವಿಲಿ ಒದ್ದಾಡತೊಡಗಿದಳು.

ಆತ ಹೆಬ್ಬಾವಿನಂತೆ ಭುಸುಗುಟ್ಟಿ ಕೇಳಿದ,

"ಡಾರ್ಲಿಂಗ್, ಪ್ರಿಯೇ ಹಾಡುವ ಹಕ್ಕಿ ಎಲ್ಲಿದೆ?"

"ಯಾವ ಹಾಡುವ ಹಕ್ಕಿ?" ಆಕೆ ಪ್ರಯಾಸದಿಂದ ಪ್ರಶ್ನಿಸಿದಳು.

"ಅದೇ. ನೀನು ಕೆಲಿಯಾನ್‌ನ ಕೋಣೆಯಿಂದ ಹಾರಿಸಿಕೊಂಡು ಬಂದೆಯಲ್ಲ, ಅದೇ."

"ಇಲ್ಲ. ನನಗೆ ಯಾವದೂ ಗೊತ್ತಿಲ್ಲ. ನಾನು ಏನನ್ನೂ ಹಾರಿಸಿ ಕೊಂಡು ಬಂದಿಲ್ಲ."

"ಸುಳ್ಳು ಬೊಗಳಬೇಡ. ನನಗೆಲ್ಲ ಗೊತ್ತಿದೆ. ಪ್ರಾಣದ ಮೇಲೆ ಆಸೆ ಇದ್ದರೆ ಅದೆಲ್ಲಿದೆ ಅಂತ ಬೊಗಳು. ನಾನು ಈಗಾಗಲೇ ನಿನ್ನ ಮಿನಿ ಪರ್ಸ್, ಪರ್ಸ ಎಲ್ಲಾ ಶೋಧಿಸಿರುವೆ ಅದು ದೊರೆತಿಲ್ಲ. ನೀನದನ್ನು ಎಲ್ಲೋ ಬಚ್ಚಿಟ್ಟಿರಬೇಕು. ಹೇಳು ಎಲ್ಲಿದೆ?"

ಅವನ ಎಡಹಸ್ತ ಅವಳ ನಿತಂಬವನ್ನು ಬಲವಾಗಿ ಅಮುಕಿತು

ಒಳಬಳನೆ ರೋಜಿಯ ಕಣ್ಣುಗಳಿಂದ ನೀರು ಉದುರತೊಡಗಿತು.

ಎರಡು ದಿನಗಳ ಅಪಾರ ಹಿಂಸೆ, ನೋವು, ಹಸಿವು. ಅದರ ಮೇಲೆ ಈಗ ಪ್ರಾಣ ಹಿಂಸೆ. ಸಾವಿನ ಬೆದರಿಕೆ. ಕಂಗಾಲಾದ ಆಕೆ ಗೋಳಾಡಿದಳು.

"ನಾನು ಸತ್ಯ ಹೇಳುತ್ತಿದ್ದೇನೆ ನನಗೇನೂ ಗೊತ್ತಿಲ್ಲ."

"ನಾನು ನಿನಗೆ ಮೊದಲೇ ಎಚ್ಚರಿಕೆ ನೀಡಿರುವೆ. ಸುಳ್ಳು ಹೇಳಬೇಡ ವೆಂದು. ಒಂದು ಮಾತು ನೆನಪಿನಲ್ಲಿಡು. ನೀನು ಕೆಲಿಯಾನ್‌ನ ಕೋಣೆ ಸೇರಿದಾಗಿನಿಂದ ಮತ್ತೆ ಹೊರಬರುವವರೆಗಿನ ಪ್ರತಿಯೊಂದು ದೃಶ್ಯವನ್ನು ನಾನು ನನ್ನ ಕೋಣೆಯಲ್ಲಿ ಕುಳಿತು ನೋಡಿದ್ದೇನೆ. ನೀನು ಅವನ ಕಣ್ಣು ತಪ್ಪಿಸಿ ಹಾಡುವ ಹಕ್ಕಿಯನ್ನು ಪರ್ಸಗೆ ಸೇರಿಸಿದ್ದೂ ನಾನು ಕಂಡಿರುವೆ. ಹೂಂ ಹೇಳು ಅದೆಲ್ಲಿದೆ? ಬೇಗ"

"ನನಗೆ ತಿಳಿಯದು. ನೀನು ಹೇಳಿದಂತೆ ನಾನು ಅದನ್ನು ಕದ್ದದ್ದು ನಿಜ. ಆದರೆ ಅದು ಈಗೆಲ್ಲಿದೆ ಅಂತ ತಿಳಿಯದು."

"ಅಂದರೇನು ನಿನ್ನ ಮಾತಿನ ಅರ್ಥ?"

"ನಾನು ಕೆಲಿಯಾನ್‌ನ ರೂಮಿನಿಂದ ಹೊರಬರುತ್ತಲೂ ಒತ್ತಾಯದಿಂದ ಮೂರು ಜನ ದುಷ್ಟರು ನನ್ನನ್ನು ತಮ್ಮ ರೂಮಿಗೆ ಕರೆದೊಯ್ದರು. ಒಂದು ಗಂಟೆಯ ಹಿಂದಿನವರೆಗೂ ನಾನವರ ಬಂದಿಯಾಗಿದ್ದೆ. ಈ ಮಧ್ಯೆ ಅವರು ಹಾಡುವ ಹಕ್ಕಿಯನ್ನು ನನ್ನಿಂದ ಕಸಿದುಕೊಂಡರು."

"ನಿಜವೆ?"

"ಸಂಪೂರ್ಣ ನಿಜ."

"ಅವರು ಯಾವ ರೂಮಿನಲ್ಲಿದ್ದರು? ಹೇಗಿದ್ದರು?"

ರೋಜಿ ಎಲ್ಲ ವಿಚಾರವನ್ನು ವಿಶದವಾಗಿ ತಿಳಿಸುತ್ತಿದ್ದಂತೆ ಕುತ್ತಿಗೆ ಮೇಲಿನ ಹಿಡಿತ ಮೆಲ್ಲನೆ ಸಡಿಲಾಯಿತು. ಅವಳಿಂದ ದೂರ ಸರಿದ ಆತ ಟೆಲಿಫೋನ್ ಸಮೀಪಿಸಿದ. ಮೊದಲೇ ರಿಸೀವರ್ ಎತ್ತಿ ಇಟ್ಟಿದ್ದರಿಂದ ಹೊರಗಡೆಯ ಕಾಲ್ ತೊಂದರೆ ಇರಲಿಲ್ಲ. ಈಗಾತ ರಿಸೀವರ್ ಎತ್ತಿ ಕಿವಿಗೆ ಆನಿಸಿ ಬೆರಳಿನಿಂದ ನಂಬರ್ ಜೋಡಿಸಿದ "ಸೀಪರ್ಲ್"ಗೆ.

ತನ್ನ ಅವಸ್ಥೆ ಮುಗಿಯಿತು ಎಂದುಕೊಂಡಳು ಮನದಲ್ಲಿ ರೋಜಿ.

ಒಂದೇ ನಿಮಿಷದ ನಂತರ ಆತ ರಿಸೀವರ್ ಯಥಾಸ್ಥಾನದಲ್ಲಿರಿಸಿದಾಗ ಅವನ ಮೌನ ಉಗ್ರವಾಗಿತ್ತು. ಅವಳೆಡೆ ಕ್ರೂರವಾಗಿ ನೋಡುತ್ತ ಅಬ್ಬರಿಸಿದ.

"ನಾನು ನಿನಗೆ ಮೊದಲೇ ಹೇಳಿದ್ದೆ. ಸುಳ್ಳು ಹೇಳಿದರೆ ಪರಿಣಾಮ ಒಳ್ಳೆಯದಾಗುವದಿಲ್ಲವೆಂದು. ಇನ್ನು ನಿನಗೆ ಸಾವೇ ಗತಿ. ನನ್ನಿಂದ ನಿನ್ನನ್ನು ಪಾರು ಮಾಡಲು ಯಾರಿಂದಲೂ ಸಾಧ್ಯವಿಲ್ಲ. ಪಿಶಾಚಿ, ನಿನಗೆ ಸಾವೇ ಗತಿ.

ಗಡಗಡ ನಡುಗಿದ ರೋಜಿ ಚೀರಿಕೊಂಡಳು.

"ಬೇಡ ಬೇಡ, ನನ್ನ ಕೊಲ್ಲಬೇಡ."

ಆತ ಯಾವುದರ ಕಡೆಗೂ ಗಮನ ಕೊಡದೆ ಅವಳತ್ತ ಧಾವಿಸಿದ. ಆದೇ ಕ್ಷಣ ನಿಧಾನವಾಗಿ ಕೋಣೆ ಬಾಗಿಲು ತೆರೆದುಕೊಂಡಿತು. ಕೈಲಿ ರಿವಾಲ್ವರ್ ಹಿಡಿದು ಒಳಗೆ ಪ್ರವೇಶಿಸಿದ ಶೇಖರ್ ಅವನನ್ನು ಎಚ್ಚರಿಸಿದ.

"ನಿಲ್ಲು. ಇಲ್ಲದಿದ್ದರೆ ಗುಂಡು ಹಾರಿಸುವೆ."

ಹಾವು ಮೆಟ್ಟಿದವರಂತೆ ಗರ್‌ನೆ ನಿಂತ ಆತ ನಿಧಾನವಾಗಿ ಹೊರಳಿದ. ಶೇಖರನ ಮೇಲೆ ದೃಷ್ಟಿ ಬೀಳುತ್ತಲೂ ಮೊದಲು ಸಂಕುಚಿತಗೊಂಡ ಅವನ ಮುಖ ನಂತರ ಸಡಿಲಾಯಿತು.

"ಓಹ್, ನೀನೋ. ನಾನು ನಿನ್ನನ್ನು ಹುಡುಕುತ್ತಿದ್ದೆ. ನಿನ್ನಿಂದಾಗಿಯೇ "ಸೀಪರ್ಲ್"ದಲ್ಲಿಯ ನಮ್ಮ ಭೂಗತ ಪ್ರಯೋಗಶಾಲೆ ಗುಪ್ತ ಸ್ಟುಡಿಯೋ ಎಲ್ಲಾ ಹಾಳಾದವು. ಅಷ್ಟೇ ಅಲ್ಲ ನಮ್ಮ ಎಜಂಟ್ ಕೆಲಿಯಾನ್ ಸಹ ನಿಮ್ಮಿಂದಾಗಿಯೇ ಸಾವಿಗೀಡಾದ."

"ಕೆಲಿಯಾನ್ ನಿಮ್ಮ ಎಜಂಟನೆ? ಅವನನ್ನು ನೀವೇ ಕೊಂದಿರಾ? ಗುಡ್ ನನಗೆ ಬೇಕಾದ ವಿಷಯವನ್ನು ನೀನಾಗಿಯೇ ಬಾಯಿಬಿಟ್ಟೆ. ಈಗ ಹೇಳು. ಯಾರು ನೀನು? ಯಾರಿಗಾಗಿ ಕೆಲಸ ಮಾಡುತ್ತಿರುವೆ?"

ನಾಲಿಗೆ ಕಚ್ಚಿಕೊಂಡ ಫೇಂಡಾ ಮೃಗದಂತಿದ್ದ "ಹ್ಯೂವೆನ್" ಅವನಿಗರಿವಿಲ್ಲದಂತೆ ಅವನ ಬಾಯಿಯಿಂದ ಕೋಪದ ಭರದಲ್ಲಿ ನಿಜ ವಿಷಯ ಹೊರ ಬಂದಿತ್ತು. ತಬ್ಬಿಬ್ಬಾದ ಆತನನ್ನು ಶೇಖರ್ ಮತ್ತೊಮ್ಮೆ ಪ್ರಶ್ನಿಸಿದ.

"ಹೇಳು, ಯಾರು ನೀನು? ನೀನೇಕೆ ಕೆಲಿಯಾನ್‌ನನ್ನು ಕೊಂದೆ? ಅದಕ್ಕೆ ಕಾರಣವೇನು?"

"ಇದನ್ನೆಲ್ಲ ನೀನು ತಿಳಿಯಬೇಕಾದರೆ ಮತ್ತೊಂದು ಜನ್ಮ ಎತ್ತಿ ಬರ ಬೇಕು ತಿಳಿಯಿತಾ?"

ಅವರಿಬ್ಬರ ಮಾತನ್ನು ಆಸಕ್ತಿಯಿಂದ ಆಲಿಸುತ್ತಿದ್ದ ರೋಜಿಗೆ ಒಂದು ಮಾತು ಮಾತ್ರ ಸ್ಪಷ್ಟವಾಗಿತ್ತು. ಆಗಂತುಕ ತನ್ನ ಮಿತ್ರನಾಗಿರದಿದ್ದರೂ ಶತ್ರುವಂತೂ ಆಗಿರಲಿಲ್ಲ. ಈಗ ತಾನು ಅವನ ಬಳಿಸಾರುವದೇ ಒಳ್ಳೆಯದು.

ಈ ರೀತಿ ನಿರ್ಧರಿಸಿದ ಆಕೆ ತಾನು ನಗ್ನಳಾಗಿದ್ದೇನೆ. ಇಬ್ಬರು ಪುರುಷರ ಮಧ್ಯೆ ಇದ್ದೇನೆ ಎಂಬುದನ್ನು ಮರೆತು ಶೇಖರ್‌ನೆಡೆ ಧಾವಿಸಿದಳು. ಅವಳು ಧಪ್ ಧಪ್ ಎಂದು ಹೆಜ್ಜೆ ಇಟ್ಟಾಗ ಆಕರ್ಷಕವಾಗಿ ಓಲಾಡಿದವು ಅವಳ ಕುಚದ್ವಯಗಳು. ಪ್ರಥಮ ಬಾರಿ ಶೇಖರನ ದೃಷ್ಟಿ ಅವಳ ನಗ್ನ ದೇಹದ ಮೇಲೆ ಹರಿದು ಅಲ್ಲೇ ನೆಟ್ಟಿತು. ಇಂಥ ಅವಸರಕ್ಕಾಗಿಯೇ ಕಾದಿದ್ದ ಫೇಂಡಾ ಮಾನವ ಹ್ಯುವೆನ್ ರೋಜಿಗೆ ಅಡ್ಡಗಾಲು ನೀಡಿದ. ಕಾಲುತೊಡರಾದ ಆಕೆ ಆಯತಪ್ಪಿ ರಿವಾಲ್ವರ್ ಹಿಡಿದು ನಿಂತಿದ್ದ ಶೇಖರ್‌ನ ಮೇಲೆ ವಾಲಿದಳು. ಮುಂದಿನ ಕ್ಷಣ ಇಬ್ಬರೂ ಒಬ್ಬರನ್ನೊಬ್ಬರು ತಬ್ಬಿಕೊಂಡು ಧರಾಶಾಹಿಗಳಾಗುತ್ತಿದ್ದಂತೆ ವಿಜಯದ ನಗೆಯೊಂದಿಗೆ ಅವರತ್ತ ಹಾರಿದ ಹ್ಯುವೆನ್. ಶೇಖರ್‌ನಿಗೆ ಚೇತರಿಸಿಕೊಳ್ಳಲಾಗಲೇ ಇಲ್ಲ. ಅದಕ್ಕಿಂತ ಮೊದಲು ರಿವಾಲ್ವರ್ ಹಿಡಿದ ಅವನ ಕೈಮೇಲೆ ತನ್ನ ಬೂಟುಗಾಲು ಇಟ್ಟು ಅಮುಕಿದ ಹ್ಯುವೆನ್. ನೋವಿನಿಂದ ಚೀರಿಕೊಳ್ಳುತ್ತಿದ್ದಂತೆ ಶೇಖರ್‌ನ ಹಿಡಿತ ಸಡಿಲಾಗಿ ರಿವಾಲ್ವರ್ ಅನಾಥವಾಯಿತು. ಅದನ್ನೆತ್ತಿಕೊಂಡು ಅವರೆಡೆ ಗುರಿ ಹಿಡಿದು ನಗುತ್ತ ನಿಂತ

ಹ್ಯುವೆನ್ "ಈಗೇನು ಹೇಳ್ತೀಯಾ?"

ಏಳಲು ಪ್ರಯತ್ನಿಸಿದ ರೋಜೀ ಬೇಕೆಂತಲೇ ನಟನೆ ಮಾಡಿ ಬವಳಿ ಬಂದವರಂತೆ ನಟಿಸಿ ಟುಳುಕ್‌ನೆ ಉರುಳಿದಳು ಶೇಖರ್‌ನ ಮೇಲೆ.

ಸುಂದರ ತರುಣಿಯ ನಗ್ನ ದೇಹದಡಿ ಸಿಕ್ಕು ವಿಚಿತ್ರವಾಗಿ ನಲುಗಿಹೋದ ಶೇಖರ್. ಎಂಥ ವಿಕಟ ಪರಿಸ್ಥಿತಿ. ಮೈಮೇಲೆ ಸುಂದರ ತರುಣಿ ನಗ್ನಳಾಗಿ ಅನಾಥಳಂತೆ ಬಿದ್ದಿದ್ದರೆ ಇನ್ನೊಂದೆಡೆ ರಿವಾಲ್ವರ್ ಹಿಡಿದು ನಿಂತಿದ್ದಾನೆ ಯಮದೂತ. ಏನು ಮಾಡುವದು?

"ಏಯ್ ಮಿಸ್ಟರ್, ಸಮಯ ನಷ್ಟ ಮಾಡದೇ ಎದ್ದು ನಿಲ್ಲು."

ಶೇಖರ್ ನಿರ್ವಾಹವಿಲ್ಲದೆ ಮೇಣದ ಬೊಂಬೆಯಂತಿದ್ದ ರೋಜಿಯನ್ನು ಪಕ್ಕಕ್ಕೆ ಸರಿಸಿ ಎದ್ದು ನಿಂತ.

"ಹೇಳು, ನೀನೇಕೆ ಇಲ್ಲಿಗೆ ಬಂದೆ?"

"ಏಕೆಂದರೆ? ನೀನೇಕೆ ಬಂದೆಯೋ ಅದಕ್ಕೇ."

"ಅಂದ್ರೆ? ನೀನೂ ಹಾಡುವ ಹಕ್ಕಿಗಾಗಿ ಬಂದೆಯಾ?"

"ಹಾಡುವ ಹಕ್ಕಿ? ಯಾವ ಹಕ್ಕಿ?" ವಿಚಿತ್ರವಾಗಿ ಶೇಖರ್ ಕೇಳಿದಾಗ ಹ್ಯುವೆನ್ ಮತ್ತೆ ನಾಲಿಗೆ ಕಚ್ಚಿಕೊಂಡ. ಎರಡನೇ ಬಾರಿ ಅವನ ನಾಲಿಗೆ ಅವನಿಗೆ ಕೈಕೊಟ್ಟಿತ್ತು.

"ಮತ್ತೇಕೆ ಇಲ್ಲಿಗೆ ಬಂದೆ?"

"ಎಂಥ ಹೆಡ್ಡ ಪ್ರಶ್ನೆ ನಿನ್ನದು. ಇವಳಂಥ ಅಪ್ಸರೆ ಬೆತ್ತಲೆಯಾಗಿ ಕಾಯುತ್ತಿರುವಾಗ ಏಕೆ ಬಂದೆ ಎಂದು ಕೇಳುತ್ತೀಯಲ್ಲ? ನೀನೇನಾದರೂ ನಪುಂಸಕನೆ?"

ಹ್ಯುವೆನ್‌ನ ಹಳದಿ ವರ್ಣದ ಮುಖ ಕಿವಿಯವರೆಗೂ ಕೆಂಪಗಾಯಿತು 'ನಪುಂಸಕ' ಎಂಬ ಶಬ್ದ ಕೇಳಿ. ಅವನ ಬಾಯಿಯಿಂದ ವಿಚಿತ್ರ ಅಷ್ಟೇ ಕ್ರೂರ ಧ್ವನಿ ಹೊರಟಿತು. ಕೈಲಿ ರಿವಾಲ್ವರ್ ಹಿಡಿದೇ ಶೇಖರ್‌ನ ಮೇಲೆ ಆಕ್ರಮಣ ಮಾಡಿದ. ರಿವಾಲ್ವರ್ ಹಿಡಿ ಅವನ ನೆತ್ತಿಗೆ ಅಪ್ಪಳಿಸಿತು. ಇದರಿಂದಾಗಿ ಶೇಖರ್‌ನಿಗೂ ಒಂದು ವಿಷಯ ಮನದಟ್ಟಾಯಿತು. ಗುಂಡು ಹಾರಿಸಲು ಆ ಫೇಂಡಾ ವ್ಯಕ್ತಿಗೆ ಇಷ್ಟವಿಲ್ಲವೆಂದು. ಅದಕ್ಕಾಗಿಯೇ ನೆತ್ತಿ ಮೇಲೆ ಬಲವಾದ ಏಟು ಬಿದ್ದಿದ್ದರೂ ಒಂದು ಬಾರಿ ಜೋರಾಗಿ ನರಳಿ ಸಹಿಸಿಕೊಂಡ ಆತ ಹೊರಳಿ ಅವನ ಮೇಲೆ ಬಿದ್ದ. ಇಬ್ಬರಲ್ಲೂ ಎರಡು ನಿಮಿಷಗಳ ಕಾಲ ಹೋರಾಟ ನಡೆಯಿತು. ಎಚ್ಚರ ತಪ್ಪಿದವರಂತೆ ನಾಟಕ ಮಾಡುತ್ತಿದ್ದ ರೋಜೀ ಆಗೊಮ್ಮೆ ಈಗೊಮ್ಮೆ ಅವರಿಬ್ಬರ ಕದನವನ್ನು ಅವರಿಬ್ಬರ ಕಣ್ಣು ತಪ್ಪಿಸಿ ನೋಡುತ್ತಿದ್ದಳು.

ಕೊನೆಗೂ ಕೈ ಮೇಲಾದದ್ದು ಫೇಂಡಾ ಮೃಗ ಹ್ಯೂವೆನ್‌ದೇ.

ಒಂದರ ಮೇಲೆ ಒಂದರಂತೆ ರಿವಾಲ್ವರ್ ಹಿಡಿದ ಏಟುಗಳು ಶೇಖರ್‌ನ ಬಾಯಿ, ನೆತ್ತಿ ಮೇಲೆ ಬೀಳುತ್ತಿದ್ದಂತೆ ಶೇಖರ್ ಮೂರ್ಛಿತನಾಗಿ ಕಾರ್ಪೆಟ್ ಮೇಲೆ ಉರುಳಿದ. ತೇಕುತ್ತ ಅವನಿಂದ ದೂರ ಸರಿದ ಹ್ಯುವೆನ್ ರಕ್ತ ತಗುಲಿದ ರಿವಾಲ್ವರ್ ಅವನ ಪಕ್ಕದಲ್ಲಿರುವ ಟಿಪಾಯ್ ಮೇಲಿರಿಸಿ ರೋಜಿ ಯೆಡೆ ಹೆಜ್ಜೆ ಹಾಕಿದ.

ತನ್ನನ್ನು ಸಮೀಪಿಸುತ್ತಿರುವ ಹೆಜ್ಜೆ ಸಪ್ಪಳ ಕೇಳಿ ಥರಥರ ಕಂಪಿಸಿತು ರೋಜೀ ಹೃದಯ. ಅಯ್ಯೋ ಮುಂದೇನು ಗತಿ? ಎಂದು ಓ ದೇವರೆ ನನ್ನನ್ನು ಕಾಪಾಡಲು ನೀನಾದರೂ ಬಾ. ಇಲ್ಲವೇ ನಿನ್ನ ದೂತನನ್ನಾದರೂ ಕಳಿಸು ಎಂದಾಕೆ ಮಲಗಿದಲ್ಲಿಂದಲೇ ಆರ್ತನಾದ ಮಾಡಿದಳು ಮನದಲ್ಲೇ.

ಅವಳ ಮನದಳಲು ದೇವರಿಗೆ ಕೇಳಿಸಿತೇನೋ.

ಧಡಕ್‌ನೇ ಕೋಣೆ ಬಾಗಿಲು ತೆರೆದು ಬಿರುಗಾಳಿಯಂತೆ ಒಳನುಗ್ಗಿದ ಅಶೋಕ. ರೋಜಿಯನ್ನು ಸಮೀಪಿಸಿದ ಹ್ಯುವೆನ್ ಗಲಿಬಿಲಿಗೊಂಡ. ಅವನಿಗೊಂದೂ ತಿಳಿಯದಂತಾಗಿತ್ತು. ತಾನು ಅತೀ ಗುಪ್ತವಾಗಿ ರೋಜಿಯನ್ನು ಹಿಂಬಾಲಿಸಿದ್ದರೂ ತನ್ನನ್ನು ಒಬ್ಬರಲ್ಲದೇ ಇಬ್ಬಿಬ್ಬರು ಹಿಂಬಾಲಿಸಿದ್ದಾರಲ್ಲ? ಇದು ಹೇಗೆ? ತಾನೇಕೆ ಇದರ ಬಗ್ಗೆ ಯೋಚಿಸಲಿಲ್ಲ?

ಅಶೋಕನ ದೃಷ್ಟಿ ಮೊದಲು ಶೇಖರನ ಮೇಲೆ, ನಂತರ ರೋಜಿಯ ಮೇಲೆ ಹರಿಯಿತು. ಶೇಖರ್ ಜೀವಿಸಿರಲಿಕ್ಕಿಲ್ಲವೆಂದಾತ ಕಲ್ಪಿಸಿದರೂ ರೋಜಿಯ ಜೀವಕ್ಕೆ ಅಪಾಯವಿಲ್ಲವೆಂದು ತರ್ಕಿಸಿದ. ಆಮೇಲೆ ಆತನ ದೃಷ್ಟಿ ತನ್ನೆದುರು ಚಿಕ್ಕ ಪರ್ವತದಂತಿರುವ ಹ್ಯುವೆನ್ ಮೇಲೆ ಹರಿಯಿತು. ಅವರಿಬ್ಬರಿಗೂ ಇಂಥ ದುರ್ಗತಿ ನೀಡಿದವ ಆತನೇ ಎಂಬುದರಲ್ಲಿ ಯಾವ ಸಂದೇಹವೂ ಉಳಿಯಲಿಲ್ಲ.

"ಹಲೋ ಫೇಂಡಾ." ಆತ ಕುಟಿಲ ನಗು ಸೂಸಿ ಹ್ಯುವೆನ್‌ಗೆ ವಿಶ್ ಮಾಡಿದ.

"ಹಲೋ ಲಿಲಿಪುಟ್" ಅಷ್ಟೇ ತೀಕ್ಷ್ಣವಾಗಿ ಉತ್ತರಿಸಿದ ಹ್ಯುವೆನ್.

ಮುಂದಿನ ಕ್ಷಣ ಇಬ್ಬರೂ ಒಬ್ಬರ ಮೇಲೆ ಒಬ್ಬರು ನೆಗೆದಿದ್ದರು.

ಅದೊಂದು ನಿಕರ ಹೋರಾಟ.

ಶರೀರದ ಪ್ರಮಾಣ, ತೂಕ, ಆಕಾರಗಳಲ್ಲಿ ಹ್ಯುವೆನ್ ಅಶೋಕನನಿಗಿಂತ ಮೂರುಪಟ್ಟು ಹೆಚ್ಚಾಗಿದ್ದರೂ ಶಕ್ತಿ ಮತ್ತು ಹೋರಾಟಗಳಲ್ಲಿ ಅವನ ಸರಿಸಮನಾಗಿ ನಿಲ್ಲಲು ಪರಿಶ್ರಮಪಡಬೇಕಾಯಿತು.

ಪರಿಣಾಮ...

ದಣಿವು. ಉಸಿರು ಸಾಲದೇ ಹ್ಯುವೆನ್ ತೇಕತೊಡಗಿದ. ಇದೇ ರೀತಿ ಇನ್ನೂ ಐದ್ದುತ್ತು ನಿಮಿಷ ಹೋರಾಟ ಮುಂದುವರೆದರೆ ತಾನು ಧರಾಶಾಹಿ ಯಾಗುವದು ಶತಸಿದ್ಧ ಎಂದು ತರ್ಕಿಸಿದ ಆತ ಅಷ್ಟರಲ್ಲೇ ಅಶೋಕನಿಗೊಂದು ಗತಿಗಾಣಿಸಲು ನಿರ್ಧರಿಸಿದ.

ಆಕಸ್ಮಿಕವಾಗಿ ಹ್ಯುವೆನ್ ತೆಗೆದುಕೊಂಡ ನಿರ್ಣಯದಿಂದಾಗಿ ಅಶೋಕ ತೊಂದರೆಯಲ್ಲಿ ಸಿಲುಕಿಕೊಳ್ಳಬೇಕಾಯಿತು. ಬೆಕ್ಕು ಇಲಿಯನ್ನು ಆಟ ಆಡಿಸು ವಂತೆ ಆ ದಾಂಡಿಗನನ್ನು ಆಡಿಸಬೇಕು. ಆತ ನಿತ್ರಾಣನಾಗಿ ನೆಲ ಕಚ್ಚುವಂತೆ ಮಾಡಬೇಕು ಎಂದು ಯೋಚಿಸಿದ. ಅವನ ವಿಚಾರ ತಲೆಕೆಳಗಾಯಿತು. ಉಸಿರು ಬಿಗಿಹಿಡಿದು ಚಿರತೆಯಂತೆ ಹಾರಿದ ಹ್ಯುವೆನ್ ತನ್ನ ಬಲಗೈ ಕತ್ತರಿಯಲ್ಲಿ ಅಶೋಕನ ಗೋಣನ್ನು ಬಲವಾಗಿ ಹಿಡಿದು ಅಮುಕತೊಡಗಿದ. ಅದೊಂದು ಬಲವಾದ ಉಕ್ಕಿನ ಹಿಡಿತ. ಬಿಡಿಸಿಕೊಳ್ಳಲು ಪ್ರಯತ್ನಿಸಿದಷ್ಟೂ ಅದು ಬಲ ವಾಗುತ್ತಿತ್ತು. ಹುಚ್ಚರಂತೆ ಹೋರಾಡಿ ಸಾವಿಗೆ ಶರಣಾಗುವದಕ್ಕಿಂತ ಧೂರ್ತ ತನದಿಂದ ಅವನನ್ನು ಎದುರಿಸಬೇಕೆಂದು ಅವನ ಮಿದುಳು ಎಚ್ಚರಿಸಿತು. ಅದರಂತೆ ಪಾಲಿಸಲು ಆತ ಸಿದ್ಧನಾದ.

ಮೊದಲು ಪ್ರತಿಭಟಿಸಿದ. ಪರಿಣಾಮವಾಗಿ ಹಿಡಿತ ಬಲವಾಯಿತು.

ಪಟಪಟನೆ ಕೈಕಾಲು ಒಡಿದ ಆತ ಒಮ್ಮೆಲೆ ನಿಶ್ಚೇತಿತನಾದ. ಹ್ಯುವೆನ್‌ನ ಮುಖ ಗರ್ವದಿಂದ ಉಬ್ಬಿತು. ಇಬ್ಬರೂ ಶತ್ರುಗಳು ಅವನ ಕೈಯಲ್ಲಿ ಸೋತಿದ್ದರು. ಅಶೋಕನನ್ನು ನೆಲದ ಮೇಲೆ ಉರುಳಿಸಿ ಭುಸುಭುಸುನೆ ತೇಕುತ್ತ ಎದ್ದು ನಿಂತ ಆತ ಬೆವರಿನಿಂದ ತೊಪ್ಪನೆ ತೊಯ್ದ ತನ್ನ ಮುಖ, ಕತ್ತು ತೊಳೆದುಕೊಳ್ಳಲು ಬಾತ್‌ರೂಮ್ ಕಡೆ ಹೆಜ್ಜೆ ಹಾಕಿದ.

ಆದರೆ....

ತನ್ನ ಹಿಂದೆಯೇ ಸಾವು ಬೆಕ್ಕಿನ ಹೆಜ್ಜೆಯನ್ನು ಹಿಂಬಾಲಿಸಿದೆ ಎಂಬುದ ನ್ನಾತ ಅರಿಯದಾದ.

ತನ್ನತ್ತ ಹ್ಯುವೆನ್‌ನ ಬೆನ್ನು ಕಾಣುತ್ತಲೂ ಮೆಲ್ಲನೆ ಎದ್ದ ಅಶೋಕ ಆತ ಬಾತ್‌ರೂಮ್ ಬಾಗಿಲಿಗೆ ಹೋಗುತ್ತಿದ್ದಂತೆಯೇ ಚಿರತೆಯ ಹಾಗೆ ಅವನ ಮೇಲೆ ನೆಗೆದ.

ಕಿಕ್ ಕೊಟ್ ಫುಟ್‌ಬಾಲ್‌ನಂತೆ ಮುಂದೆ ಸಿಡಿದ ಹ್ಯುವೆನ್ ನೇರವಾಗಿ ಕಾಯ್ದು ಕುದಿಯುತ್ತಿದ್ದ ಬಿಸಿನೀರಿನಿಂದ ತುಂಬಿದ ಬಾತ್ ಟಬ್‌ಗೆ ಬಿದ್ದ.

ವಿಕಾರವಾಗಿ ಕಿರುಚಿಕೊಂಡು ಟಬ್‌ನಿಂದ ಮೇಲೆ ಏಳಲು ಪ್ರಯತ್ನಿಸಿದ್ದು

ವ್ಯರ್ಥವಾಯಿತು. ಅಶೋಕ ನೋಡನೋಡುತ್ತಿದ್ದಂತೆ ಹ್ಯುವೆನ್ ವಿಲಿವಿಲಿ ಒದ್ದಾಡಿ ಅಲ್ಲೇ ಅಸುನೀಗಿದ. ಆತನ ಇಹಲೋಕದ ಋಣ ಮುಗಿಯಿತು ಎಂದು ಮನದಟ್ಟಾದಾಗ ಅಶೋಕ ಶೇಖರ್‌ನೆಡೆ ಧಾವಿಸಿದ.

ಶೇಖರ್ ಮೂರ್ಛಿತನಾಗಿದ್ದ ಅಷ್ಟೇ.

ಕೂಡಲೇ ಫೋನ್ ಮಾಡಿ ಆಸ್ಪತ್ರೆಯಿಂದ ಅಂಬ್ಯುಲನ್ಸ್ ಕಳಿಸಲು ಸೂಚಿಸಿ ರೋಜಿಯತ್ತ ಆಕರ್ಷಿತನಾದ.

ಅನಾಥವಾಗಿ ಬಿದ್ದ ಸುಂದರ ನಗ್ನ ಶರೀರ.

ಅವಳ ಮುಚ್ಚಿದ ಕಣ್ಣುಗಳಲ್ಲಿ ಹಿಂದೆ ಗೋಲಿಯಂತೆ ಓಡಾಡುತ್ತಿದ್ದ ಕಣ್‌ಬೊಂಬೆ ಚಲನ ಗಮನಿಸಿದ ಆತ, ಮುಗುಳುನಗೆ ಮಿಂಚಿತು. ಅವಳ ಗಲ್ಲ ತಟ್ಟಿ ಸಾವಕಾಶವಾಗಿ ನುಡಿದ.

"ಮಿಸ್ ನ್ಯೂಡ್ ಬ್ಯೂಟಿ. ನಿನಗೇನೂ ಆಗಿಲ್ಲ, ನೀನು ಎಚ್ಚರವಾಗಿಯೇ ಇರುವೆ ಎಂದು ನನಗೆ ತಿಳಿದಿದೆ. ಮೇಲೆದ್ದು ಬಟ್ಟೆ ತೊಟ್ಟುಕೊ. ನನಗೀಗ ಒಂದು ಕಪ್ ಕಾಫಿಯ ಅವಶ್ಯಕತೆ ಬಹಳವಿದೆ.

ಪಳಕ್ಕನೆ ಕಣ್ತೆರೆದ ಆಕೆ ಚಂಗನೆ ಅವನತ್ತ ಹಾರಿ ಕೊರಳಿಗೆ ಜೋತು ಬೀಳುತ್ತ ಅವನ ಮುಖದ ತುಂಬೆಲ್ಲ ಮುತ್ತಿನ ಮಳೆಗರೆದಳು.

೮

"ಮಧು ಸಂಚಯ" ಸೈಂಟಿಸ್ಟ್ ಕುಮುದನ್ ಅವರ ಬಂಗಲೆ ಎದುರು ಕಾರಿನಿಂದಿಳಿದ ಹೇಮಂತ. ಬಹುಶಃ ಕುಮುದನ್ ಅವರಿಗೆ ತಮ್ಮ ಮಗಳ ಮೇಲೆ ಮಮತೆ ಬಹಳವೆಂದು ಕಾಣುತ್ತದೆ. ಅದಕ್ಕೆಂದೇ ತಮ್ಮ ಬಂಗಲೆಗೆ ಅವಳ ಹೆಸರನ್ನೇ ಇಟ್ಟಿದ್ದರು. ಬಂಗಲೆ ಚಿಕ್ಕದಾಗಿದ್ದರೂ ಸುಂದರವಾಗಿತ್ತು. ಅರ್ಧ ಎಕರೆ ವಿಸ್ತೀರ್ಣ ಸೈಟ್‌ನ ಮಧ್ಯಭಾಗದಲ್ಲಿ ನಿರ್ಮಿಸಲ್ಪಟ್ಟ 'ಮಧು ಸಂಚಯ' ಒಂದೇ ಒಂದು ಮಹಡಿ ಕಟ್ಟಡ. ಬಂಗಲೆ ಸುತ್ತಲೂ ವಿಶಾಲವಾದ ಸ್ಥಳ. ಅಲ್ಲೊಂದು ಇಲ್ಲೊಂದು ತೆಂಗಿನ ಮರಗಳನ್ನು ಬಿಟ್ಟರೆ ಮತ್ತಾವ ಮರಗಳಾಗಲೀ ಹೂವಿನ ತೋಟವಾಗಲೀ ಇಲ್ಲದ್ದರಿಂದಾಗಿ ಬಂಗಲೆಯ ಸೌಂದರ್ಯಕ್ಕೆ ಎಷ್ಟೋ ಚ್ಯುತಿ ಬಂದಂತಾಗಿತ್ತು. ಬಂಗಲೆ ಗೇಟಿಗೆ ನಿಂತು ಇದರ ಬಗ್ಗೆಯೇ ತಲೆ ಕೆಡಿಸಿಕೊಂಡ ಹೇಮಂತ ಬಂಗಲೆ ಸುತ್ತಲೂ ಜಾಗೆ

ಯನ್ನು ಹೀಗೇಕೆ ಹಾಳುಗೆಡವಿದ್ದಾರೆಂದು. ಕುಮುದನ್ ಅವರು ಓರ್ವ ಸೈಂಟಿಸ್ಟ್. ಸೈಂಟಿಸ್ಟ್‌ರಾದವರಿಗೆ ಗಿಡ ಮರಗಳ ಮೇಲೆ, ಹೂ ಗಿಡಗಳ ಬಗ್ಗೆ ಆಸಕ್ತಿ-ಪ್ರೀತಿ ಬಹಳ ಎಂದು ಕೇಳಿದ್ದ. ಅದಿಲ್ಲಿ ಹುಸಿಯಾಗಿತ್ತು. ಬಂಗಲೆಯಲ್ಲಿ ಯಾರೂ ಇರುವದಿಲ್ಲವೆಂದೋ ಅಥವಾ ತೋಟಪಟ್ಟಿ ಮಾಡಿದರೆ ಅದರ ಮೇಲ್ವಿಚಾರಣೆ ನೋಡಿಕೊಳ್ಳುವವರ ಕೊರತೆ ಇರುವದರಿಂದಲೋ ತೋಟ ಮಾಡಿರಲಿಕ್ಕಿಲ್ಲ ಎಂದು ಯೋಚಿಸಿದ ಆತ ಗೇಟು ತೆರೆದು ಒಳಗೆ ಪ್ರವೇಶಿಸಿದ.

ಹತ್ತು ಹೆಜ್ಜೆ ಹೋಗಿರಲಿಲ್ಲ ಅಷ್ಟೇ.

'ಬೌವ್ ಬೌವ್' ಎಂದು ಭೀಕರವಾಗಿ ಗರ್ಜಿಸುತ್ತ ಎರಡು ದೊಡ್ಡ ತಲೆಯ 'ಹಂಟರ್ ಡಾಗ್'ಗಳು ಅವನ ಮೇಲೆ ದಾಳಿ ಮಾಡಿದವು. ಅಳ್ಳೆದೆ ಯುವರು ಯಾರಾದರೂ ಆಗಿದ್ದರೆ ಅದೇ ಕ್ಷಣ ಎದೆಗುಂಡಿಗೆ ಒಡೆದು ಸಾವು ಅಪ್ಪುತ್ತಿದ್ದರು. ಹೇಮಂತನಿಗೆ ಇವೆಲ್ಲಾ ಮಾಮೂಲು. ಅಲ್ಲದೆ ಸ್ವತಃ ಆತನೂ ಸಹ ಶ್ವಾನಪ್ರಿಯ. ಬಂಗಲೆಯಲ್ಲಿ ಸಾಕಿದ ನಾಯಿ 'ಟೈಗರ್' ಜೊತೆ ಕಳೆದವ. ನಾಯಿಗಳಿಗೆ ಹೆದರುವ ಪ್ರಮೇಯವೇ ಬರಲಿಲ್ಲ. ಒಂದೆಡೆ ಗರ್‌ನೆ ನಿಂತು ತುಟಿ ಗೋಲ ಮಾಡಿ ನಾಯಿಗಳಿಗೆ ಅರ್ಥವಾಗುವಂತೆ ವಿಚಿತ್ರ ವಿಚಿತ್ರ ವಾಗಿ ಸಿಳ್ಳು ಹಾಕಲಾರಂಭಿಸಿದ. ಮೈಮೇಲೆ ಬಿದ್ದು ರಕ್ತ ಹೀರಬೇಕೆಂದು ಬಂದಿದ್ದ ಎರಡೂ ನಾಯಿಗಳು ಅವನ ಬಳಿ ಬಂದು ಬಾಲ ಅಲ್ಲಾಡಿಸುತ್ತ ಕಾಲು ನೆಕ್ಕಲಾರಂಭಿಸಿದವು. ಹೇಮಂತ ನೆಲದ ಮೇಲೆ ಹಾಯಾಗಿ ಕುಳಿತು ಅವುಗಳ ತಲೆ ಮೇಲೆ, ಕಿವಿ ಹಿಂದೆ, ಕುತ್ತಿಗೆಯ ಮೇಲೆ ಬೆರಳಾಡಿಸಿ ಪ್ರೀತಿ ಯಿಂದ ಲಲ್ಲೆ ಮಾಡತೊಡಗಿದ ಮೇಲಂತೂ ಅವು ಅವನೊಡನೆ ಬೆರೆತು ಆಡಲಾರಂಭಿಸಿದವು.

ಬಂಗಲೆಯ ಮಹಡಿ ಮೇಲಿದ್ದ ಕಿಟಕಿ ಹಿಂದಿರುವ ಬೆಲೆ ಬಾಳುವ ರೇಶಿಮೆ ಪರದೆ ನಸು ಸರಿಯಿತು. ಸರಿದ ಭಾಗದಿಂದ ಎರಡು ಕಾಡಿಗೆ ಕಣ್ಣುಗಳು ಬಂಗಲೆಯ ಮುಂಭಾಗದಲ್ಲಿ ನಡೆದ ಈ ಆಶ್ಚರ್ಯಕರ ಘಟನೆ ನೋಡಿ ಅಚ್ಚರಿ ಪಟ್ಟವು. ಹೇಮಂತ ನಾಯಿಗಳೊಂದಿಗೆ ಆಡುತ್ತ ಮಹಡಿಎಡೆ ದೃಷ್ಟಿ ಹರಿಸುತ್ತಲೂ ಪರದೆ ಸರಕ್‌ನೆ ಸರಿದು ಮುನ್ನಿನಂತಾಯಿತು. ಅದನ್ನು ಗಮನಿಸಿದ ಮೇಜರ್ ಮುಗುಳುನಗೆ ನಕ್ಕು ಮೇಲೆದ್ದು ಬಾಗಿಲಿನತ್ತ ಹೆಜ್ಜೆ ಹಾಕಿದ. ಎರಡೂ ನಾಯಿಗಳು ಅವನಿಗಿಂತ ಮುಂದೆ ಓಡುತ್ತ ಪಥಪ್ರದರ್ಶನ ಮಾಡಿದವು.

ಕರೆ ಗಂಟೆಯ ಮೇಲೆ ಬೆರಳಿಟ್ಟು ಮೂರು ಸೆಕೆಂಡುಗಳ ಕಾಲ ಗಂಟೆ

ಬಾರಿಸಿದ ಹೇಮಂತ. ಎರಡು ನಿಮಿಷಗಳು ಕಳೆದವು. ಮತ್ತೊಂದು ಬಾರಿ ಗಂಟೆ ಬಾರಿಸಿದ. ಗಂಟೆ ಬಾರಿಸಿದ ಎರಡೇ ಸೆಕೆಂಡಿಗೆ ಬಾಗಿಲು ತೆರೆಯಿತು.

ತೆರೆದ ಬಾಗಿಲ ಹಿಂದೆ ನಿಂತಿದ್ದ ಅಪ್ಸರೆಯನ್ನು ಕಂಡು ಅವಾಕ್ಕಾದ ಹೇಮಂತ. ಇಪ್ಪತ್ತು ಮೀರಿರದ ಪ್ರಾಯ. ಕೇಸರಿ ಮಿಶ್ರಿತ ಹಾಲಿನ ಮೈಬಣ್ಣ. ಕಪ್ಪು ಕಾರ್ಮೋಡಗಳನ್ನೂ ನಾಚಿಸುವಂಥ ಕಣ್ಣುಗಳು. ತುಂಬಿದ ಕಪೋಲಗಳು. ತುಸು ಅಗಲವಾದ ಹಣೆ. ಹಣೆ ಮೇಲೆ ಒಂದು ಕೆಂಪು ಚುಕ್ಕೆ. ನೀಳವಾದ ಕೇಶರಾಶಿ. ಮುದ್ದಿಸಲು ಆಹ್ವಾನ ನೀಡುವ ರಸಭರಿತ ಕೆಂಪು ತುಟಿಗಳು. ತುಟಿಗಳ ಮೇಲೆ ಮಾಟಾದ ಮೂಗು.

ಆಹಾ! ಎಂಥ ಸ್ನಿಗ್ಧ ಸೌಂದರ್ಯ.

ಅಪ್ಪಟ ಬಂಗಾಲಿ ಸುಂದರಿ ಅವನ ಮುಂದಿದ್ದಳು.

ಅವಳ ತುಟಿಗಳು ಬಿರಿದವು. ಕಮಲದ ಮೊಗ್ಗು ಬಿರಿದಂತೆ.

"ಹೇಳಿ ಏನಾಗಬೇಕಿತ್ತು?"

ಹೇಮಂತನಿಗೆ ಆ ಮಾತು ಕೇಳಿಸಿದರೆ ತಾನೇ ಆತ ಉತ್ತರಿಸುವದು. ಆತ ಆ ಸುಂದರಿಯ ಸೌಂದರ್ಯಪಾನದಲ್ಲಿ ಮಗ್ನನಾಗಿದ್ದ. ಆಕೆ ತುಸು ಜೋರಾಗಿ ಕೇಳಿದಳು.

"ರೀ ಮಿಸ್ಟರ್, ಯಾರು ನೀವು? ಏನಾಗಬೇಕಿತ್ತು?"

"ಆಂ? ಏನೆಂದಿರಿ?" ಹೇಮಂತ ಎಚ್ಚೆತ್ತ.

"ಏನಾಗಬೇಕಿತ್ತು ಎಂದು ಕೇಳಿದೆ ಮಹಾರಾಜರೇ? ಅವಳ ವ್ಯಂಗ್ಯ ಚಾಟಿ ಮಾತಿಗೆ ನಕ್ಕ.

"ನಾನು ಕುಮುದನ್ ಅವರನ್ನು ಕಾಣಲು ಬಂದಿದ್ದೆ."

"ಕ್ಷಮಿಸಿ. ಅವರು ಊರಲ್ಲಿಲ್ಲ, ಎಂಟು ದಿನ ಬಿಟ್ಟು ಬನ್ನಿ."

ಅವನ ಮುಖದ ಮೇಲೆಯೇ ಬಾಗಿಲು ಮುಚ್ಚಲು ಮುಂದಾದಾಗ ಆತ ತಡೆದ.

"ಪ್ಲೀಜ್, ನನ್ನ ಮಾತು ಕೇಳಿ. ನಾನು ತುರ್ತಾಗಿ ಅವರನ್ನು ಕಾಣಬೇಕು. ದೂರದಿಂದ ಅವರನ್ನು ಕಾಣಲು ಬಂದಿರುವೆ.

"ಸಾರಿ. ನನ್ನಿಂದ ಯಾವ ಸಹಾಯವೂ ದೊರೆಯಲಾರದು."

"ಹಾಗೆನ್ನಬೇಡಿ. ಕೊನೇ ಪಕ್ಷ ಅವರೆಲ್ಲಿ ದೊರೆಯಬಹುದು ಎಂಬುದನ್ನಾದರೂ ತಿಳಿಸಿದರೆ ನಾನು ಅಲ್ಲಿಗೇ ಹೋಗಿ ಕಾಣುವೆ."

"ಆ ರೀತಿ ಹೇಳುವದು ಕಷ್ಟ. ಅವರೆಲ್ಲಿದಾರೆ ಅಂತ ನನಗೂ ತಿಳಿಯದು. ನೀವು ಒಂದು ಕೆಲಸ ಮಾಡಿ. ನಿಮ್ಮ ಹೆಸರು, ಫೋನ್ ನಂಬರ್ ಕೊಟ್ಟು

ಹೋಗಿ. ಅವರೇ ಏನಾದರೂ ಫೋನ್ ಮಾಡಿದರೆ ತಿಳಿಸುತ್ತೇನೆ.

"ತುಂಬಾ ಉಪಕಾರವಾಯ್ತು."

ಹೇಮಂತ ಜೇಬಿಗೆ ಕೈ ಹಾಕಿದ. ಬೇಕೆಂತಲೇ ಎರಡೆರಡು ಬಾರಿ ಎಲ್ಲಾ ಜೇಬು ತಡಕಾಡಿದ. ಪೆಚ್ಚು ಮುಖ ಮಾಡಿ ಗೋಗರೆದ.

"ಕ್ಷಮಿಸಿ, ಕಾಗದ ಮರೆತು ಬಂದೆ. ಒಂದು ಪೀಸ್.

ಆಕೆ ಹರಳೆಣ್ಣೆ ಕುಡಿದವರಂತೆ ಮುಖ ಮಾಡಿ ಒಳ ನಡೆದಳು. ಹೇಮಂತ ಮಂದ ನಗೆ ಸೂಸಿ ಒಳಗೆ ಕಾಲಿಟ್ಟ. ಅದೊಂದು ಹತ್ತು ಫೂಟು ಉದ್ದ, ಹನ್ನೆರಡು ಫೂಟು ಅಗಲವಿರುವ ಸಿಟೌಟ್. ಅವನ ಬೂಟುಗಳು ಫ್ಲೋರಿಗೆ ತಾಕಿದಾಗ ವಿಚಿತ್ರ ಬಗೆಯ ಸಪ್ಪಳವುಂಟಾಯಿತು. ಹೇಮಂತನ ತುಟಿಗಳು ಗೋಲವಾದವು. ಅವನಿಗೆ ಯಾವದೋ ರಹಸ್ಯದ ವಾಸನೆ ಬಡಿದಿತ್ತು. ಟಪ್ ಟಪ್ ಸ್ಲಿಪರ್ ಸಪ್ಪಳ ಕೇಳಿ ಬಂದಾಗ ಮತ್ತೆ ಆತ ಹೊಸ್ತಿಲ ಹೊರಗಿದ್ದ. ಆಕೆ ಅವನೆದುರು ಒಂದು ಚಿಕ್ಕ ಪ್ಯಾಡ್ ಮುಂದೆ ಮಾಡಿದಳು. ಹೇಮಂತ ಅದರಲ್ಲಿ ತನ್ನ ಹೆಸರು, ವಿಳಾಸ, ಫೋನ್ ನಂಬರ್ ಬರೆದು ಅವಳಿಗೆ ವಾಪಸ್ ಮಾಡುತ್ತ "ಥ್ಯಾಂಕ್ಸ್" ಎಂದು ಹೇಳಿ ಸರಕ್ಕನೆ ಹೊರಳಿದ. ಹೊರಳುತ್ತಲೂ ತುಟಿಗಳಿಂದ ಮಧುರವಾದ ಸಿಳ್ಳು ಹೊರಬಂದಿತು. ಒಳಗೆ ಯಾವುದೋ ಮೂಲೆಯಲ್ಲಿದ್ದ ಎರಡೂ ಭಯಂಕರ ನಾಯಿಗಳು ಬಿಲ್ಲಿನಿಂದ ಹೊರಟ ಬಾಣ ದಂತೆ ಓಡಿ ಬಂದು ಅವನನ್ನು ಹಿಂಬಾಲಿಸಿದವು.

ಅಚ್ಚರಿದುಂಬಿದ ಕಣ್ಣುಗಳಿಂದ ಆ ರಮಣಿ ವೀಕ್ಷಿಸಿದಳು.

ಯಾರೇ ಆಗಲಿ, ಅಪ್ಪಣೆ ಇಲ್ಲದೆ ಒಳಗೆ ಬಂದರೆ ಸೀಳಿ ಹಾಕುವಂಥ ನಾಯಿಗಳು ಈಗ ಅವನೆದುರು ಬೆಕ್ಕಿನ ಮರಿಗಳಾಗಿ ಓಡಾಡುತ್ತಿದ್ದವು. ಹಾಗಾದರೆ, ಹಾಗಾದರೆ ಈ ಅಪರಿಚಿತ ಸಾಮಾನ್ಯನಲ್ಲ. ಈತ ಯಾರಿರಬಹುದು? ಎಂದುಕೊಳ್ಳುತ್ತ ಆತ ಬರೆದುಕೊಟ್ಟ ವಿಳಾಸದತ್ತ ದೃಷ್ಟಿ ಹರಿಸಿದಳು.

"ಮೇಜರ್ ಹೇಮಂತ"

ಕೇವಲ ಹೆಸರು ತುಟಿ ಮೇಲೆ ಬರುತ್ತಿದ್ದಂತೆ ಆಕೆ ರೋಮಾಂಚಿತಳಾದಳು. ಭಾರತದ ಮೂಲೆ ಮೂಲೆಯಲ್ಲಿ ಯಾರ ಹೆಸರು ಕೇಳಿಬರುತ್ತಿತ್ತೋ, ಚಿಕ್ಕ ಮಗುವಿನ ಬಾಯಲ್ಲೂ ಯಾರ ಹೆಸರು ನಲಿಯುತ್ತಿತ್ತೋ, ಯಾರ ಹೆಸರು ಕೇಳಿದರೆ ದೇಶಭಕ್ತರ ಎದೆ ಹೆಮ್ಮೆಯಿಂದ ಬೀಗುತ್ತಿತ್ತೋ, ಯಾರ ಹೆಸರು ಕಿವಿಗೆ ಬೀಳುತ್ತಲೇ ಸಮಾಜಘಾತುಕರ ಎದೆಗುಂಡಿಗೆ ಡಬಡಬ ಬಡಿದುಕೊಳ್ಳುತ್ತಿತ್ತೋ ಅದೇ ಕೆಚ್ಚದೆಯ, ಧೀರೋದಾತ್ತ ಭಾರತದ

ಹೆಮ್ಮೆಯ ಪುತ್ರ 'ಮೇಜರ್ ಹೇಮಂತ' ಅವಳ ಮನೆ ಬಾಗಿಲ ವರೆಗೆ ಬಂದು ಅವಳ ಶುಷ್ಕ ಧೋರಣೆಯಿಂದಾಗಿ ವಾಪಸಾಗುತ್ತಿದ್ದ.

ತನ್ನ ಕೆನ್ನಗೆ ತಾನೇ ನೂರು ಬಾರಿ ಹೊಡೆದುಕೊಂಡಳು ಮನದಲ್ಲಿ ಮಧು. ಮರುಕ್ಷಣ ಆಕೆ ಕೂಗಿ ಕರೆದಿದ್ದಳು. "ಮೇಜರ್....ರೀ.... ಮೇಜರ್" ಹೀಗಾಗುತ್ತದೆ. ಹೀಗಾಗಬಹುದು ಎಂದು ಮೊದಲೇ ಊಹಿಸಿದ್ದ ಮೇಜರ್ ಮುಗುಳುನಗೆ ನಗುತ್ತ ಕಿವುಡನಂತೆ ಮುಂದಡಿಯಿಟ್ಟ. ಮತ್ತೆರಡು ಬಾರಿ ಕರೆ ಬಂತು "ಹೇಮಂತ.... ಮೇಜರ್ ಹೇಮಂತ".

ಹೇಮತ ಕಿಮಕ್ ಅನ್ನಲಿಲ್ಲ.

ಮೇಜರ್‌ನ ವರ್ತನೆ ಮಧುಳಿಗೂ ಅರ್ಥವಾಗಿರಬೇಕು. ಅವಳೂ ಬದಲಾದಳು. ಕೂಗುವದನ್ನು ಬಿಟ್ಟು ತುಟಿ ಓರೆ ಮಾಡಿ ಶ್ವಾನಗಳಿಗೆ ಆದೇಶ ನೀಡಿದಳು. ಹೇಮಂತನ ಮುಂದೆ ಮುಂದೆ ಓಡುತ್ತಿದ್ದ ನಾಯಿಗಳ ಕಿವಿ ನಿಮಿರಿದವು. ಹೊರಳಿನಿಂತ ಅವು ಮೇಜರ್‌ನಡೆ ತಮ್ಮ ಕೆಂಪು ಕಣ್ಣು ಹೊರಳಿಸಿದವು. ನಾಸಿಕ ಉಬ್ಬಿಸಿದವು. ತುಟಿ ಮೇಲೇರಿಸಿ ಕೋರೆಹಲ್ಲು ಹೊರತೆಗೆದು ಕಾಲಕೆದರುತ್ತ "ಗುರ್ರ ಗುರ್ರ" ಎಂದು ಗುರುಗುಡತೊಡಗಿದವು. ಅಕಸ್ಮಾತ್ತಾಗಿ ಅವುಗಳಲ್ಲಾದ ಬದಲಾವಣೆಗೆ ತುಸು ಗಲಿಬಿಲಿಗೊಂಡ ಹೇಮಂತ ತನ್ನ ಹತೋಟಿ ಮೀರಿ ಹೋಗುತ್ತಿದ್ದ ಅವುಗಳ ಮೇಲೆ ನಿಯಂತ್ರಣ ತರಲು ಪ್ರಯತ್ನಿಸಿದ. ಅದರಲ್ಲಾದ ಸಂಪೂರ್ಣ ಸೋಲದಿದ್ದರೂ ಅಲ್ಪ ಜಯ ಸಂಪಾದಿಸಿದ. ನಾಯಿಗಳ ಕ್ರೂರತೆಯಲ್ಲಿ ಬದಲಾವಣೆ ಕಂಡುಬಂದಿತು. ಅವು ಅವನೊಂದಿಗೆ ಸ್ವಲ್ಪ ನಯವಾಗಿ ವರ್ತಿಸತೊಡಗಿದವು. ಗುರುಗುಡುತ್ತಾ ಅವನನ್ನು ಸಮೀಪಿಸಿದ ಅವುಗಳಲ್ಲಿ ಒಂದು ಪ್ಯಾಂಟನ್ನು ಇನ್ನೊಂದು ಅವನ ಮುಂಗೈಯನ್ನು ನಯವಾಗಿ ಕಚ್ಚಿ ಹಿಡಿದು ಮನೆಯತ್ತ ಎಳೆಯಲಾರಂಭಿಸಿದವು. ಅವು ಪಕ್ಕಾ ಸ್ವಾಮಿಭಕ್ತ ಪ್ರಾಣಿಗಳು ಎಂಬುದನ್ನು ಮನಗಂಡಿದ್ದ ಆತ ವಿರೋಧ ವ್ಯಕ್ತಪಡಿಸದೇ ಅವುಗಳಿಗೆ ತನ್ನನ್ನು ಪೂರ್ಣವಾಗಿ ಸಮರ್ಪಿಸಿಕೊಂಡ. ಕೂದಲೆಳೆಯಷ್ಟು ಹಾನಿ ಮಾಡದ ಎರಡೂ ನಾಯಿಗಳು ಮನೆಯೊಳಗೆ ಪ್ರವೇಶಿಸಿದವು.

ಆಶ್ಚರ್ಯದಿಂದ ಹೇಮಂತ ಸುತ್ತಲೂ ದೃಷ್ಟಿಬೀರಿದ.

ಆ ಅಪೂರ್ವ ಸುಂದರಿಯ ದರ್ಶನವಾಗಲೇ ಇಲ್ಲ.

ಒಮ್ಮಿಂದೊಮ್ಮೆಲೇ ಆಕೆ ಅದೆಲ್ಲೋ ಮಾಯವಾಗಿದ್ದಳು. ಹೊರಗಿನ ಸಿಟೌಟ್, ಡ್ರಾಯಿಂಗ್ ರೂಮ್ ದಾಟಿ ಮೆಟ್ಟಲು ಏರತೊಡಗಿರಲು ಆ ಸ್ವಾಮಿಸೇವಕ ನಾಯಿಗಳು. ಮೇಲೊಂದು ಚಿಕ್ಕ ಹಾಲ್. ಹಾಲ್ ದಾಟಿದ ಮೇಲೆ ಇದಕ್ಕೂ ಮೊದಲು ಹೇಮಂತ ಗಮನಿಸಿದ ರೇಶಿಮೆ ಪರದೆ ಇಳಿ–

ಬಿಟ್ಟು ಬೆಡ್‌ರೂಮು ಪ್ರವೇಶಿಸಿದ ಆತ. ಅಲ್ಲಿಯುವರೆಗೂ ಕೈ ಕೋಳ ತೊಡಿಸಿ ದಂತೆ ಎಳೆತಂದ ನಾಯಿಗಳು ಅವನನ್ನು ಮುಕ್ತಗೊಳಿಸಿ ಮರಳಿ ಸಹ ನೋಡದೆ ಹಿಂದಕ್ಕೋಡಿದವು.

"ಸ್ವಾಗತ, ಸುಸ್ವಾಗತ ಮೇಜರ್ ಹೇಮಂತ ಅವರಿಗೆ"

ಕಣ್ಣಿಗೆ ಮಿಂಚು ಹೊಡೆದಂತೆ ಬಿಳಿಬಣ್ಣದ ಪಾರದರ್ಶಿ ನೈಟ್‌ಗೌನ್ ಧರಿಸಿ ಅವನ ಮುಂದೆ ಕಾಣಿಸಿಕೊಂಡಳು ಮಧು. ರೆಪ್ಪೆಬಡಿಯದೆ ಬದಲಾದ ಅವಳ ಸೌಂದರ್ಯ ಶಿಖೆ ಹೀರಿದ ಹೇಮಂತ ಕಪಟ ಮನಸು ವ್ಯಕ್ತಪಡಿಸಿದ.

"ಭರ್ತಿ ಪೇಟೆಯಲ್ಲಿ ಮೆಟ್ಟಿನಿಂದ ಹೊಡೆದು ಸಂದಿ ಗೊಂದಿಯಲ್ಲಿ ಬಂದು ಕೈ ಮುಗಿದೂ ಕ್ಷಮೆಯಾಚಿಸಿದರಂತೆ. ಇದೇ ನಿಮ್ಮ ವ್ಯವಹಾರ."

"ದಯವಿಟ್ಟು ಕ್ಷಮಿಸಿ. ತಾವು ಯಾರೆಂದು ತಿಳಿದಿರಲಿಲ್ಲ. ಯಾರೋ ಸುಮ್ಮ ಸುಮ್ಮನೆ ತೊಂದರೆ ಕೊಡುತ್ತಿದ್ದಾರೆಂದು ತಳ್ಳಿಹಾಕಲು ಪ್ರಯತ್ನಿಸಿದೆ."

"ಓಹ್ ಹೀಗೋ... ಹಾಗಾದರೆ... ಕುಮುದನ್ ಅವರ ಭೆಟ್ಟಿ ಆಗುತ್ತದೆ ಎಂದಂತಾಯ್ತು."

"ಅದ್ಹೇಗೆ ಸಾಧ್ಯ?....ಅವರು ಊರಲ್ಲಿಲ್ಲವೆಂದು ನಾನು ಮೊದಲೇ ಹೇಳಿರುವೆನಲ್ಲ?" ಮಾತಿನ ಲಹರಿ ಬದಲಾಯಿತು. ಮಧು ಸಾಮಾನ್ಯ ಹೆಣ್ಣಲ್ಲ. ಕುಮುದನ್ ಬಗ್ಗೆ ಆಕೆಗೆ ಎಲ್ಲ ತಿಳಿದಿದೆ. ಸುಲಭವಾಗಿ ಬಾಯಿ ಬಿಡುತ್ತಿಲ್ಲ ಅಷ್ಟೇ ಎಂದು ತಿಳಿದು ಹೋಯಿತು ಹೇಮಂತನಿಗೆ... ಆತನೂ ಸಹ ತನ್ನ ದಿಕ್ಕನ್ನು ಬದಲಿಸಲು ನಿರ್ಧರಿಸಿದ.

ಹೇಗಾದರೂ ಮಾಡಿ ಮಧುವಿಂದ ರಹಸ್ಯ ಹೊರಗೆಡುವಬೇಕಿತ್ತು.

ಅದು ಹೇಗೆಂಬುದೂ ಅವನಿಗೆ ತಿಳಿದಿತ್ತು.

"ಹಾಗಾದರೆ... ನನ್ನನ್ನೇಕೆ ಮರಳಿ ಕರೆಸಿದಿರಿ? ಇದನ್ನೇ ಹೇಳಲಿಕ್ಕೋ?"

"ಅದಕ್ಕಲ್ಲ....ತಮ್ಮೊಡನೆ ಮಾತಾಡಲಿಕ್ಕೆ. ನನ್ನ ಅಸಭ್ಯ ನಡತೆಗಾಗಿ ಕ್ಷಮೆ ಕೇಳಲಿಕ್ಕೆ..... ನಿಮಗೇನಾದರೂ ತೊಂದರೆ ಆಯ್ತಾ ಇದರಿಂದ".

"ತೊಂದರೆ ಎಲ್ಲಿಂದ ಬಂದಿತು? ಒಂದು ದೃಷ್ಟಿಯಿಂದ ನನ್ನ ಭಾಗ್ಯ ವೆಂದೇ ಹೇಳಬೇಕು...ನಿಮ್ಮಂಥ ಅದ್ವಿತೀಯ ಸುಂದರಿಯ ದರ್ಶನವಾದುದು ಸಾಮಾನ್ಯ ಮಾತೇ?".

ಹೇಮಂತನ ಬಾಯಿಂದ ತನ್ನ ಸೌಂದರ್ಯದ ಹೆಗ್ಗಳಿಕೆ ಕೇಳಿ ಆಕೆ ಉಬ್ಬಿ ಹೋದಳು. ಹೇಮಂತ ಮುಂದುವರೆಸಿದ.

"ನಿಜವಾಗಿಯೂ ನಾನು ಸತ್ಯ ನುಡಿಯುತ್ತಿದ್ದೇನೆ ...ಇಲ್ಲಿಯ ವರೆಗೂ ನಾನು ನಿಮ್ಮಷ್ಟು ಸುಂದರ ಯುವತಿಯನ್ನು ಎಲ್ಲೂ ಕಂಡಿಲ್ಲ.

"ಸತ್ಯವಾಗಿಯೂ ನೀವು ನನಗೆ 'ಬೂಸ್ಟ್' ಮಾಡುತ್ತಿಲ್ಲ ತಾನೆ?"

''ನೆವ್ಹರ್....ಎಂದೆಂದೂ ಸಾಧ್ಯವಿಲ್ಲ...."ಹೇಮಂತ ಮೇಲೆದ್ದು ನಿಂತು ಅವಳನ್ನು ಸಮೀಪಿಸಿದ...ಅವಳ ಕಪ್ಪು ಕಣ್ಣುಗಳನ್ನು ತನ್ನ ದೃಷ್ಟಿ ತೂರಿ ಹೇಳಿದ.

''ಸೂರ್ಯನಿಗೆ ನೀನು ಪ್ರತಿಭಾಶಾಲಿ....ನೀನು ತೇಜಸ್ವಿ....ನಿನ್ನಿಂದಾಗಿ ಅಂಧಃಕಾರ ಪಲಾಯನ ಮಾಡುತ್ತಿದೆ ಎಂದು ಹೇಳಿದರೆ ಅದು ಬೂಸ್ಟ್ ಆದೀತೇ? ಸುಂದರ ಗುಲಾಬಿ ಹೂವಿಗೆ ನೀನು ತುಂಬಾ ಸುಂದರವಾಗಿರುವಿ ಎಂದುಸುರಿದರೆ ಅದು ಸುಳ್ಳಾದೀತೆ? ಕೋಗಿಲೆಗೆ ನಿನ್ನ ಕಂಠ ಇಂಪಾಗಿದೆ ಎಂದು ಹೇಳಿದರೆ ಅದು ಅಸತ್ಯವಾದೀತೆ...? ಅದರಂತೆಯೇ ನಿಮ್ಮಂಥ ಸುಂದರಿಯನ್ನು ಸುಂದರಿ ಅಂದರೆ ತಪ್ಪಾದೀತೆ? ನೀವೇ ಹೇಳಿ...."

ಹೇಮಂತನ ಪಾಂಡಿತ್ಯಪೂರ್ಣ ಮಾತಿಗೆ ಆಕೆ ಪುಲಕಿತಳಾದಳು. ಅವಳ ದೇಹದ ಅಣು ಅಣುವೂ ಹೆಮ್ಮೆಯಿಂದ ಬೀಗಿತು. ದೇಹದ ಅಂಗಾಂಗಗಳೆಲ್ಲ ನಿಧಾನವಾಗಿ ಕೆರಳತೊಡಗಿದವು ತುಂಬಿದೆದೆಗೆ ಸಾವಕಾಶವಾಗಿ ಮಹಾಪೂರ ಬರುವ ಲಕ್ಷಣಗಳು ಕಾಣತೊಡಗಿದವು. ಕಣ್ಣುಗಳು ಲಜ್ಜೆಯಿಂದ ಬಾಗಿದರೆ ಮೂಗಿನ ತುದಿ ನಸುಗೆಂಪು ಬಣ್ಣಕ್ಕೆ ತಿರುಗಿ ಅವಳಲ್ಲಿ ವಿಷಯವಾಸನೆ ಕೆರಳುತ್ತಿದೆ ಎಂದು ಚಾಡಿಹೇಳಿತು. ಹೇಮಂತ ಅವಳಿಗೆ ತುಂಬಾ ಹತ್ತಿರವಾದ. ಅವನ ಶರೀರದ ಕಾವು ಅವಳ ಶರೀರಕ್ಕೆ ತಗಲುವಷ್ಟು ಹತ್ತಿರ ಅವನ ಬಿಸಿ ಉಸಿರು ಅವಳ ಕಪೋಲವನ್ನು ಸೋಂಕತೊಡಗಿತು. ಮಧುವಿನ ಕೋಮಲ ಶರೀರ ಮೆಲುವಾಗಿ ಕಂಪಿಸತೊಡಗಿತು.

ತನ್ನ ಬಲಗೈ ತೋರು ಬೆರಳಿನಿಂದ ಅವಳ ಗದ್ದ ಹಿಡಿದು ಮೇಲೆತ್ತಿದ ಹೇಮಂತ. ಅಧೋಮುಖಿಯಾಗಿದ್ದ ಆಕೆ ಮುಖ ಮೇಲೆತ್ತಿದಳಾದರೂ ರೆಪ್ಪೆಗಳು ಭಾರವಾಗೇ ಇದ್ದವು.

"ಮಧು...ನಿನ್ನ ದೇಹವೇ ಒಂದು ಜೇನಿನ ಗೂಡು. ನಿನ್ನ ಕಪ್ಪುನೇತ್ರಗಳು, ಅಗಲವಾದ ಹಣೆ ಮಾಟಾದ ಮೂಗು ರಸತುಂಬಿದ ತುಟಿಗಳನ್ನು ಕಂಡರೆ ಮತ್ತೇರಿದಂತಾಗುವದು. ನಾನಂತೂ ಹುಚ್ಚನಾಗಿ ಹೋಗಿರುವೆ. ನನ್ನ ಮೇಲಿನ ನಿಯಂತ್ರಣ ನಾನು ಕಳೆದುಕೊಳುತ್ತಿದ್ದೇನೆ.

ಭಾವುಕನಾದ ಮೇಜರ್ ಸಾವಕಾಶವಾಗಿ ಅವಳ ಕಮಲದಂಥ ಮುಖದ ಮೇಲೆ ಬಾಗಿದ. ಅವನ ಬಿಸಿಬಿಸಿಯಾದ ತುಟಿಗಳು ಭಾರವಾಗಿ ಮುಚ್ಚಿಕೊಂಡ ಅವಳ ಕಣ್ಣುಗಳನ್ನು ಚುಂಬಿಸಿದವು.... ಆಮೇಲೆ ಕಪೋಲ, ಅನಂತರ ತುಟಿ,

ಗಡಗಡ ನಡುಗಿ ಹೋದ ಮಧು ಹೇಮಂತನನ್ನು ಮೃದುವಾಗಿ ಅಪ್ಪಿಕೊಳ್ಳುತ್ತ "ಮೇಜರ್....ಮೇಜರ್" ಎಂದು ಉನ್ಮತ್ತಳಾಗಿ ಉದ್ಗರಿಸಿದಳು....ಇದೇ ಸದವಕಾಶವೆಂದುಕೊಂಡ ಹೇಮಂತ ಅವಳನ್ನು ತನ್ನ ಬಾಹುಪಾಶಗಳಲ್ಲಿ ಬಂಧಿಸಿದ.

ಅರ್ಧಗಂಟೆ...

ಕೇವಲ ಅರ್ಧಗಂಟೆಯನ್ನು ಮಧು ಎಲ್ಲ ರಹಸ್ಯ ಬಾಯಿಬಿಟ್ಟಿದ್ದಳು.

ಮೇಜರನಿಗೆ ಏನುಬೇಕೋ ಎಲ್ಲಾ ದೊರಕಿತ್ತು, ಪೂರ್ಣತೃಪ್ತನಾದ ಆತ ಅವಳಿಂದ ದೂರ ಸರಿವಾಗ ಜನ್ಮಜಾತಸ್ಥಿತಿಯಲ್ಲಿ ಇದ್ದ ಆಕೆ ಗೊಣಗಿದಳು.

"ಬೇಡ ಈಗಲೇ ಬೇಡ....ಇನ್ನೊಂದು ಗಂಟೆ ಬಿಟ್ಟು ಹೋಗಿ."

"ತಾಳು, ಇದೀಗ ಬಂದೆ. ಬಾಥರೂಮಿಗೆ ಹೋಗಬೇಕು." ಹೇಮಂತ ಸಮಾಧಾನ ಪಡಿಸಿದ...ಆಕೆ ಕಣ್ಣು ಮುಚ್ಚಿದಳು.....

ಬಾತ್‌ರೂಮಿಗೆ ಬಂದ ಹೇಮಂತ 'ಶಾವರ್' ಕೊಂಡಿ ತಿರುವಿದ....ಭರ್ರ ಎಂದು ನೀರು ಸುರಿಯಲಾರಂಭಿಸಿತು. ಹಾಗೇ ಬೆಡ್‌ರೂಮಿಗೆ ವಾಪಸಾದ ಆತ ತುಸುವೂ ಸದ್ದಾಗದಂತೆ ತನ್ನ ಪ್ಯಾಂಟ್ ಜೇಬಿನಲ್ಲಿದ್ದ ಚಿಕ್ಕ ಟ್ಯೂಬನ್ನು ಹೊರತೆಗೆದ. ಅದರ ತಿರುಪು ತಿರುಗಿಸಿ ಅದರಿಂದ ಬರುವ ವಾಸನೆಯನ್ನು ಒಂದು ಕ್ಷಣ ತಾನು ಮೂಸಿನೋಡಿ ನಂತರ ಅದನ್ನು ನಿದ್ರಿಸುತ್ತಿದ್ದ ಮಧುವಿನ ಮೂಗಿನಲ್ಲಿ ಹಿಡಿದ ಮೂರು ನಾಲ್ಕು ಬಾರಿ ಟ್ಯೂಬಿನಿಂದ ಹೊರ ಸೂಸಿದ ಸುಗಂಧವಾಸನೆಯನ್ನು ಆಘ್ರಾಣಿಸಿದ ಆಕೆ ಅಲ್ಲೇ ಒಂದೆರಡು ಬಾರಿ ಮಗ್ಗುಲು ಬದಲಿಸಿ ಹಾಗೇ ಗಾಢವಾಗಿ ನಿದ್ದೆ ಹೋದಳು.

ಪುನಃ ಟ್ಯೂಬನ್ನು ಮುನ್ನಿನಂತೆ ಜೇಬಿಗಿಳಿಸಿದ ಹೇಮಂತ ನಿಶ್ಚಿಂತೆಯಿಂದ ಕೈ ಜಾಡಿಸಿದ. ಸರಸರನೆ ಬಟ್ಟೆ ಧರಿಸಿಕೊಂಡು ಬಾತ್‌ರೂಮಿಗೆ ಬಂದು ಶಾವರ್ ಕೊಂಡಿ ಬಿಗಿಮಾಡಿ ನೀರು ಬೀಳುವದನ್ನು ನಿಲ್ಲಿಸಿದ. ಕನ್ನಡಿ ಎದುರು ಬಂದು ಕೂದಲ ಮೇಲೆ ಹಣಿಗೆಯಾಡಿಸಿ ಮೆಟ್ಟಲು ಇಳಿದು ಕೆಳಗೆ ಬಂದ. ಬಾಗಿಲು ಮುಚ್ಚದಿದ್ದರೂ ಬಾಗಿಲಿನಿಂದ ಹತ್ತಡಿ ದೂರ ಮೆಟ್ಟಲು ಕೆಳಗೆ ಎಡಬಲಕ್ಕೆ ಕಾವಲು ಕುಳಿತ ನಾಯಿಗಳನ್ನು ನೋಡಿ ಅವನ ಮುಖದ ಮೇಲೆ ಮಂದ ಹಾಸ ಮೂಡಿತು. ಸಿಟೌಟ್ ಪ್ರವೇಶಿಸಿದ ಆತ ಮಧ್ಯ ನಿಂತು ಸುತ್ತಲೂ ದೃಷ್ಟಿಸಿದ. ಹನ್ನೆರಡಡಿ ಉದ್ದ ಹತ್ತಡಿ ಉದ್ದವಿರುವ ಸಿಟೌಟ್ ಒಂದೆಡೆ ಮಾತ್ರ ಗೋಡೆಗೆ ಹೊಂದಿ ಎರಡು ಮೂರು ಕುರ್ಚಿಗಳಿದ್ದವು ಅಷ್ಟೇ. ಅದಾದ ಮೇಲೆ ಮಧ್ಯ ಭಾಗದಲ್ಲೊಂದು ಟಿಪಾಯ್....ಟಿಪಾಯ್ ಮೇಲೆ ಫ್ಯಾನ್ ಇಳಿಬಿಡುವ ಕೊಂಡಿಗೊಂದು ಝೂಮರ್‌ನೇತಾಡುತ್ತಿತ್ತು. ಆ ಝೂಮ-

ರಿಗೊಂದು ರೇಶಿಮೆ ಗೊಂಡೆ ಇಳಿಬಿದ್ದಿತ್ತು. ಝೂಮರನ್ನು ದಿಟ್ಟಿಸಿದ ಹೇಮಂತನಿಗೆ "ಸೀಪರ್ಲ್"ದ ಪ್ರತಿಯೊಂದು ರೂಮಿನಲ್ಲಿದ್ದ ಝೂಮರಿಗೂ ಈ ಝೂಮರಿಗೂ ಸಾಮ್ಯವಿದೆ ಅನಿಸಿತು. ಅಲ್ಲಿಯ ಝೂಮರುಗಳು ದೊಡ್ಡದಾಗಿದ್ದವು. ಇದು ಚಿಕ್ಕದಾಗಿತ್ತು ಅಷ್ಟೇ. ಟೀಪಾಯ್ ಮೇಲೆ ಹತ್ತಿ ನಿಂತು ರೇಶಿಮೆ ಗೊಂಡೆ ಹಿಡಿದು ಜಗ್ಗಿದ ಅವನ ಊಹೆ ಸತ್ಯವಾಯಿತು. ಟಿಪಾಯ್‌ದಿಂದ ಮೂರಡಿ ಅಂತರದಲ್ಲಿ ನೆಲಕ್ಕೆ ಜೋಡಿಸಿದ "ಮೋಜಾಯಿಕ್ ಟೈಲ್ಸ್" ಇಬ್ಭಾಗವಾಗಿ ಕೆಳಗಡೆ ಮೆಟ್ಟಿಲುಗಳು ಕಂಡು ಬಂದವು. ಈ ಮೊದಲು ವಿಳಾಸ ಬರೆದು ಕೊಡಲು ಮಧುಳಿಂದ ಕಾಗದ ಕೇಳಿ ಅವಳು ಒಳಗೆ ಹೋಗುತ್ತಲು ಸಿಟೌಟ್‌ನಲ್ಲಿ ಓಡಾಡಿದ ಹೇಮಂತ ಅದರಲ್ಲೇನೋ ರಹಸ್ಯವಿದೆ ಎಂದು ತರ್ಕಿಸಿದ್ದ. ಆ ರಹಸ್ಯ ಈಗ ಅವನೆದುರು ಬಾಯಿ ತೆರೆದು ನಿಂತಿತ್ತು. ಆ ಚಿಕ್ಕ ಬಂಗಲೆಯ ಕೆಳಗೆ ಭೂಗರ್ಭದಲ್ಲಿ ಸೈಂಟಿಸ್ಟ್ ಕುಮುದನ್ ಅವರು ತಮಗಾಗಿ ನಿರ್ಮಿಸಿಕೊಂಡ ಪ್ರಯೋಗ ಶಾಲೆಯ ದ್ವಾರ ಅವನಿಗಾಗಿ ಕಾಯುತ್ತಿತ್ತು, ವಿಶಾಲವಾದ ಸೈಟಿನಲ್ಲಿ ನೆಲದಡಿ ಪ್ರಯೋಗ ಶಾಲೆ ನಿರ್ಮಿಸಿದ್ದಕ್ಕಾಗಿಯೇ ಎಲ್ಲೂ ಗಿಡ ಮರಗಳನ್ನು ನೆಟ್ಟಿರಲಿಲ್ಲ. ತೋಟ ಪಟ್ಟಿ ಮಾಡಿರಲಿಲ್ಲ... ಬಂಗಲೆಯ ಸುತ್ತಲೂ ಎಲ್ಲಡೆ ಬೋಳುಬೋಳಾಗಿರುವದರ ಹಿಂದಿನ ಗುಟ್ಟು ಈಗ ಗುಟ್ಟಾಗಿ ಉಳಿದಿರಲಿಲ್ಲ.

ತನಗಾಗಿ ಕಾಯ್ದಿದ್ದ ಪ್ರಯೋಗ ಶಾಲೆಯ ಮೆಟ್ಟಿಲುಗಳತ್ತ ನಡೆದ ಹೇಮಂತ.

ಕೇವಲ ಅರು ಮೆಟ್ಟಿಲುಗಳು ಮಾತ್ರ....ಅದರ ನಂತರ ಒಂದು ಉದ್ದಕ್ಕೂ ಹರಡಿದ ಪ್ಯಾಸೇಜ್. ಎಡಬಲಕ್ಕೆ ಅಲ್ಲೊಂದು ಇಲ್ಲೊಂದು ರೂಮುಗಳು. ರೂಮುಗಳಲ್ಲಿ ಇಣುಕದೇ ಆತ ಹಾಗೇ ಮುಂದುವರೆದ. ಪ್ಯಾಸೇಜ್ ಕೊನೆಗೆ ಆತ ಹುಡುಕಿಕೊಂಡು ಬಂದ ಪ್ರಯೋಗ ಶಾಲೆ ಕಂಡು ಬಂದಿತು. ಸುತ್ತಲೂ ಚಿಕ್ಕದೊಡ್ಡ ಮೇಜುಗಳು. ಮೇಜಿನ ಮೇಲೆ ಕಾಜಿನ ಪ್ರನಾಳಗಳು, ಗ್ಲಾಸುಗಳು, ಉರಿಯುತ್ತಿದ್ದ ಸ್ಟೋ....ವಿವಿಧ ಬಗೆಯ ರಸಾಯನಗಳು. ಇನ್ನೊಂದೆಡೆ ವಿಚಿತ್ರ ಅಷ್ಟೇ ಭಯಾನಕವಾದ ನಿರ್ಜೀವ ಪ್ರಾಣಿಗಳು. ಒಂದೆರಡು ಮಾಸವನ ಬೊಂಬೆಗಳು. ಅವೆಲ್ಲವುಗಳ ಮಧ್ಯೆ ಒಂದೆಡೆ ನಿರ್ಜೀವ ಬೊಂಬೆಗಳ ಮಧ್ಯೆ ಬೊಂಬೆಯಂತೆ ಕುಳಿತಿದ್ದ ಸೈಂಟಿಸ್ಟ್ ಕುಮುದನ್ ಕಂಡುಬಂದರು. ಅವರೆದುರಿಗಿದ್ದ ದೊಡ್ಡ ಮೇಜಿನ ಮೇಲೆ ಹತ್ತಾರು ಪುಸ್ತಕಗಳು, ನೋಟು ಪುಸ್ತಕಗಳೂ ಬಾಯ್ತೆರೆದುಕೊಂಡು ಹರಡಿದ್ದವು. ಬಲ ಗಿವಿಯ ಹಿಂದೆ ಪೆನ್ಸಿಲ್ ಸಿಕ್ಕಿಸಿ, ಕುರ್ಚಿ ಹಿಂಭಾಗಕ್ಕೆ ತಲೆಯಾನಿಸಿ, ಕಣ್ಣು

ಮುಚ್ಚಿಯೇ ಮಗ್ನರಾಗಿದ್ದ ಸೈಂಟಿಸ್ಟ್ ಕುಮುದನ್‌ರಿಗೆ ಹೇಮಂತನ ಉಪಸ್ಥಿತಿಯ ಭಾಸವಾಗಲೇ ಇಲ್ಲ. ಹೇಮಂತ ಸಹ ಒಂದೇ ಬಾರಿ ಅವರ ತನ್ಮಯತೆಗೆ ಭಂಗತರಲು ಪ್ರಯತ್ನಿಸದೇ ಅವರೆದುರಿಗಿದ್ದ ಇನ್ನೊಂದು ಸ್ಟೂಲ ಮೇಲೆ ಕುಳಿತು ಅವರನ್ನೇ ನೆಟ್ಟನೋಟದಿಂದ ದಿಟ್ಟಿಸಿದ.

ಅರವತ್ತು ಮೀರಿದ ವಯಸ್ಸು. ಕೆಂಪು ಬಣ್ಣದ ದೇಹ. ಚೂಪಾದ ಮೂಗು, ತಲೆ ಮೇಲಿನ ಕೂದಲುಗಳು ಮುಕ್ಕಾಲು ಪಾಲು ಉದುರಿಹೋಗಿದ್ದು ಅಲ್ಲಲ್ಲಿ ಜುಟ್ಟಿನಂತೆ ಉಳಿದವೂ ಸಹ ಅಚ್ಚಬಿಳಿ ವರ್ಣಕ್ಕೆ ತಿರುಗಿದ್ದವು. ತೆಳುವಾದ ಶರೀರದ ಮೇಲಿದ್ದುದು ಒಂದು ಬಿಳಿ ಲುಂಗಿ ಒಂದು ಬಿಳಿ ಶರ್ಟ್ ಅಷ್ಟೇ. ಚಿನ್ನದ ಫ್ರೇಮಿದ್ದ ಕನ್ನಡಕ ಮುಚ್ಚಿದ ಕಣ್ಣುಗಳ ಮೇಲೆ.

ಒಂದೆರಡು ನಿಮಿಷಗಳ ನಂತರ ಮೇಜರ್ ಎದುರಿಗಿದ್ದ ಟಿಪ್ಪಣಿ ಪುಸ್ತಕಗಳ ಮೇಲೆ ದೃಷ್ಟಿ ಹಾಯಿಸಿದ. ಸ್ವತಃ ಅವನೂ ಸಹ ವಿಜ್ಞಾನ ಪದವೀಧರನಾಗಿದ್ದರಿಂದ ಟಿಪ್ಪಣಿಗಳು ಪೂರ್ತಿ ಅರ್ಥವಾಗದಿದ್ದರೂ ಸ್ವಲ್ಪ ಮಟ್ಟಿಗೆ ಅರ್ಥವಾದವು... ಹಾಗೇ ಪುಟ ತಿರುವುತ್ತಿದ್ದಂತೆ ಆಕಸ್ಮಿಕವಾಗಿ ಉಂಟಾದ "ಪರ್...ಪರ್" ಎಂಬ ಸದ್ದಿಗೆ ಕುಮುದನ್‌ರು ಎಚ್ಚರಗೊಂಡರು. ಕಣ್ಣುಬಿಡುತ್ತಲೇ ತಮ್ಮೆದುರು ಹೂನಗೆ ಸೂಸುತ್ತ ಕುಳಿತಿದ್ದ ಸುಂದರ ಆಕರ್ಷಕ ಮೈಕಟ್ಟಿನ ತರುಣನನ್ನು ಕಂಡು ಅಚ್ಚರಿಪಟ್ಟರು. "ನಮಸ್ಕಾರ ಕುಮುದನ್ ಆವರೆ...ತಮ್ಮ ಒಪ್ಪಿಗೆಯಿಲ್ಲದೇ ಒಳ ಬಂದುದಕ್ಕೆ ದಯವಿಟ್ಟು ಕ್ಷಮಿಸಿ" ಮೆಲುವಾದ ಧ್ವನಿಯಲ್ಲಿ ಹೇಮಂತ ಕ್ಷಮೆಯಾಚಿಸಿದಾಗ ಕುಮುದನ್ ಆಗಲೇ ಮೇಜರನ ವಶವಾಗಿದ್ದರು ...ಮೇಜರನೆದುರು ಅವರು ತಮ್ಮಲ್ಲೇನೋ ಬದಲಾವಣೆಯಾಗಿದೆ ಎಂದು ಕಂಡುಕೊಂಡರು.

"ಮಿಸ್ಟರ್ ನೀವು ಯಾರು ಅಂತ ತಿಳಿಯಲಿಲ್ಲ."

"ಈ ಪಾಮರನನ್ನು ಮೇಜರ್ ಹೇಮಂತ ಎಂದು ಕರೆಯುತ್ತಾರೆ. ಕುಮುದನ್ ಅವರೆ...."ಮೇಜರ ಹೇಮಂತ...ಮೇಜರ ಹೇಮಂತ....ಎರಡು ಮೂರು ಬಾರಿ ಅವನ ಹೆಸರನ್ನವರು ಉಚ್ಚರಿಸುತ್ತಿದ್ದಂತೆ ಅವರ ಮೈ ಎಲ್ಲಾ ಜುಂ ಎನ್ನುತ್ತ ರೋಮಾಂಚನಗೊಂಡಿತು. ಅವರು ಕುರ್ಚಿಯಿಂದ ಮೇಲೆದ್ದು ಅವನೆಡೆ ನೋಡುತ್ತ ಕೇಳಿದರು,

"ಮೇಜರ್ ಹೇಮಂತ ಅಂದರೆ........ಅಂದರೆ......." ಅವರ ಮಾತನ್ನು ಹೇಮಂತನೇ ಪೂರ್ತಿ ಮಾಡಿದ.

"ಹೌದು...ನಿಮ್ಮ ಊಹೆ ನಿಜವಾದದ್ದು....ನಾನೇ ಆತ. ತಮ್ಮನ್ನೇ ಕಾಣಲು ಬಂದೆ."

"ಅದು ನಿಜ....ಆದರೆ ನೀವು ಇಲ್ಲಿಗೆ ಹೇಗೆ ಬಂದಿರಿ? ಈ ಪ್ರಯೋಗ ಶಾಲೆಯ ಬಗ್ಗೆ ನಿಮಗೆ ಹೇಗೆ ತಿಳಿಯಿತು?"

"ಇದು ತಮಗೆ ಒಗಟಾಗಿರಬಹುದು ಪ್ರೊಫೆಸರ್....ನಮ್ಮಂಥವರಿಗೆ ಮಾಮೂಲು ವಿಷಯ...ತಾವು ತಪ್ಪು ತಿಳಿಯದಿದ್ದರೆ ತಾವು ನಡೆಸುತ್ತಿರುವ ಪ್ರಯೋಗದ ಬಗ್ಗೆ ಮಾತನಾಡಬಹುದೆ ನಾನು?"

"ಓಹ್ ಅವಶ್ಯವಾಗಿ...ನನಗದರಿಂದ ಸಂತೋಷವೂ ಲಭಿಸುತ್ತದೆ. ಅದಕ್ಕೂ ಮೊದಲು ಸ್ವಲ್ಪ ಕಾಫಿ."

"ಬೇಡ ಬೇಡ ಸುಮ್ಮನೆ ತೊಂದರೆ ತೆಗೆದುಕೊಳ್ಳಬೇಡಿ."

"ತೊಂದರೆ ಎಲ್ಲಿಂದ ಬಂತು? ನಾನು ಮೊದಲೇ ಫ್ಲಾಸ್ಕಲ್ಲಿ ಕಾಫಿ ತುಂಬಿಸಿಟ್ಟಿರುವೆ."

ಪಕ್ಕದಲ್ಲೇ ಇದ್ದ ಬೀರುವಿನಿಂದ ಫ್ಲಾಸ್ಕ್ ಮತ್ತು ಕಪ್ಪುಗಳು ಹೊರ ಬಂದವು. ಮೇಜರನಿಗೊಂದು ಕಪ್ ಕಾಫಿ ನೀಡಿ ತಾವೊಂದು ಕಪ್ ತೆಗೆದು ಕೊಂಡರು. ಕುಮುದನ್ ಕಾಫಿ ಕುಡಿಯುತ್ತ ಸಂಭಾಷಣೆಗೆ ಪ್ರಾರಂಭವಾಗಿ ಅದು ಚರ್ಚೆಗೆ ಇಳಿದು ಕೊನೆಗೆ ಸ್ವಲ್ಪ ಕಾವೂ ಏರಿ ನಂತರ ನಿಧಾನವಾಗಿ ಇಳಿಯುತ್ತ ಒಂದು ಆತ್ಮೀಯರ ವಿಚಾರ ವಿಮರ್ಶೆಯಂತೆ ಕೊನೆಗೊಂಡಿತು. ಅದಕ್ಕಾಗಿ ತಗುಲಿದ ಸಮಯ ಒಂದೂವರೆ ಗಂಟೆ.

ಕುಮುದನ್ ಅವರ ಕೈ ಕುಲುಕಿ ಮೇಲೆದ್ದ ಹೇಮಂತ.

"ಬನ್ನಿ ನಿಮ್ಮನ್ನು ಗೇಟಿನವರೆಗೂ ಬಿಡುತ್ತೇನೆ."

"ಬೇಡ ಪ್ರೊಫೆಸರ್ ಸುಮ್ಮನೆ ಔಪಚಾರಿಕತೆ ಬೇಡ. ಅಂದ ಹಾಗೆ ನಿಮ್ಮ ಈ ಪ್ರಯೋಗಕ್ಕೆ ಪ್ರೋತ್ಸಾಹಕರು ಯಾರು?..."

"ಹಾಂ...ಇದ್ದಾರೆ. ಬೇರೆ ಯಾರಾದರೂ ಕೇಳಿದ್ದರೆ ನಾನು ಗುಟ್ಟು ಬಿಟ್ಟುಕೊಡುತ್ತಿರಲಿಲ್ಲ. ನಿಮಗಾಗಿ ಹೇಳುತ್ತೇನೆ. ಹಾಂಕಾಂಗಿನಲ್ಲಿರುವ ಒಂದು ವ್ಯಾಪಾರಿ ಸಂಸ್ಥೆ ನನ್ನ ಸಹಾಯಕ್ಕೆ ಮುಂದೆ ಬಂದಿದೆ. ಇದಕ್ಕೆ ತಗಲುವ ಎಲ್ಲ ವೆಚ್ಚ ಅದು ಭರಿಸುವದಲ್ಲದೇ ಸಿದ್ಧವಾದ ವಸ್ತುಗಳನ್ನು ಸಹ ಅದೇ ಕೊಂಡುಕೊಳ್ಳುತ್ತದೆ.

"ಓಹ್....ಹಾಂಕಾಂಗಿನಲ್ಲಿರುವ ಸಂಸ್ಥೆಯೇ? ಹಾಗಾದರೆ ಅದು ಖಂಡಿತವಾಗಿ ವಿದೇಶಿ ಸಂಸ್ಥೆಯಾಗಿರಬೇಕು ಅಲ್ಲವೇ?"

"ಅಲ್ಲ ಅದು ವಿದೇಶಿ ಸಂಸ್ಥೆ ಅಲ್ಲ. ಶುದ್ಧ ಭಾರತೀಯ ಸಂಸ್ಥೆ"

"ಏನೆಂದಿರಿ? ಭಾರತೀಯ ಸಂಸ್ಥೆಯೇ? ಸಂತಸದ ವಿಷಯ. ಯಾವುದದು ?"

"ಮಿಲಿಂಡ್ ಆ್ಯಂಡ್ ಡಿ ಸೇಲ್ಸ್ ಇಂಟರ್‌ನ್ಯಾಶನಲ್. ಹಾಂಕಾಂಗಿನ ಶೂ ಬಾಜಾರಿನ ಪಕ್ಕದಲ್ಲಿರುವ ಕಮರ್ಷಿಯಲ್ ಬಿಲ್ಡಿಂಗ್‌ನಲ್ಲಿದೆ. ಫೋರ್ತ್ ಫ್ಲೋರಿನಲ್ಲಿ"

"ಅದರ ಮಾಲಿಕರಾರು ?"

"ಅದನ್ನು ಈಗಲೇ ಹೇಳಲಾರೆ ಕ್ಷಮಿಸಿ."

"ಸರಿ ನಾನು ಒತ್ತಾಯ ಮಾಡಲಾರೆ."

"ಬನ್ನಿ....ನಿಮಗೆ ಸಮೀಪದ ದಾರಿಯಿಂದ ಹೊರಕಳಿಸುತ್ತೇನೆ."

ಪ್ರಯೋಗ ಶಾಲೆಯ ಪಕ್ಕದಲ್ಲಿದ್ದ ಚಿಕ್ಕ ರೂಮಿನ ಬಾಗಿಲು ತೆರೆದರು ಕುಮುದನ್. ಅಲ್ಲಿಂದ ಮೇಲೆ ಐದಾರು ಮೆಟ್ಟಲುಗಳು. ಹೇಮಂತ ಏರಿ ಬಂದಾಗ ಆತ ಒಣಗಿ, ಅಲ್ಲಲ್ಲಿ ಒಡೆದು ಹೋಗಿ ನೀರಿನ ಟ್ಯಾಂಕಿನಿಂದ ಹೊರ ಬಂದ....ಅವನನ್ನು ನೋಡಿದ ನಾಯಿಗಳು ಒಂದು ಕ್ಷಣ ತಬ್ಬಿಬ್ಬಾಗಿ ನಂತರ ಎರಡೂ ಒಂದೇ ಬಾರಿ ಅವನ ಮೇಲೆ ಗುರುಗುಡುತ್ತ ಏರಿ ಬಂದವು. ಮೊದಲಿನಂತೆ ಒಂದು ಅವನ ಪ್ಯಾಂಟನ್ನು ಇನ್ನೊಂದು ಮುಂಗೈಯನ್ನು ಕಚ್ಚಿ ಹಿಡಿದು ಮತ್ತೆ ಬೆಡ್ ರೂಮಿಗೆ ಎಳೆದೊಯ್ದವು. ಮಧುವಿನಿಂದ ಆದೇಶ ಬಾರದ ಹೊರತು ಈ ಇಬ್ಬರು ದ್ವಾರ ಪಾಲಕರು ತನ್ನನ್ನು ಹೊರಗೆ ಬಿಡಲಾರರೆಂದು ಮನದಟ್ಟಾಯಿತು ಹೇಮಂತನಿಗೆ.

ಮಧು ಇನ್ನೂ ಸುಖವಾಗಿ ನಿದ್ರಿಸುತ್ತಿದ್ದಳು. ಮೈಮೇಲೆ ಹೊದ್ದಿರುವ ಬ್ಲ್ಯಾಂಕೆಟ್ ಅಲ್ಲಲ್ಲಿ ಸರಿದಿದ್ದರಿಂದ ಮಕಮಲ್ ಬಟ್ಟೆಯಿಂದ ಅವಳ ದೇಹಕಾಂತಿ... ಸುಂದರ ಅಂಗಾಂಗಗಳು ಕಣ್ಣುಗಳು ಕುಕ್ಕುವಂತೆ ಹೊರ ಕಾಣುತ್ತಿದ್ದವು. ಹೇಮಂತ ವಾಚು ನೋಡಿಕೊಂಡ. ಅವಳ ದೀರ್ಘ ನಿದ್ದೆ ಕೊನೆಗೊಳ್ಳಲು ಇನ್ನೂ ಅರ್ಧ ಗಂಟೆ ಉಳಿದಿತ್ತು. ನಿರ್ವಾಹವಿಲ್ಲದೇ ಬಟ್ಟೆ ಕಳಚಿ ಅವಳ ಪಕ್ಕದಲ್ಲೇ ಬ್ಲ್ಯಾಂಕೆಟಲ್ಲಿ ತೂರಿಕೊಂಡ. ಎರಡು ಗಂಟೆ ಹಿಂದೆ ಮಧುವಿನೊಂದಿಗೆ ಬೆರೆತು ತಾನು ಸುಷಮಾಳಿಗೆ ದ್ರೋಹ ಮಾಡಿದೆ ಎಂದು ಒಳಮನಸ್ಸು ಚುಚ್ಚಿ ನುಡಿಯುತ್ತಿತ್ತು. ತನ್ನ ಈ ಉದ್ಯೋಗದಲ್ಲಿ ಪ್ರಸಂಗಕ್ಕೆ ತಕ್ಕಂತೆ ವೇಷ ತೊಡದಿದ್ದರೆ ರಹಸ್ಯ ಕಂಡುಹಿಡಿಯಲಾಗದೆಂದು ಅದಕ್ಕಾಗಿ ಮನಸ್ಸಿರದಿದ್ದರೂ ಈ ರೀತಿ ವರ್ತಿಸಬೇಕಾಗುತ್ತದೆ. ಇದು ಅನಿವಾರ್ಯ....ಸದ್ಯದ ಪರಿಸ್ಥಿತಿಯನ್ನು ಕುಮುದನ್‌ರ ಜೊತೆ ಮಾತನಾಡದಿದ್ದರೆ ಮುಂದಾಗುವ ಅನಾಹುತಗಳು ಭಾರತದ ಭವಿಷ್ಯವನ್ನು ಕರಾಳಗೊಳಿಸುತ್ತಿದ್ದವು. ದೇಶದಲ್ಲಿ ರಕ್ತದ ಹೊಳೆ ಹರಿಯುತ್ತಿತ್ತು. ಅವರೊಂದಿಗೆ ಮಾತನಾಡಿದ್ದರಿಂದ ಅದನ್ನೀಗ ತಡೆಯಬಹುದು ಎಂದು ತನ್ನಷ್ಟಕ್ಕೆ ತಾನೇ ಸಮಾಧಾನಪಡಿಸಿಕೊಂಡ.

ನಿದ್ದೆಹರಿದಿತ್ತು ಮಧು ಮಲಗಿದಲ್ಲೇ ಮುಲುಗಿದಳು -ಕೈಕಾಲು ಮುರಿದಾಗ ಬ್ಲಾಂಕೆಟ್ ಪೂರ್ಣವಾಗಿ ಸರಿಯಿತು. 'ಉಯೀ...ಉಯೀ' ಎಂದು ಉದ್ಗರಿಸುತ್ತ ಆಕೆ ಎದ್ದು ಕುಳಿತಳು. ಕಣ್ತೆರೆದು ತನ್ನನ್ನೇ ನೋಡುತ್ತಿದ್ದ ಹೇಮಂತನನ್ನು ನೋಡುತ್ತಲೂ ನಾಚಿ ಮುದ್ದೆಯಾಗಿ ಬ್ಲ್ಯಾಂಕೆಟ್ ಸುತ್ತಿಕೊಂಡಳು. "ರಾಜಕುಮಾರಿಯವರು ಇನ್ನಾದರೂ ಈ ಬಡವನ ಮೇಲೆ ಕುರುಣೆದೋರಿ ನಿಮ್ಮ ದ್ವಾರಪಾಲಕರನ್ನು ಕರೆದು ನನಗೆ ಹೊರಹೋಗಲು ದಾರಿ ಮಾಡಿ ಕೊಡುವಿರಾ?"

ನಾಟಕೀಯವಾಗಿ ಆತ ನುಡಿದಾಗ ಕಿಲಕಿಲ ನಕ್ಕಳು ಮಧು ಮಲ್ಲಿಗೆ ಹೂಗಳು ಬಿರಿದಂತೆ. "ನೋ ಈಗಲೇ ಸಾಧ್ಯವಿಲ್ಲ. ನಾನು ಸ್ನಾನ ಮಾಡಿ ಟಿಫಿನ್ ಮಾಡುವ ವರೆಗೂ ನೀವು ನನ್ನ ಬಂದಿ"

"ನಿಮ್ಮಂಥವರ ಬಂದಿಯಾಗಿ ಈ ಸುಂದರ ಬಂದೀಗೃಹದಲ್ಲಿ ಜೀವಪರ್ಯಂತ ಇರಲು ಸಿದ್ಧ ನಾನು. ಆದರೆ ಈ ಬಂದಿಗೆ ಕೆಲಸವಾದರೂ ಬೇಕಲ್ಲ?"

"ಈಗ ನೀಡಿದ ಕೆಲಸ ನಿಮ್ಮ ದೃಷ್ಟಿಯಲ್ಲಿ ಕೆಲಸವಲ್ಲವೆ?"

ಅವನೆಡೆ ಮೋಹಕ, ಕೊಂಕು ದೃಷ್ಟಿ ಬೀರಿ ಮುಖ ಮುಚ್ಚಿಕೊಂಡಳು ಮಧು.

ಇಬ್ಬರೂ ಕೂಡಿ ಒಟ್ಟಾಗಿ ಬಾತ್‌ರೂಮಿನಲ್ಲಿ ಬಿಸಿಬಿಸಿ ನೀರಿನಿಂದ ಸ್ನಾನ ಮಾಡಿದರು. ಮಧು ಮೈಮೇಲೊಂದು ಗುಲಾಬಿ ಬಣ್ಣದ ಟರ್ಕಿ ಟಾವೆಲ್ ಸುತ್ತಿಕೊಂಡು ಅಡುಗೆ ಮನೆ ಸೇರಿದಳು. ಹೇಮಂತ ಬಟ್ಟೆಧರಿಸಿ ಹೊರಬಂದಾಗ ಅವನಿಗಾಗಿ ಉಪಹಾರ ದಾರಿಕಾಯುತ್ತಿತ್ತು. ಅಮ್ಲೆಟ್-ಬ್ರೆಡ್‌ಟೋಸ್ಟ್ ಹಾಲು ಅದರ ಜೊತೆ ಬಂಗಾಲಿ ರಸಗುಲ್ಲಾ.

"ಜೀವಂತ ರಸಗುಲ್ಲಾ ತಿಂದಮೇಲೆ ಈ ರಸಗುಲ್ಲಾ ಹಿಡಿಸಲಾರದು"

ಮಧುವಿನತ್ತ ಅರ್ಥಗರ್ಭಿತ ದೃಷ್ಟಿ ಬೀರಿ ಹೇಮಂತ ನುಡಿದಾಗ ಆಕೆ ನಾಚಿ ಮುದ್ದೆಯಾದಳು.

"ಮತ್ತೆ ಯಾವಾಗ ಬರುತ್ತೀರಿ?" ಹೊರಟುನಿಂತ ಹೇಮಂತನಿಗೆ ಪ್ರಶ್ನಿಸಿದಳು ಮಧು.

"ನಿಮ್ಮ ತಂದೆ ಕುಮುದನ್ ಅವರು ಬಂದ ಮೇಲೆ ಹೇಳಿಕಳಿಸಿದರೆ ಬರುತ್ತೇನೆ."

"ಸದ್ಯ ಹತ್ತು ಹದಿನೈದು ದಿನ ಅವರು ಬರಲಾರರು."

"ಅವರು ಬಂದ ಮೇಲೆ ತಿಳಿಸಿ..."

ಮಧು ತುಟಿ ಓರೆಮಾಡಿ ಸಿಳ್ಳುಹಾಕುತ್ತಲೂ ದ್ವಾರಪಾಲಕ ಎರಡೂ

ನಾಯಿಗಳು ಓಡಿಬಂದವು.

"ನೀವಿನ್ನು ಬಂಧಮುಕ್ತರು. ಹೋಗಬಹುದು." ಮಧುವಿಗೊಂದು ಬೀಳ್ಕೊಡುವ ಮುನ್ನ ಚುಂಬನವಿತ್ತು ಹೊರಸಡೆದ ಹೇಮಂತ....ಮಧುವಿನ ಕಣ್ಣುಗಳು ಅವನ ಬೆನ್ನಲ್ಲೇ ನೆಟ್ಟಿದ್ದವು.

## ೬

ಮೇಜರ್ ಮನೆಗೆ ಬಂದಾಗ ಆಗಲೇ ಸಾಯಂಕಾಲವಾಗಿತ್ತು. ಮುಂಜಾನೆ ಒಂಭತ್ತು ಗಂಟೆಗೆ ಹೊರಬಿದ್ದವ ಹತ್ತು ಗಂಟೆ ನಂತರ ಮರಳಿದ್ದ. ಅವನ ದಾರಿ ಕಾಯ್ದು ಕಾಯ್ದು ಬೇಸತ್ತು ಅಶೋಕ ಸೆಕೆಂಡ್ ಶೋ ಸಿನಿಮಾಕ್ಕೆ ಹೋಗಿದ್ದರೆ ಸುಷಮಾ ಸಿಡಿಮದ್ದಾಗಿ ಕಾಯ್ದು ಕುಳಿತಿದ್ದಳು. ಅವಳ ಮನೋಸ್ಥಿತಿಯನ್ನು ಅರಿತ ಹೇಮಂತ ತನ್ನ ತಾನೇ ದೋಷಿಯೆಂದು ನಿರ್ಧರಿಸಿಕೊಂಡು ಓರ್ವ ಅಪ ರಾಧಿಯಂತೆ ಅವಳೆದುರು ನಿಂತುಕೊಂಡ. ಒಂದುಬಾರಿ ಆತ ತನ್ನೆದುರು ಕಾಣಿಸಿ ಕೊಂಡರೆ ಸಾಕು, ಚೆನ್ನಾಗಿ ಮಂಗಳಾರತಿ ಮಾಡಬೇಕೆಂದು ಸಿದ್ಧಳಾಗಿ ಕುಳಿತಿದ್ದ ಸುಷಮಾಳಿಗೆ ಜೋಲುಮುಖ ಹೊತ್ತು ತನ್ನೆಡೆಗೂ ನೋಡದೆ ಕೆಳಗೆ ತಲೆಹಾಕಿ ನಿಂತಿದ್ದ ತನ್ನ ನಿಯನನ್ನು ನೋಡಿ ಆಕೆ ಧರೆಗಿಳಿದು ಹೋದಳು. ಅವಳ ಮೊದಲ ನಿರ್ಧಾರ ಗಾಳಿಪಾಲಾಯಿತು. ಕಾರುಣ್ಯವೇ ಮೈವೆತ್ತಿ ಬಂದಂತೆ ಆಕೆ ಅವನತ್ತ ಧಾವಿಸಿದಳು.

"ಏಕೆ? ಏನಾಯ್ತು? ಏನಾದರೂ ಅಪಘಾತ...."

ಏನೂ ಆಗಿಲ್ಲವೆನ್ನುವಂತೆ ತಲೆ ಆಡಿಸಿದ ಮೇಜರ್.

"ಮತ್ತೇಕೆ ಹೀಗೆ ನಿಂತಿದ್ದೀರಿ? ಮೊದಲೇ ಹತ್ತು ಹನ್ನೆರಡು ಗಂಟೆ ನಿಮಗಾಗಿ ಕಾಯ್ದು ಅರ್ಧ ಸತ್ತುಹೋಗಿದ್ದೇನೆ. ಹೇಳದೇ ಕೇಳದೇ ಹೋಗಿದ್ದ ರಿಂದ ನೀವೆಲ್ಲೋ ನಿಮಗೇನಾಯ್ತೋ ಅಂತ ಹತ್ತು ಹಲವಾರು ಬಗೆಯಿಂದ ಯೋಚಿಸಿ ಯೋಚಿಸಿ ನಿರ್ಜೀವವಾಗಿದ್ದೇನೆ. ಇಷ್ಟು ನನ್ನ ಗೋಳು ಹೊಯ್ದು ಕೊಂಡು ಇನ್ನೂ ಸಾಲದು ಅಂತ ಇನ್ನಷ್ಟು ನನ್ನನ್ನು ಸತಾಯಿಸ್ತಾ ಇದೀರಾ? ಏಕೆ?....ನಾನೇನು ಮಾಡಿರುವೆ? ನನ್ನಿಂದ ಏನು ತಪ್ಪಾಗಿದೆ ಹೇಳಿ....ಹೇಳಿ"

ಮೇಜರನ ಭುಜ ಹಿಡಿದು ಗಟ್ಟಿಯಾಗಿ ಅಲ್ಲಾಡಿಸುತ್ತ ಆಕೆ ಗಟ್ಟಿಯಾಗಿ

ಗದ್ಗದ ಕಂಠದಲ್ಲಿ ಕೇಳಿದಳು.

"ಸುಷಮಾ....ಪ್ಲೀಜ್....ಹಾಗೆನ್ನಬೇಡ"

ಆರ್ತನಾದಗೈದ ಮೇಜರ್ ಅವನತ್ತ ನೋಡಿ ಸುಷಮಾ ತತ್ತರಿಸಿದಳು.

ದೃಷ್ಟಿಯುದ್ಧದಲ್ಲಿ ವನರಾಜ ಸಿಂಹವನ್ನು ಸೋಲಿಸುವ ಸಾಮರ್ಥ್ಯ ಹೊಂದಿದ್ದ ಮೇಜರ್ ಕಣ್ತುಂಬ ನೀರು ತಂದು ಅವಳೆದುರು ದೀನನಾಗಿ ನಿಂತಿದ್ದ.

ಅವಳ ಕರುಳಿಗೆ ಬರೆ ಕೊಟ್ಟಂತಾಯ್ತು.

"ಮೇಜರ್ ಏನಾಯ್ತು? ನೀವೇಕೆ ಈ ರೀತಿ ಕಣ್ಣೀರು ಮಿಡಿಯುತ್ತಿದ್ದೀರಿ."

"ಸುಷಮಾ ನಾನು ಮಹಾಪಾಪಿ. ಜೀವಕ್ಕಿಂತಲೂ ಹೆಚ್ಚು ನನ್ನ ನೀ ಪ್ರೀತಿಸುತ್ತಿದ್ದರೂ ಅದನ್ನು ಗಮನಿಸದೆ ನಾನು ನಿನ್ನ ಹೂವಿನಷ್ಟು ಕೋಮಲವಾದ ಹೃದಯಕ್ಕೆ ನೋವು ಉಂಟುಮಾಡಿದೆ. ನಿನ್ನ ನಾ ಘಾಸಿಗೊಳಿಸಿದೆ ... ನಾನು ಪಾಪಿ....ನಾನು ಅಪರಾಧಿ. ಈ ಅಕ್ಷಮ್ಯ ಅಪರಾಧಕ್ಕೆ ಬೇಕಾದ ಶಿಕ್ಷೆಯನ್ನು ಕೊಡು. ನಾನು ಸಂತಸದಿಂದ ಅದನ್ನು ಅನುಭವಿಸುತ್ತೇನೆ."

"ಮೇಜರ್-ಮೇಜರ್ ದಯವಿಟ್ಟು ಮಾತು ನಿಲ್ಲಿಸಿ ಹುಚ್ಚುಚ್ಚಾಗಿ ಮಾತನಾಡಿ ನನ್ನ ಮತ್ತಷ್ಟು ಅವಮಾನ ಮಾಡಬೇಡಿ.... ನಾನೇ ಮೂರ್ಖಳು. ನೀವಿಷ್ಟು ಕೋಮಲ ಹೃದಯದವರೆಂದು ತಿಳಿದಿದ್ದರೂ ಚುಚ್ಚು ಮಾತನಾಡಿ ನಿಮ್ಮ ಮನಸ್ಸಿಗೆ ನೋವುಂಟು ಮಾಡಿದೆ. ನಿಮ್ಮನ್ನು ಇನ್ನು ನಾನೇನೂ ಕೇಳುವುದಿಲ್ಲ. ಈ ಬಾರಿ ಕ್ಷಮಿಸಿಬಿಡಿ"

"ಸುಷಮಾ....ಕ್ಷಮೆ ಕೇಳಬೇಕಾದವನು ನಾನು; ನೀನಲ್ಲ. ನಾನು ಅಪರಾಧಿ ನಾನು ತಪ್ಪು ಮಾಡಿದವ."

"ಸಾಕು ಸಾಕು, ಇನ್ನು ಒಂದೂ ಮಾತನಾಡಬೇಡಿ, ನನ್ನಿಂದ ಕೇಳಲಾಗದು."

"ಸುಷಮಾ ನಿನಗೆ ನಾನೆಲ್ಲಾ ಹೇಳಿಬಿಡುತ್ತೇನೆ. ನಾನೆಲ್ಲಿ ಹೋಗಿದ್ದೆ. ಇಷ್ಟು ಹೊತ್ತಿನವರೆಗೆ ನಿನ್ನನ್ನು ಏಕೆ ಕಾಯಿಸಿದೆ? ನಿನಗೇಕೆ ನಾನು ಸೂಚನೆ ನೀಡಲಿಲ್ಲ. ಅಲ್ಲಿ ಏನೇನು ನಡೆಯಿತು, ಎಂಬುದನ್ನೆಲ್ಲ ಒಂದೂ ಬಿಡದಂತೆ ಸಂಪೂರ್ಣ ವರದಿ ಸಲ್ಲಿಸುತ್ತೇನೆ."

"ನನಗದರ ಅವಶ್ಯಕತೆ ಇಲ್ಲ. ನೀವು ಏನೂ ಹೇಳಬೇಕಾಗಿಲ್ಲ."

"ಸುಷಮಾ ನನ್ನ ಮಾತು ಕೇಳು...."

"ಇನ್ನು ನೀವು ಒಂದಕ್ಷರ ಮಾತನಾಡಿದರೂ ನನ್ನಾಣೆಯಿದೆ. ನೀವೇನೂ ಹೇಳಬೇಕಾಗಿಲ್ಲ. ನನಗೆ ನಿಮ್ಮ ಮೇಲೆ ಸಂಪೂರ್ಣ ವಿಶ್ವಾಸವಿದೆ. ನೀವು

ನನಗೆಂದೂ ಮೋಸ ಮಾಡಲಾರಿರಿ..."

"ಸುಷಮಾ.... ಸುಷಮಾ"

ಹೇಮಂತ ಅವಳನ್ನು ತನ್ನ ಬಾಹುಪಾಶಗಳಲ್ಲಿ ಬಂಧಿಸಿದ. ತಾಯಿ ಮಗುವನ್ನು ರಮಿಸುವಂತೆ ಸುಷಮಾ ಹೇಮಂತನನ್ನು ಎದೆಗವಚಿಕೊಂಡು ಸಮಾಧಾನಪಡಿಸಿದಳು. ಅವನ ಕಣ್ಣುಗಳಿಂದ ಉದುರಿದ ನೀರು ಅವಳ ಎದೆಯನ್ನು ತೋಯಿಸಿತು.

ಇಬ್ಬರೂ ಮೌನ ತಾಳಿದ್ದರು.

ಅವರಿಬ್ಬರ ಹೃದಯಗಳೂ ಮೂಕವಾಗಿದ್ದವು.

ಹತ್ತು ಹದಿನೈದು ನಿಮಿಷಗಳ ನಂತರ ಹೇಮಂತ ಅವಳ ಸೆರೆಯಿಂದ ಬಿಡಿಸಿಕೊಂಡು ಬಾತ್‌ರೂಮಿನತ್ತ ನಡೆದ. ಆತ ಸಿದ್ಧನಾಗಿ ಬರುವಷ್ಟರಲ್ಲಿ ಸುಷಮಾ ಅವನಿಗಾಗಿ ಕಾಫಿ ಹಿಡಿದು ಸಿದ್ಧಳಾಗಿ ನಿಂತಿದ್ದಳು. ಆತ ಕಾಫಿ ಕುಡಿಯುತ್ತಿದ್ದಂತೆ ವರದಿ ಒಪ್ಪಿಸಿದಳು.

"ಇನಸ್ಪೆಕ್ಟರ್ ಶೇಖರಗೆ ಎಚ್ಚರ ಬಂದಿದೆ. ಯಾವ ಅಪಾಯವಿಲ್ಲವೆಂದು ಡಾಕ್ಟರ್ ತಿಳಿಸಿದ್ದಾರೆ. ರೋಜಿ ಇನ್ನೂ ಅಪಾಯದಿಂದ ಪಾರಾಗಿಲ್ಲ ಎಂದು ಅನ್ನಿಸಿ ಅವಳನ್ನು ಇಲ್ಲಿಗೆ ಕರೆತಂದಿರುವೆ. ಅತಿಥಿಗಳಿಗಾಗಿರುವ ಕೋಣೆಯಲ್ಲಿ ಆಕೆ ಇದ್ದಾಳೆ"

ಕಣ್ತುಂಬ ಪ್ರೀತಿ ತುಂಬಿಕೊಂಡು ಅವರತ್ತ ಮೆಚ್ಚುಕೆಯಿಂದ ನೋಡಿದ. "ತುಂಬಾ ಒಳ್ಳೇ ಕೆಲಸ ಮಾಡಿದೆ. ಬಾ. ಅವಳನ್ನಷ್ಟು ಮಾತಾಡಿಸೋಣ."

ಇಬ್ಬರೂ ಅತಿಥಿಗಳ ಕೋಣೆ ಬಳಿ ಬಂದರು. ಚಿಂಪ್....ಚಿರ್... ಬೆಂಪ್‌ಚಿಕ್ ಚಿಕ್...ಚೂಚೂsss ಚೂs....ವಿಚಿತ್ರ ಬಗೆಯ ಸಂಗೀತಸ್ವರ ಕೇಳಿಬರುತ್ತಿತ್ತು. ಹೇಮಂತ ಸುತ್ತಲೂ ನೋಡಿದ. ಏನೂ ಕಾಣಲಿಲ್ಲ. ಸುಷಮಾ ಸಹ ಅವನೆಡೆ ಮುಖ ಮಾಡಿ ನನಗೂ ತಿಳಿಯದು ಎಂಬರ್ಥ ಬರುವಂತೆ ತನ್ನೆರಡೂ ಭುಜ ಹಾರಿಸಿದಳು. ಮೇಜರ್ ಬಾಗಿಲಮೇಲೆ ಬೆರಳಿನಿಂದ ಬಾರಿಸಿದ. ಒಮ್ಮೆಲೆ ಸಂಗೀತ ನಿಂತುಹೋಯಿತು. ಚಟಕ್ ಪಟಕ್ ಹವಾಯಿ ಚಪ್ಪಲಿ ಸದ್ದು ಬಾಗಿಲ ವರೆಗೂ ಬರುತ್ತಿದ್ದಂತೆ ಒಳಗಡೆಯಿಂದ ಕೊಂಡಿ ಸರಿದು ಬಾಗಿಲು ತೆರೆದುಕೊಂಡಿತು. ಕೈಯಲ್ಲಿ ಚಿಕ್ಕ ಟ್ರಾನ್ಸಿಸ್ಟರ್ ಹಿಡಿದು ನಿಂತಿದ್ದಳು ರೋಜಿ, ಸುಷಮಾಳ ಬಗ್ಗೆ ಆಕೆಗೆ ಮೊದಲೇ ತಿಳಿದಿತ್ತು. ಆದರೆ ಮೇಜರನ ಬಗ್ಗೆ ಗೊತ್ತಿರಲಿಲ್ಲ. ಎಲ್ಲೋ ನೋಡಿದಂತೆ ನೆನಪು ಒಮ್ಮಿಂದೊಮ್ಮೆಲೆ ನೆನಪಾಯಿತು. ನಿನ್ನೆ 'ಸೀಪರ್ಲ್' ರೆಸ್ಟಾರೆಂಟಿನಲ್ಲಿ ಆಫೀಸಿನ ರಹಸ್ಯಬೀಗ ತೆರೆಯುವ ಮುನ್ನ ಆಕೆ ಎಚ್ಚರಿಸಿದ್ದು, ಓಹ್ ಅವರೇ ಇವರು ಎಂದುಕೊಂಡಳು ಮನದಲ್ಲಿ

ಸುಷಮಾ ಪರಿಚಯ ಮಾಡಿಕೊಟ್ಟಳು.

"ರೋಜಿ........ ಇವರೇ ಮೇಜರ್ ಹೇಮಂತ....ಇವರಿಂದಾಗಿಯೇ ನಿನ್ನ ಜೀವ ಉಳಿದಿದ್ದು". ಮೇಜರ್ ಹೇಮಂತ.... ಮೇಜರ್ ಹೇಮಂತ ಮನದಲ್ಲೇ ಹತ್ತಾರುಬಾರಿ ಹೆಸರು ಜಪಿಸಿ ಹುಸಿಹುಸಿಯಾದ ನೋಟ ಅವನೆಡೆ ಹರಿಸಿದಳು. ರೋಜಿ. ಆಹಾ... ಎಂಥ ರೂಪ ... ಎಂಥ ಆಕರ್ಷಕ ಮೈಕಟ್ಟು...ಎಂತಹ ಆಕರ್ಷಣೆ...ಅವನನ್ನು ನೋಡುತ್ತ ತನ್ನ ತಾನೇ ಮರೆತು ನಿಂತಿರುವಾಗ ಸುಷಮಾ ಅಸಹನೆಯಿಂದ ಅವಳನ್ನು ಎಚ್ಚರಿಸಿದಳು.

"ಮಿಸ್ ರೋಜೀ.... ರೋಜೀ"

"ಓಹ್ ಸಾರಿ....ನನಗೇನಾಗುತ್ತದೋ ತಿಳಿಯದು. ಬನ್ನಿ, ಒಳಗೆ ಬನ್ನಿ, ನಿಮ್ಮ ಮನೆಯಲ್ಲೇ ನಾನು ನಿಮ್ಮನ್ನು ಸ್ವಾಗತಿಸಬೇಕಾಗಿದೆ."

ಹುಚ್ಚುಚ್ಚಾಗಿ ನಗುತ್ತ ನುಡಿದಳಾಕೆ. ಸುಷಮಾಗೆ ಒಳಗೆ ಕಾಲಿಡುವ ಮನಸ್ಸೇ ಇರಲಿಲ್ಲ. ಹೇಮಂತ ಒಳನುಗ್ಗುತ್ತಲೂ ನಿರ್ವಾಹವಿಲ್ಲದೆ ಹಿಂಬಾಲಿಸಿದಳು.

"ಮಿಸ್ ರೋಜೀ ನಿಮ್ಮ ಕೋಣೆಯಿಂದ ಇದೀಗ ಸಂಗೀತ, ಅದೂ ವಿಚಿತ್ರ ಸ್ವರಗಳ ಸಂಗೀತ ಕೇಳಿಬರುತ್ತಿತ್ತಲ್ಲ ಏನದು?" ಹೇಮಂತ ನೇರವಾಗಿ ಕೇಳಿದ.

"ಅದಾ.... ಈ ಟ್ರಾನ್ಸಿಸ್ಟರ್‌ನಿಂದ ಬರುತ್ತಿತ್ತು. ಇದು ನಿಮ್ಮದೇ ಟ್ರಾನ್ಸಿಸ್ಟರ್, ಮೇಜಿನ ಮೇಲಿತ್ತು ಎತ್ತಿಕೊಂಡು ಆನ್‌ಮಾಡಿದೆ. ಅಷ್ಟರಲ್ಲಿ ನೀವು ಬಂದಿರಿ."

"ಹೌದಾ? ನಾನೂ ಅಂದುಕೊಂಡೆ ಇದೆಲ್ಲಿಯ ವಿಚಿತ್ರ ಸಂಗೀತ ಅಂತ. ಹೋಗಲಿ ಬಿಡಿ– ನಿಮ್ಮ ಬೇಜಾರು ಕಳೆಯಲಿಕ್ಕೆ ನನ್ನ ಟ್ರಾನ್ಸಿಸ್ಟರ್ ಸಹಾಯ ಮಾಡಿತಲ್ಲ?"

"ಹಾಂ.... ಹೌದು. ಈ ಟ್ರಾನ್ಸಿಸ್ಟರ್ ದೊರೆತದ್ದು ಒಳ್ಳೆಯದಾಯ್ತು. ಅಂದ ಹಾಗೆ ಹೇಮಂತ ಒಂದು ಮಾತು."

ಸುಷಮಾಳ ಮೈ ಉರಿದು ಹೋಯಿತು. ತನ್ನೆದುರೇ ತನ್ನ ಇನಿಯನನ್ನು ಹೆಸರುಗೊಂಡು ಹೇಮಂತ ಎಂದು ಕರೆಯುವದೇ? ಮೇಜರ್ ಸಾಹೇಬ ಎಂದು ಕರೆದರೆ ಇವಳ ನಾಲಿಗೆಯೇನು ಬಿದ್ದುಹೋಗುವದೇ?

ಮೇಜರ್ ಮಾತ್ರ ಯಾವ ಭಾವ ವ್ಯಕ್ತಪಡಿಸದೇ ನುಡಿದ.

"ಕೇಳಿ ಅದಕ್ಕೇನಂತೆ".

"ನಾನಿಲ್ಲಿ ಎಷ್ಟು ದಿನ ಇರಬೇಕು?"

"ನೀವು ಪ್ರಾಣಾಪಾಯದಿಂದ ಪಾರಾಗುವ ವರೆಗೆ"

"ಅಂದರೆ ಎಷ್ಟು ದಿವಸ?"

"ಅದನ್ನು ಹೇಳಲಾಗುವದಿಲ್ಲ.... ಅಪರಾಧಿ ಸಿಗುವ ವರೆಗೂ ನೀವಿಲ್ಲೇ ಇರಬೇಕಾಗುತ್ತದೆ. ಅದು ಒಂದು ದಿನವಾಗಬಹುದು ಒಂದು ವಾರವಾಗಬಹುದು ಒಂದು ತಿಂಗಳೂ ಹಿಡಿಯಬಹುದು..."

"ಓಹ್ ಗಾಡ್, ಇನ್ನೊಂದು ಪ್ರಶ್ನೆ. ಅವರೇಕೆ ನನ್ನ ಹಿಂದೆ ಬಿದ್ದಿದ್ದಾರೆ?"

"ನೀನು ಮಹಾಸುಂದರಿ ಎಂದು."

ಮಧ್ಯದಲ್ಲೇ ಮೇಜರಿಗಿಂತ ಮೊದಲು ಸುಷಮಾ ಒಕ್ಕರಿಸಿ ಹೇಳಿದಳು.

"ಥ್ಯಾಂಕ್ಸ್.... ನನಗದು ಗೊತ್ತೇ ಇರಲಿಲ್ಲ."

ಊರಗಲ ಮುಖ ಮಾಡಿ ಹೇಳಿದಳು ರೋಜಿ. "ಆದರೂ ನನಗೆಸಿದ ಮಟ್ಟಿಗೆ ಬೇರೆ ಕಾರಣವು ಇರಬೇಕು."

"ಇದೆ....ನೀವು ಕೆಲಿಯಾನ್ ಜೊತೆ ಇದ್ದಿರಿ. ಆತನನ್ನು ಜೀವಿತವಾಗಿ ಕಂಡ ಕೊನೇ ವ್ಯಕ್ತಿ ನೀವು. ಕೆಲಿಯಾನ್‌ನ ಯಾವದೋ ರಹಸ್ಯ ನಿಮಗೆ ತಿಳಿದಿದೆ ಎಂಬ ಸಂಶಯ ಅವರಿಗೆ ಬಂದಿದೆ. ಆ ರಹಸ್ಯ ಸ್ಫೋಟವಾದರೆ ಅವರೆಲ್ಲರೂ ಅಪಾಯದಲ್ಲಿ ಸಿಲುಕಿಕೊಳ್ಳುತ್ತಾರೆ. ಅದಕ್ಕಾಗಿಯೇ ನಿಮ್ಮ ಪ್ರಾಣಕ್ಕೆ ಬಂದದ್ದು. ಸ್ವಲ್ಪ ನೆನಪು ಮಾಡಿಕೊಂಡು ಹೇಳಿರಿ. ಅವರ ಯಾವ ರಹಸ್ಯ ನಿಮಗೆ ತಿಳಿದಿದೆ".

"ನನಗಂತೂ ಒಂದೂ ತಿಳಿಯದು ...ಸತ್ಯವಾಗಿಯೂ"

"ಹೋಗಲಿ ಬಿಡಿ. ಆಮೇಲೆ ಯೋಚಿಸಿದರಾಯ್ತು ಹಾಂ...ಇನ್ನು ರೆಸ್ಟ್ ತಗೊಳ್ಳಿ"

ಅವರಿಬ್ಬರೂ ಹೊರಬೀಳುತ್ತಲೂ ರೋಜಿ ಬಾಗಿಲು ಮುಚ್ಚಿಕೊಂಡಳು. ತನ್ನ ರೂಮಿಗೆ ಬರುತ್ತ ಮೇಜರ್ ಹೇಳಿದ. "ಸುಷಮಾ... ರೋಜಿ ಸುಳ್ಳು ಹೇಳಿದ್ದಾಳೆ. ಅವಳ ಮೇಲೆ ಒಂದು ಕಣ್ಣಿಡು."

"ಅವಳೇನು ಸುಳ್ಳು ಹೇಳಿದಳು?"

"ಅವಳ ಕೈಗೆ ಯಾವದೋ ರಹಸ್ಯ ದೊರೆತಿದೆ. ಅದನ್ನಾಕೆ ಬಾಯಿ ಬಿಡುತ್ತಿಲ್ಲ."

"ನಿಮಗೆ ಹೇಗೆ ಗೊತ್ತು? ಕನಸೇನಾದರೂ ಬಿತ್ತೆ?"

"ಕನಸೇನೂ ಬೀಳಲಿಲ್ಲ. ಅವಳ ಕೈಯಲ್ಲಿದ್ದ ಟ್ರಾನ್ಸಿಸ್ಟರ್ ಅವಳ ಸುಳ್ಳನ್ನು ಬಯಲುಮಾಡಿತು. ಏಕೆಂದರೆ ಟ್ರಾನ್ಸಿಸ್ಟರನಲ್ಲಿಯ ಸೆಲ್ ಹಾಳಾಗಿ ಒಂದು ವಾರವಾಯ್ತು. ಹೊಸ ಸೆಲ್ ಹಾಕಿಲ್ಲ. ಅಂದಮೇಲೆ ಅದ್ಹೇಗೆ ಸಂಗೀತ ಹಾಡುತ್ತೆ ಹೇಳು."

ಸುಷಮಾ ಹೇಮಂತರ ಕುಶಾಗ್ರಮತಿಗೆ ಮೆಚ್ಚಿ ಆಗಲಿ, ಎನ್ನುತ್ತ ತಲೆ ದೂಗಿದಳು.

"ನಾನು ಆಸ್ಪತ್ರೆಗೆ ಹೋಗಿ ಶೇಖರನನ್ನು ಕಂಡು ಬರುತ್ತೇನೆ."

"ಏನೂ ಉಪಯೋಗವಿಲ್ಲ. ಡಾಕ್ಟರರ ಸಲಹೆ ಮೇರೆಗೆ ಆತ ವಿಶ್ರಾಂತಿ ಮೇಲಿದ್ದಾನೆ."

"ಹಾಗಾದರೆ ನನಗೀಗ ಯಾವ ಕೆಲಸವೂ ಇಲ್ಲವೇ?"

"ಏಕಿಲ್ಲ? ಅತೀ ಮಹತ್ವದ ಅಷ್ಟೇ ಜರೂರಿಯಾದ ಕೆಲಸವಿದೆಯಲ್ಲ?"

"ಯಾವುದದು?"

ಸಂಸಾರದಲ್ಲಿದ್ದ ಎಲ್ಲ ಪ್ರೀತಿ ತನ್ನ ಎರಡು ಕಣ್ಣಲ್ಲೇ ಸಮಾವೇಶ ಮಾಡಿ ಕೊಂಡಂತೆ ಸುಷಮಾ ಅವನ ಮೇಲೆ ಪ್ರೀತಿ ಮಳೆ ಕರೆಯುತ್ತ ಹೇಮಂತನ ಹರವಾದ ಎದೆಯ ಮೇಲೆ ಮುಖವಿರಿಸಿ ಹೇಳಿದಳು.

"ನನ್ನನ್ನು ಪ್ರೀತಿಸುವದು."

ಒಂದೇ ಒಂದು ಬಾರಿ ಹೇಮಂತನ ಕಣ್ಣೆದುರು ಮಧು ಸುಳಿದು ಹೋದಳು. ತಾನವಳ ಜೊತೆ ಬೆರೆತು ಸುಷಮಾಳಿಗೆ ಮಾಡಿದ ವಂಚನೆ ನೆನಪಾಗಿ ಅದನ್ನು ಸುಧಾರಿಸುವ ಮಾರ್ಗ ಒಂದೇ. ಸುಷಮಾಳ ಕೂದಲು ಕೊಂಕದಂತೆ ನೋಡಿಕೊಳ್ಳುವದು, ಅವಳ ಪ್ರೀತಿಯಲ್ಲಿ ಒಂದು ಗುಂಜಿ ಸಹ ಕಡಿಮೆಯಾಗ ದಂತೆ ಎಚ್ಚರಿಕೆ ವಹಿಸುವದು, ಇಂದಾದ ತಪ್ಪು ಮುಂದೆಂದೂ ನಡೆಯದಂತೆ ಪ್ರತಿಜ್ಞೆ ಮಾಡುವದು ಎಂದು ನಿರ್ಧರಿಸಿದ ಆತ ಸುಷಮಾಳನ್ನು ಮಲ್ಲಿಗೆ ರಾಶಿ ತಬ್ಬುವಂತೆ ತಬ್ಬಿ ಅವಳ ತುಟಿಗಳ ಮೇಲೆ ತನ್ನ ತುಟಿ ಇರಿಸಿದ.

ಪ್ರೇಮ-ಪ್ರೀತಿಯ ಅನುಭೂತಿಯಲ್ಲಿ ಮಿಂದು ಶುಚಿಭೂತಳಾದ ಸುಷಮಾಳ ಕೋಮಲ ಶರೀರದಿಂದ ಹೊರಟ ಸುಗಂಧ ಆಘ್ರಾಣಿಸಿದ ಹೇಮಂತ ಧನ್ಯತೆ ಅನುಭವಿಸಿದ.

ಅಶೋಕ ಬಂದಾಗ ರಾತ್ರಿ ಹನ್ನೊಂದು ಸಮೀಪಿಸಿತ್ತು. ಆತ ಹೊರಗ ಡೆಯೇ ಊಟ ಮುಗಿಸಿ ಬಂದಿದ್ದನೆಂದು ಕಾಣುತ್ತದೆ. ನೇರವಾಗಿ ತನ್ನ ರೂಮಿಗೆ ಹೋದಾಗ ಆದೇ ತಾನೇ ಸುಷಮಾಳಿಂದ ಬೇರ್ಪಟ್ಟ ಹೇಮಂತ ಬಟ್ಟೆ ಸರಿ ಮಾಡಿಕೊಂಡು ಅವನ ಬಳಿ ಸಾಗಿದ.

"ಹಲೋ ಅಶೋಕ"

ಲುಂಗಿ ಉಡುತ್ತಿದ್ದ ಅಶೋಕ ಸರಕ್‌ನೆ ಮೇಜರನತ್ತ ಹೊರಳಿದ.

"ನೀವು ಯಾವಾಗ ಬಂದಿರಿ? ನಾನು ತುಂಬಾ ದಾರಿಕಾಯ್ದೆ."

"ನೀನು ಹೋದ ಹತ್ತೇ ನಿಮಿಷಕ್ಕೆ ಬಂದೆ, ಹೋಗಲಿ ಬಿಡು, ಪಿಕ್ಚರ್

ಹೇಗಿತ್ತು?"

"ಟಿಕೆಟ್ ಜೊತೆಗೆ ಎರಡೆರಡು ತಲೆನೋವಿನ ಮಾತ್ರೆ ಕೊಟ್ಟಿದ್ದರೆ ಸರಿ ಹೋಗುತ್ತಿತ್ತು."

"ಪರವಾಗಿಲ್ಲ ನಿನ್ನ ಸಿಲೆಕ್ಷನ್ ಚೆನ್ನಾಗಿದೆ. ಹಾಂ. ಒಂದು ಮಾತು ನಮ್ಮ ಅತಿಥಿ ಗೃಹದಲ್ಲಿರುವ ರೋಜಿ ಬಗ್ಗೆ ಗಮನವಿರಲಿ. ಆಕೆ ಬಗ್ಗೆ ನನಗೇನೋ ಸಂಶಯವಿದೆ. ಆಕೆ ನಮ್ಮಿಂದ ಏನೋ ಬಚ್ಚಿಡುತ್ತಿದ್ದಾಳೆ".

"ಹಾಂ, ಸರಿ...."

ಬಾಗಿಲತ್ತ ಹೊರಳಿದ ಹೇಮಂತ ವಿಶ್‌ಮಾಡಿದ. "ಗುಡ್‌ನೈಟ"

ಹೇಮಂತ ಹೋದಮೇಲೆ ಅರ್ಧ ಗಂಟೆ ಬಿಟ್ಟು ಅಶೋಕ ರೋಜಿ ರೂಮಿನತ್ತ ನಡೆದ.

ಆತ ಮೇಜರನ ರೂಮಿನ ಮುಂದೆ ಹಾಯ್ದು ಹೋಗುತ್ತಿದ್ದಂತೆ ಅವರ ರೂಮಿನ ಬಾಗಿಲು ಮೆಲ್ಲನೆ ತೆರೆಯಿತು. ಸುಷಮಾಳ ಕೈಹಿಡಿದು ಹೊರಗೆ ಕರೆ ತಂದ ಹೇಮಂತ ಪಿಸುಗುಟ್ಟಿದ.

"ಬಾ ನಿನಗೊಂದು ತಮಾಷೆ ತೋರಿಸುತ್ತೇನೆ."

ಮುಂದೆ ಹೋದ ಅಶೋಕ ನಾಲ್ಕಾರು ನಿಮಿಷಗಳ ಕಾಲ ಅತಿಥಿಗೃಹದ ಮುಂದೆ ಅಡ್ಡಾಡಿದ. ದೂರ ಅವಿತುಕೊಂಡಿದ್ದ ಹೇಮಂತ ಮತ್ತು ಸುಷಮಾ ಅವನನ್ನೇ ದಿಟ್ಟಿಸುತ್ತಿದ್ದರು. ಕಿಟಕಿಗಳಿಗೆ ಕಿವಿ ಆನಿಸಿ ಒಳಗಡೆಯಿಂದ ಬರುವ ಸದ್ದು ಕೇಳುವ ಪ್ರಯತ್ನ ಮಾಡಿ ನಂತರ ನಾಲ್ಕನೆ ಬಾರಿ ಮೆಲ್ಲನೆ ಹೆಜ್ಜೆ ಇಡುತ್ತ ಬಾಗಿಲಿಗೆ ಬರುತ್ತಲೂ ಪಟಕ್ ಎಂದು ಬಾಗಿಲು ತೆರೆಯಿತು. ಆತ ಸುಧಾರಿಸಿ ಕೊಳ್ಳುವ ಮುನ್ನವೇ ರೋಜಿ ಅವನನ್ನು ರೂಮಿನೊಳಗೆ ಎಳೆದುಕೊಂಡು ನಂತರ ಪಟಕ್‌ನೆ ಬಾಗಿಲು ಮುಚ್ಚಿಕೊಂಡಳು. ಮೇಜರ ಸುಷಮಾಳೊಂದಿಗೆ ಸರಸರನೆ ಮುಚ್ಚಿದ ಬಾಗಿಲತ್ತ ನಡೆದ....

ರೋಜಿಯ ಬಗ್ಗೆ ಜಾಸೂಸಿ ಮಾಡಲು ಬಂದ ಅಶೋಕ ಈಗವಳ ಕೈಗೆ ಸಿಕ್ಕಿ ಹಾಕಿಕೊಂಡಿದ್ದ. ಜಿಗಳಿಯಂತೆ ಅವನಿಗಂಟಿಕೊಂಡಿದ್ದಳು ರೋಜಿ.

"ಏಯ್ ಹ್ಯಾಂಡಸಮ್ ಹಿರೋ... ನನ್ನನ್ನು ಸಾವಿನಿಂದ ಪಾರುಮಾಡಿ ಇಲ್ಲಿಗೆ ತಂದು ಸೇರಿಸಿದರೆ ಮುಗಿದುಹೋಯ್ತು?"

"ಮತ್ತಿನ್ನೇನು ಮಾಡಬೇಕಿತ್ತು?"

"ನನ್ನ ಬಾಡಿಗಾರ್ಡ್ ಆಗುವದು ಬೇಡವೆ?"

"ಬಾಡಿಗಾರ್ಡ್...?"

"ಹೌದು. ನಿನ್ನೆ ನನ್ನ ಹಿಂದೆ ನನ್ನ ಗಾರ್ಡ್ ಮಾಡಲು ಬಂದು ಉಳಿಸಿ

ದಿರಿ. ನಂತರ ಇಲ್ಲೇ ಅತೀ ಸುರಕ್ಷಿತವಾದ ಸ್ಥಾನಕ್ಕೆನೋ ಸೇರಿಸಿದಿರಿ. ಆದರೆ ನನ್ನ ಬಾಡಿ ಗತಿ? ಜೀವ ಉಳಿಸಿದ ಮಾತ್ರಕ್ಕೆ ಬಾಡಿ ಬಗ್ಗೆ ಕಾಳಜಿ ಬೇಡವೆ? ನನಗೂ ಬೇಜಾರಾಗಿ ಹೋಗಿದೆ. ನೀನು ನನ್ನ ರೂಮಿನ ಬಳಿ ಬರುವದನ್ನು ನಾನು ಮೊದಲೇ ನೋಡಿದ್ದೆ. ಅವಸರಕ್ಕಾಗಿ ಕಾಯುತ್ತಿದ್ದೆ ಸಿಕ್ಕಿತು. ಇನ್ನು ಈ ನನ್ನ ಸುಂದರ ಬಾಡಿ ನಿಮಗೆ ಸೇರಿದ್ದು. ಸುರಕ್ಷಿತವಾಗಿ ನೋಡಿಕೊಳ್ಳುವ ಹೊಣೆ ನಿಮ್ಮದು."

ಅವನನ್ನು ತಬ್ಬಿಕೊಂಡೆ ರೋಜಿ ಮಂಚದ ಮೇಲೆ ಉರುಳಿದಾಗ ಅಶೋಕನ ಕೂಗಾಟದೊಂದಿಗೆ ಮಂಚವೂ ಕಿರುಗುಟ್ಟಿತು. ಅಶೋಕ ಅವಳಿಂದ ಬಿಡಿಸಿಕೊಳ್ಳಲು ಎಷ್ಟು ಪ್ರಯತ್ನಿಸುತ್ತಿದ್ದನೋ ಅಷ್ಟೇ ರೋಜಿಯ ಹಿಡಿತ ಬಲವಾಗುತ್ತಿತ್ತು. ಅವನನ್ನಪ್ಪಿಕೊಂಡು ಅವನ ಮುಖ, ಕಪೋಲ, ತುಟಿ, ಕುತ್ತಿಗೆ, ಎದೆ, ಎಲ್ಲಿ ಸಿಗುತ್ತೋ ಅಲ್ಲೆಲ್ಲ ಚುಂಬನದ ಮಳೆಗರೆದಳಾಕೆ. ಹಿಡಿಂಬೆ ಕೈಯಲ್ಲಿ ಸಿಕ್ಕಹಾಗಿತ್ತು ಅಶೋಕನ ಸ್ಥಿತಿ.

ಬೆಕ್ಕಿಗೆ ಚಿನ್ನಾಟವಾದರೆ ಇಲಿಗೆ ಪ್ರಾಣಸಂಕಟವಂತೆ.

ಒಳಗಡೆ ಅಶೋಕ ರೋಜಿ ಕೈಯಲ್ಲಿ ಸಿಕ್ಕು ಒದ್ದಾಡುತ್ತಿರುವಾಗ ಹೊರಗಡೆ ಇದ್ದ ಮೇಜರ್ ತಮಾಷೆಯ ಮಾತು ಕೇಳುತ್ತ ಖುಶಿಪಡುತ್ತಿದ್ದ.

"ಏನಿದು ನಿಮ್ಮ ಹುಡುಗಾಟ?.... ಆಕೆ ಮೊದಲೇ ಕಾಲಗರ್ಲ್. ಅವಳ ಕೈಯಲ್ಲಿ ಪಾಪ ಅಶೋಕ ಸಿಲುಕಿಕೊಂಡಾಗ ಬಿಡಿಸುವದನ್ನು ಬಿಟ್ಟು ತಮಾಷೆ ನೋಡುತ್ತಿದ್ದೀರಲ್ಲ.

ಸುಷಮಾ ಆಕ್ಷೇಪಿಸಿದಳು.

"ಏಕೆ?....ಪ್ರೇಮಯುದ್ಧದಲ್ಲಿ ಪಾಲ್ಗೊಂಡು ಸುಖ ಸವಿಯಲಾರನೇ ಅವನು?"

"ಇದೆಂಥ ಪ್ರೇಮಯುದ್ಧವಾದೀತು? ಬಲಿಪಶುವಿನಂತೆ ಆತ ಅವಳ ಕೈಲಿ ಸಿಕ್ಕಿಹಾಕಿಕೊಂಡಿದ್ದಾನೆ. ಅವಳಿಗೆ ಇದು ಪ್ರೇಮಯುದ್ಧವಲ್ಲ; ಕಾಮ ಯುದ್ಧ. ಹೋಗಿ... ಅವನನ್ನು ಬಿಡಿಸಿ."

"ಸ್ವಲ್ಪ ತಡೆ ಇನ್ನೊಂದಿಷ್ಟು ತಮಾಶ ನೋಡೋಣವಂತೆ"

"ಉಯೀ...., ಏಯ್ ರೋಜಿ ಇದೇನು ಹುಡುಗಾಟ?" ಒಳಗಡೆಯಿಂದ ಅಶೋಕ ಮೇಲಿಂದ ಮೇಲೆ ಚೀರಿಕೊಂಡ. ರೋಜಿ ಅವನ ಮೇಲೆ ದಾಳಿ ಮಾಡಿದ್ದಳು. ಅವಳ ಗುರಿ ಅವನನ್ನು ನಿರ್ವಸ್ತ್ರನನ್ನಾಗಿಸುವದು. ಅಶೋಕ ಕೂಗಿಕೊಳ್ಳುತ್ತ ಪಾರಾಗಲು ಯೋಚಿಸುತ್ತಿದ್ದ. ಆದರೆ ರೋಜಿ ಕೇವಲ ಹೆಣ್ಣಾಗಿರದೇ ಕಾಮ ಪಿಶಾಚಿಯಾಗಿದ್ದರಿಂದಾಗಿ ಸಾಧ್ಯವಾಗುತ್ತಿರಲಿಲ್ಲ.

ಇನ್ನು ಕಾಯುವದು ಬೇಡವೆಂದು ನಿರ್ಧರಿಸಿದ ಹೇಮಂತ ಮುಂದಾಗಿ ರೂಮಿನ ಬಾಗಿಲು ಬಾರಿಸಿದ. ಒಂದು ಕ್ಷಣ ಒಳಗಡೆ ಮೌನ ಆವರಿಸಿತು. ಒಂದೆಯೇ ಕೇಳಿಬಂದಿತು ರೋಜೀ ಕಂಠ.

"ಯಾರದು? ಯಾರದು ಹೊರಗೆ?

"ನಾನು ಮೇಜರ್. ಬಾಗಿಲು ತೆರೆ, ನನಗೆ ಅಶೋಕನಿಂದ ಅರ್ಜಂಟ್ ಕೆಲಸವಿದೆ."

ಕೋಪದಿಂದ ಹುಚ್ಚಿಯಾದ ರೋಜೀ ಮೈ ಎಲ್ಲಾ ಪರಪರ ಪರಚಿ ಕೊಂಡಳು.

"ಮೇಜರ್ ಇಲ್ಲಿ ನಾನೊಬ್ಬಳೇ ಇದ್ದೇನೆ. ಅಶೋಕ ಇಲ್ಲವಲ್ಲ."

ಸುಷಮಾ ಮತ್ತು ಮೇಜರ ಒಬ್ಬರ ಮುಖ ಒಬ್ಬರು ನೋಡಿಕೊಂಡರು.

"ರೋಜಿ, ಅಶೋಕ ಇಲ್ಲದಿದ್ದರೆ ನಿನಗೆ ನಾ ವ್ಯರ್ಥ ತೊಂದರೆ ಕೊಟ್ಟಂತಾಯ್ತು ಸಾರಿ."

"ಮೇಜರ್ ನಾನಿಲ್ಲೇ ಇದ್ದೇನೆ. ಪ್ಲೀಜ್ ಅಲ್ಲೇ ಇರಿ ಬಂದೆ."

ಸಾಯುವವರಂತೆ ಅರಚಿಕೊಂಡ ಅಶೋಕ. ಈ ಸುಸಂಧಿ ಕೈ ತಪ್ಪಿದರೆ ಖಂಡಿತವಾಗಿ ಈ ಹಿಡಂಬಿ ಕೈಯಲ್ಲಿ ತನ್ನ ವಸ್ತ್ರಾಪಹರಣದೊಂದಿಗೆ ಮಾನ ಹರಣವೂ ಆಗುವದು ಶತಸಿದ್ಧ ಎಂದು ಮನಗಂಡ ಅಶೋಕ ತನ್ನ ಕೊನೆಯ ದಾಳ ಉರುಳಿಸಿದ್ದ. ಅಶೋಕನನ್ನು ಸುಟ್ಟುಬಿಡುವಂತೆ ನೋಡಿದಳು ರೋಜಿ. ಎಂಥ ಮುಠ್ಠಾಳ ಎಂಬ ತಾತ್ಸಾರದೊಂದಿಗೆ ತನಗಾಗಿ ತನ್ನ ಈ ಶರೀರಕ್ಕಾಗಿ ಕೆಲವೊಂದು ಗಂಟೆಗೆಂದು ಹತ್ತಾರುಸಾವಿರ ರೂಪಾಯಿ ತೂರುವವರು ಬೇಕಾ ದಷ್ಟಿರುವಾಗ ಈ ಮುಠ್ಠಾಳ ಪುಕ್ಕಟೆ ಹೊಟ್ಟೆತುಂಬ ಮೃಷ್ಟಾನ್ನ ಊಟ ಮಾಡು ಎಂದರೆ ಬೆನ್ನು ತಿರುಗಿಸುತ್ತಿದ್ದಾನಲ್ಲ, ಎಂಥ ಮೂರ್ಖ ಎಂದು ಮನ ದಲ್ಲೇ ನಕ್ಕಳು.

ಅವಸರದಲ್ಲೇ ಬಿಟ್ಟುಹೋದ ಬಟ್ಟೆಗಳನ್ನು ಸರಿಪಡಿಸಿಕೊಂಡು ಬಾಗಿಲು ತೆರೆದು ಹೊರಗೆ ಬಂದ ಅಶೋಕ ನಿರಾಳವಾಗಿ ಉಸಿರುಬಿಟ್ಟ. ಏಕೆ ಏನಾಯ್ತು? ಯುದ್ಧದಲ್ಲಿ ಸೋತು ಸಾವಿನ ಭೀತಿಯಿಂದ ಓಡಿ ಬರುವ ಸೈನಿಕನ ಹಾಗೆ ಏದುಸಿರು ಬಿಡುತ್ತಿರುವೆಯಲ್ಲ. ಯುದ್ಧ ಪ್ರಾರಂಭವಾಗುವ ಮುನ್ನವೇ ಈ ಗತಿ ಆದರೆ ಯುದ್ಧ ಪ್ರಾರಂಭವಾಗಿ ಘನಘೋರ ರೂಪಧಾರಣ ಮಾಡಿದರೆ ಮುಂದೆ ನಿನ್ನ ಗತಿ ಏನು?"

ಮೇಜರನ ಮಾತಿಗೆ ಸುಷಮಾ ಲಜ್ಜೆಯಿಂದ ಮುಖ ಕೆಂಪಗೆ ಮಾಡಿ ಗದರಿದಳು.

"ಸಾಕು ಸುಮ್ಮನಿರಿ, ನೀವೊಬ್ಬರು ಹಾಗಿದ್ದೀರಿ ಅಂತ ಎಲ್ಲರೂ ಹಾಗೇ ಅಂತ ತಿಳಿಯಬೇಡಿ."

"ಅಂದರೆ ನೀನು ನನಗೆ ಸೌಮ್ಯವಾಗಿ ಲಜ್ಜೆಗೇಡಿ ಎಂದು ಕರೆಯುತ್ತೀಯಾ?"

"ಇಲ್ಲ ಮೇಜರ್ ಸುಷಮಾ ಕರೆಯುವದು ಆ ರೀತಿ ಅಲ್ಲ."

"ಮತ್ತಾವ ರೀತಿ ಕರೆಯುತ್ತಾಳೆ."

"ಲಜ್ಜೆ ಇದ್ದವರಿಗಷ್ಟೇ ಲಜ್ಜೆಗೇಡಿಗಳೆಂದು ಕರೆಯುವದು. ಉದಾಹರಣೆಗೆ ನಾನು."

"ನೀನು ಲಜ್ಜೆ ಇದ್ದವನು ಅದಕ್ಕಾಗಿ ಲಜ್ಜೆಗೇಡಿ. ನಾನು ನಾನು?"

ಮುಂದೆ ಆತ ಪೂರ್ತಿ ಯೋಚಿಸುವ ಮುನ್ನವೇ ಅಶೋಕ ಅಲ್ಲಿಂದ ಜಾರಿಕೊಂಡಿದ್ದ. ಬಾಯಿ ಮೇಲೆ ಕೈ ಇಟ್ಟುಕೊಂಡು ಮುಸಿ ಮುಸಿ ನಗುತ್ತಿದ್ದಳು ಸುಷಮಾ.

"ಪರವಾಗಿಲ್ಲ ಸುಷಮಾ, ಅಶೋಕ ತುಂಬಾ ಸುಧಾರಿಸಿದ್ದಾನೆ. ನಗು ನಗುತ್ತ ಸೂಕ್ಷ್ಮವಾಗಿ ನನಗೆ ಲಜ್ಜೆ ಇಲ್ಲದವನು ಅಂದನಲ್ಲ?"

ಈಬಾರಿ ಜೋರಾಗಿ ನಗುತ್ತ ಸುಷಮಾ ತನ್ನ ರೂಮಿನತ್ತ ಓಡಿದಳು.

ಮೇಜರ್ ಸಹ ಮುಗುಳುನಗೆ ನಗುತ್ತ ಅವಳ ಹಿಂದೆ ನಡೆದ.

ಒಳಗಡೆಯಿಂದ ಎಲ್ಲಾ ಕೇಳಿಕೊಂಡ ರೋಜೀ ಮನದಲ್ಲೇ ಕೊತಕೊತ ಕುದ್ದಳು. ಧೊಪ್ ಎಂದು ಆಕೆ ಹಾಸಿಗೆ ಮೇಲೆ ಉರುಳಿದಾಗ ಮೆತ್ತನೆಯ ಹಾಸಿಗೆ ಸಹ ಅವಳಿಗೆ ಕೆಂಡದ ರಾಶಿಯಾಗಿ ಪರಿಣಮಿಸಿತು. ಅವಳ ಹೃದಯದೊಳಗೆ ಕಾಮಾಗ್ನಿ ಧಗಧಗಿಸುತ್ತಿತ್ತು. ಪ್ರತಿದಿನ ಪುರುಷನೊಡನೆ ಬೆರೆತು ಕಾಮಕೇಳಿ ಆಡುವ ಅವಳಿಗೆ ಎರಡು ದಿನಗಳಿಂದ ಪುರುಷನ ಸ್ಪರ್ಷ ಸಹ ಆಗಿರಲಿಲ್ಲ. ಹತ್ತಿರಬಂದ ಅಶೋಕನನ್ನೇ ತನ್ನ ಹಸಿವೆಗೆ ಆಹಾರ ಮಾಡಿಕೊಳ್ಳಬೇಕೆಂದು ಮಾಡಿದ ಪ್ರಯತ್ನವೆಲ್ಲ ವಿಫಲವಾಯಿತು.

ಒಂದು ಗಂಟೆ ಹಾಸಿಗೆಯ ಮೇಲೆ ಉರುಳಾಡಿದ್ದಷ್ಟೇ ನಿಜವಾಯಿತು. ನಿದ್ದೆ ಮಾತ್ರ ಹತ್ತಿರ ಸುಳಿಯಲಿಲ್ಲ. ದೇಹದಲ್ಲಿ ಹೊತ್ತಿ ಉರಿಯುತ್ತಿದ್ದ ಬೆಂಕಿ ನಂದಿದಾಗಲೇ ಅಲ್ಲವೇ ಶಾಂತಿ ದೊರೆಯುವದು? ಹಾಗೂ ಹೀಗೂ ಒದ್ದಾಡಿ ಕೊನೆಗೊಂದು ನಿರ್ಧಾರಕ್ಕೆ ಬಂದು ಎದ್ದು ನಿಂತಾಗ ರಾತ್ರಿ ಒಂದೂವರೆ ಸಮೀಪಿಸಿತ್ತು.

ಹೊರಗಡೆ ಸಾವು ತನ್ನ ದಾರಿ ಕಾಯುತ್ತಿರಬಹುದು ಎಂಬ ಭಯವಾಗಲಿ, ನಾಲ್ಕಾರು ದಿನಗಳ ಕಾಲ ನೀನಿಲ್ಲಿ ಬಂದಿಯಾಗಿರಬೇಕು ಎಂದ ಸುಷಮಾಳ

ಎಚ್ಚರಿಕೆಯಾಗಲಿ ಅವಳಿಗೆ ನೆನಪಾಗಲಿಲ್ಲ. ಅವಳ ಮನದಲ್ಲಿದ್ದ ವಿಚಾರ ಒಂದೇ. ಹಸಿವು. ದೇಹದ ಹಸಿವು ತೀರಿಸಿಕೊಳ್ಳಬೇಕು. ಒಂದು ದೃಷ್ಟಿಯಿಂದಾಕೆ ಹುಚ್ಚಿಯಂತಾಗಿದ್ದಳು. ಸಪ್ಪಳವಾಗದಂತೆ ಬಾಗಿಲು ತೆರೆದು ಹೊರಬಂದಳು. ಒಂದು ಬಾರಿ ಮೇಜರನ ರೂಮಿನತ್ತ ದೃಷ್ಟಿ ಹರಿಯಿಸಿ ಸರಸರನೆ ಕಂಪೌಂಡ್ ಗೋಡೆ ಕಡೆ ಹೆಜ್ಜೆ ಹಾಕಿದಳು. ಮುಖ್ಯ ದ್ವಾರದ ಮೂಲಕ ಹೋದರೆ ಗೇಟಿಗಿದ್ದ ಗುರ್ಖಾ ತಡೆಯುತ್ತಾನೆ. ತಾನು ಇಷ್ಟು ರಾತ್ರಿ ಸಮಯದಲ್ಲಿ ಹೊರಗೆ ಹೋದ ಸಮಾಚಾರ ಮೇಜರ್‌ನಿಗೆ ಮುಟ್ಟಿಸುತ್ತಾನೆ ಎಂದು ಯೋಚಿಸಿದ ಆಕೆ ಕಳ್ಳಿಯಂತೆ ಕಂಪೌಂಡ್ ಗೋಡೆ ಜಿಗಿದು ಬೀದಿಗೆ ಬಂದಳು. ಆಮೇಲೆ ಬಂಗಲೆಯನ್ನು ಒಂದು ಬಾರಿ ಪೂರ್ಣವಾಗಿ ಸುತ್ತಿ ಮುಖ್ಯ ಬೀದಿಗೆ ಬಂದಳು. ಅಟೋವಾಗಲಿ ಟ್ಯಾಕ್ಸಿಯಾಗಲೀ ಒಂದೂ ಕಣ್ಣಿಗೆ ಬೀಳಲಿಲ್ಲ. ತುಸು ದೂರ ಕಾಲ್ನಡಿಗೆಯಲ್ಲಿ ಕ್ರಮಿಸಿ ಸರ್ಕಲ್‌ಗೆ ಬಂದಳು. ಅಲ್ಲಿಂದ ಟ್ಯಾಕ್ಸಿ ದೊರೆಯುವದು ಅಸಾಧ್ಯವಾಗಿರಲಿಲ್ಲ. ಅತ್ತಿತ್ತ ನೋಡುತ್ತ ತಾನು ಬಂದ ದಾರಿಯತ್ತ ನೋಡಿದಾಗ ಮೈ 'ಜುಂ' ಎಂದಿತು. ತಾನು ಹೊರಳಿ ನೋಡುತ್ತಲೇ ಸರಕ್ಕನೆ ಮರೆಯಾದ ಕಪ್ಪು ಆಕೃತಿ ಅವಳನ್ನು ಭೀತಿಯ ಕಡಲಲ್ಲಿ ಮುಳುಗಿಸಿತು. ಹಾಗಾದರೆ ಯಾರೋ ತನ್ನನ್ನು ಹಿಂಬಾಲಿಸುತ್ತಿದ್ದಾರೆ. ಯಾರಿರಬಹುದು? ಹೇಮಂತನೆ? ಅಶೋಕನೆ? ಅಥವಾ ಸುಷಮಾಳೆ? ಸಾಧ್ಯವಿಲ್ಲ. ಮೂವರು ಒಂದೊಂದು ಬಾರಿ ಬಂದು ವಿಚಾರಿಸಿಕೊಂಡು ಹೋಗಿದ್ದಾರೆ. ತಾನು ಬಂಗಲೆಯಿಂದ ಹೊರಬರುವ ಮುನ್ನ ಅವರೆಲ್ಲ ಗಾಢನಿದ್ದೆಯಲ್ಲಿದ್ದರು. ಮತ್ತೆ ಆ ಕಪ್ಪು ಆಕೃತಿ ಯಾರದು? ತಾನು ನೋಡುತ್ತಲೂ ಕಣ್ಮರೆಯಾಗಲು ಕಾರಣವೇನು?

ಮತ್ತೊಮ್ಮೆ ಆಕೆ ಗಡಗಡ ನಡುಗಿದಳು.

ಆ ವ್ಯಕ್ತಿ ಬಂಗಲೆಯಿಂದಲೇ ತನ್ನನ್ನು ಹಿಂಬಾಲಿಸಿಕೊಂಡು ಬಂದಿರಬಾರದೇಕೆ? ಸಮಯ ಸಿಕ್ಕುತ್ತಲೂ ತನ್ನ ಕೊಲೆ ಮಾಡುವ ಉದ್ದೇಶದಿಂದ ಬಂದಿರಬಹುದೇ?

ಅನೇಕ ವಿಧಧ ಅಶಂಕೆ ಸಂಶಯಗಳ ಮಧ್ಯೆ ಆಕೆ ಕೆಲಕಾಲ ಚಡಪಡಿಸಿದಳು. ತಾನು ಹೇಮಂತನ ಮಾತು ಮೀರಿ ಹೊರಬಂದು ತಪ್ಪು ಮಾಡಿದೆ ಎಂಬ ವಿಚಾರವೂ ಬರದಿರಲಿಲ್ಲ, ಮರಳಿಹೋಗಬೇಕೆಂದರೂ ಭಯ. ಏನೇ ಆಗಲೀ, ಬಂದದ್ದಂತೂ ಆಯಿತು ಸಮೀಪದಲ್ಲೇ ಇರುವ ಮಧ್ಯಾಹ್ನ ಉಪಹಾರ ಯೋಜನೆಯ ಅಧಿಕಾರಿಯಾಗಿರುವ ತಿಮ್ಮಯ್ಯನವರ ಮನೆಸೇರಿ ರಾತ್ರಿ ಹಾಯಾಗಿ ಕಳೆದು ಬೆಳಿಗ್ಗೆ ಹೇಮಂತರ ಮನೆ ಸೇರಿದರಾಯ್ತು ಎಂದು ನಿರ್ಧರಿಸಿ ಧೈರ್ಯ ತಂದುಕೊಂಡಳು. ಅದೇ ವೇಳೆಗೆ ದೂರದಲ್ಲಿ ಜೋಡಿ ದೀಪಗಳು

ಕಾಣಿಸಿದವು. ಅದು ಟ್ಯಾಕ್ಸಿ ಆಗಿರಲಿ ದೇವರೇ ಎಂದು ಬೇಡಿಕೊಂಡಳು. ಆ ಜೋಡಿ ದೀಪಗಳ ಹಿಂದೆ ತುಸು ಅಂತರದಲ್ಲಿ ಮತ್ತೊಂದು ಜೋಡಿ ದೀಪ ಕಂಡಾಗ ಆಕೆ ಎರಡರಲ್ಲಿ ಒಂದು ಟ್ಯಾಕ್ಸಿ ಆಗಿರಲೇಬೇಕು ಎಂಬ ತೀರ್ಮಾನಕ್ಕೆ ಬಂದಳು.

ಅವಳ ಊಹೆ ನಿಜವಾಗಿತ್ತು.

ಮುಂದೆ ಇದ್ದದ್ದೇ ಟ್ಯಾಕ್ಸಿ. ಆಕೆ ಕೈ ಎತ್ತಿ ಸಂಜ್ಞೆ ನೀಡುತ್ತಲೂ ಅವಳ ಪಕ್ಕದಲ್ಲೇ ಬಂದು ನಿಂತಿತು. ಬದುಕಿದೆಯಾ ಬಡಜೀವವೇ ಎಂದು ಸಮಾಧಾನ ಮಾಡಿಕೊಂಡು ತಿಮ್ಮಯ್ಯನವರ ಮನೆ ವಿಳಾಸ ಹೇಳಿ ಟ್ಯಾಕ್ಸಿಯಲ್ಲಿ ಕುಳಿತು ಕೊಂಡಳು. ಟ್ಯಾಕ್ಸಿ ಓಡತೊಡಗಿತು. ಟ್ಯಾಕ್ಸಿ ಅರ್ಧ ಫರ್ಲಾಂಗ್ ದೂರವಿನ್ನೂ ಬಂದಿದ್ದಿಲ್ಲ. ಸೈಡ್ ಮಿರರ್ ಮೇಲೆ ದೃಷ್ಟಿ ನೆಟ್ಟಿದ್ದ ಡ್ರೈವರನ ಮುಖ ವಿವರ್ಣ ವಾಯಿತು. ಆತ ಕಿಟಕಿಯಿಂದ ಎರಡು ಬಾರಿ ಹಿಂದಕ್ಕೆ ಹೊರಳಿ ನೋಡಿದ.

"ಏಕೆ ಏನಾಯ್ತು?" ರೋಜಿ ಪ್ರಶ್ನಿಸಿದಳು.

"ಮೇಡಂ ಐದು ನಿಮಿಷಗಳಿಂದ ಒಬ್ಬ ಪುರುಷ ನಮ್ಮ ಟ್ಯಾಕ್ಸಿ ಹಿಂದೇ ಓಡಿ ಬರುತ್ತಿದ್ದಾನೆ. ನಲವತ್ತು ಕಿಲೋಮೀಟರ್ ವೇಗದಲ್ಲಿ..."

"ಏನೆಂದೆ? ಮಾನವ ಗಂಟೆಗೆ ನಲವತ್ತು ಕಿಲೋಮೀಟರ ವೇಗದಲ್ಲಿ ಓಡಬಲ್ಲನೆ?"

"ಅಚ್ಚರಿಪಡಬೇಡಿ. ನಾನವನನ್ನು ಚೆನ್ನಾಗಿ ಪರೀಕ್ಷಿಸಿ ತೀರ್ಮಾನಕ್ಕೆ ಬಂದಿದ್ದೇನೆ. ಆರೆ ಆರೆ ಇದೇನು?"

ಆತ ಅರಚಿಕೊಂಡ ಭಯದಿಂದ. ರೋಜಿಗೂ ಭಯವಾಗದಿರಲಿಲ್ಲ. ''ಏಕೆ? ಏಕೆ? ಡ್ರೈವರ್ ಏನಾಯ್ತು?"

ಆತ ಇನ್ನೂ ವೇಗವಾಗಿ ಓಡಿಬರುತ್ತಿದ್ದಾನೆ. ಅವನ ವೇಗ ಕನಿಷ್ಟ ಅರವತ್ತು ಕಿಲೋಮೀಟರ್ ವೇಗ ಇದೆ ಪ್ರತಿ ಗಂಟೆಗೆ. ನೀವೇ ನೋಡಿ.

ಹಿಂದೆ ಕುಳಿತಿದ್ದ ರೋಜಿ ಹೊರಳಿ ನೋಡಿದಳು.

ನಲವತ್ತು ನಲವತ್ತೈದು ವರ್ಷಗಳ ಬಲಿಷ್ಠ ಆರೋಗ್ಯಶಾಲಿ ವ್ಯಕ್ತಿಯೊಂದು ಯಾವ ಆಯಾಸವೂ ಇಲ್ಲದೇ ಟ್ಯಾಕ್ಸಿ ಹಿಂದೆ ಓಡಿಬರುತ್ತಿತ್ತು. ಮುಂದೆ ಟ್ಯಾಕ್ಸಿ ಎರಡು ನಿಮಿಷ ಓಡಿರಲಿಲ್ಲ ಟ್ಯಾಕ್ಸಿ ಸಮೀಪಿಸಿದ ಆ ವ್ಯಕ್ತಿ ಓಡುತ್ತ ಓಡುತ್ತ ಟ್ಯಾಕ್ಸಿ ಹಿಂದೆ ಹಾಕಿ ಮುಂದೆ ಕಣ್ಣಿನಿಂದ ಮರೆಯಾಯಿತು.

ಅಚ್ಚರಿತುಂಬಿದ ಕಣ್ಣುಗಳಿಂದ ರೋಜಿ ಅವನನ್ನೇ ದಿಟ್ಟಿಸಿದಳು.

ಅದೊಂದು ನಂಬಲಾಗದ ಸತ್ಯಘಟನೆ. ಆ ವ್ಯಕ್ತಿಯೊಂದಿಗೆ ಮೆಲುವಾಗಿ ಕೇಳಿಬರುತ್ತಿತ್ತು ಝುನ್ ಝುನ್ ಝುನ್ ಝುನಕ್ ಎಂಬ ಸಂಗೀತದ ಸಪ್ಪಳ ಸಹ

ಕಿವಿಗೆ ಕೇಳಿದಂತಾಯಿತು. ಆ ವ್ಯಕ್ತಿಯೊಂದಿಗೆ ಅದೂ ಸಹ ಮಾಯವಾಗಿತ್ತು. ಇದೆಂತಹ ಘಟನೆ. ರಾತ್ರಿ ನೀರವತೆಯಲ್ಲಿ ಮಧ್ಯರಾತ್ರಿಯ ಸುಮಾರಿಗೆ ಈ ರೀತಿ ವ್ಯಕ್ತಿಯೊಂದು ಅರವತ್ತು ಕಿಲೋಮೀಟರ್ ವೇಗದಲ್ಲಿ ಓಡುತ್ತ ಬಂದು ಐವತ್ತು ಕಿಲೋಮೀಟರ್ ವೇಗದಿಂದ ಓಡುತ್ತಿದ್ದ ಟ್ಯಾಕ್ಸಿಯನ್ನು ಹಿಂದೆ ಹಾಕಿ ಝುನ್ ಝುನ್ ಝುನಕ್ ಸಂಗೀತ ಸಪ್ಪಳ ಮಾಡುತ್ತ ಮಾಯವಾಯಿತು ಎಂದು ಯಾರ ಮುಂದಾದರೂ ಹೇಳಿದರೆ ಅವರು ನನ್ನನ್ನು ಹುಚ್ಚರಾಸ್ಪತ್ರೆಗೆ ಸೇರಿಸದೇ ಇರಲಾರರು. ಇದಕ್ಕೆ ಸಾಕ್ಷಿಯಾದರೂ ಯಾರಿದ್ದಾರೆ. ಓರ್ವ ಟ್ಯಾಕ್ಸಿ ಡ್ರೈವರ್. ಅವನೂ ಸಹ ಹಿಂದೆಗೆದರೆ?

ಭಯದಿಂದ ನಡುಗಿದ ರೋಜಿ ತಾನೇನಾದರೂ ಕನಸು ಕಂಡೆನೆ? ಎಂದು ಚಿವುಟಿಕೊಂಡು ನೋಡಿದಳು ತನಗೆ ತಾನೇ. ಅದು ಕನಸಾಗಿರಲಿಲ್ಲ.

"ಮೇಮ್‌ಸಾಬ್ ತಾವು ಎಲ್ಲಿ ಇಳಿಯುವಿರಿ?" ಡ್ರೈವರ್ ಕೇಳಿದ.

"ಮೂರನೇ ಮೇನ್ ಎಂಟನೇ ಕ್ರಾಸ್"

ಎರಡೇ ನಿಮಿಷಕ್ಕೆ ನಿಶ್ಚಿತಸ್ಥಾನ ತಲುಪಿದ ಟ್ಯಾಕ್ಸಿ ಅವಳನ್ನು ಇಳಿಸಿ ಹೊರಟುಹೋಯಿತು. ಬಾಗಿಲಿಗಿದ್ದ ಕರೆಗಂಟೆ ಗುಂಡಿ ಅದುಮಿದಳು ರೋಜಿ. ಎಷ್ಟೋ ಹೊತ್ತಿನ ನಂತರ ಒಳಗಡೆಯಿಂದ ಗಡಸು ಕಂಠ ಕೇಳಿಸಿತು. 'ಯಾರು?' ಉತ್ತರ ಕೊಡುವ ಗೋಜಿಗೆ ಹೋಗದೇ ರೋಜಿ ಮತ್ತೊಂದು ಬಾರಿ ಗುಂಡಿ ಅದುಮಿದಳು. ಕುಪಿತಗೊಂಡ ಮನೆ ಯಜಮಾನ ತಿಮ್ಮಯ್ಯ ಹೊರಬಂದು ದೀಪ ಉರಿಸಿ ಕಿಂಡಿಯಿಂದ ಇಣುಕಿದ. ರೋಜಿಯನ್ನು ಕಾಣುತ್ತಲೂ ಅವನ ಕೋಪ ಝುರ್ರನೆ ಇಳಿದು ಹೋಯಿತು. "ಅರೆ ರೋಜಿ ನೀನು" ಎನ್ನುತ್ತ ಬಾಗಿಲು ತೆರೆದ. ಬಾಗಿಲು ತೆರೆಯುತ್ತಲೂ ಬಿರುಗಾಳಿಯಂತೆ ಒಳ ನುಗ್ಗಿದ ರೋಜೀ ತಾನೇ ಮುಂದಾಗಿ ಬಾಗಿಲು ಮುಚ್ಚಿ ಕೊಂಡಿ ಏರಿಸಿದಳು. ಅವಳನ್ನೇ ನೆಟ್ಟ ನೋಟದಿಂದ ದಿಟ್ಟಿಸಿದ ತಿಮ್ಮಯ್ಯ. ಇದೇ ರೋಜಿಯೊಂದಿಗೆ ಒಂದು ರಾತ್ರಿ ಕಳೆಯಲು ಎಂಟು ದಿನ ಮೊದಲು ಐದುಸಾವಿರ ರೂಪಾಯಿ ಕೊಟ್ಟು ದಿನ ಗೊತ್ತುಪಡಿಸಬೇಕಾಗುತ್ತಿತ್ತು. ಅದೇ ರೋಜಿ ಇಂದು ಕರೆಯದೆ ತಾನಾಗಿ ಮನೆಗೆ ನುಗ್ಗಿದ್ದಳು.

"ಹಾಗೇಕೆ ನೋಡುತ್ತಿದ್ದೀರಿ?"

"ಯಾಕೂ ಇಲ್ಲ. ಯಾವದೇ ರೀತಿಯ ಸೂಚನೆ ಇಲ್ಲದೆ ನುಗ್ಗಿದ ನಿನ್ನ ಬಗ್ಗೆ ಯೋಚಿಸುತ್ತಿದ್ದೇನೆ."

"ಅದೊಂದು ದೊಡ್ಡ ಕಥೆ. ಹೇಳುತ್ತೇನೆ ಒಳಗೆ ನಡೆಯಿರಿ. ನನಗೆ ಸುರಕ್ಷಿತ ಸ್ಥಾನ ಬೇಕಾಗಿದೆ ನಾಲ್ಕಾರು ದಿನಗಳಿಗಾಗಿ.

"ಅರೆ ಬಾಪರೆ, ನಾಲ್ಕಾರು ದಿನಗಳೆಂದರೆ ನಾನು ಸತ್ತೇಹೋಗುತ್ತೇನೆ ನಾಳೆ ಬೆಳಿಗ್ಗೆ ಹತ್ತು ಗಂಟೆಗೆ ನನ್ನ ಹೆಂಡತಿ ಊರಿನಿಂದ ಬರುವವಳಿದ್ದಾಳೆ"

"ಅವಳಿಗೆ ಬರಬೇಡ ಎಂದು ಟೆಲಿಗ್ರಾಂ ಮಾಡಿ"

"ಮಾಡಿದರೂ ಅದು ಅವಳಿಗೆ ತಲುಪಲಾರದು. ಸಮಯವಿಲ್ಲ."

"ಹಾಗಾದರೆ ಫೋನ್ ಮಾಡಿ"

"ಅದೂ ಸಾಧ್ಯವಿಲ್ಲ. ಈಗಾಗಲೇ ಅವಳು ಅರ್ಧ ದಾರಿಯಲ್ಲಿರಬಹುದು."

ಅಲ್ಲೇ ಕಾರ್ಪೆಟ್ ಮೇಲೆ ಕುಸಿದಳು ರೋಜೀ. ಅವಳ ಬಗಲಲ್ಲಿ ಕೈಹಾಕಿ ಮೇಲೆಬ್ಬಿಸಿದ ತಿಮ್ಮಯ್ಯ ಒಳಗೆ ಕರೆದೊಯ್ದ.

"ಸದ್ಯ ನಮ್ಮ ಬಳಿ ಐದಾರು ಗಂಟೆ ಸಮಯವಿದೆ ಚಿಂತಿಸಬೇಡ. ನನ್ನ ಹೆಂಡತಿ ಬರುವದರೊಳಗೆ ನಿನಗೆ ನಾನೊಂದು ವ್ಯವಸ್ಥೆ ಮಾಡುತ್ತೇನೆ ಆಯ್ತಾ?"

ಹೋದ ಜೀವ ಮರಳಿ ಬಂದಂತಾಯ್ತು.

ರೋಜಿ ತಿಮ್ಮಯ್ಯನನ್ನು ಗಟ್ಟಿಯಾಗಿ ತಬ್ಬಿಕೊಂಡು ಮುತ್ತಿನ ಮಳೆ ಕರೆದಳು. ತಿಮ್ಮಯ್ಯ ತಾನಾಗಿ ತನ್ನನ್ನರಸಿ ಬಂದ ಸೌಂದರ್ಯ ರಾಶಿಯನ್ನು ಲೂಟಿ ಮಾಡಲು ವಿಳಂಬ ಮಾಡಲಿಲ್ಲ, ಐದೇ ನಿಮಿಷಗಳಲ್ಲಿ ಇಬ್ಬರೂ ನಗ್ನ ರಾಗಿ ಹಾಸಿಗೆಯ ಮೇಲೆ ಉರುಳಾಡುತ್ತಿದ್ದರು. ಕ್ರಮೇಣ ಅವರಿಬ್ಬರ ದೇಹಕ್ಕೆ ಕಾವು ಏರತೊಡಗಿತ್ತು. ಆಕ್ರಮಣ ಪ್ರತ್ಯಾಕ್ರಮಣಗಳಲ್ಲಿ ತೊಡಗಿದ್ದರು. ತಿಮ್ಮಯ್ಯ ಆತುರ ವ್ಯಕ್ತಪಡಿಸಿದಾಗ ರೋಜಿ ವಿರೋಧಿಸಿದಳು.

"ತಿಮ್ಮಯ್ಯ ಪ್ಲೀಜ್ ಈಗಲೇ ಬೇಡ"

"ರೋಜಿ ಸಮಯವೆಲ್ಲಿದೆ? ಒಂದೆರಡು ಗಂಟೆಯಾದರೂ ನಿದ್ದೆ ಬೇಡವೆ?"

"ನಿದ್ರಿಸಲು ನಾಳೆ ಇದೆಯಲ್ಲ?"

"ನಾಳೆ ಏನಾಗುತ್ತದೆ ಎಂಬುದನ್ನು ಅರಿತವರಾರು?

"ರೋಜೀ ಡಾರ್ಲಿಂಗ್ ತಿಮ್ಮಯ್ಯ ನಿಜ ಹೇಳುತ್ತಿದ್ದಾನೆ ಸಾವಿನ ಮುಂದಾದರೂ ಅದನ್ನು ಒಪ್ಪಿಕೊ"

ಒಮ್ಮಿಂದೊಮ್ಮೆಲೆ ಕೇಳಿಬಂದ ಅಪರಿಚಿತನ ಗಂಭೀರವಾಣಿಗೆ ಇಬ್ಬರೂ ಬೆಚ್ಚಿಬಿದ್ದು ಧ್ವನಿ ಬಂದಕಡೆ ನೋಡಿದರು.

ಝುನ್ ಝುನ್ ಝುನಕ್ ಸಂಗೀತ ಸಪ್ಪಳ.

ತರಗಲೆಯಂತೆ ಕಂಪಿಸಿದಳು ರೋಜಿ ಆ ಸಂಗೀತ ಕೇಳಿ.

"ನೀನು ಇಲ್ಲಿಗೂ ಬಂದೆಯಾ?" ನಡಗುವ ಕಂಠದಲ್ಲಿ ಕೇಳಿದಳು.

"ರೋಜಿ ಯಾರವರು? ಯಾರು ಬಂದವರು?" ತಿಮ್ಮಯ್ಯ ಪ್ರಶ್ನಿಸಿದ.

"ನಾನು ನಿಮ್ಮಿಬ್ಬರ ಮೃತ್ಯು ತಿಮ್ಮಯ್ಯ"

ಗಂಭೀರವಾಣಿ ಈಗ ಗಡಸಾಗಿತ್ತು. ಅದರೊಂದಿಗೆ ಆ ವಾಣಿಯ ಯಜಮಾನ ಸಹ ಕಾಣಿಸಿಕೊಂಡ.

ಅವನೇ ಓಡುತ್ತಿದ್ದ ಟ್ಯಾಕ್ಸಿಯನ್ನು ಹಿಂದಕ್ಕೆ ಹಾಕಿ ಓಡಿ ಬಂದವನು.

ಆರು ಫೂಟಿಗೆ ಸಮವಾದ ಎತ್ತರ. ಒಳ್ಳೆ ಕುಸ್ತಿ ಜಟ್ಟಿಯಂಥ ಮೈಕಟ್ಟು, ತೀಕ್ಷ್ಣವಾದ ನೋಟ, ಮೊಂಡ ಮೂಗು, ಏಟಿಗೆ ಮುದ್ದೆಮುದ್ದೆಯಾದ ಕಿವಿಗಳು. ದಪ್ಪ ಕುತ್ತಿಗೆ.

"ಯಾರು ನೀನು? ಬೀಗ ಹಾಕಿದ್ದರೂ ನೀನು ಒಳಗೆ ಹೇಗೆ ಬಂದೆ?"

"ತಿಮ್ಮಯ್ಯ ಸಾವು ಯಾರಿಗೂ ಹೇಳಿ ಕೇಳಿ ಬರುವದಿಲ್ಲ. ಅದನ್ನು ತಡೆಯುವ ಶಕ್ತಿ ಯಾರಿಗೂ ಇಲ್ಲ."

"ಸಾವು? ಯಾರಿಗೆ ಸಾವು?"

"ನಿನಗೇ ಮತ್ತಾರಿಗೆಂದು ತಿಳಿದಿರುವೆ."

"ನಾನೇನು ಮಾಡಿರುವೆ? ಜೀವಮಾನದಲ್ಲಿ ನಾನು ನಿನ್ನ ನೋಡಿದ್ದೇ ಇದು ಪ್ರಥಮಬಾರಿ"

"ಹೌದು. ಇದೇ ಪ್ರಥಮಬಾರಿ, ಇದೇ ಕೊನೆಯಬಾರಿ ಕೂಡ. ಏಕೆಂದರೆ ಮತ್ತೊಮ್ಮೆ ನನ್ನ ದರ್ಶನ ಮಾಡಲು ನೀನು ಬದುಕಿರುವದಿಲ್ಲ."

"ನನ್ನನ್ನು ನೀನೇಕೆ ಕೊಲ್ಲಬೇಕು. ನಾನು ನಿನಗಾವ ಅನ್ಯಾಯ ಮಾಡಿರುವೆ?"

"ತಿಮ್ಮಯ್ಯ ನೀನು ನನಗೇನೂ ಅನ್ಯಾಯ ಮಾಡಿಲ್ಲ. ಆದರೂ ನಿನ್ನ ಈ ಗೆಳತಿಯ ಸಲುವಾಗಿ ನೀನಿಂದು ಸಾಯಬೇಕಾಗಿದೆ. ನಾನು ನಿನ್ನ ಕೊಲ್ಲಲೆಂದು ಬಂದಿಲ್ಲ. ನಾನು ಕೊಲ್ಲಬಯಸಿದ್ದು ಈ ಹೆಣ್ಣನ್ನು ನೀನವಳ ಜೊತೆ ಇದ್ದೀಯಾ. ಅದಕ್ಕಾಗಿ ನೀನೂ ಸಾಯಬೇಕಾಗಿದೆ ಅಷ್ಟೇ."

"ಹಾಗಾದರೆ ನನಗೆ ಈ ಹೆಣ್ಣಿನ ಸಹವಾಸವೇ ಬೇಡ. ಈಕೆಯನ್ನು ಎಳೆದೊಯ್ಯಿರಿ.... ಅಥವಾ ನಾನೇ ಇಲ್ಲಿಂದ ಓಡಿ ಹೋಗುತ್ತೇನೆ."

"ತಿಮ್ಮಯ್ಯ..." ಜೋರಾಗಿ ಅರಚಿದಳು ರೋಜಿ. ನಾನು ನಿನ್ನ ಜೀವದ ಗೆಳತಿ. ನನಗಾಗಿ ನೀನು ಎಂಟೆಂಟು ದಿವಸ ಕಾಯ್ದು ಕುಳಿತಿರುತ್ತಿದ್ದೆ. ನೀನು ಈ ರೀತಿ ಮಾಡಬೇಡ."

"ಥೂ, ನಿನ್ನಿಂದಾಗಿ ನನಗಿಂದು ಈ ಗತಿ ಬಂದಿತು? ಮನೆಯಲ್ಲಿ ಮುತ್ತಿನಂಥ ಹೆಂಡತಿ ಇದ್ದರೂ ನಿನ್ನ ಕಡೆಗೆ ನಾನು ಕಣ್ಣು ಹಾಕಿದ್ದೇ ತಪ್ಪಾಯಿತು. ಹಣವೂ ಹೋಯಿತು. ಗುಣವೂ ಹೋಯಿತು. ಈಗ ಪ್ರಾಣಕ್ಕೆ ಸಂಚಕಾರ ಬಂದಿತು? ನಿನಗಾಗಿ ನಾನೇಕೆ ಸಾಯಲಿ?"

"ತಿಮ್ಮಯ್ಯ ನಿನಗೆ ನಾನು ಕೈ ಮುಗಿಯುತ್ತೇನೆ. ನನ್ನ ಬಿಟ್ಟು ಹೋಗ ಬೇಡ.

"ನೀನು ಏನು ಹೇಳಿದರೂ ನಾ ಕೇಳಲಾರೆ, ಇದೋ ಹೊರಟೆ."

ಬೆತ್ತಲೆಯಾಗಿಯೇ ಇದ್ದ ತಿಮ್ಮಯ್ಯ ಹಾಸಿಗೆಯಿಂದ ಏಳುವದಕ್ಕೂ ಬೆತ್ತಲೆಯಾಗಿಯೇ ಇದ್ದ ರೋಜಿ ಅವನನ್ನು ತಬ್ಬಿಕೊಂಡು ಪುನಃ ಹಾಸಿಗೆಗೆ ಕೆಡವಿದಳು.

"ಎಂದೆಂದಿಗೂ ಸಾಧ್ಯವಿಲ್ಲ. ಈ ದೇಹದ ಸವಿಯನ್ನುಂಡ ನೀನಿಂದು ಈ ದೇಹದೊಂದಿಗೆ ಮಸಣ ಸೇರಬೇಕು ತಿಳಿಯಿತಾ?"

"ಗುಡ್.... ಗುಡ್.... ಇದಕ್ಕೆನ್ನುತ್ತಾರೆ ಅಮರ ಪ್ರೇಮ. ರೋಜೀ ನೀನು ಸಾಯುವ ಮುನ್ನ ಶಾಂತಿ ಸಮಾಧಾನ ಬಯಸುವದಾದರೆ ಆ ಹಾಡುವ ಹಕ್ಕಿ ಎಲ್ಲಿದೆ ಕೊಟ್ಟುಬಿಡು. ಅಂದರೆ ಶಾಂತಿಯಿಂದ, ಯಾವ ನೋವು ಇಲ್ಲದೆ ಸಾಯುತ್ತಿ"

ರೋಜಿಯ ಮೆದುಳು ಚುರುಕಾಗಿ ಕೆಲಸ ಮಾಡಿತು.

ನನ್ನ ಹಿಂದೆ ಸಾವು ಕೈ ತೊಳೆದುಕೊಂಡು ಬೆನ್ನುಹತ್ತಿದ್ದು ಈ ಹಾಡುವ ಹಕ್ಕಿಗಾಗಿ. ಇದು ನನ್ನ ಬಳಿ ಇರುವವರೆಗೂ ನನಗೆ ಸಾವು ಬರಲಾರದು.

ಆಕೆಯೊಂದು ನಿರ್ಧಾರಕ್ಕೆ ಬಂದಿದ್ದಳು.

"ನನಗೆ ಹಾಡುವ ಹಕ್ಕಿ ಬಗ್ಗೆ ಗೊತ್ತಿಲ್ಲ"

ಅವಳನ್ನು ಸಮೀಪಿಸಿದ ಹಂತಕ ಫಳೀರ್ ಎಂದು ಅವಳ ಎಡಕೆನ್ನೆ ಮೇಲೆ ಬಾರಿಸಿದ. ಕೆನ್ನೆ ಚುರ್ರ್ ಎಂದು ಸುಟ್ಟಂತಾಯಿತು. ಎಂಥ ಭಾರಿ ಪೆಟ್ಟು, ದವಡೆ ಹಲ್ಲುಗಳು ಮುರಿಯದಿದ್ದರೂ ಜಾಗದಲ್ಲೇ ಕದಲಿದವು. ಕಣ್ಣಲ್ಲಿ ದೀಪ ಹಚ್ಚಿದಂತಾಗಿ ಬುಳುಕ್‌ನೆ ನೀರು ಚಿಮ್ಮಿತು.

"ಇನ್ನೊಂದು ಪೆಟ್ಟಿಗೆ ಎಲ್ಲ ಹಲ್ಲೂ ಉದುರುತ್ತವೆ. ತಿಳಿಯಿತಾ?"

"ನಿಜವಾಗಿಯೂ ನನಗೆ ತಿಳಿಯದು."

ರೋಜಿಯ ಕೂದಲುಗಳು ಈಗವನ ಕೈಯಲ್ಲಿ ಸಿಕ್ಕವು. ಆಕೆ ಸಾಯುವಂತೆ ಅರಚಿಕೊಂಡಳು. ಅನಾಮತ್ತಾಗಿ ಕೂದಲು ಹಿಡಿದು ಎತ್ತಿದ ಆತ ಬೀಸಿ ಒಗೆದಿದ್ದ ಗೋಡೆಗೆ. ಧಪ್ ಎಂದು ಗೋಡೆಗೆ ತಾಗಿ ಗಂಟಲು ಹರಿಯುವಂತೆ ಚೀರಿಕೊಂಡು ಕೆಳಗೆ ಬಿದ್ದಳು ರೋಜಿ. ಮೂಗು, ಬಾಯಿಗಳಿಂದ ಬುಳುಬುಳನೆ ರಕ್ತ ಸುರಿಯತೊಡಗಿತು. ಇದನ್ನು ಕಣ್ಣಾರೆ ಕಂಡ ತಿಮ್ಮಯ್ಯ ಇನ್ನೂ ಇಲ್ಲಿದ್ದರೆ ತನಗೆ ಸಾವು ಖಂಡಿತ ಎಂದು ಮನಗಂಡು ಅಲ್ಲಿಂದ ಜನ್ಮಜಾತ ಅವಸ್ಥೆಯಲ್ಲೇ "ಬರ್ತ್‌ಸೂಟ್"ನಲ್ಲೇ ಪಲಾಯನ ಮಾಡಲು ಹಾಸಿಗೆಯಿಂದ ಜಿಗಿದು

ಬಾಗಿಲತ್ತ ನಡೆದ. ಹಿಂದೆ ಧಾವಿಸಿ ಬಂದ ಆ ವ್ಯಕ್ತಿ ತಿಮ್ಮಯ್ಯನನ್ನು ಹಿಡಿದು ಅನಾಮತ್ತಾಗಿ ತಲೆ ಮೇಲೆ ಹೊತ್ತು ನಿಂತ. ಇನ್ನೇನು ಅವನನ್ನು ನೆಲಕ್ಕೆ ಅಪ್ಪಳಿಸಬೇಕೆಂದುಕೊಳ್ಳುತ್ತಿದ್ದಂತೆ ಬಾಗಿಲು ತೆರೆದುಕೊಂಡಿತು. ಕೈಯಲ್ಲಿ ತನ್ನ ಪುಟ್ಟ ರಿವಾಲ್ವರ್ ಹಿಡಿದು ಒಳಗೆ ನುಗ್ಗಿ ತನ್ನೆದುರೇ ನಡೆದ ಮಹಾಯುದ್ಧದ ಸನ್ನಿವೇಶ ಕಂಡು ಅವಾಕ್ಕಾಗಿ ನಿಂತಳು ಸುಷಮಾ. ಕೆಳಗೆ ಬಿದ್ದಲ್ಲಿಂದಲೇ ಪ್ರಯಾಸಪಟ್ಟು ಸುಷಮಾಳತ್ತ ನೋಡಿ ಆರ್ತನಾದ ಮಾಡಿದಳು ರೋಜೀ.

"ಸುಷಮಾ.... ದಯವಿಟ್ಟು ನನ್ನ ಉಳಿಸಿಕೊಳ್ಳಿ ನಾನೀಗಲೇ ಸಾಯಲಾರೆ, ನನಗಿಷ್ಟವಿಲ್ಲ"

"ರೋಜಿ ಸಾವು ನಮ್ಮ ಇಷ್ಟದಂತೆ ಬರುವದಿಲ್ಲ. ನಿನ್ನ ದುರ್ಗತಿಗೆ ನೀನೇ ಹೊಣೆ. ಸಾವು ನಿನ್ನ ಹುಡುಕಿ ಬರಲಿಲ್ಲ. ನೀನೇ ಸಾವನ್ನ ಹುಡುಕಿಕೊಂಡು ಬಂದಿರುವೆ"

"ನನ್ನಿಂದ ತಪ್ಪಾಗಿದೆ ದಯವಿಟ್ಟು ಕ್ಷಮಿಸಿ"

"ಹೂಂ...ಹೂಂ... ಹೇ...."ಎಂದು ಅಬ್ಬರಿಸಿ ತಿಮ್ಮಯ್ಯನನ್ನು ತಲೆ ಮೇಲೆತ್ತಿದ ಆತ.

"ಖಬರದಾರ್... ಅವನನ್ನು ಕೆಳಗಿಳಿಸು. ಒಂದು ವೇಳೆ ನೀನು ನಾ ಹೇಳಿದಂತೆ ಕೇಳದಿದ್ದರೆ ಈ ರಿವಾಲ್ವರನಲ್ಲಿದ್ದ ಎಲ್ಲ ಗುಂಡುಗಳೂ ನಿನ್ನ ದೇಹ ಸೇರುತ್ತವೆ" ಸುಷಮಾ ಎಚ್ಚರಿಸಿದಳು.

ಅವಳೆಡೆ ತಾತ್ಸಾರದ ದೃಷ್ಟಿ ಬೀರಿ ಆ ವ್ಯಕ್ತಿ ತಿಮ್ಮಯ್ಯನನ್ನು ತಲೆ ಮೇಲೆ ಇನ್ನಷ್ಟು ಎತ್ತಿದ. ಸುಷಮಾ ಕುದುರೆ ಎಳೆದಳು. ಸೈಲೆನ್ಸರ ಜೋಡಿಸಿದ ರಿವಾಲ್ವರ್ ಸಪ್ಪಳ ಮಾಡದೆ ಗುಂಡುಗಳನ್ನು ಉಗುಳಿತು. ಪಟ್...ಪಟ್ ಎಂಬ ಸದ್ದು ಮಾತ್ರ. ಎರಡೂ ಗುಂಡುಗಳೂ ಆ ವ್ಯಕ್ತಿಯ ಎರಡೂ ರಟ್ಟೆಗಳಿಗೆ ತಾಗಿದವು.

ಆಶ್ಚರ್ಯದಿಂದ ಒಡೆದು ಹೋಗುವಷ್ಟು ದೊಡ್ಡದಾಗಿ ಸುಷಮಾಳ ಕಣ್ಣುಗಳು ದೊಡ್ಡದಾದವು. ಗುಂಡು ತಾಗಿದ್ದರೂ ಆ ವ್ಯಕ್ತಿಯ ದೇಹದಿಂದ ಒಂದು ಹನಿ ಸಹ ರಕ್ತ ಹೊರಬರಲಿಲ್ಲ. ಪಕಪಕನೆ ನಕ್ಕ ಆತ ಜೋರಾಗಿ ತಿಮ್ಮಯ್ಯನನ್ನು ನೆಲಕ್ಕೆ ಅಪ್ಪಳಿಸಿದ. ತಿಮ್ಮಯ್ಯನ ಆರ್ತನಾದದೊಂದಿಗೆ ಮತ್ತೆ ಒಂದರಮೇಲೆ, ಒಂದರಂತೆ ನಾಲ್ಕುಗುಂಡು ಸಿಡಿದರೂ ಅದರಿಂದೇನೂ ಪರಿಣಾಮವಾಗಲಿಲ್ಲ. ಆತ 'ಆ್ಯ....ಆ್ಯ....ಹೂ' ಎಂದರಚುತ್ತ ಒಂದಡಿ ಮೇಲೆ ಜಿಗಿದು ಮೊಣಕಾಲನ್ನು ಮಡಚಿ ನೆಲಕ್ಕೆ ಬಿದ್ದಿದ್ದ ರೋಜಿ ಹಾಗೂ ತಿಮ್ಮಯ್ಯ

ಇಬ್ಬರ ಎದೆಯ ಮೇಲೆ ಪ್ರಹಾರ ಮಾಡಿದ.

ಜೋರಾಗಿ ಕಿರಿಚಿಕೊಂಡ ಅವರಿಬ್ಬರ ಬಾಯಿಯಿಂದ ಬುಳುಕ್‌ನೆ ರಕ್ತ ನುಗ್ಗಿ ಬಂತು. ಸುಷಮಾ ಎಚ್ಚೆತ್ತಳು. ಈ ಅತಿ ಮಾನವನೊಂದಿಗೆ ಹೋರಾಡಲು ಮತ್ತೊಮ್ಮೆ ಯೋಚಿಸಬೇಕು ಎಂದುಕೊಂಡು ನೇರವಾಗಿ ಟ್ಯೂಬ್ ಲೈಟಿಗೆ ಗುರಿ ಹಿಡಿದು ರಿವಾಲ್ವರ್ ಕುದುರೆ ಅದುಮಿದಳು. ಫಳ್ ಎಂದು ಒಡೆದು ಕತ್ತಲೆಯಲ್ಲಿ ಮುಳುಗಿತು ಕೋಣೆ. ನಿಂತಲ್ಲೇ ಆಕೆ ಸರಿಯುತ್ತ ಬಾಗಿಲಿನಿಂದ ದೂರ ಬಂದಳು. ಕತ್ತಲೆಯಾಗುತ್ತಲೂ ಆತ ಬಾಗಿಲ ಬಳಿ ಬರುತ್ತಾನೆಂದು ಆಕೆ ಊಹಿಸಿದ್ದು ನಿಜವಾಯಿತು. ಸುಷಮಾ ಕೋಣೆಯಲ್ಲಿ ಕತ್ತಲೆಮಾಡಿ ಬಾಗಿಲು ತೆರೆದು ಪಾರಾಗುತ್ತಾರೆಂದು ಯೋಚಿಸಿದ ಆ ಅತಿಮಾನವ ಬಾಗಿಲಿಗೆ ಬಂದಿದ್ದ. ಬಾಗಿಲನ್ನು ತೆರೆದು ಅದಕ್ಕಡ್ಡವಾಗಿ ನಿಂತ ಯಮದೂತನಂತೆ....

ಸುಷಮಾ ನಿಂತಲ್ಲೇ ಎರಡು ಮೂರು ಬಾರಿ ತುದಿಗಾಲ ಮೇಲೆ ಜಂಪ್ ಮಾಡಿ ಕ್ರಿಕೆಟ್ ಚೆಂಡಿನಂತೆ ಅವನತ್ತ ಹಾರಿದಳು. ತನ್ನೆರಡೂ ಪಾದಗಳನ್ನು ಜೋಡಿಸಿ ಅವನೆದೆಗೆ ಅಪ್ಪಳಿಸಿದಾಗ ಅವಳಿಗೆ ತನ್ನ ಕಾಲುಗಳೇ ಮುರಿದವೇನೋ ಎಂಬ ಅನುಭವವಾದರೂ ಒಂದು ಪ್ರಯೋಜನವಂತೂ ಆಗಿತ್ತು. ಆಕಸ್ಮಿಕ ಪ್ರಹಾರದಿಂದಾಗಿ ಆತ ಹಿಂದಕ್ಕೆ ಎಗರಿ ಬಿದ್ದಿದ್ದ. ಇದೇ ಸದವಕಾಶವೆಂದುಕೊಂಡ ಸುಷಮಾ ಗಾಳಿಯಲ್ಲಿ ಮೇಲೆ ಹಾರಿ ಅವನೆದೆಯ ಮೇಲೆ ಮೊಣಕಾಲುಗಳಿಂದ ಗುದ್ದಲು ಮುಂದಾಗುತ್ತಿದ್ದಂತೆ ಅದನ್ನು ಊಹಿಸಿದ ಆತ ಚಟಕ್‌ನೆ ಎದ್ದು ನಿಂತು ಅವಳೆರಡೂ ಕಾಲು ಹಿಡಿದು ಗರಗರನೆ ಸುತ್ತಿ ಬೀಸಿ ಒಗೆದ. ಕತ್ತಲೆಯ ಗರ್ಭದಲ್ಲಿ ಸುಷಮಾ ಯಾವ ದಿಕ್ಕು ದಿಶೆಯಿಲ್ಲದೆ ಹಾರಿದಳು.... ತರಗೆಲೆಯಂತೆ.

## ೧೦

ಹೇಳತೀರದಷ್ಟು ಬಾಯಾರಿಕೆಯಿಂದಾಗಿ ಹೇಮಂತನಿಗೆ ಥಕ್‌ನೆ ಎಚ್ಚರವಾಯಿತು. ಎಂದೂ ಈ ರೀತಿ ಆಗಿರಲಿಲ್ಲ. ಇಂದೇಕೆ ಹೀಗಾಯಿತು? ಮಧು ಮನೆಯಲ್ಲಿ ತಿಂದ ಆಮ್ಲೇಟೇನಾದರೂ ಇದಕ್ಕೆ ಕಾರಣವೇ ಎಂದು ಯೋಚಿಸಿ, ಕೊನೆಗೆ ತನ್ನ ಯೋಚನೆಗಾಗಿ ತಾನೇ ನಕ್ಕು ಮೇಲೆದ್ದ ಹೇಮಂತ

ಮೊದಲು ಬಾತ್‌ರೂಮಿಗೆ ಹೋಗಿ ಬಂದ. ಆಮೇಲೆ ಫ್ರಿಜ್‌ನಿಂದ ತಂಪಾದ ನೀರಿನ ಸೀಸೆ ಹೊರತೆಗೆದು ಅದನ್ನು ಖಾಲಿ ಮಾಡಿ ಮತ್ತೆ ನೀರು ತುಂಬಿ ಫ್ರಿಜ್‌ಗೆ ಸೇರಿಸಿ ತನ್ನ ರೂಮಿಗೆ ಬಂದ. ಏನೋ ಬದಲಾಗಿದೆ, ಏನೋ ಕೊರತೆ ಅನಿಸಿತು.

ಇಷ್ಟೆಲ್ಲ ಆದರೂ ಪಕ್ಕದ ರೂಮಿನಲ್ಲಿದ್ದ ಸುಷಮಾ ಏಕೆ ಏಳಲಿಲ್ಲ ಅಥವಾ ಅವಳು ಮಗ್ಗುಲು ಬದಲಿಸಿದ್ದೇಕೆ ತನಗೆ ಕೇಳಲಿಲ್ಲ? ಇಷ್ಟು ದೀರ್ಘ ನಿದ್ದೆ ಮಾಡುವವಳಲ್ಲ ಅವಳು. ತಾನೆದ್ದು ಅಡಿಗೆ ಮನೆಗೆ ಹೋದರೆ ತನ್ನ ಸ್ಲೀಪರ್ ಸಪ್ಪಳಕ್ಕೇ ಎಚ್ಚತ್ತು ಬೆನ್ನ ಹಿಂದೇ ಬರುವ ಅವಳೇಕೆ ಇನ್ನೂ ಮಲಗಿದ್ದಾಳೆ ಎಂದು ಮುಂತಾಗಿ ಯೋಚಿಸುತ್ತ ಅವಳ ಕೋಣೆಯ ಮುಚ್ಚಿದ ಬಾಗಿಲನ್ನು ಮೆಲ್ಲನೆ ದೂಡಿ ಒಳಬಂದ.

ಒಳಬಂದವ ಹಾಗೇ ಸ್ತಬ್ಧನಾಗಿ ನಿಂತ.

ಹಾಸಿಗೆಯ ಮೇಲೆ ಸುಷಮಾ ಇರಲಿಲ್ಲ. ಅವಳ ನೈಟ್‌ಗೌನ್ ಮುದ್ದೆಯಾಗಿ ಬಿದ್ದದ್ದು ಆಕೆ ಅವಸರದಲ್ಲೆಲ್ಲೋ ಹೊರಗೆ ಹೋಗಿದ್ದಾಳೆಂದು ಹೇಳುತ್ತಿತ್ತು. ಅವಳೆಲ್ಲಿ ಹೋಗಿರಬಹುದು? ಹಾಗೇ ಅಶೋಕನ ರೂಮಿಗೆ ಬಂದ. ಆತ ಸುಖವಾಗಿ ನಿದ್ರಿಸುತ್ತಿರುವದನ್ನು ಕಂಡು ಎಬ್ಬಿಸಲು ಮನಸ್ಸಾಗದೇ ಅತಿಥಿ ಗೃಹದತ್ತ ಹೆಜ್ಜೆ ಹಾಕಿದ. ಸುಷಮಾ ಏನಾದರೂ ರೋಜೀ ಜೊತೆ ಇರಬಹುದೇನೋ ಎಂಬ ಆಶೆಯಿಂದ.

ಅಲ್ಲಿಯೂ ಅವನಿಗೆ ನಿರಾಶೆ ಕಾದಿತ್ತು.

ಬರಿದಾದ ಮಂಚ, ಖಾಲೀ ಕೋಣೆ ಅವನನ್ನು ಸ್ವಾಗತಿಸಿತು.

ಸುಷಮಾಳ ಸುಳಿವು ಅಲ್ಲಿರಲಿಲ್ಲ. ಅಷ್ಟೇ ಅಲ್ಲ ರೋಜಿ ಸಹ ನಾಪತ್ತೆ.

ಒಂದೆರಡು ನಿಮಿಷ ಆತ ಕುರ್ಚಿ ಮೇಲೆ ಕುಳಿತು ಸದ್ಯದ ಪರಿಸ್ಥಿತಿ ಬಗ್ಗೆ ಗಹನವಾಗಿ ಯೋಚಿಸಿದಾಗ ಆತ ಒಂದು ನಿರ್ಣಯಕ್ಕೆ ಬಂದ, ರೋಜಿಯನ್ನು ಹಿಂಬಾಲಿಸಿಕೊಂಡು ಸುಷಮಾ ಹೋಗಿರಬಹುದು ಎಂದು. ಮರಳಿ ತನ್ನ ರೂಮಿಗೆ ಬಂದ. ಮನಸ್ಸಿಗೆ ಸಮಾಧಾನವಾಗಲಿಲ್ಲ. ಸುಷಮಾ ಎಲ್ಲಿ ಹೋಗಿರಬಹುದು? ಅವಳೇಕೆ ತನಗೆ ಇದರ ಬಗ್ಗೆ ತಿಳಿಸಲಿಲ್ಲ. ಅವಳಿಗಾವ ಅಪಾಯ ಬಂದಿದೆಯೋ?

ಒಮ್ಮೆಲೆ ನೆನಪಾದದ್ದು ವಾಚ್ ಟ್ರಾನ್ಸ್‌ಮೀಟರ್.

ಮುಂಗೈಗೆ ಕಟ್ಟಿದ್ದ ವಾಚಿನ ತಿರುಪನ್ನು ಎರಡು ಬಾರಿ ಹಿಂದಕ್ಕೆ ತಿರುಗಿಸಿ ಹೊರಗೆಳೆದ. 'ಟಿಂವ್ ಟಿಂವ್ ಟಿಂವ್' ಧ್ವನಿಯೊಂದಿಗೆ ವಾಚಿನ ಮಧ್ಯೆ ಕೆಂಪು ದೀಪ ಮಿನುಗತೊಡಗಿತು. ಜಿನುಗಾದ ತಂತಿಯೊಂದಿಗೆ ಹೊರಬಂದ ತಿರುಪನ್ನೇ ಹೆಡ್‌ಫೋನಿನಂತೆ ಉಪಯೋಗಿಸಿ ಬಾಯಿಬಳಿ ತಂದು ಕರೆ ನೀಡತೊಡಗಿದ.

"ಹಲೋ....ಹಲೋ ವಾಯ್, ಎಕ್ಸ್ ಕಾಲಿಂಗ್-ಎಕ್ಸ್ ಕಾಲಿಂಗ್ ಹಲೋ ವಾಯ್" ಎರಡು ಮೂರು ನಿಮಿಷ ಯಾವ ಪ್ರತಿಕ್ರಿಯೆಯು ಬರದಂತಾದಾಗ ಭಾರವಾದ ಹೃದಯದೊಂದಿಗೆ ಮೌನ ತಾಳುತ್ತಿದ್ದಂತೆಯೇ ಕೆಂಪು ದೀಪ ಮಾಯವಾಗಿ ಹಸಿರು ದೀಪ ಮಿನುಗಿತು.... ಬಾಡಿ ಬತ್ತಿದ ಅವನ ಮುಖದ ಮೇಲೆ ಸಂತಸದ ರೇಖೆಗಳು ಮೂಡಿದವು.

"ಹಲೋ ವಾಯ್ ಹಲೋ ವಾಯ್'

ಹರ್ಷ ತಾಳಲಾರದೇ ಜೋರಾಗಿ ಕೂಗಿದ... ಅತ್ತ ಕಡೆಯಿಂದ ಸುಷ ಮಾಳ ಧ್ವನಿ ಕೇಳಲೊಲ್ಲದು. ಅದರ ಬದಲು ನೀರಿನ ಅಲೆಗಳ, ನೀರಲ್ಲಿ ರಪರಪ ಬಡಿಯುವ ಸದ್ದು ಕೇಳಿ ಬಂದವು. ಇದೇನು ಆಶ್ಚರ್ಯ ಎಂದಾತ ಯೋಚಿ ಸುತ್ತ ಮತ್ತೆ ಕರೆನೀಡಿದ.

"ಹಲೋ ವಾಯ್, ಹಲೋ ವಾಯ್, ಎಕ್ಸ್ ಕಾಲಿಂಗ್, ಎಕ್ಸ್ ಕಾಲಿಂಗ್....ದಿಸ್ ಈಜ್ ಲಾಸ್ಟ್ ಕಾಲ್. ದಿಸ್ ಈಜ್ ಲಾಸ್ಟ್ ಕಾಲ್. ಹಲೋ ವಾಯ್. ಹಲೋ ವಾಯ್."

ಅವನ ಕಿವಿಗಳು ಸುಷಮಾಳ ಧ್ವನಿಗಾಗಿ ಕಾಯ್ದು ಕುಳಿತಿದ್ದವು.

ಕೊನೆಗೂ ಕೇಳಿಬಂದಿತು ಅವಳ ಧ್ವನಿ. ಅವಳು ಬಹು ಪ್ರಯಾಸದಿಂದ ತೇಕುತ್ತ ಉಸಿರು ಬಿಡುತ್ತ ಮಾತನಾಡುತ್ತಿದ್ದಳು.

"ಹಲೋ ಎಕ್ಸ್, ಹಲೋ ಎಕ್ಸ್, ವಾಯ್ ಅಟೆಂಡಿಂಗ್, ವಾಯ್ ಅಟೆಂಡಿಂಗ್"

"ಸುಷಮಾ ನಿನಗೇನಾಗಿದೆ. ನೀನೆಲ್ಲಿರುವೆ?"

"ನಾನೆಲ್ಲಿರುವೆ ಎಂದು ಹೇಳಲಾಗದು ಮೇಜರ್, ಆದರೆ ಸದ್ಯ ಯಾವದೋ ಒಂದು ಬಾವಿಯಲ್ಲಿ ಬಿದ್ದು ಸಾವಿನ ದಾರಿ ಕಾಯುತ್ತಿರುವೆ."

"ಏನೆಂದೆ? ಬಾವಿಯಲ್ಲಿರುವೆಯಾ?"

"ಹೌ...ಹೌದು ಮೇಜರ್, ಅರ್ಧಗಂಟೆಯಿಂದ ಒದ್ದಾಡುತ್ತಿದ್ದೇನೆ. ನನ್ನ ಕೈಕಾಲುಗಳು ಸೋತು ಹೋಗುವೆ."

"ನೀನು ಎಲ್ಲಿರಬಹುದು ಅಂತ ಸೂಚನೆಯನ್ನಾದರೂ ಕೊಡು ಸುಷಮಾ. ನಾನು ರೆಕ್ಕೆ ಕಟ್ಟಿಕೊಂಡು ಹಾರಿ ಬರುತ್ತೇನೆ. ಸ್ವತಃ ಯಮ ಬಂದು ನಿಂತಿ ದ್ದರೂ ಅವನ ಜೊತೆ ಹೋರಾಡಿ ನಿನ್ನ ಕರೆದುಕೊಂಡು ಬರುತ್ತೇನೆ."

ಶೋಕಭರಿತ ಕಂಠದಲ್ಲಿ ಹೇಮಂತ ಅಂಗಲಾಚಿದಾಗ ಆತ ತನ್ನ ಮೇಲಿಟ್ಟ ಪ್ರೀತಿಯ ಆಭಾಸವಾಗಿ ಸುಷಮಾ ಬಿಕ್ಕಲಾರಂಭಿಸಿದಳು.

"ಮೇಜರ್...ಮೇಜರ್ ಈ ರೀತಿ ಮಾತನಾಡಬೇಡಿ, ನನ್ನ ಇಷ್ಟು

ಪ್ರೀತಿಸಬೇಡಿ. ನಿಮ್ಮ ಪ್ರೀತಿಗಾಗಿ ನಾ ಸತ್ತರೂ ಪ್ರೇತವಾಗಿ ನಿಮ್ಮ ಬಳಿ ಬರಬೇಕಾಗುತ್ತದೆ. ಆಹ್.... ಆ...."

"ಸುಷಮಾ ಏನಾಯ್ತು?"

"ಏನೋ ಕಚ್ಚಿದಂತಾಯ್ತು ಮೇಜರ್"

"ಸುಷಮಾ ನೀನೆಲ್ಲಿರುವೆ ಬೇಗ ಹೇಳು"

"ಮೇಜರ್ ನಾನು ರೋಜಿಯ ಬೆಂಬತ್ತಿ ಬಂದೆ. ಆಕೆ ಹುಡ್ಕೋ ಕಾಲನಿಯ ಮೂರನೇ ಮೇನ್ ಎಂಟನೇ ಕ್ರಾಸಿನಲ್ಲಿ ನಾಲ್ಕನೆ ಬಂಗಲೆಗೆ ಬಂದಳು. ಅಲ್ಲೀ ಗಂಟೆಗೆ ಅರವತ್ತು ಕಿಲೋ ಮೀಟರ್ ಓಡುವ ಅತಿಮಾನವ ನೊಬ್ಬ ಅವಳನ್ನು ಕೊಲ್ಲಲು ಬಂದ."

"ಏನೆಂದೆ? ಗಂಟೆಗೆ ಅರವತ್ತು ಕಿಲೋ ಮೀಟರ್ ಓಡುವ ಮಾನವನೇ? ನಿನ್ನ ತಲೆ ಕೆಟ್ಟಿಲ್ಲ ತಾನೇ?"

"ನಾನು ನಿಜ ಹೇಳುತ್ತಿದ್ದೇನೆ ಮೇಜರ್....ಆತ ಓಡುವಾಗ 'ಝುನ್‌ಝುನ್ ಝುನನ್' ಎಂದು ಸಪ್ಪಳವಾಗುತ್ತದೆ. ಯಾರೋ ಆದೇಶ ನೀಡುತ್ತಾರೆ. 'ಓಡು ಇನ್ನೂ ವೇಗ, ಇನ್ನೂ' ಎಂದು ಆತ ಓಡತೊಡಗುತ್ತಾನೆ. ಅವನನ್ನು ನಾನು ತಡೆದಾಗ ಆತ ನನ್ನನ್ನೆತ್ತಿ ಒಗೆದ- ನಾನು ಬಾವಿಯಲ್ಲಿ ಬಂದು ಬಿದ್ದೆ.... ಮೈ ಕೈಗೆ ಪೆಟ್ಟಾಗಿದೆ ಉಸಿರು ಬಿಗೀತಾ ಇದೆ."

"ಇನ್ನೂ ಸ್ವಲ್ಪ ಕಾಲ ಧೈರ್ಯದಿಂದಿರು ಸುಷಮಾ. ನೀನು ಎಲ್ಲಿದ್ದರೂ ಹುಡುಕಿಕೊಂಡು ಬರುತ್ತೇನೆ. ಅಂದಹಾಗೆ ರೋಜೀ ಎಲ್ಲಿದ್ದಾಳೆ."

"ನನಗೆನಿಸುವ ಮಟ್ಟಿಗೆ ಆಕೆ ಜೀವಿಸಿಲ್ಲ. ಅವಳ ಜೊತೆ ಇದ್ದ ಜೊತೆ-ಗಾರ ಸಹ"

"ಓಹ್... ಸರಿ ನಾನು ಬಂದೆ. ಧೈರ್ಯವಾಗಿರು, ನನಗಾಗಿ. ನೀನಿಲ್ಲದೆ ನಾನು ಅಪೂರ್ಣ, ಬಿಗ್ ಝಿರೋ..."

ವಾಚ್ ಟ್ರಾನ್ಸ್‌ಮೀಟರ್ ಬಂದು ಮಾಡುತ್ತಿದ್ದಂತೆ ಅವನ ಹಿಂದೆ ಕೈಕಟ್ಟಿ ನಿಂತಿದ್ದ ಅಶೋಕ ಮುಂದೆ ಬಂದ. ಹೇಮಂತನ ಏರುದನಿಗೆ ಎಚ್ಚರಗೊಂಡಿದ್ದ ನಾತ.

"ಮೇಜರ್ ಸುಷಮಾಗೆ ಏನಾಗಿದೆ? ಅವಳೆಲ್ಲಿದ್ದಾಳೆ."

"ಅದನ್ನು ದಾರಿಯಲ್ಲಿ ಹೇಳುತ್ತೇನೆ ಬೇಗ ನಡೆ. ಗ್ಯಾರೇಜಿನಿಂದ ಜೀಪ್ ಹೊರತೆಗೆ"

ಅವರಿಬ್ಬರನ್ನು ಹೊತ್ತ ಜೀಪು ಗಂಟೆಗೆ ತೊಂಬತ್ತರಿಂದ ನೂರಿಪ್ಪತ್ತು ಕಿಲೋಮೀಟರ್‌ಗಳ ವೇಗದಲ್ಲಿ ಓಡತೊಡಗಿತು ಹುಡ್ಕೋ ಕಾಲನಿಯತ್ತ.

ಹುಡ್ಕೋ ಕಾಲನಿಯಿನ್ನೂ ನಾಲ್ಕಾರು ಕಿಲೋಮೀಟರು ದೂರವಿರುವಾಗಲೇ ಕಾರು ಗರಗರ ಸದ್ದು ಮಾಡುತ್ತ ನಿಂತುಬಿಟ್ಟಿತು. ಹೇಮಂತ ಎಷ್ಟು ಪ್ರಯತ್ನಿಸಿದರೂ ಅದು ಒಂದಿಂಚು ಮುಂದೆ ಕದಲಲಿಲ್ಲ. ಅಲ್ಲಿ ಸುಷಮಾ ಸಾವು-ನೋವುಗಳ ಮಧ್ಯೆ ಜೀಕುತ್ತಿರುವಾಗ ಅವಳ ಸಹಾಯಕ್ಕೆ ಧಾವಿಸುತ್ತಿರುವಾಗಲೇ ಕಾರು ಈ ರೀತಿ ಕೈಕೊಡಬೇಕೆ? ಕಣ್ಣಲ್ಲಿ ನೀರು ಚಿಮ್ಮಿ ಬರುತ್ತಿದ್ದಂತೆ ಮೇಜರ್ ಕಾರಿನಿಂದಿಳಿದು ಕಾರಿನ ಬೊನಟ್ ತೆಗೆದು ಎಲ್ಲಿ ಏನಾಗಿದೆ, ಏನು ದೋಷವಿದೆ ಎಂದು ಪರೀಕ್ಷಿಸತೊಡಗಿದ. ಅರ್ಧ ನಿಮಿಷ ಕಳೆದಿರಲಿಲ್ಲ ಅಷ್ಟೇ... ಝುನ್ ಝುನ್ ಝುನಕ್ ಸಂಗೀತದ ಝೇಂಕಾರ ಕೇಳಿಬಂದು ಹೇಮಂತನ ಮೈ ಎಲ್ಲಾ "ಜುಂ" ಎಂದಿತು. ಸುಷಮಾ ಹೇಳಿದ ಗಂಟೆಗೆ ಅರವತ್ತು ಕಿಲೋ ಮೀಟರ ವೇಗವಾಗಿ ಓಡುವ ಅತಿಮಾನವ, ಅವಳ ದುಸ್ಥಿತಿಗೆ ಕಾರಣನಾದವ ಅಲ್ಲೇ ಪ್ರತ್ಯಕ್ಷನಾಗಿದ್ದ. ಝುನ್ ಝುನ್ ಝುನಕ್ ಝೇಂಕಾರ ಹೆಚ್ಚುತ್ತ ಬಂದಿತು. ಆ ಧ್ವನಿ ಯಾವ ಕಡೆಯಿಂದ ಬರುತ್ತಿದೆ ಎಂದು ಹೇಮಂತ ತಲೆ ಎತ್ತಿ ಸುತ್ತಲೂ ನೋಡತೊಡಗಿದ.

"ಏನಾಯ್ತು ಮೇಜರ್, ಏನು ನೋಡುತ್ತಿದ್ದೀರಿ?"

"ಸುಷಮಾಳನ್ನು ಮೃತ್ಯು ಮುಖಕ್ಕೆ ದೂಡಿ ಬಂದಿರುವ ಗಂಟೆಗೆ ಅರವತ್ತು ಕಿಲೋಮೀಟರ್ ವೇಗದಿಂದ ಓಡುವ ಮಾನವನನ್ನು ನೋಡುತ್ತಿದ್ದೇನೆ.

"ಇದು ಅಸಂಭವ ಮೇಜರ್"

"ಅಸಂಭವವಲ್ಲ ಪೂರ್ಣ ಸತ್ಯ. ಈ ಸಂಗೀತದ ಧ್ವನಿ ಕೇಳಿಬರುತ್ತಿರುವದು ಆ ವ್ಯಕ್ತಿಯಿಂದಲೇ.

ಅವನ ಮಾತಿನ್ನೂ ಮುಗಿದಿರಲಿಲ್ಲ. ಬಿರುಗಾಳಿಯಂತೆ ಓಡಿಬಂದ ಆ ಮಾನವ ಕಣ್ಮುಚ್ಚಿ ತೆರೆಯುವದರೊಳಗಾಗಿ ಅವರಿಬ್ಬರನ್ನು ದಾಟಿಕೊಂಡು ಹೋದ. ಝುನ್ ಝುನ್ ಝುನಕ್ ಸಂಗೀತ ಧ್ವನಿ ಒಮ್ಮಿಂದೊಮ್ಮೆಲೆ ಜೋರಾಗಿ ನಂತರ ಕ್ರಮೇಣ ಕಡಿಮೆಯಾಗುತ್ತ ಹೋಯಿತು.

"ಓಹ್ ದೇವರೆ ಈತ ಮಾನವನಲ್ಲ, ಅತಿಮಾನವ"

"ಅತಿ ಮಾನವನೂ ಅಲ್ಲ ಈತ ಯಮದೂತ"

"ಯಮದೂತ ಅಂದರೆ...."

"ಆಮೇಲೆ ಹೇಳುತ್ತೇನೆ"

ಮೇಜರ್ ಮತ್ತೆ ಕಾರಿನ ಯಂತ್ರದೆಡೆ ಆಕರ್ಷಿತನಾದ ಕಾರಣ ದೊರೆಯಿತು. ಹಲ್ಲಿಯೊಂದು ಯಂತ್ರದೊಳಗೆ ಸಿಕ್ಕು ಸತ್ತು ಹೋಗಿತ್ತು. ಅದನ್ನು

ತೆಗೆದು ಸ್ವಚ್ಛ ಮಾಡುವಷ್ಟರಲ್ಲಿ ಐದು ನಿಮಿಷಗಳು ಕಳೆದಿದ್ದವು.

ಕಾರು ಮತ್ತೆ ಓಡತೊಡಗಿತು. ಹುಡ್ಕೋ ಕಾಲನಿಯತ್ತ.

ಮೂರನೇ ಮೇನ್ ಎಂಟನೇ ಕ್ರಾಸಿಗೆ ಪ್ರವೇಶಿಸಿದ ಕಾರು ಮೂರು ನಾಲ್ಕು ಮನೆ ದಾಟಿ ನಿಂತುಬಿಟ್ಟಿತು. ಕಾರಿನಿಂದಿಳಿದ ಹೇಮಂತ.

"ಅಶೋಕ.... ನೀರು ಬಡಿಯುವ ಸದ್ದು ಕೇಳುತ್ತಿದೇನೋ ನೋಡು."

ಹಾವಿನ ಕಿವಿ ಮಾಡಿಕೊಂಡು ಸುತ್ತಲೂ ನಿಂತಲ್ಲೇ ತಿರುಗಿದರು ಇಬ್ಬರೂ. ಒಂದೆಡೆಯಿಂದ ಬರುತ್ತಿತ್ತು. ಚಪಕ್ ಚಪಕ್ ಚಪ್ ಚಪ್.

"ಹಾಂ ಈ ಕಡೆ" ಅಶೋಕ ಕೂಗಿದ.

"ಇಬ್ಬರೂ ಓಡಿದರು. ಬಂಗಲೆಯೊಂದರ ಕಂಪೌಂಡ್ ಗೋಡೆಗೆ ಹೊಂದಿ ಇರುವ ಬಾವಿ.

"ಅಶೋಕ ಕಾರಿನೊಳಗಿರುವ ಬ್ಯಾಟರಿ ಮತ್ತು ಹಗ್ಗ ತಾ."

ಅಶೋಕ ಓಡುತ್ತಿದ್ದಂತೆ ಹೇಮಂತ ಬಾವಿಯೊಳಗೆ ಬಗ್ಗಿ ಕೂಗಿದ.

"ಸುಷಮಾ.... ಸುಷಮಾ... ಹಲೋ ಹಲೋ ಸುಷಮಾ"

ಮರುಕ್ಷಣವೇ ಉತ್ತರ ಬಂದಿತು.

"ಎಸ್ ಮೇಜರ್, ಮೇಜರ್ ನಾನಿಲ್ಲೀ ಇದ್ದೇನೆ, ಬೇಗ, ನಾನು ಸೋತು ಸುಣ್ಣವಾಗಿದ್ದೇನೆ."

ಸಂತಸದಿಂದ ಹೇಮಂತನ ಕಣ್ಣಲ್ಲಿ ನೀರು ಚಿಮ್ಮಿ ಗಂಟಲುಬ್ಬಿ ಬಂದಿತು. ದನಿ ಬಿಗಿ ಹಿಡಿಯುತ್ತಿದ್ದಂತೆ ಕಷ್ಟಪಟ್ಟು ನುಡಿದ.

"ಹೆದರಬೇಡ ಸುಷಮಾ. ನಾನು ಅಶೋಕ ಇಬ್ಬರೂ ಬಂದಿದ್ದೇವೆ. ಹಗ್ಗದಿಂದ ನಾನು ಕೆಳಗಿಳಿದು ಬರುವೆ. ಇನ್ನು ಒಂದೆರಡು ನಿಮಿಷ ಮಾತ್ರ."

ಅಶೋಕ ಬ್ಯಾಟರಿಯೊಂದಿಗೆ ಹಗ್ಗ ಸಹ ತಂದ. ಈ ಮಧ್ಯೆ ಕೂಗಾಟ ಕೇಳಿ ಬಂಗಲೆ ಜನ ಎಚ್ಚೆತ್ತರು. ದೀಪ ಉರಿಸಿ ಬಾಗಿಲು ತೆರೆದು ಹೊರಬಂದರು. ಅವರ ಜೊತೆ ಪುರಾಣಕ್ಕಿಳಿಯಬೇಕಾಗುತ್ತದೆ ಎಂದು ಅಂಜಿದ ಹೇಮಂತ ಸೊಂಟಕ್ಕೆ ಹಗ್ಗ ಬಿಗಿದುಕೊಂಡು ಬಾವಿಗಿಳಿದ. ಬಂಗಲೆ ಜನ ಅಶೋಕನಿಗೆ ಮುಗಿಬಿದ್ದರು.

"ಏಯ್ ಯಾರು ನೀವು ಏನು ಮಾಡ್ತಾ ಇದೀರಿ?"

ಅಶೋಕನದು ಒಂದೇ ಉತ್ತರ

"ಎರಡು ನಿಮಿಷ ನಿಲ್ಲಿ. ಎಲ್ಲಾ ಹೇಳ್ತೀನಿ."

ಬಂಗಲೆ ಜನ ಕೇಳಬೇಕಲ್ಲ? ಅವರು ತಮ್ಮ ದರ್ಪ ತೋರಿಸಿಯೇ ಬಿಟ್ಟರು.

"ನಿಲ್ಲು ಈಗಲೇ ಪೋಲೀಸರನ್ನ ಕರೆಸುತ್ತೇವೆ. ಇಲ್ಲದಿದ್ದರೆ ನಂತರ ನಾವು ತೊಂದರೆಯಲ್ಲಿ ಸಿಲುಕಬೇಕಾಗುತ್ತದೆ." ಅಶೋಕ ಮೊದಲು ಅವರ ಮಾತಿಗೆ ಪ್ರತೀಕಾರ ತೋರಿಸಲಿಲ್ಲವಾದರೂ ನಂತರ ಯೋಚನೆಯೊಂದು ಹೊಳೆದು ಅವರ ಹಿಂದೆಯೇ ಮನೆಯೊಳಗೆ ನುಗ್ಗಿದ. ಹೊರಗಿದ್ದವರು ತಡೆ ಯಲು ಪ್ರಯತ್ನಿಸಿ ವಿಫಲರಾದರು. ಮನೆ ಯಜಮಾನ ನಂಬರ್ ಜೋಡಿಸಿ ಕಿವಿಗೆ ರಿಸೀವರ್ ತಗಲಿಸಿಕೊಂಡು ಸಿಡಿಮಿಡಿ ಮಾಡುತ್ತ ಕುಳಿತಿದ್ದ. ಮಧ್ಯರಾತ್ರಿ ಮೀರುತ್ತ ಬಂದಿರುವಾಗ ಒಂದೇ ಬಾರಿ ಗಂಟೆ ಬಾರಿಸುತ್ತಲು ರಿಸೀವರ್ ಎತ್ತಲೂ ಯಾರಾದರೂ ಇರಬೇಕಲ್ಲ? ಯಾರು ಇರಲಿಲ್ಲ. ಗಂಟೆ ಬಾರಿಸುತ್ತಲೇ ಇತ್ತು. ಅವರ ಕೈಯಿಂದ ರಿಸೀವರ್ ಕಸಿದುಕೊಂಡ.

"ಇದೇನಿದು. ರಾತ್ರೋರಾತ್ರಿ ಮನೆಗೆ ನುಗ್ಗಿ ಈ ರೀತಿ ವರ್ತಿಸುತ್ತಿ"

"ಯಜಮಾನರೆ ನೀವು ನಮ್ಮನ್ನು ತಪ್ಪು ತಿಳಿಯಬೇಡಿ. ನಾನೆಲ್ಲಾ ನಿಮ್ಮ ಮುಂದೆ ಸರಿಯಾಗಿ ಆ ಕಡೆಯಿಂದ ರಿಸೀವರ್ ಎತ್ತಿ ಭಾರಿಕಂಠದಿಂದ ಮಾತನಾ ಡಿದರು. ಅಶೋಕ ಮಾತು ನಿಲ್ಲಿಸಿದ.

"ಹಲೋ ಸಿಟಿ ಪೋಲೀಸ್ ಸ್ಟೇಶನ್"...

"ಮಿಸ್ಟರ್ ಧಾರವಾಡಕರ್ ಇದ್ದಾರೆಯೆ?"

ತಮ್ಮ ಸಾಹೇಬರ ಹೆಸರು ಕೇಳುತ್ತಿದ್ದಂತೆ ಆತನ ನಿದ್ದೆ ಓಡಿಹೋಗಿತ್ತು.

"ಇಲ್ಲ ಸಾಹೇಬ್- ರಾವ್‌ಸಾಹೇಬ್ ಮನೆಯಲ್ಲಿದ್ದಾರೆ ತಾವು ಯಾರು?"

"ನಾನು ಅಶೋಕ... ಮೇಜರ್ ಹೇಮಂತರ ಸಹಾಯಕ. ನಿಮ್ಮ ಸಾಹೇ ಬರಿಗೆ ತಿಳಿಸಿ. ಕೂಡಲೇ ಒಂದು ಅಂಬ್ಯುಲನ್ಸ್ ಜೊತೆ ಸಕಲ ಪೋಲೀಸ ಸಿಬ್ಬಂದಿ ಯೊಂದಿಗೆ ಹುಡ್ಕೋ ಕಾಲನಿ ಮೂರನೇ ಮೇನ್, ಎಂಟನೇ ಕ್ರಾಸ್, ಹೌಸ ನಂಬರ್...."

ರಿಸೀವರ್ ಮೇಲೆ ಕೈಯಿಟ್ಟು ಯಜಮಾನರ ಕಡೆ ಹೊರಳಿ ಕೇಳಿದ.

"ರೀ ಯಜಮಾನರೆ, ನಿಮ್ಮ ಮನೆ ನಂಬರ್ ಎಷ್ಟು?"

ಮೇಜರ್ ಹೇಮಂತ-ಅಶೋಕ-ಅಂಬ್ಯೂಲನ್ಸ್ ಪೋಲೀಸ್ ಸಿಬ್ಬಂದಿ ಎಲ್ಲಾ ಕೇಳಿ ತಬ್ಬಿಬ್ಬಾಗಿದ್ದ ಆತ "ನೂರಾಎಂಟು. ಎಂ. ಡಿ. ಭಾರದ್ವಾಜ'" ಪಟಕ್‌ನೆ ನುಡಿದ.

ರಿಸೀವರ್ ಮೇಲಿನ ಕೈ ಸರಿಸಿ ಮತ್ತೆ ಹೇಳಿದ ಅಶೋಕ "ಹಾಂ. ಮನೆ ನಂಬರ ನೂರಾಎಂಟು. ಎಂ.ಡಿ. ಭಾರದ್ವಾಜ ಅಂತ"

"ಏನಾದರೂ ಅನಾಹುತಗಳಾಗಿವೆಯೇ?"

"ಇನ್ನೂ ಅಂತಹದೇನೂ ಕಂಡಿಲ್ಲ. ಆದರೂ ಎರಡು ಮರ್ಡರ್ ಆಗಿವೆ ಅಂತ ಸಂಶಯ. ಬೇಗ ಬನ್ನಿ."

ರಿಸೀವರ್ ಕೆಳಗಿರಿಸಿದಾಗ ಭಾರದ್ವಾಜರು ಸಾವಕಾಶವಾಗಿ ಕಂಪಿಸುತ್ತಿದ್ದರು. ಎರಡು ಮರ್ಡರ್ ಎಲ್ಲಿ? ತಮ್ಮ ಬಾವಿಯಲ್ಲಿಯೇ? ಅಯ್ಯೋ ರಾಮಾ, ಹಾಗಾದರೆ ತಮಗೆ ಬಂತು ಕುತ್ತು. ಅಶೋಕನ ಹಿಂದೆಯೇ ಆತ ಓಡಿದ.

"ರೀ ಮಿಸ್ಟರ್ ಅಶೋಕ ಅವರೆ, ತಾವು ಯಾರು ಅಂತ ತಿಳಿದಿದ್ದಿಲ್ಲ ದಯವಿಟ್ಟು ಕ್ಷಮಿಸಿ."

"ಭಾರದ್ವಾಜ ಅವರೆ ಕ್ಷಮೆ ಕೇಳಬೇಕಾದವರು ನಾವು; ನೀವಲ್ಲ, ನಿಮಗೆ ತಿಳಿಸದೇ ನಿಮ್ಮ ಒಪ್ಪಿಗೆ ಪಡೆಯದೇ ನಿಮ್ಮ ಕಂಪೌಂಡ್ ಪ್ರವೇಶಿಸಿದ್ದೇವೆ."

ಭರಭರ ಹೊರಬರುತ್ತ ಅಶೋಕ ಹೇಳಿದ.

"ಇದಕ್ಕೆ ಒದಗಿ ಬಂದ ಸಂದರ್ಭವೇ ಕಾರಣ. ಯಾವುದಕ್ಕೂ ಸಮಯ ದೊರೆಯಲಿಲ್ಲ ಕ್ಷಮಿಸಿ."

"ಅಯ್ಯೋ ಆ ರೀತಿ ಹೇಳಬೇಡಿ, ಏನೋ ಮರ್ಡರ್ ಎಂದಿರಲ್ಲ."

"ಗಾಬರಿಯಾಗಬೇಡಿ, ನಿಮ್ಮ ಮನೆಯಲ್ಲಲ್ಲ ಬೇರೆಡೆ ಆಗಿವೆ"

ಉಶ್ ಎಂದು ನಿಟ್ಟುಸಿರುಬಿಟ್ಟರು ಭಾರದ್ವಾಜ. ಅಶೋಕ ಅವರಿಗೆ ವಿನಂತಿಸಿಕೊಂಡ. "ತಾವು ತಪ್ಪು ತಿಳಿಯದಿದ್ದರೆ ಒಂದು ಕಂಬಳಿ, ಒಂದೆರಡು ಕಪ್ ಕಾಫಿ ಒದಗಿಸುವಿರಾ?"

"ಓಹೋ ಸಂತೋಷದಿಂದ" ಒಳಗೆ ಓಡಿದರು ಭಾರದ್ವಾಜರು.

ಅಶೋಕ ಪುನಃ ಬಾವಿಗೆ ಬಂದಾಗ ಮೇಜರ್ ಸುಷಮಾಳನ್ನು ಹೆಗಲ ಮೇಲೆ ಹಾಕಿಕೊಂಡು ಮೇಲೆ ಬರುತ್ತಿರುವದು ಕಾಣಿಸಿತು. ಆತ ಪೂರ್ಣ ಮೇಲೆ ಬರುತ್ತಲೂ ಅಶೋಕ ಸುಷಮಾಳನ್ನು ಇಳಿಸಿಕೊಂಡ. ಭಾರದ್ವಾಜರು ಕಂಬಳಿಯೊಂದಿಗೆ ಬಂದರು. ಅವರ ಹಿಂದೆ ಅವರ ಪತ್ನಿ.

"ಅಮ್ಮಾ ದಯವಿಟ್ಟು ಇವರನ್ನು ಒಳಗೆ ಕರೆದುಕೊಂಡು ಹೋಗಿ."

ಅಶೋಕ ಕೈಮುಗಿದು ವಿನಂತಿಸಿಕೊಂಡ. ಎಲ್ಲರಿಗೂ ಪರಿಸ್ಥಿತಿಯ ಅರಿವಾಗಿತ್ತು.

"ನೀವೇನೂ ಹೆದರಬೇಡಿ. ನಾವೆಲ್ಲಾ ವ್ಯವಸ್ಥೆ ಮಾಡುತ್ತೇವೆ. ಬಟ್ಟೆ ಸಹ ಬೇರೆ ಕೊಡುತ್ತೇವೆ. ದಯವಿಟ್ಟು ನೀವೂ ಒಳಗೆ ಬನ್ನಿ ಸ್ವಾಮಿ. ನಿಮಗೂ ಬೇರೆ ಬಟ್ಟೆ ಕೊಡುತ್ತೇವೆ."

ಮೇಜರ್ ಹೇಮಂತನ ಹೆಸರು, ಬಾವಿಯಲ್ಲಿ ಬಿದ್ದ ಹೆಣ್ಣು ಮಗಳು, ಅವಳನ್ನು ಜೀವಸಹಿತ ಪಾರು ಮಾಡಿದ್ದು, ಎಲ್ಲಾ ಜಾದುವಿನಂತೆ ಕೆಲಸ ಮಾಡಿ

ದವು. ವಾತಾವರಣ ಅನುಕೂಲಕರವಾಗಿತ್ತು.

ಹತ್ತು ಹದಿನೈದು ನಿಮಿಷಗಳಲ್ಲಿ ಸುಷಮಾ ಭಾರದ್ವಾಜರ ಮನೆಮಂದಿಯ ಸಹಾಯದಿಂದಾಗಿ ಜೀವದಾನ ಪಡೆದಳು. ಒದ್ದೆಯಾಗಿದ್ದ ಅವಳ ಬಟ್ಟೆ ಬದಲಿಸಿ ಮೈ ಒರಸಿ ಬೇರೆ ಉಣ್ಣೆ ಬಟ್ಟೆ ತೊಡಿಸಲಾಯಿತು. ಮೇಲೆ ಬ್ಲ್ಯಾಂಕೆಟ್ ಬೇರೆ ಹೊದಿಸಿದರು. ಧಗಧಗ ಉರಿಯುವ ಬೆಂಕಿ ಪಾತ್ರೆ ತಂದು ಅವಳ ಮುಂದಿರಿಸಿ ಮೈ ಕಾಯಿಸಿದರು. ಹೇಮಂತನ ಕೋರಿಕೆ ಮೇರೆಗೆ ಒಂದು ಪೆಗ್ ಬ್ರ್ಯಾಂಡಿ ಸಹ ಅವಳಿಗೆ ಕುಡಿಸಿದರು.

ಇದರಿಂದಾಗಿ ಕ್ರಮೇಣ ಅವಳ ದೇಹದ ಕಂಪನ ನಿಲ್ಲಲಾರಂಭಿಸಿತು. ಆಕೆ ಮೆಲ್ಲನೆ ಕಣ್ಣು ತೆರೆದಳು. ಮೊತ್ತಮೊದಲು ದೃಷ್ಟಿಗೆ ಬಿದ್ದವ ಹೇಮಂತ. ಅವಳ ಮುಖದ ಮೇಲೆ ನಗೆಮಿಂಚಿತು.

"ಮೇಜರ್.... ಮೇಜರ್, ನೀವು ನನ್ನ ಉಳಿಸಿಕೊಂಡಿರಿ ಥ್ಯಾಂಕ್ಸ್."

"ಸುಷಮಾ ನೀನೇ ನನ್ನ ಜೀವ, ನನ್ನ ಚೇತನ, ನೀನಿಲ್ಲದೇ ನಾನು ಅಪೂರ್ಣ ಬಿಗ್ ಜೀರೋ ಎಂದು ಹೇಳಿರಲಿಲ್ಲವೇ? ನನ್ನ ಬಿಟ್ಟು ನೀನೊಬ್ಬಳೇ ಹೋಗಲು ಹೇಗೆ ಸಾಧ್ಯ? ಅದಕ್ಕಾಗಿ ನಾ ನಿನ್ನ...."

"ಮೇಜರ್.... ಮೇಜರ್...."

ಸುಷಮಾ ಹೇಮಂತನನ್ನು ತಬ್ಬಿಕೊಂಡು ಬಿಕ್ಕಳಿಸಿದಾಗ ಅವರಿಬ್ಬರ ಭಾವನಾತ್ಮಕ ಪ್ರೇಮಸಂಬಂಧ ಕಂಡು ಸುತ್ತಲಿದ್ದವರ ಕಣ್ಣುಗಳು ಹಸಿ ಗೂಡಿದ್ದವು.

"ಸುಷಮಾ ನೋಡಿಲ್ಲಿ, ಅಶೋಕ ಹೇಗೆ ಜೋಲು ಮುಖ ಮಾಡಿಕೊಂಡು ನಿಂತಿದ್ದಾನೆ. ಅವನಿಗೆ ಸ್ವಲ್ಪ ಸಮಾಧಾನ ಹೇಳು."

ಸುಷಮಾ ಹೇಮಂತನ ಅಪ್ಪುಗೆಯಿಂದ ಬಿಡಿಸಿಕೊಂಡು ಮುಖ ಮೇಲೆತ್ತಿ ಅಶೋಕನತ್ತ ನೋಡಿದಾಗ ಕರುಳು ಚುರ್ರ್ ಎಂದಿತು. ಅಶೋಕ ನಿಂತಿದ್ದ ಸಪ್ಪೆ ಮುಖದಿಂದ.

"ಅಶೋಕ ಬಾ ಇಲ್ಲಿ. ನಿನ್ನಿಂದಾಗಿ ನಾ ಪುನರ್ಜನ್ಮ ಪಡೆದೆ. ನನಗೆ ನೀನೇ ಆಸರೆ. ನಾನಂತೂ ತಬ್ಬಲಿ. ಅಪ್ಪ ಅಮ್ಮ ಅಣ್ಣ ತಂಗಿ ಯಾರೂ ಇಲ್ಲ. ನೀನೇ ನನಗೆಲ್ಲ. ನೋಡು ನಾ ಬದುಕಿದ್ದೇನೆ."

ಅಶೋಕನಿಂದ ತಡೆಯಲಾಗಲಿಲ್ಲ. ಆತ ಬಿಕ್ಕಿ ಬಿಕ್ಕಿ ಅಳುತ್ತ ಹಾಗೇ ಕುಸಿದ.

"ನನ್ನ ಕ್ಷಮಿಸಿ, ಇದಕ್ಕೆ ನಾನೇ ಹೊಣೆಗಾರ. ನಾನು ಎಚ್ಚರವಾಗಿರ ಬೇಕಿತ್ತು.ಮರೆತು ಹಾಯಾಗಿ ನಿದ್ರಿಸಿದೆ. ನಾನು ಅಪರಾಧಿ. ನನ್ನ ಕ್ಷಮಿಸಿ."

"ಥೂ ಹುಚ್ಚಪ್ಪ, ಹೆಂಗಸಿನಂತೆ ಅಳಬಾರದು. ನೀನು ಗಂಡಸು. ನಿನ್ನ ಶತೃಗಳನ್ನು ನೀನು ಅಳಿಸು. ಇದೆಲ್ಲಾ ಆದದ್ದು ನನ್ನ ಮೂರ್ಖತನದಿಂದ. ನಿಮಗಾರಿಗೂ ಎಚ್ಚರಿಕೆ ನೀಡದೇ ರೋಜಿ ಹಿಂದೆ ಬಂದೆ. ಇದರಿಂದಾಗಿ ಅವಳೂ ಅಸುನೀಗಿದಳು. ತನ್ನ ಜೊತೆಗಾರನನ್ನು ಸಾಯಿಸಿದಳು. ನನ್ನನ್ನು ಸಹ ಆತ, ಆ ರಾಕ್ಷಸ ಕೊಲ್ಲುವವನಿದ್ದ. ನಿಮ್ಮೆಲ್ಲರ ಸಹಾಯದಿಂದಾಗಿ ಉಳಿದುಕೊಂಡೆ."

ಹೇಮಂತ ಸುಷಮಾ ಅಶೋಕ ಮೂರು ಜನ ಕೈ ಕೈ ಕೂಡಿಸಿ ನಕ್ಕಾಗ ಭಾರದ್ವಾಜರು ನುಡಿದರು, "ಮೇಜರ್ ಹೇಮಂತ ನಿಜವಾಗಿಯೂ ನೀವು ಧನ್ಯರು. ನಿಮಗಿಂಥ ಸಹಾಯಕರು ದೊರೆತಿದ್ದಾರೆ."

ಹೇಮಂತ ಹೆಮ್ಮೆಯ ನಗೆ ಬೀರುತ್ತಿದ್ದಂತೆ ಹೊರಗಡೆ ಅಂಬ್ಯೂಲನ್ಸ್ ಹಾಗೂ ಪೊಲೀಸ್ ಗಾಡಿಯ ಸೈರನ್ ಕೇಳಿಬಂದವು. ಅಶೋಕ ಲಗುಬಗೆಯಿಂದ ಹೊರಗೋಡಿದ. ಮೂರುನಾಲ್ಕು ನಿಮಿಷಗಳ ನಂತರ ಅವನೊಂದಿಗೆ ಇನ್‌ಸ್ಪೆಕ್ಟರ್ ಧಾರವಾಡಕರ ಹಾಗೂ ಸರಕಾರಿ ವೈದ್ಯರು ಬಂದರು.

"ಬನ್ನಿ ಧಾರವಾಡಕರ ಅವರೆ, ನಿಮಗಿಂದು ಬೆಳಗಿನ ತನಕ ಕೆಲಸವಿದೆ. ಅದಕ್ಕೂ ಮೊದಲು ಸುಷಮಾಳಿಗೆ ಉಪಚಾರ ನೀಡಬೇಕು. ಈಕೆ ಎರಡು ಮೂರು ಗಂಟೆ ಬಾವಿಯಲ್ಲಿ ಬಂದಿಯಾಗಿದ್ದಳು."

ಸರಕಾರಿ ವೈದ್ಯರು ಮುಂದೆ ಬಂದು ಸುಷಮಾಳನ್ನು ಪರೀಕ್ಷಿಸಿದರು.

"ಸದ್ಯ ಒಂದು ಇಂಜೆಕ್ಷನ್ ಹಾಗೂ ಮಾತ್ರೆ ಕೊಡುತ್ತೇನೆ. ಇವರು ಇಪ್ಪತ್ತನಾಲ್ಕು ಗಂಟೆ ವಿಶ್ರಾಂತಿ ಪಡೆಯಬೇಕು. ದೇಹದ ಮೇಲಾದ ಕಡಿತಕ್ಕೆ ಆಸ್ಪತ್ರೆಯಲ್ಲೇ ಚಿಕಿತ್ಸೆ ಆಗಬೇಕು. ಒಂದು ದಿನ ಇವರು ಆಸ್ಪತ್ರೆಯಲ್ಲೇ ಉಳಿದರೆ ಉತ್ತಮ."

"ಹಾಗೇ ಆಗಲಿ ಡಾಕ್ಟರ್. ಇಲ್ಲಿ ಒಂದರ್ಧ ಗಂಟೆ ಇವರ ಅವಶ್ಯಕತೆ ಇದೆ. ಆಮೇಲೆ ತಮ್ಮೊಂದಿಗೆ ಇವಳನ್ನು ಕಳಿಸುತ್ತೇವೆ. ನೀವೇ ಆಸ್ಪತ್ರೆಗೆ ಸೇರಿಸಿಬಿಡಿ. ಈ ಹಟಮಾರಿ ಹುಡುಗಿ ನನ್ನ ಮಾತು ಕೇಳುವದಿಲ್ಲ."

ನೋವು ಮರೆತು ಎಲ್ಲರೂ ಮುಕ್ತನಗೆ ನಕ್ಕರು.

ಅರ್ಧಗಂಟೆಯಲ್ಲಿ ಎಲ್ಲ ಕೆಲಸ ಮುಗಿದಿತ್ತು. ರೋಜೀ ಮತ್ತು ತಿಮ್ಮಯ್ಯ ಇಬ್ಬರೂ ಅಸುನೀಗಿದ್ದರು. ಪೊಲೀಸ್ ಸಿಬ್ಬಂದಿಯನ್ನು ಅಲ್ಲೇ ಬಿಟ್ಟು ಅಂಬ್ಯೂಲೆನ್ಸ್ ಜೊತೆ ಹೇಮಂತ ಆಸ್ಪತ್ರೆಗೆ ಬಂದ. ಅಲ್ಲಿ ಸುಷಮಾಳನ್ನು ಆಸ್ಪತ್ರೆಗೆ ಸೇರಿಸಿ ಅಶೋಕನೊಂದಿಗೆ ಮನೆಗೆ ಬಂದಾಗ ಬೆಳಗಿನ ಆರೂವರೆ.

ಮನೆಯೊಳಗೆ ಕಾಲಿಡುತ್ತಲೂ ಕಲ್ಲಾಗಿ ನಿಂತುಬಿಟ್ಟರು ಇಬ್ಬರು.

ಕೋಣೆಯಲ್ಲೆಲ್ಲ ಬುಲ್‌ಡೋಜರ್ ಓಡಿಸಿದಂತಾಗಿತ್ತು. ಎಲ್ಲಾ ಧ್ವಂಸವಾಗಿತ್ತು. ಈ ಕೆಲಸ ಆ ಅತಿಮಾನವ ಯಮದೂತನದೇ ಎಂದು ತಿಳಿಯಲು ಬಹಳ ಹೊತ್ತು ಬೇಕಾಗಲಿಲ್ಲ ಹೇಮಂತನಿಗೆ.......

## ೧೧

ಅಂದಿನ ದಿವಸ ಯಾವ ಕೆಲಸವನ್ನೂ ಮಾಡಲಿಕ್ಕಾಗಲಿಲ್ಲ. ಧ್ವಂಸ ಗೊಂಡ ಮನೆ ಸರಿಪಡಿಸುವದರಲ್ಲೇ ಸಾಯಂಕಾಲವಾಯಿತು. ವಿಷಯ ತಿಳಿದು ಬಂದ ಪೊಲೀಸ್ ಅಧಿಕಾರಿಗಳು ಹೇಮಂತನ ಸಹಾಯಕ್ಕಿಳಿದರು. ಮುರಿದು ಚೆಲ್ಲಾಪಿಲ್ಲಿಯಾದ ಫರ್ನೀಚರ್, ಹರಿದು ಚಿಂದಿ ಚಿಂದಿಯಾದ ಸೋಫಾ ಸೆಟ್ ಹೊರಗಡೆ ಸಾಗಿಸಿ ಅದರ ಬದಲು ಹೊಸ ಫರ್ನಿಚರ್ ಮತ್ತು ಸೋಫಾಗಳನ್ನು ತರಿಸಲಾಯಿತು. ಬೀರುವಿನಲ್ಲಿದ್ದ ವಸ್ತುಗಳನ್ನು ಸರಿಯಾಗಿ ಹೊಂದಿಸಲಾಯಿತು.

ಎಲ್ಲ ಸರಿಯಾಗಿದೆ ಎಂಬ ಭಾವನೆ ಬಂದಾಗ ಹೇಮಂತ ಮತ್ತು ಅಶೋಕ ಕೂಡಿ ಪರಿಶೀಲಿಸಿ ಮನೆಯಲ್ಲಿಯ ಯಾವ ಸಾಮಾನುಗಳೂ ಕಡಿಮೆಯಾಗಿಲ್ಲ ಎಂಬ ತೀರ್ಮಾನಕ್ಕೆ ಬಂದರು. ಹಾಗಾದರೆ ಆ ಅತಿಮಾನವನಾಗಲೀ ಅಥವಾ ಬೇರೆಯವರಾಗಲಿ ಈ ರೀತಿ ದಾಳಿ ಮಾಡಲು ಕಾರಣವೇನು? ಅವರು ಯಾವ ಉದ್ದೇಶಕ್ಕಾಗಿ ಬಂದಿದ್ದರು? ಎಂಬುದು ಗುಟ್ಟಾಗಿ ಉಳಿಯಿತು.

ಒಂದು ಮಾತಂತೂ ನಿರ್ಧರಿತವಾಗಿತ್ತು. ಅವರು ಯಾವದೋ ಒಂದು ವಸ್ತುವಿನ ಶೋಧನೆಗೆ ಬಂದಿದ್ದರಾದರೂ ಆ ವಸ್ತು ಅವರ ಕೈಗೆ ಕೊನೆಗೂ ದೊರೆಯಲಿಲ್ಲ. ಹಾಗಾದರೆ ಆ ವಸ್ತು ಯಾವದು? ಅದು ಏನಿರಬಹುದು? ಅದೊಂದು ಬಗೆಹರಿಯದ ಸಮಸ್ಯೆಯಾಗಿಯೇ ಉಳಿಯಿತು.

ತಮ್ಮ ಸಹಾಯಕ್ಕೆ ಬಂದ ಪೊಲೀಸ್ ಸಿಬ್ಬಂದಿಗೆ ಕೃತಜ್ಞತೆ ಸಲ್ಲಿಸಿ, ಉಪಹಾರ ನೀಡಿ ಬೀಳ್ಕೊಟ್ಟ ಹೇಮಂತ ನಂತರ ಆಸ್ಪತ್ರೆಗೆ ಹೋಗಿ ಸುಷಮಾ ಳನ್ನು ನೋಡಿಕೊಂಡು ಬರಲು ನಿಶ್ಚಯಿಸಿದ. ಇಬ್ಬರೂ ಸ್ನಾನ ಮಾಡಿ ಬಟ್ಟೆ ಧರಿಸಿ ಹೊರಬಂದರು. 'ರಾಧಾಕೃಷ್ಣ ಲಂಚ್ ಹೋಮ್'ನಲ್ಲಿ ತಾವು ತಿಂಡಿ ತಿಂದು ಕಾಫಿ ಕುಡಿದದ್ದಲ್ಲದೇ ಸುಷಮಾಳಿಗೂ ಸಹ ಅವಳ ಪ್ರೀತಿಯ ತಿಂಡಿ ಯನ್ನು ಕಟ್ಟಿಸಿಕೊಂಡು ಆಸ್ಪತ್ರೆ ಸೇರಿದರು.

ಸುಷಮಾ ಗೆಲುವಾಗಿದ್ದಳು. ವೈದ್ಯರು ಜಲಕ್ರಿಮಿಗಳ ಕಡಿತದಿಂದ ನಂಜಾಗಬಾರದೆಂದು ಇಂಜೆಕ್ಷನ್ ಮಾಡಿದ್ದರಲ್ಲದೆ ದೇಹದ ತುಂಬೆಲ್ಲ ಆ್ಯಂಟಿ

ಸೆಪ್ಟಿಕ್ ಕ್ರೀಮ್ ಸಹ ಲೇಪಿಸಿದ್ದರು. ಬೆಳಗಿನಿಂದ ಸಾಯಂಕಾಲದವರೆಗೂ ಆಕೆ ಸುಖಕರವಾದ ನಿದ್ದೆ ಮಾಡಿದ್ದಳು. ಇಂದು ಒಂದು ರಾತ್ರಿ ಕಳೆದು ಬೆಳಿಗ್ಗೆ ಮನೆಗೆ ಹೋಗಬಹುದೆಂದು ಆಸ್ಪತ್ರೆ ವೈದ್ಯರು ತಿಳಿಸಿದ್ದರು. ತನಗಾಗಿ ತಂದ ತಿಂಡಿಯನ್ನು ಅಚ್ಚುಕಟ್ಟಾಗಿ ತಿಂದು ಕಾಫಿ ಕುಡಿದು ಇಬ್ಬರ ಸಂಗಡವೂ ಒಂದು ಗಂಟೆ ಹರಟೆ ಹೊಡೆದಳು. ಇನ್ನೇನು ಹೇಮಂತ ಹೊರಡಬೇಕು ಅನ್ನುವಷ್ಟರಲ್ಲಿ ರೂಮಿನಲ್ಲಿದ್ದ ಟೆಲಿಫೋನ್ ಗಂಟೆ ಬಾರಿಸುತ್ತಲೂ ಹತ್ತಿರದಲ್ಲೇ ಇದ್ದ ಸುಷಮಾ ರಿಸೀವರ್ ಎತ್ತಿ ಆಲಿಸಿ ಹೇಮಂತನೆಡೆ ಚಾಚಿದಳು.

"ಪೊಲೀಸ್ ಕಂಟ್ರೋಲ್ ರೂಮಿನಿಂದ. ಅವರಿಗೆ ನೀವೇ ಬೇಕಂತೆ"

ಪೊಲೀಸ್ ಕಂಟ್ರೋಲ್ ರೂಮಿನಿಂದ ಬಂದ ಕರೆ. ಅಂಥ ಅರ್ಜಂಟ್ ವಿಷಯವೇನಿರಬಹುದು ಎಂದು ಯೋಚಿಸುತ್ತ ಮೇಜರ್ ರಿಸೀವರ್ ಇಸಿದುಕೊಂಡ. "ಹಲೋ ಮೇಜರ್ ಹೇಮಂತ ಅಟೆಂಡಿಂಗ್."

"ಸರ್ ನಾನು ಕಂಟ್ರೋಲ್ ರೂಮಿನಿಂದ ಆಪರೇಟರ್ ಮಾತಾಡ್ತಿದ್ದೇನೆ. ಎಸ್.ಪಿ. ಸಾಹೇಬರು ಮಾತಾಡಬೇಕಂತೆ ದಯವಿಟ್ಟು ಲೈನ್ ಮೇಲಿರಿ."

ರಾಮನಾಥ ಅವರು ಲೈನ್ ಮೇಲೆ ಬರಲು ಕೇವಲ ಅರ್ಧ ನಿಮಿಷ ಹಿಡಿಯಿತು ಅಷ್ಟೇ. "ಹೇಮಂತ ಮತ್ತೊಂದು ದುರ್ಘಟನೆ ನಡೆದಿದೆ. ಇದರಿಂದಾಗಿ ನಾನಂತೂ ದಿಗ್ಮೂಢನಾಗಿದ್ದೇನೆ."

"ಮತ್ತೊಂದು ದುರ್ಘಟನೆ ಎಲ್ಲಿ? ಯಾವಾಗ?"

"ಇದೀಗ ಒಂದು ಗಂಟೆ ಹಿಂದೆ. ಕುಮುದನ್ ಅವರ ಮನೆ ನುಗ್ಗಿದ ಅಪಹರಣಕಾರರು ಅವರನ್ನ ಅಪಹರಿಸಿದ್ದರಂತೆ. ಅವರ ಮಗಳು ಮಧು ಫೋನ್ ಮಾಡಿದ ಮೇಲೆ ನಾನು ಹೋಗಿ ಬಂದೆ. ನಿಮ್ಮನ್ನು ಸಂಪರ್ಕಿಸಲು ತುಂಬಾ ಒದ್ದಾಡಿದೆ. ಕೊನೆಗೆ ನೀವು ಆಸ್ಪತ್ರೆಯಲ್ಲಿ ಸಿಕ್ಕಿರಿ. ಸಾಧ್ಯವಾದರೆ ನೀವು ಮಧು ಅವರನ್ನು ಕಂಡರೆ ಒಳ್ಳೆಯದು."

"ಓಹ್ ಹೀಗೋ, ಸರಿ. ನೀವು ಹೇಳಿದಂತೆ ಆಗಲಿ."

"ಮತ್ತೆ ನಿಮ್ಮ ಭೇಟಿ"

"ನಾಳೆ ಬೆಳಿಗ್ಗೆ ನಾನೇ ಬರುತ್ತೇನೆ."

"ಸರಿ ಹಾಗಾದರೆ, ತೊಂದರೆ ಕೊಟ್ಟಿದ್ದಕ್ಕೆ ಕ್ಷಮಿಸಿ."

ಸಪಂರ್ಕಕಡಿದಾದ ಮೇಲೆ ಹೇಮಂತ ತುಸು ಗಂಭೀರನಾದ. ಅವನಿಂದ ವಿಷಯ ತಿಳಿದು ಸುಷಮಾ ಮತ್ತು ಅಶೋಕ ಸಹ ಆಲೋಚನೆಯಲ್ಲಿ ಮುಳುಗಿದರು. ಕೊನೆಗೆ ತಾನು ಬರುವವರೆಗೂ ಅಶೋಕನಿಗೆ ಸುಷಮಾ ಬಳಿ ಇರಲು ತಿಳಿಸಿ ಹೇಮಂತ ಮೇಲೆದ್ದ.

ರಾತ್ರಿ ಹತ್ತು ಹೊಡೆದಿದ್ದರೂ 'ಮಧುಸಂಚಯ'ದಲ್ಲಿ ದೀಪಗಳು ಆರಿರಲಿಲ್ಲ. ಮುಂದಿನ ಬಾಗಿಲು ಭದ್ರವಾಗಿ ಮುಚ್ಚಿರುವದರಿಂದ ಬಂದವರೆಲ್ಲ ಹೊರಟು ಹೋಗಿದ್ದಾರೆ ಎಂದುಕೊಂಡ ಮನದಲ್ಲಿ. ಗೇಟಿನ ಮುಂದೆ ಕಾರು ನಿಲ್ಲಿಸಿ ಗೇಟು ತೆರೆದು ನಂತರ ಕಾರನ್ನು ಒಳಗೆ ತಂದು, ಗೇಟು ಬಂದು ಮಾಡಿದ. ಅನಂತರ ಕಾರು ನೇರವಾಗಿ ಬಂದು ಬಂಗಲೆ ಮುಂದೆ ನಿಂತಿತು. ಇಷ್ಟೆಲ್ಲ ಆದರೂ ಹಿಂದೆ ತನ್ನ ಮೇಲೆರಗಲು ಬಂದ ನಾಯಿಗಳೆರಡೂ ಕಾಣದಾಗಲು ಅಚ್ಚರಿಪಟ್ಟ ಹೇಮಂತ ಅತ್ತಿತ್ತ ದೃಷ್ಟಿ ಹರಿಸಿದ. ಫಲ ದೊರೆತೇಬಿಟ್ಟಿತು. ಮಧ್ಯದ್ವಾರದ ಪಕ್ಕದಲ್ಲೇ ನಾಯಿಗಳಿಗೆಂದು ಕಟ್ಟಲಾದ ಚಿಕ್ಕ ಮನೆಯೆದುರು ತನ್ನತ್ತಲೇ ನೋಡುತ್ತ ನಾಲಿಗೆ ಹೊರಚಾಚಿ ತೇಕುತ್ತ ಮಲಗಿದ್ದ ಎರಡೂ ನಾಯಿಗಳು ಕಣ್ಣಿಗೆ ಬಿದ್ದುವು.

ಏಕೆ? ಹೀಗೇಕಾಯಿತು?.... ನಾಯಿಗಳೇಕೆ ಬರಲಿಲ್ಲ? ಆಕ್ರಮಣವೇಕೆ ಮಾಡಲಿಲ್ಲ?

ತಾನು ಪರಿಚಿತನೆಂದೆ? ಅಥವಾ ನಾನು ಬರಬಹುದೆಂಬ ಸಂಶಯದಿಂದ ಮಧು ಅವುಗಳಿಗೆ ತೆಪ್ಪಗಿರಲು ಸೂಚಿಸಿರುವಳೋ?

ಎರಡನೆಯ ಮಾತೇ ಹೇಮಂತನಿಗೆ ಸರಿ ಎನಿಸಿತು. ತಂದೆಯ ಅಪಹರಣದಿಂದಾಗಿ ಜರ್ಜರಿತಳಾದ ಅವಳನ್ನು ಸಮಾಧಾನ ಮಾಡಲು ಖಂಡಿತವಾಗಿ ಬಂದೇ ಬರುತ್ತಾನೆಂಬ ನಂಬಿಕೆಯಿಂದಲೇ ಆಕೆ ಬಂಗಲೆ ದೀಪ ಆರಿಸದೇ ತೊಂದರೆ ಕೊಡದಿರಲು ನಾಯಿಗಳಿಗೆ ಆದೇಶ ನೀಡಿರಬೇಕು. ಅವುಗಳ ಮುಂದೇ ಹಾಯ್ದು ಬಾಗಿಲಿಗೆ ಬಂದ. ಅವೆರಡು ಅವನತ್ತ ಶುಶ್ಕ ನೋಟ ಬೀರಿದವು. ಕರೆಗಂಟೆ ಬಾರಿಸಬೇಕು ಎಂದುಕೊಂಡ. ಅಷ್ಟರಲ್ಲಿ ಬಾಗಿಲು ಅರ್ಧ ತೆರೆದೇ ಇದೆ ಎನಿಸಿತು. ಒಳಗಡೆಯಿಂದ ಕೊಂಡಿ ಸಹ ಹಾಕಿರಲಿಲ್ಲ, ಗಂಟೆ ಬಾರಿಸುವದನ್ನು ಬಿಟ್ಟು ಬಾಗಿಲು ದೂಡಿದ. ತೆರೆಯಿತು. ಅದರೊಂದಿಗೆ ಎಲ್ಲೋ ದೂರ 'ಕುಹೂ ಕುಹೂ' ಎಂದು ಕೋಗಿಲೆ ಕೂಗಿದ್ದು ಕೇಳಿ ಬಂದಿತು. ರಾತ್ರಿಯಲ್ಲಿ ಕೋಗಿಲೆಯೇ? ಎಂದಾತ ಅಚ್ಚರಿಪಟ್ಟು ಒಳನಡೆದ. ಹಿಂದೆ ಏನೋ ಸಪ್ಪಳವಾದಂತಾಯಿತು. ಸರಕ್ಕನೆ ಹೊರಳಿ ಮುಗುಳು ನಗೆ ಬೀರಿದ. ಇಬ್ಬರೂ ದ್ವಾರಪಾಲಕರು ತಮ್ಮ ತಮ್ಮ ಕೆಲಸದ ಮೇಲೆ ಹಾಜರಾಗಿದ್ದರು. ಎಡಕ್ಕೊಬ್ಬ ಬಲಕೊಬ್ಬ ಯಮದೂತರಂತೆ ಕಾವಲು ಕುಳಿತರು.

ಕೆಳಗಡೆ ಹಾಲೆಲ್ಲ ಧ್ವಂಸವಾಗಿ ಹೋಗಿತ್ತು. ಹೇಮಂತನ ಕಣ್ಣೆದುರು ತನ್ನ ಮನೆಯ ಸ್ಥಿತಿ ಸುಳಿಯಿತು. ಅಲ್ಲಿಯೂ ಸಹ ಇದರಂತೆಯೇ ಆಗಿತ್ತು. ಇದರಿಂದಾಗಿ ತನ್ನ ಮನೆ ಪ್ರವೇಶಿಸಿದವರೇ ಇಲ್ಲಿ ಬಂದು ಧ್ವಂಸ ಮಾಡಿ

ಕುಮುದನ್ ಅವರನ್ನು ಅಪಹರಿಸಿಕೊಂಡು ಹೋಗಿದ್ದಾರೆ ಎಂಬುದು ಮೇಲ್ನೋ-ಟಕ್ಕೆ ಸಾಬೀತಾದಂತಾಯಿತು.

ಮನೆಯಲ್ಲಿ ಯಾರೂ ಕಾಣಲಿಲ್ಲ.

ಆತ ಮಹಡಿಯ ಮೆಟ್ಟಿಲು ತುಳಿಯತೊಡಗಿದ.

ರೇಶಿಮೆ ಪರದೆ ಇಳಿಬಿಟ್ಟ ಸುಂದರ ಮಧುವಿನ ಬೆಡ್‌ರೂಮ್ ಬಾಗಿಲಿಗೆ ಬಂದು ನಿಂತು ದೃಷ್ಟಿ ತೂರಿದ. ಅಯ್ಯೋ ಪಾಪ ಎನಿಸಿತು. ಮಂಚದ ಮೇಲೆ ಅನಾಥಳಂತೆ ಬಿದ್ದುಕೊಂಡಿದ್ದಳು ಮಧು. ಬಿಳಿ ಬಣ್ಣದ ಮಿನಿಸ್ಕರ್ಟ್ ಮೇಲೆ ಸ್ಲೀವ್‌ಲೆಸ್ ಬ್ಲೌಜ್, ಸೊಂಟಕ್ಕೆ ಬಂಗಾರ ವರ್ಣದ ನಾಲ್ಕು ಬೆರಳಿನಷ್ಟು ಅಗಲ ವಾದ ಪಟ್ಟಿ. ಕಾಲಲ್ಲಿಯ ಬಿಳಿ ಬಣ್ಣದ ಸ್ಯಾಂಡಲ್‌ಗಳು ಮಂಚದ ಕೆಳಗೆ ಬಿದ್ದಿದ್ದವು.

"ಮಧು...." ಮೃದುವಾಗಿ ಕರೆ ನೀಡಿದ.

ಮಲಗಿದ್ದಲ್ಲಿಂದಲೇ ತಲೆ ಎತ್ತಿ ಹೇಮಂತನೆಡೆ ನೋಡಿದಳು. ಅವನಿಗೆ ಆಘಾತವಾದಂತಾಯಿತು. ಒಂದು ಕ್ಷಣ ಮಂಚದ ಮೇಲಿದ್ದವಳು ಮಧು ಹೌದೋ ಅಲ್ಲವೋ ಎಂಬ ಸಂಶಯ ತಟಕ್ಕನೆ ಮೂಡಿ ಮಾಯವಾಯಿತು. ತಂದೆಯ ಅಪಹರಣ ಅವಳ ಮೇಲೆ ಅಷ್ಟು ಆಳವಾದ ಪರಿಣಾಮ ಮಾಡಿತ್ತು. ಆಕೆ ಪೂರ್ತಿ ಹತಾಶಳಾಗಿ ಧರೆಗಿಳಿದು ಹೋಗಿದ್ದಳು. ಸುಂದರವಾದ ಕಪ್ಪು ಕಣ್ಣು ಗಳು ಕಾಂತಿಯನ್ನು ಕಳೆದುಕೊಂಡು ಒಣಗಿಹೋಗಿದ್ದವು. ಅವಳಿಗೆ ಧೈರ್ಯ ನೀಡುವ ಅದರ ಮೂಲಕ ಸಾಂತ್ವನಗೊಳಿಸುವ ಹತ್ತಿರದ ವ್ಯಕ್ತಿ ಬೇಕಾಗಿತ್ತು. ಅವಳ ದುಃಖತಪ್ತ ಹೃದಯಕ್ಕೆ ಶಾಂತಿ ಲಭಿಸಬೇಕಾಗಿತ್ತು. ಅವಳ ದುಃಖ ಆಲಿಸಲು ತಾಯಿಯಾಗಲಿ, ಅಣ್ಣ ತಮ್ಮಂದಿರಾಗಲೀ, ಅಕ್ಕತಂಗಿಯರಾಗಲೀ ಅದು ಹೋಗಲಿ, ದೂರದ ಸಂಬಧಿಕರೂ ಸಹ ಹತ್ತಿರದಲ್ಲಿರದಿರುವದೊಂದು ದೊಡ್ಡ ಕೊರತೆಯಾಗಿತ್ತು.

ಏನೇ ಆಗಲಿ ಅವಳಿಗೆ ಸಂಪೂರ್ಣ ಧೈರ್ಯ ನೀಡಬೇಕು. ಅವಳ ಜೀವನ ಕ್ಕೊಂದು ಹೊಸ ದಿಶೆ ತೋರಿಸಬೇಕು. ಅವಳ ಮನದಲ್ಲಿ ಧೈರ್ಯ ಒಡ ಮೂಡಿಸಬೇಕು ಎಂದಾತ ನಿರ್ಧರಿಸಿಕೊಂಡು ಮಂಚದತ್ತ ನಡೆದ. ಆತ ಹತ್ತಿರ ವಾಗುತ್ತಿದ್ದಂತೆ ಆಕೆ ಹಾಸಿಗೆ ಮೇಲೆ ಎದ್ದು ಕುಳಿತಳು. ಅವಳ ಪಕ್ಕದಲ್ಲೇ ಕುಳಿತುಕೊಂಡ ಹೇಮಂತ.

"ಮಧು... ಸದ್ಯದ ಪರಿಸ್ಥಿತಿಯಲ್ಲಿ ನಿನಗೆ ನೀನೇ ಧೈರ್ಯ ಹೇಳಿಕೊಳ್ಳ ಬೇಕು."

ಆಕೆ ಅವನತ್ತ ನೋಡಿದಳು. ಕಣ್ಣಲ್ಲಿ ಜೀವಂತಿಕೆಯೇ ಇರಲಿಲ್ಲ.

ಪ್ಲಾಸ್ಟಿಕ್ ಗೋಲಿಗಳಂತೆ ಗೋಚರಿಸಿದವು. ಅಷ್ಟು ನಿರ್ಜೀವವಾಗಿದ್ದವು. ಎಷ್ಟೋ ಹೊತ್ತಿನ ನಂತರ ಅವಳ ತುಟಿಗಳು ಅಲುಗಿದವು.

"ನಾನೇನು ಮಾಡಲಿ? ನನಗೊಂದೂ ತಿಳಿಯದಂತಾಗಿದೆ"

ಚಿಕ್ಕಮಗುವಿನಂತೆ ಆಕೆ ಕೇಳಿದಳು. ಅವಳ ಬುದ್ಧಿಗೇ ಮಂಕು ಬಡಿದಿತ್ತು.

"ಏನೂ ಮಾಡಬೇಡ. ಎಲ್ಲಾ ದೇವರ ಮೇಲೆ ಭಾರಹಾಕು. ಸರಿ ಹೋಗುತ್ತದೆ."

ಹೇಮಂತ ಅವಳ ಬೆನ್ನ ಮೇಲೆ ಮೆಲುವಾಗಿ ಕೈಯಾಡಿಸಿದ. ಅವಳ ದೇಹ ಕಂಪಿಸಲಿಲ್ಲ ಸಹ. ಹೇಮಂತನೇ ಕೆದರಿ ಕೇಳಿದ.

"ಮಧು ಏನಾಯ್ತು? ಹೇಗಾಯ್ತು?"

ಒಮ್ಮಿಂದೊಮ್ಮೆಲೆ ಮೂಕಳಾದಳು ಮಧು. ಅರಳು ಹುರಿದಂತೆ ಮಾತನಾಡುವ ಅವಳಿಗೆ ಆಕಸ್ಮಿಕವಾಗಿ ನಡೆದ ಘಟನೆಯಿಂದಾಗಿ ಬಾಯಿಯೇ ಹೋದಂತಾಗಿತ್ತು. ಪ್ರಯಾಸಪಟ್ಟು ಆಕೆ ಒಂದೊಂದೇ ಮಾತು ನೆನಪು ಮಾಡಿಕೊಂಡವರಂತೆ ನುಡಿದಳು.

"ನನಗೊಂದೂ ಗೊತ್ತಾಗಲಿಲ್ಲ. ಅವರು ಒಳನುಗ್ಗಿ ಬಂದರು. ನನ್ನನ್ನು ಹೆದರಿಸಿದರು. ತಂದೆ ಎಲ್ಲಿ ಎಂದು ಕೇಳಿದರು. ಅವರು ಊರಲ್ಲಿಲ್ಲ ಎಂದೆ. ನನ್ನನ್ನ ಎಳೆದು ಕೋಣೆಯೊಳಗೆ ತಳ್ಳಿ ಬಾಗಿಲು ಮುಚ್ಚಿಕೊಂಡರು. ನನ್ನ ಕೋಣೆಯಲ್ಲೇ ಫೋನಿತ್ತು. ನಾನು ಪೊಲೀಸ್ ಸ್ಟೇಶನ್ನಿಗೆ ಫೋನ್ ಮಾಡಿದೆ. ಅವರು ಬರುವಷ್ಟರಲ್ಲಿ ನನ್ನ ತಂದೆಯವರೊಂದಿಗೆ ಅವರು ಪರಾರಿಯಾಗಿದ್ದರು.

"ಅಂದಹಾಗೆ ನಿಮ್ಮ ತಂದೆಯವರು ಊರಲ್ಲೇ ಇರಲಿಲ್ಲ ಎಂದೆಯಲ್ಲ?"

ಆಕೆ ಮತ್ತೆ ಮೌನ ತಾಳಿದಳು. ಒಂದು ನಿಮಿಷ ಬಿಟ್ಟು ನುಡಿದಳು.

"ನಾನವರಿಗೆ ಸುಳ್ಳು ಹೇಳಿ ಹೊರಡಿಸಲು. ಆ ರೀತಿ ತಿಳಿಸಿದ್ದೇ ಆದರೆ ನಿಜ ಹೇಳಬೇಕೆಂದರೆ ನನ್ನ ತಂದೆಯವರು ಒಳಗೆ ತಮ್ಮ ಕೋಣೆಯಲ್ಲಿ ಅಂದರೆ ಕೆಳಗಡೆ ಭೂಗರ್ಭದಲ್ಲಿರುವ ಪ್ರಯೋಗ ಶಾಲೆಯಲ್ಲಿ ಪ್ರಯೋಗ ಮಾಡುತ್ತಿದ್ದರು."

ಹೇಮಂತ ಮಂದಹಾಸ ಸೂಸಿದ. ಆ ಮಂದಹಾಸದ ಹಿಂದಿರುವ ರಹಸ್ಯ ಮಾತ್ರ ಯಾರಿಗೂ ಅರ್ಥವಾಗುವಂತಿರಲಿಲ್ಲ.

"ಮಧು ಆದದ್ದು ಆಗಿಹೋಯಿತು. ಚಿಂತಿಸಿ ಫಲವಿಲ್ಲ. ಊಟ ಮಾಡಿರುವೆಯಾ?"

ಆಕೆ ಅವರತ್ತ ನೋಡಿದಳು. ಕೂಡಲೇ ಮಾತನಾಡಲಿಲ್ಲ. ಕೆಲ ಸಮಯ

ಬಿಟ್ಟು ನುಡಿದಳು.

"ಇಲ್ಲ ನನಗೆ ಯಾವುದಕ್ಕೂ ಮನಸ್ಸಿಲ್ಲ."

"ಹಾಗೆನ್ನಬಾರದು.... ಏಳು... ಸ್ವಲ್ಪ ಆಮ್ಲೆಟ್ ಆದರೂ ಮಾಡು. ಇಬ್ಬರೂ ಕೂಡಿ ತಿನ್ನೋಣ"

"ನನಗೆ ಆಮ್ಲೆಟ್ ಮಾಡಲು ಬರುವದಿಲ್ಲ." ರೆಪ್ಪೆ ಬಡಿಯುತ್ತ ಆಕೆ ಹೇಳಿದಳು.

"ಕಳ್ಳಿ, ನನ್ನ ಮುಂದೇ ಬುರುಡೆ ಬಿಡುತ್ತೀಯಾ. ನಿನ್ನೆ ತಾನೇ ಮಾಡಿ ತಿನ್ನಿಸಿರುವಿ"

ಆಕೆ ಮತ್ತೆ ಮೌನ ತಾಳಿದಳು.

"ಮೇಜರ್ ನಾನು ನನ್ನ ತಂದೆಯನ್ನ ತುಂಬಾ ಪ್ರೀತಿಸಿದ್ದೆ. ಹೀಗಾಗಿ ನಾನೆಲ್ಲವನ್ನು ಮರೀತಾ ಇದ್ದೇನೆ. ಆಮ್ಲೆಟ್ ಮಾಡಲು ಮೊಟ್ಟೆಯಾದರೂ ಬೇಡವೇ? ಅದೂ ಇಲ್ಲ"

"ಹೋಗಲಿ ಬಿಡು. ಒಂದು ಕೆಲಸ ಮಾಡೋಣ. ತಿಂಡಿ ಬೇಡ. ಕೇವಲ ಕಾಫಿ ಆದರೆ ಸಾಕು. ನೀನು ದಣಿದಿರುವೆ. ನೀನಿಲ್ಲೇ ಇರು. ನಾನು ಕಾಫಿ ಮಾಡಿ ತರುವೆ."

ಹೇಮಂತ ಅಡುಗೆ ಮನೆಗೆ ಬಂದ. ಗ್ಯಾಸ್ ಹೊತ್ತಿಸಿ ನೀರಿಟ್ಟ. ಅದು ಕುದಿಯುತ್ತಿದ್ದಂತೆ ಸಕ್ಕರೆ ಹಾಕಿ ಚೆನ್ನಾಗಿ ಕರಗಲು ಬಿಟ್ಟ. ಅಷ್ಟರಲ್ಲಿ ಇನ್ನೊಂದು ಕಡೆಗಿಟ್ಟ ಹಾಲು ಕಾಯ್ದಿತ್ತು. ಎರಡನ್ನೂ ಬೆರೆಸಿ ರಸಾಯನ ಸಿದ್ಧ ಪಡಿಸಿದ. ಎರಡು ಕಪ್ಪುಗಳಿಗೆ ಸೀಸೆಯಲ್ಲಿದ್ದ ಕಾಫಿ ಪುಡಿ ಚೆಲ್ಲಿ ಮೇಲೆ ರಸಾಯನ ಸುರಿದು ಚಮಚದಿಂದ ಕಲಕಿದ. ಘಮ ಘಮ ವಾಸನೆ ಬೀರುತ್ತಿರುವ ಕಾಫಿ ಸಿದ್ಧವಾಯಿತು.

ಟ್ರೇದಲ್ಲಿ ಕಾಫಿ ಕಪ್ಪು ಇರಿಸುತ್ತಿದ್ದಂತೆ ರ್‍ಯಾಕ್‌ದಲ್ಲಿದ್ದ ಹತ್ತು ಮೊಟ್ಟೆಗಳು ಅವನ ದೃಷ್ಟಿ ಸೆಳೆದವು. ಮೊಟ್ಟೆ ಇಲ್ಲ ಎಂದು ಹೇಳಿದ ಮಧುಳ ಮಾತು ನೆನಪಾಯಿತು, ನಗುತ್ತ ಮಹಡಿ ಏರಿ ಮಧು ಬಳಿ ಬಂದು ಕಾಫಿ ಕಪ್ಪು ಅವಳ ಮುಂದಿಟ್ಟ.

"ಮಧು ನಿಜವಾಗಿಯೂ ನಿನಗೆ ಕುಮುದನ್‌ರ ಅಪಹರಣದಿಂದಾಗಿ ಆಘಾತವಾದಂತಾಗಿದೆ. ನೀನು ನಿನ್ನ ಮನೆಯಲ್ಲಿರುವ ವಸ್ತುಗಳನ್ನೇ ಮರೆಯುತ್ತಿರುವೆ. ಅಡುಗೆ ಮನೆಯಲ್ಲಿ ಹತ್ತು ತತ್ತಿಗಳಿವೆ. ಆದರೂ ತತ್ತಿಗಳೇ ಇಲ್ಲ ಎಂದಿ. ಇದೇ ರೀತಿ ಆದರೆ ಹುಚ್ಚೇ ಹಿಡಿಯುತ್ತದೆ. ನೀನು ಒಂದು ಕೆಲಸ ಮಾಡು. ಕೆಲದಿನಗಳ ಮಟ್ಟಿಗೆ ಯಾವುದಾದರೂ ಊರಿಗೆ ಹೋಗಿ ಬಾ."

"ನನಗಾರಿದ್ದಾರೆ ಅಂತ ನಾನು ಬೇರೆ ಊರಿಗೆ ಹೋಗಬೇಕು. ನನಗೆ ಸಂಬಂಧಿಗಳಾರೂ ಇಲ್ಲ."

ಖಾಲಿ ಕಾಫಿ ಕಪ್ಪನ್ನು ಟಿಪಾಯ್ ಮೇಲಿರಿಸಿ ಹಾಸಿಗೆಯ ಮೇಲೆ ಉರುಳುತ್ತ ಆಕೆ ಹೇಳಿದಳು.

"ಹಾಗಾದರೆ ನನ್ನ ಜೊತೆಗೆ ಬಾ. ನನ್ನ ಗೆಸ್ಟ್‌ರೂಮಿನಲ್ಲಿ ಹಾಯಾಗಿರುವೆಯಂತೆ.

ಮಧುಳ ಸುಂದರ ಮುಖದ ಮೇಲೆ ಮಂದಹಾಸ ಮೂಡಿತು. ಅದರಲ್ಲಿ ಜೀವಕಳೆ ಇಲ್ಲ ಎಂದು ಹೇಮಂತನಿಗೆ ತಿಳಿಯಲು ಹೆಚ್ಚು ಸಮಯ ಬೇಕಾಗಲಿಲ್ಲ.

"ಮೇಜರ್ ನಾನೇಕೆ ಅಲ್ಲಿಗೆ ಬರಬೇಕು? ನೀನೇ ನನ್ನ ಬಳಿ ಇದ್ದರಾಯಿತಲ್ಲ?"

ಹಾಸಿಗೆಯಲ್ಲಿ ಮಿಡುಕಿದ ಮಧು ಎರಡು ಮೂರು ಬಾರಿ ಮೈ ಮುರಿದಾಗ ಅವಳ ಮಿನಿಸ್ಕರ್ಟ್ ಮೇಲೇರಿತು. ಸ್ಲೀವ್‌ಲೆಸ್ ಬ್ಲೌಜಿನ ಗುಂಡಿಗಳು ಕಳಚಿದವು. ಹೇಮಂತನ ಕಣ್ಣಿಗೆ ಮಿಂಚು ಹೊಡೆದಂತೆ ಅವಳ ಸೌಂದರ್ಯ ಹೊರಸೂಸತೊಡಗಿತು. ಇನ್ನು ಅಲ್ಲಿದ್ದರೆ ಮತ್ತೆ.... ಯೋಚಿಸಿದ ಹೇಮಂತ ಮೇಲೆದ್ದ.

"ಮಧು ನಾನಿನ್ನು ಬರತೇನೆ, ಬೆಳಿಗ್ಗೆ ಭೆಟ್ಟಿ"

"ನೋ.... ನೋ ಮೇಜರ್ ಇಷ್ಟು ರಾತ್ರಿ ನನ್ನೊಬ್ಬಳನ್ನೇ ಬಿಟ್ಟು ಹೋಗುವದೆ? ನನಗೆ ಹೆದರಿಕೆ ಆಗುತ್ತದೆ. ನೀವೂ ಇಲ್ಲೇ ಇರಿ ನನ್ನ ಬಳಿ'. ಆಕೆ ಒತ್ತಾಯಿಸಿದಳು.

"ಪ್ಲೀಜ್ ಮಧು ನನ್ನನ್ನು ಒತ್ತಾಯಿಸಬೇಡ. ಇಲ್ಲಿದ್ದರೆ ಮತ್ತೆ ಅದೇ ಆಗುತ್ತದೆ."

"ಮತ್ತೆ ಅದೇ ಅಂದರೆ ಏನಾಗುತ್ತದೆ."

"ನಿನ್ನೆ ಆದದ್ದು."

"ನಿನ್ನೆ ಏನಾಯ್ತು?"

"ಏಕೆ ಮರೆತೇ ಹೋಯ್ತೇನು?"

ಮಧುವಿನ ಹುಬ್ಬುಗಳು ಗಂಟಿಕ್ಕಿದವು. ಅವಳು ಆಳವಾಗಿ ಯೋಚಿಸತೊಡಗಿದಳು.

"ಇನ್ನೂ ನೆನಪಾಗಲಿಲ್ಲವೆ?.... ನಾನು ನಿನ್ನ ಸೌಂದರ್ಯಕ್ಕೆ ಸೋತು ನಿನ್ನೊಡನೆ ಬೆರೆತೆ, ಸುಷಮಾಳಿಗೆ ಮೋಸ ಮಾಡಿದೆ."

"ಓಹ್ ಅದಾ?...." ಮಧು ಒಮ್ಮೆಲೆ ನಕ್ಕು ನುಡಿದಳು. "ಅದೇನೂ

ಅಂಥ ಸೀರಿಯಸ್ ವಿಷಯವಲ್ಲ ಮೇಜರ್. ಬೇಕೆಂದರೆ ನೀವು ಇಂದೂ ಸಹ..."

ಆಕೆ ಮಾತು ನಿಲ್ಲಿಸಿ ಮುಕ್ತವಾಗಿ ಆಹ್ವಾನ ನೀಡಿದಳು.

ಹೇಮಂತನಿಗೆ ಅವಳ ಮಾತು ಹಿಡಿಸಲಿಲ್ಲ.

"ಸಾರಿ... ಬೇಕೆಂದರೆ ನಿನ್ನ ರಕ್ಷಣೆಗೆ ಪೊಲೀಸ್ ಬಂದೋಬಸ್ತ್ ಮಾಡಿಸುತ್ತೇನೆ."

ಫೋನ್ ಬಳಿ ಬರುತ್ತಿದ್ದಂತೆ ಮಧು ಅವನನ್ನು ತಬ್ಬಿಕೊಂಡು ಹಾಸಿಗೆಗೆ ಒಯ್ದೇಬಿಟ್ಟಳು.

"ನನಗೆ ಪೊಲೀಸರ ಸಹಾಯ ಬೇಕಾಗಿಲ್ಲ ಹೇಮಂತ. ನನಗೆ ನೀನು ಬೇಕು. ಒಂದು ವೇಳೆ ನನ್ನ ಬೆಂದ ಮನಸ್ಸಿಗೆ ಸಮಾಧಾನ ನೀಡಬೇಕೆಂಬ ಆಶೆ ಇದ್ದರೆ ನನ್ನ ಮಾತು ಕೇಳಿ. ಇಲ್ಲಾ ನನ್ನನ್ನ ನನ್ನ ದಾರಿಗೆ ಬಿಟ್ಟುಬಿಡಿ. ನಾನು ಇದ್ದರೇನು ಸತ್ತರೇನು?"

ಅವಳ ಕಪಟ ಮುನಿಸು ಕೆಲಸ ಮಾಡಿತು. ಹೇಮಂತ ಅವಳತ್ತ ಆಕರ್ಷಿತನಾದ. ಮಧು ಅವನ ಬಾಹುಬಂಧಿಯಾದಳು. ಎರಡೇ ನಿಮಿಷಗಳಲ್ಲಿ ಅವಳ ಮೈಮೇಲಿನ ಬಟ್ಟೆಗಳು ಮಂಚದಡಿ ಕಂಡಿದ್ದವು. ಅವಳ ತುಟಿ ಚುಂಬಿಸಿದ ಹೇಮಂತ.

ಸಪ್ಪೆ ಸಪ್ಪೆ ಎನಿಸಿತು. ಬಿಸಿಬಿಸಿಯಾದ ರಸಭರಿತ ತುಟಿಗಳು ತಂದೆಯ ಅಪಹರಣದಿಂದಾಗಿ ನಿರ್ಜೀವವಾಗಿದ್ದವು. ದೃಷ್ಟಿ ತುಟಿಗಳಿಂದ ಕೆಳಗೆ ಹರಿಯಿತು. ಬಲಕುಚದ ಮೇಲೆ, ಸ್ವಲ್ಪ ಕುತ್ತಿಗೆ ಕೆಳಗಿದ್ದ ಹಸಿರು ಮಚ್ಚೆ. ಅದರ ಮೇಲೆ ಬೆರಳಾಡಿಸಿದ ಹೇಮಂತ. ಆಕೆ ಕಸಿವಿಸಿಪಟ್ಟಳು. ಹೇಮಂತನಿಗೆ ಖುಶಿ ಎನಿಸಿತು. ಮತ್ತೆ ಅದರ ಮೇಲೆ ಬೆರಳಾಡಿಸಿದ ಈ ಬಾರಿ ತುಸು ಒತ್ತುತ್ತ ಆಕೆ ಚೀರಿಕೊಂಡಳು.

"ಏಕೆ? ನನ್ನ ಕೊಲ್ಲಬೇಕು ಅಂತ ಮಾಡಿರುವಿರೇನು?"

"ನಾನೇನು ಮಾಡಿದೆ? ಮಚ್ಚೆಯ ಮೇಲೆ ಬೆರಳಾಡಿಸಿದೆ ಅಷ್ಟೆ."

"ಅಲ್ಲೇ ನನ್ನ ಜೀವವಿರುವದು. ಆ ಮಚ್ಚೆ ಮುಟ್ಟಿದರೆ ನಾನು ನನ್ನ ಮರೆಯುತ್ತೇನೆ ತಿಳೀತಾ."

"ಓಹ್ ಹೀಗಾ? ನನಗೆ ಗೊತ್ತೇ ಇರಲಿಲ್ಲ. ನಿನ್ನನ್ನು ಸುಲಭವಾಗಿ ಕೊಲ್ಲಲು ದಾರಿ ಸಿಕ್ಕಂತಾಯ್ತು."

ಹೇಮಂತ ತುಂಟತನದ ನಗೆ ಬೀರುತ್ತಾ ಆ ಹಸಿರು ಮಚ್ಚೆ ಮೇಲೆ ತುಟಿಗಳನ್ನಿರಿಸಿದ. ಆಕೆ ಅವನ ತಲೆಯನ್ನು ತನ್ನೆದೆಗೆ ಒತ್ತಿಕೊಂಡಳು. ಮುಂದೆ ಅವನಿಗೆ ಮಾತನಾಡಲು ಅವಕಾಶವೇ ದೊರೆಯಲಿಲ್ಲ. ಸಂಪೂರ್ಣವಾಗಿ

ಹೇಮಂತನಿಗೆ ತನ್ನ ತಾನೇ ಒಪ್ಪಿಸಿಕೊಂಡು ತಾನೊಂದು ನಿರ್ಜೀವ ಬೊಂಬೆ ಎಂಬುದನ್ನು ಆತನಿಗೆ ಸ್ಪಷ್ಟಪಡಿಸಿದಳು. ಅವಳ ಈ ಸಮರ್ಪಣ ಭಾವನೆಗೆ ಹೇಮಂತ ಪುಲಕಿತಗೊಂಡ.

"ವಕ್.... ವಯಿಕ್"

ವಿಚಿತ್ರ ಶಬ್ದಕ್ಕೆ ಎಚ್ಚರವಾಯಿತು ಹೇಮಂತನಿಗೆ. ಕಣ್ತೆರೆದ. ಪಕ್ಕದಲ್ಲಿ ಮಧು ಇರಲಿಲ್ಲ. ಬಾತ್‌ರೂಮಿನಿಂದಲೇ ಆ ಸಪ್ಪಳ ಬರುತ್ತಿತ್ತು. ಮೇಲೆದ್ದು ಸಮಯ ನೋಡಿದ; ಎರಡೂವರೆ. ಸ್ಲಿಪರ್ ಧರಿಸುತ್ತಿದ್ದಂತೆ ಮುಖ ಬಾಯಿ ಒರೆಸಿಕೊಳ್ಳುತ್ತ ಮಧು ಬಾತ್‌ರೂಮಿನಿಂದ ಹೊರಬಂದಳು.

"ಏಕೆ ಏನಾಯ್ತು?"

ಆಕೆ ಒಮ್ಮೆಲೆ ಮಾತನಾಡಲಿಲ್ಲ. ತುಂಬಾ ದಣಿದಿದ್ದಳು. ಸುಧಾರಿಸಿಕೊಂಡು ನುಡಿದಳು.

"ತಲೆಸುತ್ತಿ ಬಂತು. ಹೊಟ್ಟೆಯಲ್ಲಿ ಸಂಕಟ ಬೇರೆ"

"ಪೂರ್ತಿ ದಿನ ಉಪವಾಸವಿದ್ದದ್ದೇ ಅದಕ್ಕೆ ಕಾರಣ. ಸ್ವಲ್ಪಾದರೂ ಆಹಾರ ಬೇಡವೆ?"

ಹೇಮಂತ ಗದರುತ್ತ ಬಾತ್‌ರೂಮಿಗೆ ಹೋಗಿಬಂದ. ಮಧುವಿನ ಹೊಟ್ಟೆಯಲ್ಲಿದ್ದ ಕಾಫಿ ಮತ್ತು ಬೇರೆ ಏನೇನೋ ಹೊರಬಂದು ವಾಶ್‌ಬೇಸನ್‌ನಲ್ಲಿ ತೇಲಾಡುತ್ತಿದ್ದವು.

ಭಾತ್‌ರೂಮಿನಿಂದ ಬಂದವನೇ ಬಟ್ಟೆ ತೊಡಲಾರಂಭಿಸಿದ ಹೇಮಂತ.

"ಇದೇನು ಹೊರಟೇಬಿಟ್ಟಿರಿ."

"ಹೌದು ಮಧು ಸಮಯ ಬಹಳವಾಗಿದೆ. ಸುಷಮಾಗೆ ಹೇಳಬಂದಿಲ್ಲ."

ಒಮ್ಮೆಲೆ ಮಧು ಮೌನ ತಾಳಿದಳು. ಅವಳಿಗೆ ಕೋಪ ಬಂದಿತು. ಒಂದು ಹೆಣ್ಣಿನ ಮುಂದೆ ಮತ್ತೊಂದು ಹೆಣ್ಣಿನ ಹೆಸರು ತೆಗೆದರೆ ಕೋಪ ಬರಲಾರದೆ? ಹಾಸಿಗೆ ಮೇಲೇ ಇದ್ದ ಅವಳಿಗೊಂದು ಚುಂಬನ ನೀಡಿ ಆತ ಹೊರಬಂದ.

ಬಾಗಿಲಿಗೆ ಕುಳಿತಿದ್ದ ದ್ವಾರಪಾಲಕರು ಅವನತ್ತ ಕಣ್ಣೆತ್ತಿ ಸಹ ನೋಡಲಿಲ್ಲ. ಹೇಮಂತ 'ವಿಷಲ್' ಮಾಡಿದರೂ ಅವುಗಳ ಮೇಲೆ ಪರಿಣಾಮ ಬೀರಲಿಲ್ಲ. ಅವು ಪೂರ್ತಿಯಾಗಿ ಮಧುವಿನ ವಶೀಕರಣದಲ್ಲಿದ್ದವು.

ಮುಗುಳು ನಗೆ ನಗುತ್ತ ಹೇಮಂತ ಕಾರಿನ ಬಾಗಿಲು ತೆರೆದ.

ಮೂರು ಗಂಟೆಗೆ ಆತ ಆಸ್ಪತ್ರೆಗೆ ಬಂದ.

ಸುಷಮಾ ಕಾಟಿನ ಮೇಲೆ ಸುಖಕರವಾಗಿ ನಿದ್ರಿಸುತ್ತಿದ್ದರೆ ಅಶೋಕ

ತಾನು ಕುಳಿತ ಕುರ್ಚಿಯಲ್ಲೇ ಒರಗಿದ್ದ. ಮೆಲ್ಲನೆ ತಟ್ಟಿ ಅವನನ್ನು ಎಬ್ಬಿಸಿದ ಮೇಜರ್. ಇಬ್ಬರೂ ಹೊರಬಂದರು.

ಮುಂದಿನ ಕ್ಷಣ ಹೇಮಂತನ ಕಾರು ಅವರ ಬಂಗಲೆಯತ್ತ ಓಡುತ್ತಿತ್ತು. ಮನೆಯೊಳಗೆ ಪ್ರವೇಶಿಸಿದಾಗ ಟೆಲಿಫೋನ್ ಗಂಟೆ ಒಂದೇ ಸವನೆ ಬಾರಿಸುತ್ತಿದ್ದುದು ಕೇಳಿದ ಹೇಮಂತ ರಿಸೀವರ್ ಎತ್ತಿ "ಮೇಜರ್ ಹೇಮಂತ ಸ್ಪೀಕಿಂಗ್" ಎಂದ.

## ೧೨

ರಾತ್ರಿ ಎರಡು ಗಂಟೆಯಾದರೂ ಎಸ್. ಪಿ. ಸಾಹೇಬರಿಗೆ ನಿದ್ದೆಯೇ ಹತ್ತಿರಲಿಲ್ಲ. ಮದುವೆಯಾದ ಮೂರು ವರ್ಷಗಳ ಮೇಲೆ ಅವರ ಪತ್ನಿ ಪ್ರಥಮ ಬಾರಿ ಅವರನ್ನು ಬಿಟ್ಟು ತವರುಮನೆಗೆ ಹೋಗಿದ್ದಳು. ಪತ್ನಿಯನ್ನು ತುಂಬಾ ಪ್ರೀತಿಸುತ್ತಿದ್ದ ರಾಮನಾಥ ಅವರು ಅವಳ ನೆನಪಲ್ಲೇ ತಿರುಗುತ್ತಿದ್ದ ಫ್ಯಾನ್ ನೋಡುತ್ತ ಅಂಗಾತಾಗಿ ಮಲಗಿದ್ದರು ಮಂಚದ ಮೇಲೆ. ಸಮಯ ಸರಿಯುತ್ತ ಹೋಯಿತು. ಹತ್ತು-ಹನ್ನೊಂದು-ಹನ್ನೆರಡು. ಮೇಲೆ ಫ್ಯಾನ್ ತಿರುಗುತ್ತಲೇ ಇತ್ತು ಗರ್ರ ಗರ್ರ ಗರ್. ರಾಮನಾಥ ಅವರು ಹಾಗೇ ರೆಪ್ಪೆ ಬಡಿಯುತ್ತ ಮಲಗೇ ಇದ್ದರು ಮಂಚದ ಮೇಲೆ.

ಸಮಯ ಸರಿಯಿತು.

ಹನ್ನೆರಡು.... ಒಂದು.... ಒಂದೂವರೆ.... ಎರಡು.

ಎರಡು ಹೊಡೆದರೂ ನಿದ್ದೆ ಹತ್ತಿರ ಸುಳಿಯಲಿಲ್ಲ.

ಮತ್ತೈದು ನಿಮಿಷಗಳು ಕಳೆದವು.

ಹೊರಗಡೆ ಗೇಟಿನ ಬಳಿ ಏನೋ ಗದ್ದಲವಾದಂತೆ ಕೇಳಿಸಿತು. ವಾಚಮನ್ ಏರು ದನಿಯಲ್ಲಿ ಕೂಗಿ ಕೇಳಿದ. "ಯಾರು? ಯಾರು ನೀನು?" ಉತ್ತರ ಬರಲಿಲ್ಲ. ಅದರ ಬದಲು ಯಾರೋ ಚೀರಿಕೊಂಡು ನೆಲದ ಮೇಲೆ ಧಪ್ ಎಂದು ಬಿದ್ದ ಸದ್ದು. ರಾಮನಾಥ ಎದ್ದು ಕುಳಿತರು ನೈಟ್‌ಗೌನ್ ಸರಿಪಡಿಸಿಕೊಂಡರು. ತಮ್ಮ ದಿಂಬಿನ ಕೆಳಗಿದ್ದ ಸರ್ವಿಸ್ ರಿವಾಲ್ವರ್ ಕೈಲಿ ಹಿಡಿದು ಎದ್ದು ನಿಂತರು.

"ಝುನ್.... ಝುನ್.... ಝುನನ್ ಝುನ್"

ಸಂಗೀತದ ಅಲೆ ಕೇಳಿಸಿತು. ಎಲ್ಲಿಂದ ಬರುತ್ತದೆ. ಈ ಸಂಗೀತ. ಅವರು ಯೋಚಿಸುತ್ತಿದ್ದಂತೆ ಸಂಗೀತ ಹೆಚ್ಚು ಹೆಚ್ಚು ಜೋರಾಗಿ ಕೇಳುತ್ತ

ಅವರನ್ನು ಸಮೀಪಿಸತೊಡಗಿತು. ಇದೇನು ಹೊಸ ಆಪತ್ತು? ಎಂದು ಯೋಚಿಸುತ್ತ ರಾಮನಾಥ ತಮ್ಮ ರೂಮಿನ ಬಾಗಿಲು ತೆರೆದು ಹೊರಗೆ ಬರುತ್ತಿದ್ದಂತೆ ತಮ್ಮೆದುರೇ ನಿಂತಿದ್ದ ವ್ಯಕ್ತಿಯನ್ನು ಕಂಡು ದಂಗಾಗಿ ನಿಂತುಬಿಟ್ಟರು.

ಅವರಿಗೆ ತಮ್ಮ ಕಣ್ಣು ತಮಗೇ ನಂಬದಂತಾಗಿತ್ತು.

ಒಂದು ತಿಂಗಳ ಹಿಂದೆ ಯಾರು ತಮ್ಮೆದುರು ಸತ್ತು ಸಮಾಧಿ ಹೊಂದಿದ್ದನೋ ಅದೇ ವ್ಯಕ್ತಿ ಅವರ ಕಣ್ಣೆದುರು ಜೀವಂತ ನಿಂತಿತ್ತು.

ರಾಮನಾಥರಿಗೆ ಚೆನ್ನಾಗಿ ನೆನಪಿಗೆ ಬಂದಿತು. ಬಂಟೀ ಬಗ್ಗೆ.

ಬಂಟಿ ನಗರದ ಪ್ರಥಮ ದರ್ಜೆ ಕಳ್ಳಸಾಗಾಣಿಕೆದಾರ. ಅಷ್ಟೇ ಚತುರ. ಧೂರ್ತ. ಲಕ್ಷ ಲಕ್ಷ ಹಣದ ಕಳ್ಳಸಾಗಣಿ ಸರಕು ತಂದು ಬೇರೆಡೆ ಸಾಗಿಸಿದರೂ ಎಲ್ಲೂ ಆತ ತನ್ನ ಸುಳಿವು ಬಿಟ್ಟು ಕೊಡುತ್ತಿರಲಿಲ್ಲ. ಎಂದೂ ಆತ ರೆಡ್ ಹ್ಯಾಂಡಾಗಿ ಸಿಕ್ಕಿರಲಿಲ್ಲ. ಅವನನ್ನು ಹಿಡಿಯಲು ರಾಮನಾಥ ಅವರು ನಾಲ್ಕು ತಿಂಗಳು ಶ್ರಮಿಸಿದ್ದರು. ಕೊನೆಗೂ ಅವರಿಗೆ ಯಶ ದೊರೆತಿತ್ತು.

ಎಂಭತ್ತು ಲಕ್ಷ ರೂಪಾಯಿ ಬೆಲೆಬಾಳುವ ಮಾದಕ ವಸ್ತುಗಳನ್ನು ಸಾಗಿಸುತ್ತಿರುವಾಗ ಬಂಟಿ ಪೊಲೀಸ್‌ರ ಅತಿಥಿಯಾದ. ಮೊಕದ್ದಮೆ ದಾಖಲು ಮಾಡಿಕೊಂಡ ರಾಮನಾಥ ಅವನನ್ನು ನ್ಯಾಯಾಲಯದ ಮೆಟ್ಟಲು ಹತ್ತಿಸಿದರು. ಅಂದೇ ಸಾಯಂಕಾಲ ಆತನನ್ನು ನ್ಯಾಯಾಧೀಶರ ಆಜ್ಞೆ ಮೇರೆಗೆ ಪೊಲೀಸ್ ಕಸ್ಟಡಿಗೆ ತೆಗೆದುಕೊಂಡ ಪೊಲೀಸ್‌ರು ಅವನನ್ನು ಕರೆತರುವಾಗ ಅಜ್ಞಾತ ವ್ಯಕ್ತಿಯೊಬ್ಬ ಬೈಕ್ ಮೇಲೆ ಬಂದು ಬಂಟಿ ಮೇಲೆ ಗುಂಡಿನ ಮಳೆಗರೆದು ಪರಾರಿಯಾದ. ಹದಿನಾರು ಗುಂಡುಗಳು ತಾಗಿದ ಬಂಟಿ ಸ್ಥಳದಲ್ಲೇ ಮೃತಪಟ್ಟ.

ಸಂಬಂಧಪಟ್ಟ ಕಾರ್ಯಗಳು ಮುಗಿದ ನಂತರ ಮರುದಿನ ನೂರಾರು ಜನರೆದುರು ಬಂಟಿಯ ಸಮಾಧಿ ಮಾಡಲಾಗಿತ್ತು.

ಅದೇ ಬಂಟಿ ಈಗ ಅವರ ಮುಂದಿದ್ದ.

ರಾಮನಾಥರ ಮುಖ ಬೆವರೊಡೆಯಿತು.

"ಬಂಟೀ ನೀನು...ನೀನು...." ಮಾತು ಪೂರ್ತಿಯಾಗಲಿಲ್ಲ.

ಬಂಟಿ ನಿರ್ವಿಕಾರಭಾವನೆಯಿಂದ ನಿಂತೇ ಇದ್ದ. ಅವನ ಮುಖದ ಮೇಲೆ ಯಾವುದೇ ಲಕ್ಷಣಗಳು ಕಂಡು ಬರಲಿಲ್ಲ. ಆತ ಕಣ್‌ರೆಪ್ಪೆ ಸಹ ಬಡಿಯುತ್ತಿರಲಿಲ್ಲ.

"ನೀನು ಬಂಟಿಯಲ್ಲ.... ಬಂಟಿಯಂತಿರುವ ಬೇರೆ ಯಾರೋ ಆಗಿರಬೇಕು. ನನ್ನನ್ನು ಹೆದರಿಸಬೇಕೆಂದು ನೀನು ಬಂದಿದ್ದರೆ ಪ್ರಯೋಜನವಿಲ್ಲ.

ದೆವ್ವ, ಭೂತ-ಪ್ರೇತಗಳಿಗೆ ಹೆದರುವವ ನಾನಲ್ಲ ತಿಳಿಯಿತೇ? ಒಂದೇ ಮಾತಿಗೆ ನೀನಾರು, ನೀನಿಲ್ಲಿಗೆ ಏಕೆ ಬಂದಿರುವೆ ಎಂಬುದನ್ನು ತಿಳಿಸು."

ಎಸ್. ಪಿ. ಯವರ ಗಡಸು ಕಂಠ ಮೊಳಗಿದರೂ ಆತ ವಿಚಲಿತನಾಗಲಿಲ್ಲ. ಕೂದಲೆಳೆಯಷ್ಟು ಮಿಸುಕಲಿಲ್ಲ. ಅವನಲ್ಲಿ ಯಾವ ಜೀವಂತಿಕೆಯ ಲಕ್ಷಣಗಳೂ ಕಾಣಿಸಲಿಲ್ಲ. ರಾಮನಾಥರಿಗೆ ಅವನ ವರ್ತನೆ ಒಂದು ಸಮಸ್ಯೆಯಾಯಿತು. ಏಕೆ ಹೀಗೆ?

"ಝುನ್ ಝುನ್ ಝುನ್" ಎಂಬ ಸಂಗೀತ ಲಹರಿಯ ಧ್ವನಿ ತುಸು ಹೆಚ್ಚಾಯಿತು. ಅದರ ಮಧ್ಯದಲ್ಲೇ ಸಂಗೀತಕ್ಕನುಸಾರವಾಗಿ ಗವಿಯಿಂದ ಬಂದಂತೆ ಒಂದು ಕ್ಷೀಣ ಮಾನವ ಧ್ವನಿ ಕೇಳಿಸಿತು. ರಾಮನಾಥ ಅವರು ತುಂಬಾ ಜಾಗೃತವಾಗಿದ್ದುದರಿಂದ ಆ ಧ್ವನಿ ಅವರಿಗೆ ಕೇಳಿಸಿತು. ಸಾಮಾನ್ಯರಾದರೂ ಆಗಿದ್ದರೆ ಅದರ ಆಭಾಸ ಸಹ ಆಗುತ್ತಿರಲಿಲ್ಲವೇನೋ.

"ಕ್ವಿಕ್....ಕ್ವಿಕ್....ಝುನ್....ಝುನ್....ಆ್ಯಕ್ಷನ್...ಆ್ಯಕ್ಷನ್.. .ಕ್ವಿಕ್.... ಝುನ್‌ನ್‌ನ್"

ಒಮ್ಮೆಂದೊಮ್ಮೆಲೇ ಬಂಟಿಯಲ್ಲಿ ಜೀವ ಸಂಚಾರವಾದಂತಾಯಿತು. ಆತನ ಮುಖದ ಮೇಲೆ ಕ್ರೂರ ಕಳೆ ಮಿನುಗತೊಡಗಿತು. ಅದನ್ನು ಗಮನಿಸಿದ ರಾಮನಾಥ ರಿವಾಲ್ವರ್ ಹಿಡಿದು ಬಲಗೈ ಎತ್ತಿ ಅವನೆಡೆ ಗುರಿಹಿಡಿದು ಎಚ್ಚರಿರಿದರು.

"ಹುಷಾರ್...ನೀನೇನಾದರೂ ತಪ್ಪು ಹೆಜ್ಜೆ ಇಟ್ಟೆಯೋ ಅದಕ್ಕೆ ತಕ್ಕ ಶಿಕ್ಷೆ ಅನುಭವಿಸಬೇಕಾಗುತ್ತದೆ. ನಿನ್ನ ನಡತೆ ಗಮನಿಸಿದರೆ ಇಷ್ಟು ರಾತ್ರಿ ಬಂದ ನಿನ್ನ ಬಗ್ಗೆ ನನಗೇಕೋ ಗುಮಾನಿ ಬರುತ್ತದೆ. ನೀನು ಒಳ್ಳೇ ಉದ್ದೇಶಕ್ಕೆ ಬಂದಿಲ್ಲ ಅನಿಸುತ್ತದೆ. ನಿನ್ನೆರಡೂ ಕೈ ಮೇಲೆತ್ತಿ ನನಗೆ ಶರಣಾಗು."

ಬಂಟಿ ಅವರ ಮಾತಿಗೆ ಎಳ್ಳಷ್ಟೂ ಬೆಲೆ ಕೊಡಲಿಲ್ಲ. ಮತ್ತೆ ಬಂತು ಆದೇಶ ಎಲ್ಲಿಂದಲೋ. "ಗೋ...ಕ್ವಿಕ್....ಝುನ್...ಝುನ್‌ನ್...ಆ್ಯಕ್ಷನ್... ಆ್ಯಕ್ಷನ್...ಆ್ಯಕ್ಷನ್"

ಬಂಟಿ ಚಿರತೆಯಂತೆ ಎಸ್. ಪಿ. ರಾಮನಾಥರ ಮೇಲೆ ನೆಗೆದ. ತುಂಬಾ ಎಚ್ಚರಿಕೆಯಲ್ಲಿದ್ದ ಅವರು ಇದನ್ನು ನಿರೀಕ್ಷಿಸಿದ್ದರೇನೋ...ಅವರ ಬೆರಳು ರಿವಾಲ್ವರ್ ಕುದುರೆ ಅಮುಕಿದ್ದವು. ಸಿಡಿಯಿತೊಂದು ಅದರಿಂದ ಗುಂಡು. ನೇರವಾಗಿ ಬಂಟಿಯ ಬಲಭುಜಕ್ಕೆ ತಾಗಿತು.

ರಾಮನಾಥರಿಗೆ ತಮ್ಮ ಕಣ್ಣುಗಳನ್ನೇ ನಂಬದಂತಾಯಿತು. ಅದರೊಂದಿಗೆ ತಾವು ಸ್ವಪ್ನವನ್ನೇನಾದರೂ ನೋಡುತ್ತಿದ್ದೇವೆಯೇ ಹೇಗೆ ಎಂಬ ಸಂಶಯವೂ

ಮೂಡಿ ಮಾಯವಾಯಿತು. ಗುಂಡು ತಾಗಿದರೂ ಬಂಟಿ ಹಾ ಹೂ ಅನ್ನಲಿಲ್ಲ. ಅವನ ಮುಖದಿಂದ ಯಾವುದೇ ನೋವಿನ ಉದ್ಗಾರ ಬರಲಿಲ್ಲ. ಅಷ್ಟೇ ಅಲ್ಲ, ಗುಂಡು ತಗಲಿದ ಜಾಗದಲ್ಲಿ ರಕ್ತದ ಒಂದು ಹನಿ ಗೋಚರಿಸಲಿಲ್ಲ. ಇದೇನು ಮಾಯೆ?

ಮುಂದೆ ಯೋಚಿಸಲು ಅವರಿಗೆ ಅವಕಾಶವೇ ದೊರೆಯಲಿಲ್ಲ. ಬಂಟೀ ಅವರನ್ನು ನೆಲಕ್ಕೆ ಕೆಡವಿ ಎದೆಯ ಮೇಲೆ ಕುಳಿತಿದ್ದ. ಇಷ್ಟಾದರೂ ರಾಮನಾಥರ ಕೈಯಿಂದ ರಿವಾಲ್ವರ್ ಜರಿಯಲಿಲ್ಲ. ಅವನ ಪಕ್ಕೆಗೆ ರಿವಾಲ್ವರ್ ನಳಿಕೆ ತಗಲಿಸಿ ಮತ್ತೊಂದು ಗುಂಡು ಹಾರಿಸಿದರು. ಆತ ಮಿಸುಕಲಿಲ್ಲ ಕೂಡ. ರಿವಾಲ್ವರದಿಂದ ಸಿಡಿದ ಗುಂಡು ಇನ್ನೊಂದು ಪಕ್ಕೆ ಸೀಳಿ ಹೊರಹೋಯಿತಾದರೂ ಬಂಟಿ ಕಿಮಕ್ ಎನ್ನಲಿಲ್ಲ.

ಎಸ್. ಪಿ. ಅವರ ಉಸಿರು ಬಿಗಿಯತೊಡಗಿತು. ಬಂಟಿಯ ಉಕ್ಕಿನ ಬೆರಳುಗಳು ಅವರ ಕುತ್ತಿಗೆಯನ್ನು ಬಲವಾಗಿ ಅಮುಕತೊಡಗಿದವು. ರಾಮನಾಥ ಅವರು ಜೀವನ-ಮರಣಗಳ ಮಧ್ಯ ಒದ್ದಾಡತೊಡಗಿದರು. ಅವರ ಕೈಯಲ್ಲಿಯ ಪಿಸ್ತೂಲು ಯಾವ ಉಪಯೋಗಕ್ಕೂ ಬರದಂತಾಯಿತು. ಅದನ್ನು ನಂಬುವಂತಿರಲಿಲ್ಲ. ನಂಬಿ ಉಪಯೋಗವೂ ಇರಲಿಲ್ಲ. ತಮ್ಮ ಪ್ರಾಣ ಉಳಿಸಿಕೊಳ್ಳಲು ತಮ್ಮ ಮಾನವಶಕ್ತಿಯನ್ನೇ ಅವಲಂಬಿಸಬೇಕಾಯಿತು. ಪಿಸ್ತೂಲನ್ನು ಪಕ್ಕಕ್ಕೆ ಚೆಲ್ಲಿದ ಅವರು ಬಂಟಿ ಜೊತೆ ಹೆಣಗಾಡತೊಡಗಿದರು. ತಮ್ಮೆರಡೂ ಕಾಲುಗಳನ್ನು ಅವನ ಕುತ್ತಿಗೆಗೆ ಕತ್ತರಿಯಂತೆ ಹಾಕಿ ಹಿಂದಕ್ಕೆಳೆದಾಗ ಬಂಟಿಯ ಹಿಡಿತ ಕುತ್ತಿಗೆಯಿಂದ ಸಡಿಲಾಯಿತು. ಅಷ್ಟೇ ಸಾಕಾಯಿತು ರಾಮನಾಥರಿಗೆ. ತಕ್ಷಣ ತಮ್ಮೆರಡೂ ಕೈಗಳಿಂದ ಅವನೆದೆಯ ಮೇಲೆ ಮುಷ್ಟಿ ಮಾಡಿ ಪ್ರಹಾರ ಮಾಡಿದರು. ಧನ್....ಧನ್....ಧನ್....ಎದೆಯ ಮೇಲೆ ಸಿಕ್ಕ ಸಿಕ್ಕತ್ತ ಗುದ್ದಿದರೂ ಬಂಟಿ ಉಫ್ ಎನ್ನಲಿಲ್ಲ. ಬಲಎದೆ ಮೇಲ್ಭಾಗದಲ್ಲೊಂದು ಪೆಟ್ಟು ಬಿದ್ದಾಗ ವಿಚಿತ್ರ ಆದರೆ ಅಷ್ಟೇ ವಿಕಾರವಾದ ಚೀತ್ಕಾರ ಅವನ ಬಾಯಿಯಿಂದ ಹೊರಬಿದ್ದಿತು. ಆತ ವೇದನೆಯಿಂದ ನರಳತೊಡಗಿದ. ಆತನನ್ನು ಎದೆಯಿಂದ ನೆಲಕ್ಕೆ ಕೆಡವಿ ಮೇಲೆದ್ದು ನಿಂತರು. ಅವನೊಂದಿಗೆ ಗುದ್ದಾಡಿ ಪ್ರಾಣಾಪಾಯದಲ್ಲಿ ಬೀಳುವದಕ್ಕಿಂತ ಪಾರಾಗಿ ಪೊಲೀಸ್ ಪಡೆ ಕರೆಸುವದೇ ಸೂಕ್ತ ಎಂದು ಮನಗಂಡ ಅವರು ಚಂಗನೆ ನೆಗೆದು ತಮ್ಮ ಆಫೀಸ್ ಕೋಣೆ ಪ್ರವೇಶಿಸಿದರು. ತಮ್ಮ ಹಿಂದೆ ಬಾಗಿಲು ಮುಚ್ಚಿ ಬೋಲ್ಟ್ ಏರಿಸಲು ಮರೆಯಲಿಲ್ಲ. ರಿಸೀವರ್ ಎತ್ತಿ ನಂಬರ್ ತಿರುಗಿಸುತ್ತಿದ್ದಂತೆ ಬಾಗಿಲ ಮೇಲೆ ಧನ್ ಧನ್ ಎಂದು ಏಟು ಬೀಳಲಾರಂಭಿಸಿದವು. ಆ ಕಡೆಯಿಂದ ದನಿ ಕೇಳುತ್ತಲೂ

ಬಡಬಡನೆ ನುಡಿದರು ರಾಮನಾಥ "ಚಂದ್ರು...ನಾನು ಎಸ್. ಪಿ. ಮಾತಾಡ್ತಿರೋದು. ಕೂಡಲೇ ಒಂದು ಬಟಾಲಿಯನ್ ಪೊಲೀಸ್ ಪಡೆಯೊಂದಿಗೆ ಸುಸಜ್ಜಿತರಾಗಿ ನಮ್ಮ ಬಂಗಲೆಗೆ ಬರಲು ತಿಳಿಸು. ಕೂಡಲೇ."

ಚರ್ರ್...ಚರ್ರ್....ಚರ್ರ್...ಎನ್ನುತ್ತ ಬಾಗಿಲು ಮುರಿದು ಬಿತ್ತು. ಸಾಕ್ಷಾತ್ ಯಮನಂತೆ ಒಳಪ್ರವೇಶಿಸಿದೆ ಬಂಟೀ. ರಾಮನಾಥ ಅವರು ಪಕ್ಕದಲ್ಲಿ ಒಳಗೆ ಪ್ರವೇಶಿಸುವ ಮತ್ತೊಂದು ಬಾಗಿಲಿನಿಂದ ಹೊರಬಂದರು. ಹಿಂದಿನಿಂದಲೇ ಬಾಗಿಲು ಮುಚ್ಚಿಕೊಂಡರು. ಆ ಬಾಗಿಲು ಸಹ ಬಹಳ ಹೊತ್ತು ತಡೆಯಲಾರದು. ಪೊಲೀಸ್ ಪಾರ್ಟಿ ಬರುವವರೆಗೂ ಎಲ್ಲಾದರೂ ಅವಿತುಕೊಳ್ಳುವದೇ ಯೋಗ್ಯವಾದುದೆಂದು ನಿರ್ಧರಿಸಿದರು. 'ಧಪ್....ಧಪ್' ಹೆಜ್ಜೆ ಸಪ್ಪಳ ಬಾಗಿಲ ಬಳಿ ಬಂತು. ಅದರೊಂದಿಗೆ "ಝುನ್... ಝುನ್" ಸಂಗೀತ ಲಹರಿ. "ಸ್ಟಾಪ್...ನಿನ್ನೆದುರೇ ಇದೆ. ಬೀರು. ಹಸಿರು ಬಣ್ಣದ ಫೈಲು....ಝುನ್ ಝುನ್ ಅದರ ಮೇಲೆ ಐ.ಎಂ.ಪಿ. ಎಂದು ಬರೆದಿದೆ. ಝುನನ್ ಕೆಂಪು ಬಣ್ಣದಿಂದ" ದೂರದಿಂದ ಬಂದ ಆದೇಶ. ಬಾಗಿಲು ಮುರಿಯಲಿಲ್ಲ. ಹೆಜ್ಜೆ ಸಪ್ಪಳ ಕೇಳಲಿಲ್ಲ. ರಾಮನಾಥ ಯೋಚಿಸತೊಡಗಿದರು. ಬೀರುವಿನಲ್ಲಿರುವ ಹಸಿರು ಬಣ್ಣದ ಫೈಲ್. ಕೆಂಪು ಶಾಯಿಯಿಂದ ಐ.ಎಂ.ಪಿ. ಎಂದು ಬರೆದದ್ದು....ಯಾವ ಫೈಲದು...ನೆನಪಾಗಲೊಲ್ಲದು. ಸಾಯಂಕಾಲವಷ್ಟೇ ಆಫೀಸಿನಿಂದ ಕಳಿಸಿಕೊಟ್ಟ ಹತ್ತಾರು ಫೈಲುಗಳಲ್ಲಿ ಅದೊಂದಾಗಿತ್ತು. ನೋಡಿ ಸಹಿ ಮಾಡಿಡಬೇಕಾಗಿತ್ತು. ರಾಮನಾಥರು ಅವುಗಳ ಕಡೆ ಲಕ್ಷ್ಯ ಕೊಟ್ಟಿರಲಿಲ್ಲ. ಮುಂದೇನಾಗುತ್ತದೋ ಎಂಬ ಕುತೂಹಲ ಮೂಡಿತು.

ತಾವು ಅಪಾಯದಿಂದ ಪಾರಾಗಿದ್ದೇವೆ. ಆ ಯಮದೂತನಿಗೆ ಆದೇಶ ಬಂದಿದೆ ಎಂಬ ಧೈರ್ಯದಿಂದ ಸಪ್ಪಳವಾಗದಂತೆ ಚಿಲಕ ಸರಿಸಿ ಬಾಗಿಲು ಮುಂದೆ ದೂಡಿದರು. ಚಿಕ್ಕ ಸೀಳು ದಾರಿಯಿಂದ ದೃಷ್ಟಿ ಹರಿಸಿದರು.

ಬಂಟಿ ಬೀರುವಿನ ಮುಂದೆ ನಿಂತಿದ್ದ. ಬೀಗ ಹಾಕಿದ ಬೀರು. ತೆರೆಯಲು ಆಗಲಿಲ್ಲ.

"ಝುನ್...ಝುನ್....ಮುರಿದು ಹಾಕು. ಒಡೆದು ಹಾಕು, ಝುನ್.... ಝುನ್...." ಆದೇಶ.

ಮುಷ್ಟಿ ಬಿಗಿ ಮಾಡಿದ ಆತ ಬೀರುವಿನ ಮೇಲೆ ಒಂದೇ ಸಮನೇ ಬಾರಿಸಿದ. ಹ್ಯಾಂಡಲ್ ಹಿಡಿದು ಮನಬಂದಂತೆ ತಿರುಗಿಸತೊಡಗಿದ. ಎರಡೇ ನಿಮಿಷಗಳಲ್ಲಿ ಬೀರು ಮುದ್ದೆಯಾಗಿ ದಾರಿಮಾಡಿಕೊಟ್ಟಿತು. ಒಳಗಿದ್ದ ರಾಶಿ ರಾಶಿ ಫೈಲು ಕಿತ್ತಿ ಕೆಳಕ್ಕೆಸೆದ. ಹಸಿರು ಬಣ್ಣದ ಕೆಂಪು ಮಸಿಯಲ್ಲಿ ಐ.ಎಂ ಪಿ.

ಎಂದು ಬರೆದ ಫೈಲ್ ಕಣ್ಣಿಗೆ ಬಿದ್ದಿತು.

"ಝುನ್....ಹಾಂ....ಇದೆ...ಸುಟ್ಟು ಹಾಕು...ಬೇಗ....ಝುನ್".

ಅತ್ತಿತ್ತ ನೋಡಿದ ಬಂಟಿ. ಟೀಪಾಯ್ ಮೇಲಿದ್ದ ಲೈಟರ್ ಕಣ್ಣಿಗೆ ಬಿತ್ತು. ಅದನ್ನೆತ್ತಿಕೊಂಡು ಉರಿಸಿದ. ನಂತರ ಫೈಲ್ ಕೆಳಗೆ ಉರಿಯುತ್ತಿದ್ದ ಲೈಟರ್ ಹಿಡಿದ. ಕಾಗದಗಳು ಬೆಂಕಿ ತೆಗೆದುಕೊಂಡವು. ಫೈಲ್ ಉರಿಯ ತೊಡಗಿತು. ಫೈಲಿಗೆ ತಗಲಿದ ಉರಿ ಮೇಲೆ ಬರುತ್ತ ಅವನ ಕೈಗೆ ತಗಲಿ ಕೈ ಬೆರಳು ಎಲ್ಲಾ ಸುಟ್ಟು ಚರ್ಮದ ಕೆಟ್ಟ ವಾಸನೆ ಬರತೊಡಗಿದರೂ ಬಂಟಿ ಅಯ್ಯೋ ಹಾ ಅನ್ನಲಿಲ್ಲ. ಫೈಲ್ ತಾನೇ ತಾನಾಗಿ ಅವನ ಕೈಯಿಂದ ಕೆಳಗಡೆ ಬಿದ್ದಾಗ ದನಿ ಬಂತು.

"ಶಹಭಾಶ್...ಇನ್ನು ಮರಳು....ಬೇಗ....ಕ್ವಿಕ್....ಝುನ್..."ಮೇಲೆದ್ದ ಬಂಟಿ ಯಾವ ರೀತಿ ಬಂದಿದ್ದನೋ ಅದೇ ರೀತಿ ಹೊರಟು ಹೋದ. ಐದು ನಿಮಿಷ ನಿಂತಲ್ಲೇ ನಿಂತಿದ್ದ ರಾಮನಾಥರು ಆಮೇಲೆ ಒಳಬಂದರು. ಹಸಿರು ಫೈಲ್ ಕಡೆ ನೋಡಿದರು. ಪೂರ್ತಿ ಸುಟ್ಟು ಹೋಗಿದ್ದರೂ ಅಲ್ಲಲ್ಲೆ ಸ್ವಲ್ಪ ಸ್ವಲ್ಪ ಬಿಳಿ ಬಣ್ಣ ಕಾಣುತ್ತಿದ್ದು ಕೆಲವೊಂದು ಕಾಗದಗಳು ನಾವಿನ್ನೂ ಸುಟ್ಟಿಲ್ಲ ಜೀವಂತವಾಗಿದ್ದೇವೆ ಎಂದು ಹೇಳುತ್ತಿದ್ದವು.

"ಉಂಯೀ ಉಂಯೀ....ಈ ಉಂಯೀ" ಸೈರನ್ ಬಾರಿಸುತ್ತ ಬಂದು ನಿಂತಿತು ಪೊಲೀಸ್ ಗಾಡಿ. ಅದರಿಂದ ಧಡಧಡನೆ ನಲವತ್ತು ಜನ ಪೊಲೀಸರು ಕೈಯಲ್ಲಿ ರೈಫಲ್ ಹಿಡಿದು ಕೆಳಗೆ ಹಾರಿದರು. ಪೊಲೀಸ್ ಗಾಡಿ ಸೈರನ್, ಪೊಲೀಸರ ಬೂಟುಗಳ ಸದ್ದು ಎಲ್ಲಾ ರಾತ್ರಿಯ ಶಾಂತಿಗೆ ಭಂಗ ತಂದಾಗ ಪಕ್ಕದ ಬಂಗಲೆಯಲ್ಲಿದ್ದ ಜನ ಎದ್ದು ತಮ್ಮ ತಮ್ಮ ಮನೆ ದೀಪ ಉರಿಸಿದರು. ಕೆಲಸಮಯದ ಹಿಂದೆ ಗುಂಡಿನ ಸಪ್ಪಳ ಕೇಳಿ ಸಹ ಕಿಟಕಿ ತೆರೆದು ಯಾರೂ ಕಾಣ ದಿದ್ದಾಗ ಅವರೇ ನಿರಾಶೆ ಹೊಂದಿದವರೇ ಆಗಿದ್ದರು. ಈಗ ಪೊಲೀಸ್‌ಪಾರ್ಟಿ ನೋಡುತ್ತಲೂ ಏನೋ ಅನಾಹುತ ಘಟಿಸಿದೆ ಎಂದೆನ್ನುತ್ತ ಮನೆಯಿಂದ ಹೊರ ಬರತೊಡಗಿದರು.

ರಾಮನಾಥ ವಾಚಿನೆಡೆ ನೋಡಿಕೊಂಡರು. ತಾವು ಫೋನ್ ಮಾಡಿದ ಇಪ್ಪತ್ತೈದು ನಿಮಿಷಗಳ ನಂತರ ಪೊಲೀಸ್ ಪಡೆ ಬಂದಿತ್ತು. ಚಲನಚಿತ್ರಗಳಲ್ಲಿ ತೋರಿಸುವಂತೆ ಅಪರಾಧಿ ತಾನು ಮಾಡಬೇಕಾದ ತನ್ನ ಕೃತ್ಯ ಮುಗಿಸಿ ಹಾಯಾಗಿ ಹೊರಟುಹೋದ ಮೇಲೆ ಬರುವಂತೆ, ಸಾರ್ವಜನಿಕರೇಕೆ ತಮ್ಮ ಇಲಾಖೆಯನ್ನು ದೂರುತ್ತಾರೆ ಎಂಬುದು ಅವರಿಗೆ ಅರ್ಥವಾಗಿತ್ತು. ಬಹಳ ವೆಂದರೆ ಐದು ನಿಮಿಷಗಳ ದಾರಿ ಅಷ್ಟೇ. ಸ್ವತಃ ಎಸ್.ಪಿ. ಯಾದ ತಾವೇ

ಫೋನು ಮಾಡಿದ್ದರೂ ಬರಲು ಅರ್ಧಗಂಟೆ ತೆಗೆದುಕೊಂಡ ಇವರು ಸಾರ್ವಜನಿಕರಲ್ಲಿ ಯಾರಾದರೂ ಫೋನು ಮಾಡಿದ್ದರೆ ಎಷ್ಟು ಗಂಟೆಗೆ ಬರಬಹುದಿತ್ತು ಎಂಬುದನ್ನೂ ತಾವೇ ಮನದಲ್ಲಿ ಗುಣಿಸಿ, ಜನರ ಆಕ್ರೋಶಕ್ಕೆ ಕಾರಣವಿಲ್ಲದಿಲ್ಲ ಎಂಬುದನ್ನು ಮನಗಂಡರು.

ಉಕ್ಕಿ ಬಂದ ಸಿಟ್ಟನ್ನೆಲ್ಲ ನುಂಗಿ ತಮ್ಮೆದುರು ನಿಂತು ಸೆಲ್ಯೂಟ್ ಮಾಡಿದ ಎಸ್.ಪಿ.ಗೆ ಪ್ರತಿವಂದನೆ ಸಲ್ಲಿಸಿ "ನೀನು ಯಾವ ರೀತಿ ಬಂದೆಯೋ ಅದೇ ರೀತಿ ಹೊರಟು ಹೋಗು" ಎಂದು ಆದೇಶ ನೀಡಿದಾಗ ಆತ ಗಾಬರಿಯಾದ. ತಮ್ಮ ಸಾಹೇಬರೇಕೆ ಈ ರೀತಿ ವರ್ತಿಸುತ್ತಿದ್ದಾರೆ ಎಂದು ಯೋಚಿಸಿದ. ಸಾಯಂಕಾಲ ನೋಡಿದಾಗ ಅವರು ಸರಿಯಾಗಿದ್ದರು. ಅವನಿಗೆ ಚೆನ್ನಾಗಿ ನೆನಪಿತ್ತು. ಆದರೆ ಈಗ?

ಮುಂದೇನೂ ಅನ್ನೂವಂತಿರಲಿಲ್ಲ.

ಸೆಲ್ಯೂಟ್ ನೀಡಿ ವಾಪಸಾದ....ಸೈರನ್ ಕೂಗುತ್ತ ಗಾಡಿ ಹೊರಟು ಹೋಯಿತು. ಗಾಳಿ ಹೋದ ಬಲೂನಿನಂತಾದ ಜನ ಯಾವ ತಮಾಷೆಯೂ ನಡೆಯದಂತಾದಾಗ ನಿರಾಶೆ ಹೊಂದಿ ಮತ್ತೆ ತಮ್ಮ ತಮ್ಮ ಮನೆ ಸೇರಿ ದೀಪ ನಂದಿಸಿದರು.

ಉಶ್ ಎನ್ನುತ್ತ ಸೋಫಾದಲ್ಲಿ ಕುಸಿದರು ರಾಮನಾಥ.

ಒಂದೇ ನಿಮಿಷದಲ್ಲಿ ನಡೆದು ಹೋದ ಎಲ್ಲ ಘಟನೆಗಳು ಅವರ ಕಣ್ಣೆದುರು ಹಾಯ್ದು ಹೋದವು. ಮುರಿದು ಬಿದ್ದ ಬಾಗಿಲು, ಕಾರ್ಪೆಟ್ ಮೇಲೆ ಅನಾಥವಾಗಿ ಮಲಗಿದ್ದ ರಿವಾಲ್ವರ್, ಸುಟ್ಟುಹೋದ ಫೈಲು ಎಲ್ಲಾ ಅವರನ್ನು ನೋಡಿ ನಗುವಂತೆ ಅನಿಸಿದವು.

ಮುಂದೇನು ಮಾಡಬೇಕು?

ಈ ವಿಷಯ ಯಾರ ಮುಂದೆ ಹೇಳಿದರೂ ಅವರು ತಮ್ಮನ್ನು ಹುಚ್ಚ ಎಂದೇ ಪರಿಗಣಿಸುತ್ತಾರೆ. ಸತ್ಯವೆಂದು ಅಂದುಕೊಳ್ಳಲಾರರು.

ಹಾಗಾದರೆ ಮುಂದೇನು?

ತಟ್ಟನೆ ನೆನಪಾಯಿತು.

ಮೇಜರ್ ಹೇಮಂತ!

ಸರಿ ಇವರೇ ಸರಿಯಾದ ವ್ಯಕ್ತಿ. ಅವರಿಗೇ ಎಲ್ಲಾ ತಿಳಿಸಿದರಾಯ್ತು ಎಂದುಕೊಂಡು ಟೆಲಿಫೋನು ಇದ್ದತ್ತ ನಡೆದು ನಂಬರ್ ಜೋಡಿಸಿದರು.

ಆಕಡೆಯಿಂದ ಗಂಟೆ ಬಾರಿಸುತ್ತಲೇ ಇತ್ತು.

ಎತ್ತುವವರು ಯಾರೂ ಇರಲಿಲ್ಲ.

*ಇದ್ದೇಕೆ ಹೀಗಾಯ್ತು, ಎರಡು ಬಾರಿ ಗಂಟೆ ಬಾರಿಸಿದರೆ ಸಾಕು ಕೂಡಲೇ ರಿಸೀವರ್ ಎತ್ತುತ್ತಿದ್ದ ಹೇಮಂತ ಇಂದೇಕೆ ಹೀಗೆ?*

*ಮನಸ್ಸಿಗೆ ಬೇಜಾರಾಗಿ ರಿಸೀವರ್ ಕೆಳಗೆ ಕುಕ್ಕಬೇಕು ಎಂದುಕೊಳ್ಳುತ್ತಿದಂತೆ ಆಕಡೆಯಿಂದ ರಿಸೀವರ್ ಎತ್ತಿದ ವ್ಯಕ್ತಿ "ಮೇಜರ್ ಹೇಮಂತ ಸ್ಪೀಕಿಂಗ್"* ಎಂದಾಗ ಎಸ್.ಪಿ. ರಾಮನಾಥ ಸಮಾಧಾನದ ಉಸಿರುಬಿಟ್ಟರು.

"ಮೇಜರ್ ನಾನು, ರಾಮನಾಥ ಮಾತಾಡ್ತಿರೋದು."

"ಏಕೆ ಏನಾಯ್ತು? ಇಷ್ಟು ರಾತ್ರಿಯಲ್ಲಿ ಈ ರೀತಿ ನೀವು...."

"ಅದೊಂದು ದೊಡ್ಡ ಕಥೆ. ನಾನು ಸಾಕ್ಷಾತ್ ಯಮದೂತನಿಂದ ಕೂದಲೆಳೆಯಷ್ಟು ಅಂತರದಲ್ಲಿ ಪಾರಾದೆ."

"ಯಮದೂತನೇ?"

"ಹೌದು, ಇನ್ನೂ ನನ್ನ ಆಯುಷ್ಯ ಗಟ್ಟಿಇರುವುದರಿಂದ ನಿಮ್ಮ ಜೊತೆ ಮಾತಾಡುತ್ತಿದ್ದೇನೆ. ಮೇಜರ್ ನನ್ನದೊಂದು ವಿನಂತಿ."

"ಹೇಳಿ, ವಿನಂತಿ ಅನ್ನದೇ ಆದೇಶ ಎಂದು ಹೇಳಿ"

"ಅಯ್ಯೋ ನಿಮಗೆ ಆದೇಶ ನೀಡುವಷ್ಟು ದೊಡ್ಡ ಮನುಷ್ಯನಲ್ಲ ನಾನು"

"ರಾಮನಾಥ ಅವರೆ, ನೀವು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳು ಎಂಬುದನ್ನು ಮರೆಯಬೇಡಿ, ಹೇಳಿ, ಏನಾಗಬೇಕು?"

"ಏನಿಲ್ಲ, ನೀವು ಒಂದರ್ಧ ಗಂಟೆ ಒಂದು ಹೋಗಿ. ನಿಮ್ಮೊಡನೆ ಕೆಲ ವೊಂದು ವಿಷಯ ಮಾತನಾಡಬೇಕು. ಕೆಲವೊಂದು ವಿಷಯ ತೋರಿಸಬೇಕು."

"ಒಳ್ಳೆಯದು. ನಾನೂ ಇದೀಗ ಬಂದೆ. ನಾನು ಒಳಗೆ ಬಂದಾಗ ಫೋನಿನ ಗಂಟೆ ಬಾರಿಸುತ್ತಲೇ ಇತ್ತು. ಬಟ್ಟೆ ಸಹ ಕಳಚಿಲ್ಲ. ಸದ್ಯ ಬಂದು ಬಿಡುತ್ತೇನೆ."

"ಏಕೆ ಇಷ್ಟು ರಾತ್ರಿಯಾಗಿ ಬಂದಿರಿ? ಏನಾದರೂ?"

"ಬೇರೆ ವಿಷಯವೇ ಇಲ್ಲ. ನನ್ನ ವಿಷಯವೂ ಆ ಯಮದೂತನಿಗೇ ಸಂಬಂಧಿಸಿದ್ದು."

"ಏನೆಂದಿರಿ? ಯಮದೂತನೆ? ಆತ ನಿಮಗೂ ಗಂಟು ಬಿದ್ದನೆ?"

"ಹೌದು, ಬಂದ ಮೇಲೆ ಎಲ್ಲಾ ವಿಷಯ ತಿಳಿಸುತ್ತೇನೆ. ನನ್ನ ಜೊತೆ ಯಲ್ಲಿ ಅಶೋಕ ಇದ್ದಾನೆ. ಅವನನ್ನೂ ಕರೆತಂದರೆ ತೊಂದರೆ ಇಲ್ಲವಷ್ಟೇ?"

"ಅಯ್ಯಯ್ಯೋ ಒಂದು ಕಣ್ಣು ಕೊಡೆಂದು ದೇವರಿಗೆ ಕೇಳಿದಾಗ ಎರಡೂ ಕಣ್ಣು ಕೊಡುತ್ತೇನೆ ಅಂದರೆ ಬೇಡ ಅನ್ನಲಿಕ್ಕೆ ಆಗುತ್ತಾ? ಸುಷಮಾ ಅವರನ್ನೂ ಕರೆತನ್ನಿ."

"ಸಾರಿ ಅವಳು ಆಸ್ಪತ್ರೆಯಲ್ಲಿದ್ದಾಳೆ"

"ಏಕೆ ಏನಾಯ್ತು?"

"ಅದೇ ಯಮದೂತನ ಅವಾಂತರ. ಅವನಿಂದಾಗಿ ಆಕೆ ಆಸ್ಪತ್ರೆ ಸೇರಿದ್ದಾಗಿದೆ. ಅಂದಹಾಗೆ ಒಂದು ವಿಷಯ ಮರೆತೆ. ನಿಮ್ಮ ಶ್ರೀಮತಿಯವರಿಗೆ ಏನಾದರೂ...."

"ನೋ....ನೋ....ಸದ್ಯ ಮನೆಯಲ್ಲಿ ನಾನು ಒಂಟಿ. ಆಕೆ ನಿನ್ನೆ ಊರಿಗೆ ಹೋಗಿದ್ದಾಳೆ."

"ಓಹೋ ಹಾಗಾದರೆ ಸದ್ಯ ನಾವಿಬ್ಬರೂ ಫ್ರೀಬರ್ಡ್ಸ್. ಸದ್ಯ ಬಂದೆ. ಬೈ."

ಅಶೋಕನಿಗೆ ವಿಷಯ ತಿಳಿಸಿದ ಹೇಮಂತ. ಇಬ್ಬರೂ ಹಾಗೆಯೇ ಬೀಗ ಹಾಕಿ ಕಾವಲಿದ್ದ ಗೂರ್ಖಾಗೆ ಎಚ್ಚರದಿಂದಿರಲು ತಿಳಿಸಿ ಕಾರಿನತ್ತ ನಡೆದರು. ದಾರಿಯುದ್ದಕ್ಕೂ ಹೇಮಂತ ಯಮದೂತನ ಬಗ್ಗೆಯೇ ಯೋಚಿಸುತ್ತಿದ್ದ. ಸುಷಮಾಳಿಗೆ ದುರ್ಗತಿ ತಂದಿತ್ತವನೇ ಎಸ್. ಪಿ. ಸಾಹೇಬರ ಮನೆ ನುಗ್ಗಿ ಅವಾಂತರ ನಡೆಸಿದನೋ? ಇಲ್ಲ, ಅವರಿಬ್ಬರೂ ಬೇರೆ ಬೇರೆಯೋ? ಈ ಇಬ್ಬರಲ್ಲದೇ ಬೆಟ್ಟದಿಂದ ಸಮುದ್ರಕ್ಕೆ ನೆಗೆದು ಆಕ್ರಮಣ ಮಾಡಿದ ಇನ್ನೊಂದು ವ್ಯಕ್ತಿಯ ನೆನಪೂ ಆಗದೇ ಇರಲಿಲ್ಲ ಹೇಮಂತನಿಗೆ. ಈ ರೀತಿ ಒಟ್ಟು ಮೂರು ಜನ ಯಮದೂತರು ಅವನ ಸಂಪರ್ಕದಲ್ಲಿ ಬಂದಂತಾಯಿತು.

ಹೇಮಂತ ಅಶೋಕನೊಂದಿಗೆ ಬರುತ್ತಲೂ ಎಸ್.ಪಿ. ರಾಮನಾಥ ಅವರು ನಡೆದ ವಿಷಯವನ್ನೆಲ್ಲ ತಿಳಿಸಿದರು. ಹೇಮಂತ ಹಿಂದಿನ ರಾತ್ರಿ ನಡೆದ ಘಟನೆ ವಿವರಿಸಿದ. ಆಮೇಲೆ ಎದ್ದು ಮುರಿದ ಬಾಗಿಲು, ಮುರಿದ ಬೀರು ನಿರೀಕ್ಷಿಸಿದ. ಯಮದೂತನ ಒಂದೇ ಏಟಿಗೆ ತತ್ತರಿಸಿ ನೆಲಕಚ್ಚಿದ ಸೆಂಟ್ರಿ ಹೇಳಿಕೆ ಪಡೆದ. ಇಷ್ಟೆಲ್ಲ ಆದ ಮೇಲೆ ಸುಟ್ಟ ಫೈಲಿನತ್ತ ಆಕರ್ಷಿತನಾದ.

"ರಾಮನಾಥ ಅವರೆ, ಈ ಹಸಿರು ಬಣ್ಣದ ಫೈಲು ಯಾರು ಕಳಿಸಿದ್ದು? ಯಾವ ವಿಷಯಕ್ಕೆ ಸಂಬಂಧಿಸಿದ್ದು ಎಂದೇನಾದರೂ ಗೊತ್ತಿದೆಯೇ?"

"ಇಲ್ಲ, ಸಾಯಂಕಾಲವಷ್ಟೇ ಈ ಫೈಲು ನನ್ನ ಬಳಿ ಬಂದಿತ್ತು. ಮನಸ್ಸಿಗೆ ತುಂಬಾ ಬೇಜಾರಾಗಿದ್ದರಿಂದ, ಹೇಗಿದ್ದರೂ ನಾಳೆ ರವಿವಾರ, ಮನೆಯಲ್ಲಿಯೇ ಇದ್ದು ಎಲ್ಲಾ ವಿವರವಾಗಿ ನೋಡಿದರಾಯ್ತೆಂದು ಅವುಗಳತ್ತ ಕಣ್ಣೆತ್ತಿ ಸಹ ನೋಡಲಿಲ್ಲ."

"ಎಸ್.ಪಿ. ಸಾಹೇಬರೆ, ನಿಮ್ಮ ಮಾತು ಕೇಳಿದರೆ ವಿಷಯ ತುಂಬಾ ಗಂಭೀರವಾಗಿದೆ ಎನಿಸುತ್ತಿದೆ. ನಿಮಗೂ ವಾಸನೆ ಬಡಿಯದಿರುವ ವಿಷಯ

ಹೊಂದಿದ ಹಸಿರು ಬಣ್ಣದ ಫೈಲು ರೆಡಿಯಾಗಿ ಸಹಿ ಪಡೆಯಲು ನಿಮ್ಮ ಬಳಿ ಬಂದಿದೆ. ಅದರ ಮೇಲೆ ಕೆಂಪು ಶಾಹಿಯಿಂದ ಐ.ಎಂ.ಪಿ. ಎಂದು ಬರೆಯ ಲಾಗಿದೆ ಎಂಬ ವಿಷಯ ಹೊರಗೆ ಹೇಗೆ ಹೋಯಿತು? ಆ ಯಮದೂತನಿಗೇನು ಕನಸು ಬಿತ್ತೇ? ಆತ ನೇರವಾಗಿ ನಿಮ್ಮ ಬಳಿ ಬಂದು ಕೇವಲ ಆ ಹಸಿರು ಫೈಲೊಂದನ್ನೇ ಏಕೆ ನಾಶಪಡಿಸಿದ?"

"ಮೇಜರ್ ನಿಮ್ಮ ಮಾತಿನ ಮೇಲೆ ನನಗೆನಿಸುವದೆಂದರೆ ಈ ಫೈಲಿನ ಬಗ್ಗೆ ನಮ್ಮ ಆಫೀಸಿನಲ್ಲೇ ಒಂದೆಡೆ ಸೋರಿ ಹೋಗಿದೆ ಎಂದು.

"ಹೌದು ನಿಃಸಂಶಯವಾಗಿ"

"ಅವರು ಯಾರಿರಬಹುದು?"

"ಅದನ್ನು ನಾನ್ಹೇಗೆ ಹೇಳಲಿ? ಅದನ್ನು ತಿಳಿಯುವುದು ನಿಮ್ಮ ಕರ್ತವ್ಯ. ಹಾಂ ಒಂದು ಕೆಲಸ ನೀವು ಮಾಡಬಹುದು. ಈ ಹಸಿರು ಫೈಲು ಯಾರಿಂದ ನಿಮಗೆ ಬಂದಿತೆಂದು ವಿವರಿಸಿ ಅದರಲ್ಲಿಯ ವಿಷಯ ತಿಳಿಯಬಹುದು."

"ಗುಡ್, ಒಳ್ಳೆಯ ವಿಚಾರ. ಅದನ್ನೀಗಲೇ ಮಾಡುವೆ."

"ರಾಮನಾಥ ಅವರು ಸಮಯ ನೋಡಿಕೊಂಡರು. ನಾಲ್ಕೂವರೆಗೆ ಸಮೀಪಿಸಿತ್ತು. ಕೆಲ ಸಮಯ ಯೋಚಿಸಿದ ಅವರು ಕೊನೆಗೆ ಟೆಲಿಫೋನನ್ನು ಸರಿಸಿಕೊಂಡೇ ಬಿಟ್ಟರು. ತಮ್ಮ ಹತ್ತಿರ ಎರಡು ನಿಮಿಷಗಳವರೆಗೆ ಟೆಲಿಫೋನ್ ಗಂಟೆ ಬಾರಿಸಿದರೂ ಆ ಕಡೆಯಿಂದ ಯಾರೂ ರಿಸೀವರ್ ಎತ್ತದಿದ್ದರೂ ರಾಮ ನಾಥರು ನಿರಾಶರಾಗಲಿಲ್ಲ. ತಾಳ್ಮೆಯಿಂದ ಕಾಯುತ್ತಲೇ ಇದ್ದರು. ಅವರ ತಾಳ್ಮೆಗೆ ಫಲ ದೊರೆಯಿತು. ಗಂಟೆ ನಿನಾದ ನಿಂತು ಆ ಕಡೆಯಿಂದ ನಿದ್ದೆ ಯಲ್ಲಿಯೇ ಸಿಡಿಮಿಡಿ ದನಿ ಕೇಳಿಸಿತು. ಅದು ನಾರೀಕಂಠ.

"ಹಲೋ ಯಾರು? ಯಾರು ಬೇಕಾಗಿತ್ತು"

ಆ ಕಂಠ ಯಾರದೆಂದು ಎಸ್.ಪಿ. ಅವರಿಗೆ ಗೊತ್ತು. ಸಿಡಿಮಿಡಿ ಕಂಠಕ್ಕೆ ಕಾರಣವೂ ತಿಳಿದಿತ್ತು.

"ಮಿಸೆಸ್ ಶ್ಯಾಮಸುಂದರ ತೊಂದರೆ ಕೊಡುತ್ತಿರುವೆ ಕ್ಷಮಿಸಿ. ಅವಶ್ಯಕ ಕೆಲಸವಿದ್ದುದರಿಂದ ಶ್ಯಾಮಸುಂದರ ಅವರಿಗೆ ಕಷ್ಟ ಕೊಡಬೇಕಾಗಿದೆ. ಸ್ವಲ್ಪ ಅವರನ್ನು ಕರೆಯುತ್ತೀರಾ?" ರಾಮನಾಥರ ವಿನಯಪೂರ್ವ ಆಗ್ರಹಕ್ಕೆ ಶ್ರೀಮತಿ ಶ್ಯಾಮಸುಂದರ ತುಸು ಮಿದುವಾದರು.

"ತಾವು ಯಾರು ಮಾತನಾಡುತ್ತಿರುವವರು? ಅವರಿಗೆ ಯಾರೆಂದು ತಿಳಿಸ ಬೇಕು?"

"ಕ್ಷಮಿಸಿ, ನಾನು ನನ್ನ ಪರಿಚಯ ಹೇಳಲೇ ಇಲ್ಲ. ಅವರಿಗೆ ರಾಮನಾಥ

ಅಂತ ಹೇಳಿ. ಎಸ್. ಪಿ. ರಾಮನಾಥ"

ರಾಮನಾಥ ಮುಗುಳುನಗೆ ನಕ್ಕರು. ಆಕಡೆ ಶ್ರೀಮತಿ ಶ್ಯಾಮಸುಂದರ ಅವರ ಕೈಯಿಂದ ರಿಸೀವರ್ ಜಾರಿದು ಕೆಳಗೆ ಬೀಳುವದರಲ್ಲಿತ್ತು.

"ಸಾರಿ ಸರ್, ನನಗೆ ಮೊದಲೇ ತಿಳಿಯಲಿಲ್ಲ. ಇದೀಗ ಅವರನ್ನು ಎಬ್ಬಿಸುತ್ತೇನೆ"

ರಾಮನಾಥ ಅವರ ವಿನಮ್ರ ನಡತೆಗೆ ಹೇಮಂತ ಮಾರುಹೋಗಿದ್ದ. ಜಿಲ್ಲಾ ಪೊಲೀಸ್ ಅಧಿಕಾರಿಯಾಗಿದ್ದರೂ ಆ ವೇಳೆಯಲ್ಲಿ ತನ್ನ ಸಿಬ್ಬಂದಿಯವರೊಂದಿಗೆ ಕೆಲಸ ಬಂದಾಗ ಅವರು ಎಷ್ಟು ನಮ್ರರಾಗುತ್ತಾರೆ ಎಂಬುದು ಅವನಿಗೆ ಬಹಳಷ್ಟು ಮೆಚ್ಚುಗೆಯಾಯಿತು. ಇಂಥ ಅಧಿಕಾರಿಗಳೇ ಪೊಲೀಸ್ ಇಲಾಖೆಗೆ ಗೌರವ ಎಂದುಕೊಂಡ ಮನಸ್ಸಿನಲ್ಲಿ.

ಪುನಃ ರಾಮನಾಥರ ಕಂಠ ಕೇಳಿಸಿತು.

"ಹಲೋ ಶ್ಯಾಮಸುಂದರ, ಛೆ ಛೆ ನೀವೇಕೆ ಕ್ಷಮೆ ಕೇಳುತ್ತೀರಿ? ಪಾಪ ನಿಮ್ಮ ಶ್ರೀಮತಿಯವರದೇನೂ ತಪ್ಪಿಲ್ಲ. ತಪ್ಪು ನನ್ನದೇ. ಹಾಂ, ಒಂದು ವಿಷಯ. ನಿನ್ನೆ ಸಾಯಂಕಾಲ ನನ್ನ ಬಳಿ ಐದಾರು ಫೈಲ್ ಕಳಿಸಿದಿರಿ. ಅದರಲ್ಲೊಂದು ಹಸಿರು ಬಣ್ಣದ ಫೈಲಿತ್ತು. ಅದರ ಮೇಲೆ ಕೆಂಪು ಶಾಯಿಯಿಂದ ಐ. ಎಂ. ಪಿ. ಎಂದು ಬರೆಯಲಾಗಿತ್ತು.

"ಹೌದು, ನೆನಪಿದೆ ನನಗೆ.... ಅದನ್ನು ನಾನೇ ಕಳಿಸಿದ್ದೆ. ತುಂಬಾ ಅರ್ಜಂಟ್ ಎಂದು ಹೇಳಿದ ಚವ್ಹಾಣ."

"ಯಾರು ಚವ್ಹಾಣ?

"ಅದೇ ಸರ್, ನಮ್ಮ ಇನ್ಸಪೆಕ್ಟರ್ ಚವ್ಹಾಣ ಉಪನಗರದಲ್ಲಿದ್ದಾರಲ್ಲ. ಅವರೇ ಕಳಿಸಿದ ಫೈಲು ನಾಲ್ಕೈದು ತಿಂಗಳ ಹಿಂದೆ ನಡೆದ ಬ್ಯಾಂಕ್ ರಾಬರಿಗೆ ಸಂಬಂಧಿಸಿದ್ದು. ಆ ಗಲಭೆ ಹಿಂದೆ ಇರುವ ಕೆಲವೊಂದು ಸಭ್ಯ ಗೃಹಸ್ಥರ ಮುಖವಾಡ ಕಳಚುವ ಸನ್ನಿವೇಶ ಬಂದಿದೆ ಎಂದು ಅವರೇ ಹೇಳುತ್ತಿದ್ದರು. ತಮ್ಮ ಒಪ್ಪಿಗೆಗಾಗಿ ಫೈಲ್ ಕಳಿಸಿದ್ದರು."

"ಓಹ್, ಹೀಗೋ ವಿಷಯ"

"ಹೌದು ಸರ್, ಅದರ ಬಗ್ಗೆ ಇಷ್ಟು ಮಧ್ಯರಾತ್ರೀಲಿ...... "

"ಅದನ್ನು ನಂತರ ತಿಳಿಸುತ್ತೇನೆ. ಒಂದು ಕೆಲಸ ಮಾಡಿ ಶ್ಯಾಮಸುಂದರ. ಸಾಧ್ಯವಾದರೆ ಕೂಡಲೇ ನನ್ನನ್ನು ಭೆಟ್ಟಿಯಾಗುವಂತೆ ಚವ್ಹಾಣರಿಗೆ ತಿಳಿಸಿ. ನಾನು ಬಂಗಲೆಯಲ್ಲಿ ದಾರಿ ಕಾಯುತ್ತೇನೆ."

"ಸರಿ ಸರ್."

ರಿಸೀವರ' ಕೆಳಗಿರಿಸಿದ ರಾಮನಾಥ ಹೇಮಂತನಿಗೆ ಎಲ್ಲ ವಿಷಯ ತಿಳಿಸಿದಾಗ ಆತನ ಮುಖದ ಮೇಲೆ ಮಂದಹಾಸ ತೇಲಿ ಮಾಯವಾಯಿತು.

"ಏಕೆ ನಗುತ್ತಿದ್ದೀರಿ"

"ದುನಿಯಾ ಗೋಲ್ ಹೈ ಎಂದು ಯೋಚಿಸಿ ನಗೆ ಬಂತು."

"ಅದಕ್ಕೂ ಇದಕ್ಕೂ ಏನು ಸಂಬಂಧ?"

"ಬೇಕಾದಷ್ಟಿದೆ... ನಾನು ನನ್ನ ಕೇಸನ್ನು ಎಲ್ಲಿಂದ ಪ್ರಾರಂಭಿಸಿದೆನೋ.... ಪುನಃ ಅಲ್ಲಿಗೇ ಬರುತ್ತಿದ್ದೇವೆ. ಅದಕ್ಕೆ ಸಂಬಂಧ ತುಂಬಾ ಗೂಢವಿದೆ ಎಂದು ಅನಿಸ್ತಾ ಇದೆ. ಈ ಹಸಿರು ಫೈಲಿನ ರಹಸ್ಯ ತಿಳಿದರೆ ಸಾಕು. ಕೇಸಿಗೊಂದು ನಾಂದಿ ಹಾಡಬಹುದು."

"ಹೀಗೋ"

"ಹಾಂ... ಹೌದು...."

ಹತ್ತು ನಿಮಿಷಗಳಾದರೂ ಶ್ಯಾಮ್‌ಸುಂದರನಿಂದ ಫೋನು ಬರದಾಗಲು, ರಾಮನಾಥ ಚಿಂತಿತರಾದರು. ಅವರೆ ಇನ್ನೊಂದು ಬಾರಿ ಫೋನು ಮಾಡಬೇಕೆಂದು ಯೋಚಿಸುತ್ತಿರುವಂತೆಯೇ ಗಂಟೆ ಬಾರಿಸಿತು. ಚವ್ಹಾಣ ಇರಬೇಕೆಂದುಕೊಳ್ಳುತ್ತ ರಿಸೀವರ್ ಎತ್ತಿದರು.

"ಸರ್ ನಾನು ಶ್ಯಾಮ್‌ಸುಂದರ ಮಾತಾಡ್ತಿರೋದು".

"ಏಕೆ ಚವ್ಹಾಣ ಸಿಗಲಿಲ್ಲವೇ ?"

"ಇಲ್ಲ ಸರ್.... ಫೋನಿನ ಗಂಟೆ ಬಾರಿಸ್ತಾನೇ ಇದೆ. ಯಾರೂ ರಿಸೀವ್ ಮಾಡ್ತಾ ಇಲ್ಲ. ಅರ್ಧ ಗಂಟೆ ಬಿಟ್ಟು ಪುನಃ ಪ್ರಯತ್ನಿಸುತ್ತೇನೆ".

"ಸರಿ, ಹಾಗೇ ಮಾಡಿ"

ಉತ್ಸಾಹ ಕುಂದಿದ ಎಸ್. ಪಿ.ಯವರು ರಿಸೀವರ್ ಕಳಿಸಿದ ಅವರೇನೂ ಹೇಳದಿದ್ದರೂ ಶ್ಯಾಮಸುಂದರ ಏನು ಹೇಳಿರಬಹುದು ಎಂಬುದನ್ನು ಹೇಮಂತ ಊಹಿಸಿದ್ದ.

"ರಾಮನಾಥ ಅವರೆ....ನಾನು ಹೀಗೆ ಹೇಳುತ್ತಿದ್ದೇನೆ ಅಂತ ತಪ್ಪುತಿಳಿಯಬೇಡಿ. ನನಗೇಕೋ ಲಕ್ಷಣಗಳು ಶುಭ ಸೂಚಿಸುತ್ತಿಲ್ಲ. ಚವ್ಹಾಣ ಅವರು ಕಷ್ಟದಲ್ಲಿದ್ದಾರೆಂದು ಅನಿಸ್ತಾ ಇದೆ. ಅವರ ಮನೆ ಎಲ್ಲಿದೆ ಅಂತ ತಿಳಿದರೆ ನಾನು...."

"ನನಗೆ ಗೊತ್ತು, ನಡೆಯಿರಿ. ನಾನೇ ತಮ್ಮ ಜೊತೆ ಬರುತ್ತೇನೆ."

ಗಾಂಧಿಚೌಕದಲ್ಲಿ ಹಾಯ್ದು ರಾಘವೇಂದ್ರ ಸ್ವಾಮಿ ಮಠದ ಹತ್ತಿರ ಹೇಮಂತನ ಕಾರು ಬರುತ್ತಿದ್ದಂತೆ "ಬದಿಗೆ ತಿರುಗಿಸಿ ಅಲ್ಲೇ ನಿಲ್ಲಿಸಿ. ನರಸಿಂಹ ದೇವಸ್ಥಾನವಿದೆ. ಅದರ ಎದುರಿಗೆ ಇರುವ ಬಂಗಲೆಯೇ ಚವ್ಹಾಣ ಇನ್ಸ್‌ಪೆಕ್ಟರ್

ರದು" ಎಂದರು ರಾಮನಾಥ. ಹೇಮಂತ ಹಾಗೆಯೇ ಮಾಡಿದ. ಕಾರಿನಿಂದಿಳಿಯುತ್ತ ಬಂಗಲೆಯತ್ತ ನೋಡಿದ. ಬಂಗಲೆಯಲ್ಲಿಯ ಎಲ್ಲ ದೀಪಗಳು ಉರಿಯುತ್ತಿರುವುದನ್ನು ಗಮನಿಸಿದ ಹೇಮಂತನ ಹುಬ್ಬುಗಳು ಗಂಟಿಕ್ಕಿದವು. ಬಂಗಲೆಯತ್ತ ದಾಪುಗಾಲು ಹಾಕುತ್ತ ನುಡಿದ.

"ರಾಮನಾಥರೆ" ನನ್ನ ಸಂಶಯ ನಿಜವಾಯಿತು ಅಂತ ಅನಿಸ್ತಾ ಇದೆ. ದೀಪಗಳೆಲ್ಲಾ ಉರಿಯುತ್ತಿದ್ದರೂ ಟೆಲಿಫೋನ್ ರಿಸೀವ್ ಮಾಡಲಿಲ್ಲ ಎಂದರೆ ಏನೋ ಅನಾಹುತ ನಡೆದಿದೆ ಎಂದು ಅರ್ಥ....ಬೇಗ ಬನ್ನಿ."

ಬಂಗಲೆಯ ಮುಂದಿನ ದೊಡ್ಡ ಬಾಗಿಲು ಮುರಿದು ಬಿದ್ದಿತ್ತು.

ಒಳಗಿನ ದೃಶ್ಯ ಅಲ್ಲೊಂದು ಸಂಗ್ರಾಮ ನಡೆದುದಕ್ಕೆ ಮೂಕ ಸಾಕ್ಷಿ ಹೇಳುತ್ತಿತ್ತು. ಎಲ್ಲರೂ ಚವ್ಹಾಣರ ಬೆಡ್‌ರೂಮಿಗೆ ಬಂದರು. ಸುಟ್ಟವಾಸನೆ, ಹೊಗೆ ಎಲ್ಲೆಡೆ ಹರಡಿತ್ತು. ರೂಮಿನ ಒಂದೆಡೆ ಬೂದಿ ಹಾರಾಡುತ್ತಿತ್ತು. ಅಲ್ಲೇ ಕುರ್ಚಿಯಲ್ಲಿ ಕುಸಿದು ಬಿದ್ದಿದ್ದರು ಚವ್ಹಾಣರು. ಪಕ್ಕೆಯಿಂದ ಧಾರೆಯಾಗಿ ಹರಿದ ರಕ್ತ ಕಾರ್ಪೆಟ್‌ನಲ್ಲಿ ಇಳಿದು ಅಲ್ಲೇ ಇಂಗಿಹೋಗಿತ್ತು. ಅವರತ್ತ ಧಾವಿಸಿದ ಹೇಮಂತ ಉಸಿರು ಪರೀಕ್ಷಿಸಿ ಕೂಗಿಕೊಂಡ. "ಉಸಿರಾಟ ಇದೆ ಬೇಗ ಆಸ್ಪತ್ರೆಗೆ ಸೇರಿಸಬೇಕು"

ಧಪ್ ಧಪ್ ಎಂಬ ಸಪ್ಪಳದೊಂದಿಗೆ ಒಳಗಡೆ ಯಾರೋ ಕೂಗಿಕೊಂಡರು. "ಬಾಗಿಲು ಬಾಗಿಲು.... ಬಾಗಿಲು ತೆರೆಯಿರಿ. ಬಾಗಿಲು...."

## ೧೪

ಸುಷಮಾಳೊಂದಿಗೆ ಹೇಮಂತ ಮತ್ತು ಅಶೋಕ ಮನೆಗೆ ಬಂದಾಗ ಹತ್ತು ಗಂಟೆಯಾಗಿತ್ತು. ಸುಷಮಾ ಸುಖಕರವಾಗಿ ರಾತ್ರಿ ನಿದ್ದೆ ಮಾಡಿದ್ದರೆ ಹೇಮಂತ ಹಾಗೂ ಅಶೋಕ ಕಣ್ಣುರೆಪ್ಪೆ ಸಹ ಮುಚ್ಚಿರಲಿಲ್ಲ. ಇಡೀ ರಾತ್ರಿಯೆಲ್ಲ ಓಡಾಟ, ವಿಚಾರಣೆ, ಪರಿಶೀಲನೆ, ಆಸ್ಪತ್ರೆ ಮುಂತಾದವುಗಳಲ್ಲಿ ಕಳೆದು ಹೋಗಿತ್ತು. ಹೀಗಾಗಿ ಅವರಿಬ್ಬರ ಕಣ್ಣುಗಳು ಭಗಭಗ ಉರಿಯತೊಡಗಿದ್ದವು, ತಲೆ ಭಾರವಾಗಿತ್ತು, ಕಣ್ಣುಗಳು ತಮ್ಮಷ್ಟಕ್ಕೆ ತಾವೇ ಮುಚ್ಚತೊಡಗಿದ್ದವು.

ಚವ್ಹಾಣ ಅವರಿಗೆ ಕೂಡಲೇ ಚಿಕಿತ್ಸೆ ದೊರೆತದ್ದರಿಂದ ಪ್ರಾಣಕ್ಕೇನೂ

ಅಪಾಯವಿಲ್ಲವಾದರೂ ಎಂಟು ಹತ್ತು ದಿವಸ ಅವರನ್ನು ಯಾರೂ ನೋಡುವಂತಿರಲಿಲ್ಲ. ಅವರೊಂದಿಗೆ ಮಾತನಾಡುವಂತಿರಲಿಲ್ಲ. ದೂರದಿಂದ ನೋಡಬಹುದಿತ್ತು ಅಷ್ಟೇ. ವೈದ್ಯರು ತಮ್ಮ ಸಿಬ್ಬಂದಿಯ ಮೇಲ್ವಿಚಾರಣೆಯಲ್ಲಿ ಅವರನ್ನು ತುರ್ತುವಿಭಾಗದಲ್ಲಿರಿಸಿದ್ದರು. ಅವರ ಪತ್ನಿ ಮತ್ತು ಮೂರು ವರ್ಷದ ಮಗು ಇಬ್ಬರೂ ಈಗ ಗುಣಮುಖವಾಗಿದ್ದರು. ರಾತ್ರಿ ಮೂರು ಗಂಟೆಯ ಸುಮಾರಿಗೆ ಮನೆಯ ಬಾಗಿಲು ಮುರಿದು ಒಳನುಗ್ಗಿದ ಯಮದೂತನಿಂದಾಗಿ ಅವರು ದೈಹಿಕವಾಗಿ, ಅದಕ್ಕಿಂತ ಹೆಚ್ಚು ಮಾನಸಿಕವಾಗಿ ಹಿಂಸೆ ಅನುಭವಿಸಿದ್ದರು. ಅವರ ಪತ್ನಿಯೊಂದಿಗೆ ತಮ್ಮ ರಕ್ಷಣೆ ಸಹ ಮಾಡಿಕೊಳ್ಳಲು ಮುಂದಾಗಿ ಚವ್ಹಾಣ ರಿವಾಲ್ವರ್ ಉಪಯೋಗಿಸಿದ್ದು ಯಾವ ಪ್ರಯೋಜನವಾಗಿರಲಿಲ್ಲ. ಗುಂಡುಗಳು ತಾಗಿದರೂ ಆತ ಸಾಯಲಿಲ್ಲ. ದೇಹದಿಂದ ಹನಿ ರಕ್ತ ಸಹ ಬಂದಿರಲಿಲ್ಲ. ಅವರ ಕೈಯಲ್ಲಿಯ ರಿವಾಲ್ವರ್ ಕಸಿದು ಅದರಿಂದಲೇ ಅವರಿಗೇ ಗುಂಡು ಹಾಕಿದ ಯಮದೂತ. ಹೆಂಡತಿ ಮಗುವನ್ನು ರೂಮಿನೊಳಗೆತಳ್ಳಿ ಚಿಲಕ ಎಳೆದಿದ್ದ. ಆಮೇಲೆ ಆಫೀಸಿನಲ್ಲಿಯ ಕಾಗದಗಳನ್ನೆಲ್ಲ ಒಂದೆಡೆ ಕೂಡಿ ಹಾಕಿ ಬೆಂಕಿಯಿಟ್ಟು ಅಲ್ಲಿಯ ಜಾಗ ಖಾಲಿ ಮಾಡಿದ್ದು ಇವೆಲ್ಲ ಕೇವಲ ಇಪ್ಪತ್ತು ನಿಮಿಷಗಳಲ್ಲಿ ನಡೆದಿದ್ದವು. ಅರ್ಧಮರ್ಧ ಸುಟ್ಟ ಕಾಗದಗಳಲ್ಲದೇ ಇನ್ನೂ ಕೆಲವು ಫೈಲುಗಳನ್ನು ತನ್ನ ಜೊತೆ ತಂದಿದ್ದ ಹೇಮಂತ. ಆತ ಚವ್ಹಾಣನ ಪತ್ನಿಗೆ ಕೇಳಿದ ಪ್ರಶ್ನೆ ಒಂದೇ ಒಂದು.

"ಆ ವ್ಯಕ್ತಿಯಿಂದ ಏನಾದರೂ ಸಪ್ಪಳ....ಧ್ವನಿ ಹೊರಬರುತ್ತಿತ್ತೆ?"

ಅವಳು ತಟ್ಟನೆ ಉತ್ತರಿಸಿದ್ದಳು.

"ಹೌದು, ಝುನ್ ಝುನ್ ಎಂಬ ಸಂಗೀತ ಕೇಳುತ್ತಿತ್ತು. ಅದರೊಂದಿಗೆ ಯಾರೋ ತೀರ ಕ್ಷೀಣ ಧ್ವನಿಯಲ್ಲಿ ಏನೋ ಆದೇಶ ನೀಡುತ್ತಿದ್ದರು."

ಹೇಮಂತನಿಗೂ ಅಷ್ಟೇ ಬೇಕಾಗಿತ್ತು.

ಮನೆಗೆ ಬರುತ್ತಲೇ ಎಲ್ಲಾ ಫೈಲು, ಸುಟ್ಟ ಕಾಗದಗಳನ್ನು ತನ್ನ ಬೀರುವಿನಲ್ಲಿ ಭದ್ರವಾಗಿರಿಸಿ ಅಶೋಕನನ್ನು ಕರೆದು ನಾಲ್ಕಾರು ವಿಳಾಸ ಬರೆದುಕೊಳ್ಳಲು ತಿಳಿಸಿದ. "ಇವರಿಗೆಲ್ಲ ಅರ್ಜಂಟ್ ರಿಪ್ಲೈ ಟೆಲಿಗ್ರಾಂ ಮಾಡು. ನಾವು ಕೇಳಿದ ವಿಷಯದ ಬಗ್ಗೆ ಹನ್ನೆರಡು ಗಂಟೆಗಳಲ್ಲಿ ಉತ್ತರ ಬೇಕೆಂದು ತಿಳಿಸು" ಎಂದು ಆದೇಶ ನೀಡಿದ.

ಅಶೋಕ ಹೊರಟು ನಿಂತಾಗ ಮೇಜರ್ ಹೇಳಿದ.

"ನೀನು ಒಂದೆರಡು ಗಂಟೆ ವಿಶ್ರಾಂತಿ ತೆಗೆದುಕೊಂಡರೆ ಒಳ್ಳೆಯದು. ನಾನೂ ಸಹ ಮಲಗುತ್ತೇನೆ. ನಿದ್ದೆ ಮಾಡಿ ಎದ್ದ ಮೇಲೆ ಈ ಸಮಸ್ಯೆ ಬಗ್ಗೆ

ವಿಚಾರಿಸಬಹುದು".

"ಹಾಗೇನಿಲ್ಲ. ನಾನು ಟೆಲಿಗ್ರಾಂ ಮಾಡಿಬಂದು ಮಲಗಿಕೊಳ್ಳುತ್ತೇನೆ"

ಹೇಮಂತ ಬೆಡ್‌ರೂಮ್ ಸೇರಿದ್ದನ್ನು ಗಮನಿಸಿದಳು ಸುಷಮಾ. ಅವಳ ಶರೀರದಲ್ಲಿ ರೋಮಾಂಚನದ ಅಲೆಗಳು ಎದ್ದವು. ಮೈತುಂಬ ಮಾದಕತೆ ತುಂಬಿ ಕೊಂಡು ಆಕೆ ಬೆಡ್‌ರೂಮ್ ಸೇರಿದಾಗ ಹೇಮಂತ ಮೆಲುವಾಗಿ ಗೊರಕೆ ಹೊಡೆ ಯುತ್ತಿದ್ದುದನ್ನು ಕಂಡು ಆಕೆಗೆ ನಗೆಯೊಂದಿಗೆ ಹೇಮಂತನ ಮೇಲೆ ಪ್ರೀತಿಯೂ ಉಕ್ಕಿ ಬಂದಿತು. ಅವನ ಪಕ್ಕದಲ್ಲಿ ತಾನೂ ಒರಗಿ ಅವನ ಮುಖವನ್ನು ತನ್ನೆದೆ ಯಲ್ಲಿ ಹುದುಗಿಸಿಕೊಂಡು ಅವನ ಕೂದಲುಗಳಲ್ಲಿ ಮೃದುವಾಗಿ ಬೆರಳಾಡಿಸ ತೊಡಗಿದಳು.

ಸರಿಯಾಗಿ ಎರಡು ಹೊಡೆಯುತ್ತಿದ್ದಂತೆ ಅಲಾರಾಮ್ ಇಟ್ಟುಕೊಂಡು ಮಲಗಿದವರ ಹಾಗೆ ಹೇಮಂತ ಎಚ್ಚೆತ್ತ. ತಾಯಿ ಮಗುವನ್ನು ಅವುಚಿ ಕೊಂಡಂತೆ ತನ್ನನ್ನು ತನ್ನ ತೆಕ್ಕೆಯಲ್ಲಿ ತೆಗೆದುಕೊಂಡು ತನ್ನೊಂದಿಗೆ ನಿದ್ರಿಸು ತ್ತಿದ್ದ ಸುಷಮಾಳ ಬಗ್ಗೆ ಹೆಮ್ಮೆ ಮೂಡಿತು. ದಣಿದು, ಸೋತುಬಂದ ಪುರುಷನಿಗೆ ಸಮಾಧಾನ, ಸುಖ, ಶಾಂತಿ ನೀಡುವ ಒಂದೇ ಒಂದು ತಾಣವೆಂದರೆ ಅವನ ನಲ್ಲೆಯ ಮುಕ್ತ ಹೃದಯ... ತೆರೆದ ಬಾಹುಗಳು, ಮನ ತಣಿಸುವ ಅವಳ ಮಡಿಲು. ಇದನ್ನು ಪಡೆದ ಪುರುಷನೇ ಧನ್ಯ. ಅಂಥದರಲ್ಲಿ ತಾನೂ ಒಬ್ಬನಾಗಿರುವೆ ಎಂದುಕೊಂಡು ಪುಲಕಿತನಾದ. ತನ್ನೆದೆಗೆ ಒತ್ತಿಕೊಂಡು ಏರಿಳಿಯುತ್ತಿದ್ದ ಅವಳ ಸುಂದರ ಪುಟ್ಟ-ಪುಟ್ಟ ಕುಚಗಳು ಅವನ ಶರೀರವನ್ನು ಬೆಚ್ಚಗೆ ಮಾಡಿದವು. ತಾವರೆಯ ಬಳ್ಳಿಯಂತಿದ್ದ ನೀಳಬಾಹುಗಳು ಹಿತ ನೀಡಿ ದವು. ಅವಳ ಬಿಸಿಯುಸಿರು ಮನಕ್ಕೆ ಮುದ ನೀಡಿತು. ಅವಳ ಮುಚ್ಚಿದ ಕಣ್ಣು ಗಳನ್ನು ಆತ ಮೆಲುವಾಗಿ ಚುಂಬಿಸಿದಾಗ ಆಕೆಗೆ ಎಚ್ಚರವಾಯಿತು. ಕಣ್ತೆರೆದು ನೋಡಿ ಮುಗುಳುನಗೆ ಬೀರಿದಳು. ಕಣ್ಣಲ್ಲೇ ಅಭಿನಂದನೆ ಸೂಚಿಸಿದ ಹೇಮಂತ. ಅವಳ ದೇಹದ ಮೇಲೆಲ್ಲಾ ಒಂದು ಬಾರಿ ಕೈಯಾಡಿಸಿ ತುಟಿಗಳನ್ನು ಚುಂಬಿಸಿ, ಅವಳ ಬಾಹುಗಳಿಂದ ಬಿಡಿಸಿಕೊಂಡು ಮೇಲೇಳುತ್ತ ಹೇಳಿದ.

"ಸುಷಮಾ ನನಗೆ ತುಂಬಾ ಹಸಿವೆಯೆನಿಸಿದೆ."

ಆಕೆ ಮೋಹಕವಾಗಿ ನಕ್ಕು ಉತ್ತರಿಸಿದಳು.

"ಅಷ್ಟು ಭಯಂಕರವಾಗಿ ಹಸಿವೆಯಾಗಿದ್ದರೆ ನನ್ನನ್ನೇ ತಿನ್ನಬಹುದಲ್ಲ?"

"ನನಗೂ ಅದೇ ಆಸೆ ಆಗ್ತಾ ಇದೆ. ಹಗಲು ಈ ಭಯಂಕರ ಊಟ ಸರಿ ಯಲ್ಲ.ರಾತ್ರಿಯೇ ಗಡದ್ದಾಗಿ ಹೊಡೆದರಾಯ್ತೆಂದು ನಿರ್ಧರಿಸಿದ್ದೇನೆ.ಇದಕ್ಕೇನೆನ್ನು

ತ್ತೀಯಾ?"

"ಥೂ.... ಇತ್ತೀಚೆಗೆ ನೀವಂತೂ ತುಂಬಾ ಕೆಟ್ಟುಹೋಗಿದ್ದೀರಿ .. "

"ಹೌದು. ಏನು ಮಾಡಲಿಕ್ಕಾಗುತ್ತದೆ........ ಎಲ್ಲಾ ಸಹವಾಸ ಸಂಗ ದೋಷ." ಹೇಮಂತ ಸರಿಯಾದ ಮಾತಿನ ಪೆಟ್ಟು ಕೊಟ್ಟಾಗ ಆಕೆ ನಾಚಿ ತಲೆ ದಿಂಬಿನಲ್ಲಿ ಮುಖ ಮುಚ್ಚಿಕೊಂಡಳು.

ಅಶೋಕನು ಎದ್ದು ಬಂದಿದ್ದರಿಂದಾಗಿ ಮೂವರೂ ಸೇರಿ ಊಟಮಾಡಿ ಆಫೀಸ್‌ರೂಮಿಗೆ ಬಂದರು. ಅರೆಸುಟ್ಟುಹೋದ ಕಾಗದಗಳು, ಫೈಲ್ ತೆಗೆದು ತನ್ನ ಮುಂದೆ ಹರವಿಕೊಳ್ಳುತ್ತ ಹೇಮಂತ ಹೇಳಿದ. 'ನನಗೆ ಈಗ ಒಂದೆರಡು ಗಂಟೆ ಕೆಲಸವಿದೆ. ನನ್ನನ್ನು ಈಗ ಯಾರೂ ಮಾತನಾಡಿಸಬೇಡಿ. ಅಲ್ಲಿಯವರೆಗೂ ನೀವಿಬ್ಬರೂ ಒಂದು ಕೆಲಸ ಮಾಡಿ. ಸೆಂಟ್ರಲ್ ಲೈಬ್ರರಿಗೆ ಹೋಗಿ ದೇಸಾಯಿ ಅವರನ್ನು ಭೆಟ್ಟಿಯಾಗಿರಿ. ನನಗೆ ಮೂರು ವರ್ಷಗಳ ಹಿಂದಿನ ಇಂಗ್ಲೀಷ ಪತ್ರಿಕೆಗಳು ಬೇಕಾಗಿವೆ. ಎಲ್ಲಿಂದ ಎಲ್ಲೀವರೆಗೆ, ಯಾವ ಯಾವ ಪತ್ರಿಕೆಗಳು ಎಂಬುದನ್ನು ಗುರುತು ಹಾಕಿ ಕೊಡುತ್ತೇನೆ. ಅವುಗಳನ್ನು ಇಸಿದುಕೊಂಡು ಬನ್ನಿ."

ಒಂದು ಕಾಗದದ ಮೇಲೆ ಗುರುತು ಹಾಕಿಕೊಟ್ಟ ಹೇಮಂತ.

ಅವರಿಬ್ಬರೂ ಹೊರನಡೆದರು. ಹೊರನಡೆಯುವ ಮುನ್ನ ಸುಷಮಾ ಟೆಲಿಫೋನ್ ರಿಸೀವರ್ ಎತ್ತಿ ಕೆಳಗಡೆ ಇಟ್ಟು ವಿಶೇಷ ಯಂತ್ರದ ಗುಂಡಿಯನ್ನು ಅದುಮಿಡಲು ಮರೆಯಲಿಲ್ಲ.

ಅವರಿಬ್ಬರನ್ನೂ ದೇಸಾಯಿ ಅವರು ಪ್ರೀತಿಯಿಂದ ಬರಮಾಡಿಕೊಂಡು ಅರ್ಧಗಂಟೆ ಅವಧಿಯಲ್ಲೇ ಅವರು ಕೇಳಿದ ಎಲ್ಲ ಪತ್ರಿಕೆಗಳನ್ನೂ, ಮ್ಯಾಗಜಿನ್ ಗಳನ್ನೂ ತರಿಸಿಕೊಟ್ಟರು. ಅವರಿಗೆ ವಂದನೆ ಸಲ್ಲಿಸಿ ಪೇಟೆಯಲ್ಲಿ ಸ್ವಲ್ಪ ತಿಂಡಿ ಯನ್ನು ಖರೀದಿ ಮಾಡಿಕೊಂಡು ಅವರು ಮನೆಗೆ ಬಂದಾಗ ಒಂದೂಕಾಲು ಗಂಟೆ ಕಳೆದಿತ್ತು. ಸುಷಮಾ ಒಳಗೆ ಬರುತ್ತಲೂ ಮಾಡಿದ ಮೊದಲ ಕೆಲಸ ವೆಂದರೆ ರಿಸೀವರ್ ಯಥಾ ಸ್ಥಾನದಲ್ಲಿರಿಸಿ ವಿಶೇಷ ಯಂತ್ರದ ಗುಂಡಿ ಅದು ಮಿದ್ದು. ಒಟ್ಟು ಅದು ಎರಡು ಕಾಲ್‌ಗಳನ್ನು ರಿಕಾರ್ಡ್ ಮಾಡಿಕೊಂಡಿತ್ತು. ಒಂದು ಆಸ್ಪತ್ರೆಯಿಂದ, ಇನ್ನೊಂದು ಎಸ್. ಪಿ. ಆಫೀಸಿನಿಂದ. ಎರಡೂ ಕರೆ ಗಳನ್ನು ಇಬ್ಬರೂ ಆಲಿಸಿದರು. ಆಸ್ಪತ್ರೆಯಿಂದ ವೈದ್ಯರು ಚವ್ಹಾಣ ಅವರು ಸಂಪೂರ್ಣವಾಗಿ ಅಪಾಯದಿಂದ ಪಾರಾಗಿದ್ದಾರೆ ಎಂದು ಹೇಳಿದ್ದರೆ, ಎಸ್.ಪಿ. ಅವರು ಕೇಸು ಎಲ್ಲಿಗೆ ಬಂದಿತು? ಯಮದೂತನ ಬಗ್ಗೆ ಚಿಂತೆಯಾಗುತ್ತಿದೆ. ಸಾರ್ವಜನಿಕರಿಗೆ ರಕ್ಷಣೆ ನೀಡಲು ಯಾವ ಮುಂಜಾಗ್ರತಾ ಕ್ರಮ ತೆಗೆದುಕೊಳ್ಳ

ಬೇಕು ಎಂಬುದಾಗಿ ಕೇಳಿದ್ದರು.

ಸುಷಮಾ ಅವರಿಬ್ಬರಿಗೂ ಫೋನು ಮಾಡಿದಳು. ವೈದ್ಯರಿಗೆ ವಂದನೆ ಸಲ್ಲಿಸಿ ಚವ್ಹಾಣ ಅವರಿಗೆ ಎಲ್ಲಾ ಬಗೆಯ ಉತ್ತಮ ವ್ಯವಸ್ಥೆ ಮಾಡಬೇಕೆಂದು ವಿನಂತಿಸಿಕೊಂಡಳಲ್ಲದೇ ಅವರಿಗೆ ಎಚ್ಚರ ಬರುತ್ತಲೂ ಕೂಡಲೇ ತಿಳಿಸ ಬೇಕೆಂದು ಕೇಳಿಕೊಂಡಳು. ರಾಮನಾಥ ಅವರೊಂದಿಗೆ ಮಾತನಾಡಿ ಇನ್ನೊಂದರ್ಧ ಗಂಟೆ ಬಿಟ್ಟು ಹೇಮಂತ ಅವರಿಗೆ ವಿಷಯ ತಿಳಿಸುವದಾಗಿ ಹೇಳಿದಳು

ನಂತರ ಅಡುಗೆ ಮನೆಸೇರಿ 'ಕುರುಂ, ಕುರುಂ' ಎಂದು ಬಾಯಾಡಿ ಸುತ್ತ ಕಾಫಿ ಕುಡಿಯಲು ಅನುಕೂಲವಾಗುವಂತೆ ಹಗುರಾದ ಉಪಹಾರ ಸಿದ್ಧಪಡಿಸಿದಳು. ಕಾಫಿಯನ್ನು ಥರ್ಮಾಸ್‌ಗೆ ಸೋಸುವುದಕ್ಕೂ ಹೇಮಂತನ ಕೋಣೆ ಬಾಗಿಲು ತೆರೆಯುವದಕ್ಕೂ ಸರಿಹೋಯಿತು. ಸುಷಮಾ ಉಪಹಾರ ಹಾಗೂ ಕಾಫಿಯೊಂದಿಗೆ ಅವನ ರೂಮು ಪ್ರವೇಶಿಸಿದಳು. ಹಿಂದೆಯೇ ಅಶೋಕ ಸಹ ಬಂದ. ಕಾಫಿ ಕುಡಿಯುತ್ತ ಸುಷಮಾ ಎಲ್ಲಾ ವರದಿ ನೀಡಿ ದಳು. ಅದನ್ನೆಲ್ಲ ಆಲಿಸಿದ ಹೇಮಂತ.

"ನಾನೂ ಸಹ ಒಂದು ನಿರ್ಧಾರಕ್ಕೆ ಬಂದಿದ್ದೇನೆ. ಈ ಕೇಸಿಗೆ ಸಂಬಂಧಿಸಿದ ಎಲ್ಲಾ ವಿಷಯಗಳನ್ನು ಕ್ರಮವಾಗಿ ಬರೆದು ತೆಗೆದಾಗ ಚಿತ್ರ ಸ್ಪಷ್ಟವಾಗುತ್ತ ಬರುತ್ತದೆ. ಮಧ್ಯೆ ಒಂದೇ ಒಂದು ಕಡೆ ಕೊಂಡಿ ಕಳಚುತ್ತದೆ. ಅದೇ ಸರಿಯಾಗಿ ಅರ್ಥವಾಗುತ್ತಿಲ್ಲ.

"ಯಾವ ಕೊಂಡಿಯದು?" ಸುಷಮಾ ಕೇಳಿದಳು ಆಸಕ್ತಿಯಿಂದ.

"ರೋಜಿ ವಿಷಯ. ರೋಜಿ ಕಾಲ್‌ಗರ್ಲ್. ಕೆಲಿಯಾನ್ ಜೊತೆ ಒಂದು ರಾತ್ರಿ ಕಳೆದಳು. ಅಂದೇ ರಾತ್ರಿ ಅವನ ಕೊಲೆಯಾಯಿತು. ಆಕೆ ಕಾಣೆ ಯಾದಳು. ಆಕೆ ಪುನಃ ಪ್ರಕಟವಾದಾಗ ಅವಳನ್ನು ಕೊಲ್ಲುವ ಪ್ರಯತ್ನ ನಡೆ ಯಿತು. ಶೇಖರ್ ಆಸ್ಪತ್ರೆ ಸೇರಿದ. ಮುಂದೆ ಆಕೆಯನ್ನು ತಂದು ಗುಪ್ತವಾಗಿ ನಮ್ಮಲ್ಲಿಟ್ಟುಕೊಂಡರೂ ಆಕೆ ಇಲ್ಲಿಂದ ಓಡಿ ಕೊಲೆಯಾದಳು. ತನ್ನೊಂದಿಗೆ ತಿಮ್ಮಯ್ಯನನ್ನು ಕರೆದೊಯ್ದಳು. ಆ ಅತಿಮಾನವನಿಂದ ನನ್ನ ಮನೆ ಧ್ವಂಸ ವಾಯಿತು. ಅವರಿಗೇನು ಬೇಕಾಗಿತ್ತು? ರೋಜಿಯ ಕೊಲೆಯ ಕಾರಣವೇನು? ನಮ್ಮ ಮನೆಯನ್ನು ಯಾವ ವಸ್ತುವಿಗಾಗಿ ಶೋಧಿಸಲು ಅವರು ಮುಂದಾದರು? ಇವೇ ಮುಂತಾದ ಕೊಂಡಿಗಳು ಉಳಿದಿವೆ.''

ಒಂದು ನಿಮಿಷ ಮೌನ ವ್ಯಾಪಿಸಿತು. ದೀರ್ಘವಾಗಿ ಯೋಚಿಸಿದ ಅಶೋಕ ಉತ್ತರಿಸಿದ. "ರೋಜಿ ಕಾಲ್‌ಗರ್ಲ್ ಆದರೂ ಅವಳಿಗೆ ಅಂದು ರಾತ್ರಿ

ಯಾವದೋ ರಹಸ್ಯ ತಿಳಿದಿರಬೇಕು. ಆ ರಹಸ್ಯದಿಂದಾಗಿ ಕೆಲಿಯಾನ್ ಸಹ ಆಪತ್ತಿನಲ್ಲಿ ಸಿಲುಕಿಕೊಂಡಿರಲು ಸಾಕು. ಇನ್ನು ಕೆಲಿಯಾನ್ ನಮ್ಮ ಅತಿಥಿಯಾದರೆ ಮುಂದೇನು ಗತಿ ಎಂದು ತಿಳಿದ ಶತ್ರುಗಳು ತಾವೇ ಕಳಿಸಿದ ಏಜೆಂಟ್ ಕೆಲಿಯಾನ್‌ನನ್ನು ಮುಗಿಸಿದ್ದಾರೆ. ಅನಂತರ ರಹಸ್ಯ ಸ್ಫೋಟಗೊಳ್ಳಬಾರದೆಂದು ರೋಜಿಯನ್ನು ಹಾದಿಯಿಂದ ಸರಿಸಲು ಪ್ರಯತ್ನಿಸಿದ್ದಾರೆ.

"ಗುಡ್‌ಅಶೋಕ್ ನಿನ್ನ ತರ್ಕ ನನ್ನ ಸಮಸ್ಯೆಯನ್ನು ತುಸು ಬಗೆಹರಿಸುತ್ತದೆ."

"ಸೀಪರ್ಲ್‌ದಲ್ಲಿ ಗುಪ್ತವಾಗಿರಿಸಿದ್ದ ಕೆಮರಾ ಹಾಗೂ ಧ್ವನಿವರ್ಧಕಗಳಿಂದಾಗಿ ಶತ್ರು ತನ್ನ ಪ್ರಯೋಗಶಾಲೆಯಲ್ಲಿ ಕುಳಿತು ಕೆಲಿಯಾನ್‌ನ ಗುಪ್ತ ವಿಧಿಗಳನ್ನು ನೋಡಿದ್ದಾನೆ. ಮಾತುಗಳನ್ನು ಕೇಳಿದ್ದಾನೆ. ರೋಜಿ ಎದುರು ಆತ ಯಾವುದೋ ವಿಷಯ ಬಾಯಿಬಿಟ್ಟಿರಬೇಕು ಅಥವಾ ಅವನ ಬಳಿಯಲ್ಲಿದ್ದ ಯಾವದೋ ರಹಸ್ಯ ರೋಜಿಯ ಕೈಗೆ ಸಿಕ್ಕಿರಬೇಕು. ಅದಕ್ಕೆಂದೇ ಕೆಲಿಯಾನ್‌ನ ಕಥೆ ಮುಗಿಸಿ ರೋಜಿ ಹಿಂದೆ ಬಿದ್ದಿದ್ದಾರೆ. ಹಾಗಾದರೆ ರೋಜಿ ಬಳಿ ಇದ್ದ ಆ ರಹಸ್ಯ ಯಾವುದಿರಬಹುದು?"

"ಹಾಂ. ನನಗೀಗ ನೆನಪಾಯ್ತು" ತಟಕ್ನೆ ನುಡಿದಳು ಸುಷಮಾ.

"ಏನು ನೆನಪಾಯ್ತು"

"ರೋಜಿಯನ್ನು ಆ ಯಮದೂತ ಗಟ್ಟಿಯಾಗಿ ಕೇಳುತ್ತಿದ್ದುದು ಹೊರಗಿದ್ದ ನನಗೆ ಕೇಳಿಸುತ್ತಿತ್ತು: 'ಎಲ್ಲಿದೆ ಆ ಹಾಡುವ ಹಕ್ಕಿ.'

"ಏನೆಂದೆ? ಹಾಡುವ ಹಕ್ಕಿಯೇ?" ಉತ್ಸುಕತೆಯಿಂದ ಪ್ರಶ್ನಿಸಿದ ಮೇಜರ್.

"ಹಾಂ ಹಾಡುವ ಹಕ್ಕಿ. ಆದರಿಂದಾಗಿಯೇ ನಾವು ಕೆಲಿಯಾನ್‌ನನ್ನು ಮುಗಿಸಿದೆವು. ಆ ಹಕ್ಕಿ ಎಲ್ಲಿದೆ ಕೊಡು" ಎಂದಾತ ಕೇಳಿದಾಗ ಆಕೆ ಹೇಳಿದಳು, 'ಅದನ್ನು ಸೀಪರ್ಲ್‌ದಲ್ಲಿಯ ಥ್ರಿಬಲ್‌ಫೈವ್‌ದಲ್ಲಿದ್ದ ದಾಂಡಿಗರು ಕಸಿದುಕೊಂಡರು. ಅವರೇ ನನ್ನನ್ನು ಬಂಧನದಲ್ಲಿಟ್ಟದ್ದು. ಅದು ನನ್ನ ಬಳಿ ಇಲ್ಲ' ಎಂದು.

"ಓಹ್ ಸುಷಮಾ, ಇದು ಅತಿ ಮಹತ್ವದ ವಿಷಯ. ಹಾ.... ನಾನೀಗ ಹೇಳುವೆ ಕೇಳಿ. ಕೆಲಿಯಾನ್ ಭಾರತಕ್ಕೆ ಬಂದು ರಾಜಧಾನಿಯ ಸೀಪರ್ಲ್‌ದಲ್ಲಿ ಇಳಿದುಕೊಂಡ. ಆ ವಿಷಯ ಇನ್‌ಸ್ಪೆಕ್ಟರ್ ಶೇಖರ್‌ಗೆ ತಿಳಿಯಿತು. ಅಲ್ಲಿಂದ ಮುಂದೆ ಕೆಲಿಯಾನ್ ರಹಸ್ಯಮಯವಾಗಿ ಕೊಲೆಯಾದ. ರೋಜಿ ಕಣ್ಮರೆಯಾದಳು. ರೋಜಿ ಕೆಲಿಯಾನ್‌ನ ಹಾಡುವ ಹಕ್ಕಿಯನ್ನು ಅಪಹರಿಸಿದ್ದಳು. ಅದು ಕೆಲಿಯಾನ್‌ನ ಅಜಾಗರೂಕತೆಯ ಪರಿಣಾಮ. ಹಾಡುವ ಹಕ್ಕಿ ಶತ್ರುವಿಗೆ ಅತೀ ಮಹತ್ವದ್ದು. ಅದೇ ರಹಸ್ಯದ ಮಾತು. ಆದಕ್ಕಾಗಿ ಕುಪಿತಗೊಂಡ ಆತ ಕೆಲಿಯಾನ್‌ನನ್ನು ಮುಗಿಸಿದ.

ರೋಜಿ ಹಿಂದೆ ಬಿದ್ದ. ಥ್ರಿಬಲ್‌ಫೈವ್‌ದ ದಾಂಡಿಗರೂ ಸಹ ಅವಳ ಹಿಂದೆ ಬಿದ್ದರು. ಆಕೆ ಅವರಿಂದ ಪಾರಾಗಿ ನಂತರ ಅಶೋಕನಿಂದ ಪುನರ್ಜನ್ಮ ಪಡೆದು ನಮ್ಮ ಮನೆಗೆ ಬಂದಳು. ಆಕೆಯ ಬಳಿಯೇ ಹಾಡುವ ಹಕ್ಕಿ ಇತ್ತು. ಅದ ನ್ನಾಕೆ ನಮ್ಮ ಮನೆಯಲ್ಲಿಯೇ ಎಲ್ಲೋ ಬಚ್ಚಿಟ್ಟಿದ್ದಾಳೆ. ಆದರಿಂದಾಗಿಯೇ ಅವಳ ಕೊಲೆ ಮಾಡಿದರು. ಅದು ಸಿಗದಾಗಲು ಆ ಯಮದೂತ ನಮ್ಮಲ್ಲಿಗೆ ಬಂದು ಶೋಧನೆ ನಡೆಸಿದ್ದಾನೆ.

"ಹೌದು, ಹೌದು, ನಿಮ್ಮ ತರ್ಕ ತುಂಬಾ ಗಟ್ಟಿಯಾಗಿದೆ. ಆ ಹಾಡುವ ಹಕ್ಕಿ ಅವಳ ರೂಮಿನಲ್ಲೆಲ್ಲೋ ಇರಬೇಕು" ಅಶೋಕ ಹೇಳಿದ.

"ಹೌದು ಮೇಜರ್. ಅಶೋಕನ ಮಾತು ನಿಜ, ಅವಳ ರೂಮಿನಿಂದ ಸಂಗೀತದ ಅಲೆ ಬರುತ್ತಿರುವುದನ್ನು ನಾನು, ನೀವು ಇಬ್ಬರೂ ಕೇಳಿದ್ದೇವೆ. ಅದರ ಬಗ್ಗೆ ವಿಚಾರಿಸಿದಾಗ ಆಕೆ ಟ್ರಾನ್ಸಿಸ್ಟರ್‌ನಿಂದ ಬಂದಿತು ಎಂದು ಸುಳ್ಳು ಹೇಳಿದ್ದಳಲ್ಲ."

"ಹೌದು ಸುಷಮಾ. ಆವಾಗಲೇ ನಾನೊಂದು ಕಣ್ಣು ಅವಳ ಮೇಲೆ ಇಡಬೇಕೆಂದಿದ್ದೆ."

"ಆದಕ್ಕೆಂದೇ ಆಕೆ ರಾತ್ರಿ ಕಂಪೌಂಡ್ ಗೋಡೆ ಜಿಗಿದು ಬೀದಿಗಿಳಿದಾಗ ಅವಳಿಗರಿವಾಗದಂತೆ ನಾನೇ ಅವಳನ್ನು ಬೆಂಬತ್ತಿದ್ದೆ."

ಅವರಿಬ್ಬರ ಮಾತುಗಳನ್ನು ಕೇಳಿದ ಅಶೋಕ ನಿರ್ಣಯಾತ್ಮಕ ನಿರ್ಧಾರ ತಿಳಿಸಿದ" ಹಾಗಾದರೆ ಆ ಹಾಡುವ ಹಕ್ಕಿ ಬೇರೆಲ್ಲೂ ಇಲ್ಲ. ಅದು ರೋಜಿಯ ಕೋಣೆಯಲ್ಲೇ ಇದೆ."

"ಕರೆಕ್ಟ್. ಅದು ಕೇವಲ ಹಾಡುವ ಹಕ್ಕಿ ಮಾತ್ರವಲ್ಲ. ಪ್ರಬಲ ಟ್ರಾನ್ಸಿಸ್ಟರ್ ಸಹ ಆಗಿರಲು ಸಾಧ್ಯವಿದೆ. ಹಾಗಾಗಿ ಅದರಿಂದ ಹೊರಡುವ ಅಲೆಗಳಿಂದಾಗಿ ಹುಡುಕಿಕೊಂಡು ಶತ್ರು ಇಲ್ಲಿಯವರೆಗೂ ಬಂದಿದ್ದಾನೆ. ನಡೆಯಿರಿ. ಮೂವರೂ ಕೂಡಿ ಅದನ್ನು ಹುಡುಕೋಣ."

ಹೇಮಂತನ ಮಾತಿಗೆ ಅವರಿಬ್ಬರೂ ಮೇಲೆದ್ದರು.

ಮೂವರೂ ಜೊತೆಯಾಗಿ ರೋಜಿ ಉಳಿದುಕೊಂಡಿದ್ದ ಅತಿಥಿಗೃಹದತ್ತ ನಡೆದರು.

ಒಂದು ಗಂಟೆ ಹುಡುಕಿದ್ದು ವ್ಯರ್ಥವಾಯಿತು. ಎಲ್ಲಿಯೂ ಹಾಡುವ ಹಕ್ಕಿಯ ಸುಳಿವು ದೊರೆಯಲಿಲ್ಲ. "ಇದೀಗ ಬಂದೆ" ಎಂದು ನುಡಿದು ಹೊರಗೆ ಹೋದ ಹೇಮಂತ ಐದಾರು ನಿಮಿಷಗಳಲ್ಲಿ ಮರಳಿ ಬಂದಾಗ ಅವನ

ಕೈಯಲ್ಲಿ ಗುಪ್ತವಾಗಿರಿಸಿದ್ದ ಟ್ರಾನ್ಸ್‌ಮೀಟರ್ ಯಂತ್ರ ಕಂಡುಹಿಡಿಯುವ ಸಾಧನವೊಂದಿತ್ತು. ಅದನ್ನು ಕೈಲಿ ಹಿಡಿದು ಕೋಣೆಯ ಮಧ್ಯದಲ್ಲಿ ನಿಂತ ಆತ ಗುಂಡಿ ಅದುಮಿದ. 'ಪೀಂ....ಪೀಂ...ಪೀಂ' ಎಂಬ ಸದ್ದಿನೊಂದಿಗೆ ಮುಳ್ಳು ಮಂಚದೆಡೆ ಸೂಚಿಸಿತು. ಹಾಗಾದರೆ ಆ ಪುಟ್ಟ ಹಕ್ಕಿ ಮಂಚ ದಲ್ಲೆಲ್ಲೋ ಇದೆ ಎಂದು ಊಹಿಸಿ ಮಂಚ ಎಳೆದರು. ಗಾದಿ, ದಿಂಬು, ಬ್ಲಾಂಕೆಟ್ ಎಲ್ಲಾ ಬಿಡಿಸಿದರು. ಎಲ್ಲೂ ಹಾಡುವ ಹಕ್ಕಿ ಕಾಣಲಿಲ್ಲ. ಯಂತ್ರ ಮಾತ್ರ ಪೀಂ....ಪಿಂ ಅನ್ನುತ್ತ ಹಾಸಿಗೆಯತ್ತಲೇ ತೋರಿಸುತ್ತಿತ್ತು. ಹೇಮಂತ ಯಂತ್ರವನ್ನು ಹಾಸಿಗೆಯ ಬಳಿ ತಂದ. ಅದು ಮತ್ತಷ್ಟು ಜೋರಾಗಿ ಅರಚಿತು. ಪೀಂ....ಪೀಂ... ಮುಳ್ಳು ಬಲವಾಗಿ ಕಂಪಿಸಿತು. ಅದರ ಗುಂಡಿ ಅದುಮಿ ಅದರ ಬಾಯಿ ಮುಚ್ಚಿಸಿದ. ಹೇಮಂತ ಗಾದಿಯತ್ತ ಆಕರ್ಷಿತನಾದ. ಒಂದೊಂದು ಅಂಗುಲ ಬಿಡದೆ ಅದನ್ನು ಶೋಧಿಸಿದಾಗ ರಹಸ್ಯ ಕಣ್ಣೆದುರು ಬಂದು ನಿಂತಿತ್ತು. ಒಂದೆಡೆ ಹಾಸಿಗೆ ಬಾಯಿ ಬಿಟ್ಟಿದ್ದು ಒಳಗಿನ ಸ್ಪಂಜ್ ಹೊರಗೆ ಉಬ್ಬಿ ನಿಂತಿದ್ದು ಕಂಡು ಹೇಮಂತ ಬೆರಳು ಹಾಕಿ ಸ್ಪಂಜು ಹೊರ ಗೆಳೆದ. ಸ್ಪಂಜಿನ ಹಿಂದೆ ಅಡಗಿ ಕುಳಿತಿತ್ತು ಸಿಗರೇಟ್ ಪ್ಯಾಕಿಗಿಂತ ತುಸು ಚಿಕ್ಕದಾದ ಹಾಡುವ ಹಕ್ಕಿ. ಅದನ್ನು ಕೈಲಿ ಹಿಡಿದು ಪರೀಕ್ಷಿಸಿದ ಹೇಮಂತ. ಜರ್ಮನಿಯಲ್ಲಿ ತಯಾರಿಸಲಾದ ಆ ಪುಟ್ಟ ಯಂತ್ರ ಜಗತ್ತಿನ ಯಾವ ಮೂಲೆ ಯಲ್ಲಿ ಕುಳಿತು ಮಾತಾಡಿದರೂ ಅದನ್ನು ಗ್ರಹಿಸುವ ಕ್ಷಮತೆಯನ್ನು ಪಡೆ ದಿತ್ತು. ಅಷ್ಟೇ ಅಲ್ಲದೇ ಅದು ಪುಟ್ಟ ಟೇಪ್‌ರಿಕಾರ್ಡರಿನ ಕಾರ್ಯವನ್ನು ಸಹ ದಕ್ಷತೆಯಿಂದ ಮಾಡುವದಾಗಿತ್ತು.

ಹಾಸಿಗೆ, ಮಂಚ ಎಲ್ಲವನ್ನೂ ಮೊದಲಿನ ಸ್ಥಿತಿಗೆ ತಂದಿರಿಸಿದ ಮೂವರೂ ಆಫೀಸಿನತ್ತ ಬಂದರು.

"ಹಾಂ ಕೆಲಿಯಾನ್‌ನ ಸಾವಿಗೆ ಕಾರಣವಾದ ಅನಂತರ ರೋಜಿ ಹಾಗೂ ತಿಮ್ಮಯ್ಯನವರನ್ನು ಸಾವಿನ ಬಾಯಿಗೆ ನೂಕಿ ನಮಗೂ ಆಪತ್ತು ತಂದಿತ್ತ ಈ ಹಾಡುವ ಹಕ್ಕಿ ದೊರೆತದ್ದಾಯಿತು. ಸಾವಿದರ ರಹಸ್ಯ ಕಂಡುಹಿಡಿಯುವ ವರೆಗೂ ನೀವಿಬ್ಬರೂ ಈ ಎಲ್ಲ ಪತ್ರಿಕೆಗಳನ್ನೂ ತಿರುವಿಹಾಕಿ. ವಿಜ್ಞಾನಕ್ಕೆ ಸಂಬಂಧಿಸಿದ ಯಾವದೇ ವಿಷಯಗಳಿದ್ದರೂ ಅವುಗಳಿಗೆ ಗುರುತು ಹಾಕಿಡಿ. ಮುಖ್ಯವಾಗಿ ನನಗೆ ಯಂತ್ರಮಾನವ, ಮನುಷ್ಯನ ಮಿದುಳು ಮತ್ತು ಅವನ ಶರೀರಕ್ಕೆ ಸಂಬಂಧಿಸಿದ ವಿಷಯಗಳು ಬೇಕು."

ಅವರ ಉತ್ತರಕ್ಕೂ ಕಾಯದ ಆತ ತನ್ನ ರೂಮಿನೊಳಗೆ ಹೋಗಿ ಬಾಗಿಲು ಮುಚ್ಚಿಕೊಂಡ. ಸುಷಮಾ ಅಶೋಕನತ್ತ ನೋಡಿದಳು. ಒಂದು

ಬಾರಿ ಆತ ಭುಜ ಕುಣಿಸಿ ಮುಗುಳುನಗೆ ನಕ್ಕು ಪೇಪರ್‌ಗಳನ್ನು ತನ್ನೆಡೆ ಎಳೆದುಕೊಂಡ. ಸುಷಮಾ ಮ್ಯಾಗಸ್ಸಿನ್‌ನತ್ತ ಸರಿದಳು.

ರಾತ್ರಿ ಹತ್ತು ಗಂಟೆಯಾಗುವಷ್ಟರಲ್ಲಿ ಕೆಲಸ ಮುಗಿದಿತ್ತು. ಸುಷಮಾ ಹಾಗೂ ಅಶೋಕ ಹತ್ತಿಪ್ಪತ್ತು ಪತ್ರಿಕೆಗಳನ್ನು ಗುರುತಿಸಿ ಪಕ್ಕದಲ್ಲಿ ತೆಗೆದಿರಿಸಿದ್ದರು. ಅವರು ಮೇಜರ್‌ನ ಹಾದಿ ಕಾಯುತ್ತಿದ್ದರು. ಮತ್ತೆ ಅರ್ಧ ಗಂಟೆ ಕಳೆದ ಮೇಲೆ ಹೇಮಂತ ಪ್ರತ್ಯಕ್ಷನಾದ. ಅವನ ಕೋಣೆ ಬಾಗಿಲು ತೆರೆಯುತ್ತಲೂ ಅತ್ತ ದೃಷ್ಟಿ ಹರಿಸಿದಾಗ ಸಾವಿರ ಕ್ಯಾಂಡಲ್ ದೀಪ ಬೆಳಗಿಸಿದಾಗ ಉಂಟಾಗುವ ಪ್ರಕಾಶದಂತೆ ಅವನ ಮುಖ ಬೆಳಗುತ್ತಿದ್ದುದನ್ನು ಕಂಡು ಸುಷಮಾ ಮತ್ತು ಅಶೋಕ ಹರ್ಷಿತರಾದರು. ತನ್ನೆರಡೂ ಕೈ ಮೇಲೆತ್ತಿ "ಬೋಲೋ ಶ್ರೀ ರಾಮಚಂದ್ರಜೀಕೀ ಜೈ. ಯಮದೂತ ಮಹಾಶಯನಿಗೆ ವೆಂಕಟರಮಣ ಗೋವಿಂದಾ ಗೋವಿಂದ" ಎಂದು ಕೂಗಿದಾಗ ಹೇಮಂತ ಜೋರಾಗಿ ನಕ್ಕ.

## ೧೪

"ಸ್ಟೇಟ್ ಬ್ಯಾಂಕ್ ಆಫ್ ಮಾಡರ್ನ್ ಇಂಡಿಯಾ"ದ ಭವ್ಯ ಕಟ್ಟಡ. ಸುತ್ತಲೂ ಝಗ ಝಗಿಸುವ ದೀಪದ ಬೆಳಕು. ಕಂಪೌಂಡ್ ಗೋಡೆಗೆ ಎತ್ತರವಾದ ಕಬ್ಬಿಣದ ಗೇಟು. ಗೇಟಿನ ಹಿಂದೆ ಸ್ಟೂಲ್ ಮೇಲೆ ಕುಳಿತು ಬೀಡಿ ಸೇದುತ್ತಿರುವ ಗೂರ್ಖಾ. ಬಿಲ್ಡಿಂಗ್ ಎದುರು ಪಹರೆ ಕಾಯುತ್ತಿರುವ ಇಬ್ಬರು ಸಿಪಾಯಿಗಳು ಅವರ ಹೆಗಲಿಗೆ ತೂಗುತ್ತಿರುವ ರೈಫಲ್‌ಗಳು. ಆಗೊಮ್ಮೆ ಈಗೊಮ್ಮೆ ಬ್ಯಾಂಕ್ ಎದುರಿಗಿರುವ ಮುಖ್ಯ ಬೀದಿಯಲ್ಲಿ ಹಾಯ್ದುಹೋಗುವ ವಾಹನಗಳ ಸದ್ದು ಬಿಟ್ಟರೆ ಕೇಳಿಬರುವ ಬೇರೊಂದು ಸಪ್ಪಳವೆಂದರೆ ಸುತ್ತಲೂ ಇರುವ ಮರಗಳಲ್ಲಿ ಕುಳಿತು ತಮ್ಮ ಸಂಗೀತ ಸುಧೆ ಹರಿಸುತ್ತಿರುವ ಜೀರುಂಡೆಗಳ ಝೇಂಕಾರ.

"ಆಂ......" ಎಂದು ಆಕಳಿಸಿ ರೈಫಲ್ ಹಿಡಿದುಕೊಂಡೇ ಗೇಟ್ ಬಳಿ ಕುಳಿತಿದ್ದ ಗೂರ್ಖಾ ಮೇಲೆದ್ದು ತಮ್ಮತ್ತ ಬರುತ್ತಿರುವದನ್ನು ಗಮನಿಸಿದ ಇಬ್ಬರೂ ಸಿಪಾಯರು ಅವನೆಡೆ ಆಕರ್ಷಿತರಾಗಿ ಹತ್ತು ಹೆಜ್ಜೆ ಮುಂದೆ ಬಂದರು. ಮೂವರೂ ಒಂದೆಡೆ ನಿಂತು ಉಪಯೋಗಕ್ಕೆ ಬಾರದ ಮಾತುಗಳನ್ನು ಆಡು

ತ್ತಿರುವಾಗ, ಸದ್ದು ಮಾಡದೆ ಬ್ಯಾಂಕಿನ ಕಂಪೌಂಡ್ ಗೋಡೆಗೆ ಹೊಂದಿ ಕಪ್ಪು ಬಣ್ಣದ ಅಂಬಾಸಿಡರ್ ಕಾರೊಂದು ಬಂದುನಿಂತಿತು. ಡ್ರೈವರನ ಹೊರ ತಾಗಿ ಕಾರಿನಲ್ಲಿದ್ದ ಮೂವರೂ ಕೆಳಗಿಳಿದರು, ಅವರು ಬ್ಯಾಂಕಿನ ಗೇಟಿನೆಡೆ ಹೆಜ್ಜೆ ಯಿಡುತ್ತಿದ್ದಂತೆ ಝುನ್ ಝುನ್ ಝುನನ್ ಎಂದು ಬರುತ್ತಿದ್ದ ಸಂಗೀತದ ಅಲೆ ಆ ಮೂವರೂ ಕಾವಲುಗಾರರಿಗೆ ಕೇಳಿಸಲಿಲ್ಲ. ಗೇಟಿಗೆ ಬರುವಷ್ಟ ರಲ್ಲಿ ಮೂವರೂ ಕಾವಲುಗಾರರು ಬೇರೆ ಬೇರೆಯಾಗಿದ್ದರು. ಗೇಟಿನ ಬಳಿ ಕುಳಿ ತಿದ್ದ ಗೂರ್ಖಾ ತನ್ನ ಸ್ಟೂಲಿನ ಬಳಿ ಬರುವಷ್ಟರಲ್ಲಿ ಗೇಟಿನ ಬಳಿ ಸಪ್ಪಳ ವಾಯಿತು. ಆತ ತಲೆಯೆತ್ತಿ ನೋಡಿದ. ಮೂವರು ಅಪರಿಚಿತರು ನಿಂತಿದ್ದರು ಸಾಕ್ಷಾತ್ ಯಮದೂತರಂತೆ. ಅವರನ್ನು ನೋಡುತ್ತಲೇ ಗೂರ್ಖಾ ಏರಿದ ಕಂಠದಲ್ಲಿ ಗದರಿದ: "ಏಯ್ ಯಾರು ನೀವು? ಇಷ್ಟು ರಾತ್ರಿಯಲ್ಲಿ ನಿಮ ಗೇನು ಕೆಲಸ? ಓಡಿ ಓಡಿಲ್ಲಿಂದ." ಆ ಮೂವರ ಮೇಲೆ ಅವನ ಗದರುವಿಕೆ ಯಾವ ಪರಿಣಾಮ ಮಾಡದಿದ್ದರೂ ಅವನ ಇಬ್ಬರು ಸಂಗಡಿಗರ ಮೇಲಂತೂ ಪರಿಣಾಮ ಮಾಡಿಯೇ ಬಿಟ್ಟಿತು. ರೈಫಲ್‌ನ್ನು ಹೆಗಲಿನಿಂದಿಳಿಸಿ ಕೈಗೆ ತೆಗೆದುಕೊಂಡು ಗೇಟಿನತ್ತ ಧಾವಿಸಿದರು. ಅವರ ಕಾಲುಗಳಲ್ಲಿದ್ದ ಭಾರಿ ಬೂಟುಗಳ ಧಪ್ ಧಪ್ ಸದ್ದು ಕಂಪೌಂಡಿನಲ್ಲಿ ಪ್ರತಿಧ್ವನಿಸಿತು. "ಏಯ್ ಸಿದ್ದು ಏನಾಯ್ತು?"

"ಯಾರೋ ಮೂವರು ಯಮದೂತರಂತೆ ಧುತ್ ಎಂದು ಬಂದು ನಿಂತಿದ್ದಾರೆ. ಮಾತೂ ಆಡಲೊಲ್ಲರು."

"ತಡ ನಾವಿಬ್ಬರೂ ಬರತಾ ಇದ್ದೇವೆ."

ಮೂರು ಜನ ಕಾವಲುಗಾರರು ಗೇಟಿಗೆ ಬಂದರು. ಅದರಲ್ಲಿ ಹಿರಿಯ ದರ್ಜೆಯ ಕಾವಲುಗಾರ ಎಚ್ಚರಿಕೆ ನೀಡಿದ.

"ಇಷ್ಟು ರಾತ್ರಿ ವೇಳೆಯಲ್ಲಿ ಬಂದಿದ್ದೇಕೆ? ಕೂಡಲೇ ನೀವಿಲ್ಲಿಂದ ಹೊರಡದಿದ್ದರೆ ಪೊಲೀಸರನ್ನು ಕರೆಸಬೇಕಾಗುತ್ತದೆ.

ಮೂವರೂ ಅಪರಿಚಿತರು ಹಾಗೇ ನಿಂತಿದ್ದರು. ಅವರ ತುಟಿಗಳು ಚೆನ್ನಾಗಿ ಬೆಸುಗೆ ಹಾಕಿದಂತೆ ಬೆಸೆದುಕೊಂಡಿದ್ದವು. ಆದರೂ ಒಂತು ಧ್ವನಿ. "ಮುಟ್ಠಾಳರೇ ನಿಮ್ಮ ಜೀವ ನಿಮಗೆ ಪ್ರಿಯವಾಗಿದ್ದರೆ ಬಾಯಿ ಮುಚ್ಚಿಕೊಂಡು ತೆಪ್ಪಗಿರಿ. ಇಲ್ಲದಿದ್ದರೆ..."

ಕಾವಲುಗಾರರು ಗಾಬರಿಯಾಗಿ ಒಬ್ಬರ ಮುಖ ಒಬ್ಬರು ನೋಡಿ ಕೊಂಡರು. ತುಟಿ ಅಲುಗದಿದ್ದರೂ ಮಾತುಗಳು ಹೊರಬಂದಿದ್ದವು. ಎಲ್ಲಿಂದ ಎಂಬುದು ಅರ್ಥವಾಗಲಿಲ್ಲ.

"ಸಿದ್ದು ನನಗೇನೋ ಅಪಾಯ ಕಾದಿದೆಯೆಂದು ಅನಿಸ್ತಾ ಇದೆ. ನಾವಿಬ್ಬರೂ ಇಲ್ಲೇ ಇರುತ್ತೇವೆ. ನೀನು ಹೋಗಿ ಪೊಲೀಸ್ ಠಾಣೆಗೆ ಫೋನ್ ಮಾಡು."

ಸಿದ್ದು ಸೆಕ್ಯೂರಿಟಿ ರೂಮಿನತ್ತ ಹೆಜ್ಜೆ ಹಾಕುತ್ತಿದ್ದಂತೆ ಆದೇಶ ಮೊಳಗಿತು, "ಖಬರ್‌ದಾರ್ ಯಾರಾದರೂ ನಿಂತ ಜಾಗೆಯಿಂದ ಮಿಸುಕಿದರೆ ಜೀವ ಕಳೆದುಕೊಳ್ಳಬೇಕಾಗುತ್ತದೆ."

ಒಂದು ಬಾರಿ ಸಿದ್ದು ಹೊರಳಿ ನೋಡಿದ, ಅಷ್ಟೆ. ಮತ್ತೆ ಹೆಜ್ಜೆ ಹಾಕಿದ ಮುಂದೆ "ಕಮಾಂಡರ್ಸ್.... ಅಟ್ಯಾಕ್....ಅಟ್ಯಾಕ್....ಅಟ್ಯಾಕ್...."

ಬೊಂಬೆಗಳಂತೆ ಕಣ್ಣು ಮಿಟುಕಿಸದೇ ನಿಂತ ಮೂವರೂ ಒಂದೇ ಬಾರಿ ತಮ್ಮ ತಮ್ಮ ಕೈಗಳಲ್ಲಿದ್ದ ಚಿಕ್ಕ ಬಾಂಬುಗಳ ಸೀಲ್ ಒಡೆದು ಎಸೆದರು. ಬಾಂಬುಗಳಿಂದ ಯಾವುದೇ ರೀತಿಯ ಹೊಗೆ ಬರದಿದ್ದರೂ ಹೊರಬಂದ ವಿಚಿತ್ರ ವಾಸನೆಯಿಂದಾಗಿ ಕೇವಲ ಮೂರು ನಾಲ್ಕು ಸೆಕೆಂಡುಗಳಲ್ಲಿ ಕಾವಲುಗಾರರು ಮೂರ್ಛೆ ತಪ್ಪಿ ಧರಾಶಾಹಿಗಳಾಗಿದ್ದರು. ಅವರನ್ನು ಒಂದೆಡೆ ಎಳೆದೊಗೆದ ಯಮದೂತರು ಬ್ಯಾಂಕ್ ಮಹಾದ್ವಾರಕ್ಕೆ ಬಂದರು. ಅವರ ಕೈಯಲ್ಲಿದ್ದ ವಿಚಿತ್ರ ಯಂತ್ರದ ಮುಂದೆ ಬ್ಯಾಂಕಿನ ಬೀಗ ಬಹಳ ಹೊತ್ತು ಸಿಲ್ಲದೆ ಸೋಲೊಪ್ಪಿಕೊಂಡಿತು. ಬಾಗಿಲು ತೆರೆದು ಮೂವರೂ ಒಳನಡೆದರು.

ಅವರ ಮುಂದೆ ಬಂದ ಪ್ರತಿಯೊಂದು ರೂಮಿನ ಬೀಗಗಳು ತಾವೇ ತಾವಾಗಿ ಕರಗಿ ದಾರಿ ಬಿಟ್ಟುಕೊಟ್ಟವು. ಐದಾರು ನಿಮಿಷಗಳಲ್ಲಿ ಅವರು ಲಾಕರ್‌ರೂಮಿಗೆ ಬಂದಿದ್ದರು. ಲಾಕರ್ ಬಾಯ್ತೆರೆಯಲು ಐದಾರು ನಿಮಿಷಗಳು ಹಿಡಿದವು. ಲಾಕರ್ ಬಾಯ್ತೆರೆಯುತ್ತಲು ಗುಪ್ತವಾಗಿರಿಸಿದ್ದ "ಅಲಾರಾಮ್" ಗಂಟೆ ಬಾರಿಸತೊಡಗಿತು. ಆ ಅಪಾಯದ ಗಂಟೆ ಆ ಯಮದೂತರ ಮೇಲೆ ಯಾವ ಪರಿಣಾಮವನ್ನೂ ಮಾಡಲಿಲ್ಲ.... ಆದೇಶ ಮಾತ್ರ ಅದರ ಹಿಂದೆಯೇ ಬಂದಿತು.

"ಮೂರ್ಖರೆ, ನಿಮಗೆ ಕೇವಲ ಏಳೆಂಟು ನಿಮಿಷ ಮಾತ್ರ ಸಮಯವಿದೆ. ಅಷ್ಟರಲ್ಲಿ ಎಷ್ಟು ಸಾಧ್ಯವೋ ಅಷ್ಟು ಹಣ, ಚಿನ್ನ ಬಾಚಿಕೊಂಡು ಹೊರಟು ಬನ್ನಿ." ಮೂವರೂ ವಿದ್ಯುತ್ ಚಾಲಿತ ಯಂತ್ರದಂತೆ ಒಳಗಡೆ ಇದ್ದ ಎಲ್ಲಾ ಹಣ, ಚಿನ್ನದ ಗಟ್ಟಿಗಳನ್ನು ಮೂರು ಚೀಲಗಳಿಗೆ ತುಂಬಿಕೊಂಡು ಮೂರು ನಿಮಿಷಗಳಲ್ಲಿ ಹೊರಟುಬಂದಿದ್ದರು. ಅವರು ಕಾರನ್ನು ಸಮೀಪಿಸುತ್ತಿದ್ದಂತೆ ಕೇಳಿಸಿತು ಆದೇಶ. "ಗುಡ್, ಬೇಗ ಬನ್ನಿ....ಎರಡು ನಿಮಿಷಗಳಲ್ಲಿ ನಾವಿಲ್ಲಿಂದ

ಪಾರಾಗೋಣ. ಮುಂದೆ ಪೊಲೀಸರು ಭೂಮಿ ಆಕಾಶ ಒಂದು ಮಾಡಿದರೂ ನಮ್ಮನ್ನು ಹಿಡಿಯಲಾರರು.

"ಮಿಸ್ಟರ್ ಕುಮುದನ್ ನಿಮ್ಮ ಮಾತು ಸಂಪೂರ್ಣ ಸುಳ್ಳು. ಪೊಲೀಸರು ನಿಮ್ಮನ್ನು ಹಿಡಿಯದಿದ್ದರೂ ನಾನಂತೂ ಬಿಡಲಾರೆ."

ಕಾರಿನಲ್ಲಿದ್ದ ಸೈಂಟಿಸ್ಟ್ ಕುಮುದನ್ ಮುಖ ಮೇಲೆತ್ತಿ ಧ್ವನಿ ಬಂದೆಡೆ ನೋಡಿದರು. ವಿಚಿತ್ರ ವೇಷ ಧರಿಸಿ ಹೆಲ್ಮೆಟ್ ಧರಿಸಿ ನಿಂತ ಮೂರು ಆಕೃತಿಗಳು.

"ಯಾರು? ಯಾರು ನೀವು?"

"ನಾವು ನಿಮ್ಮ ಸ್ನೇಹಿತರು ಮಿಸ್ಟರ್ ಕುಮುದನ್" ಮಧ್ಯದಲ್ಲಿ ನಿಂತಾತ ನುಡಿದ. "ನಾನು ಮೇಜರ್ ಹೇಮಂತ. ಬಲಕ್ಕಿದ್ದವರು ಸಾರ್ಜಂಟ್ ಸುಷಮಾ, ಎಡಭಾಗದಲ್ಲಿರುವವ ಕ್ಯಾಪ್ಟನ್ ಅಶೋಕ."

"ಮೇಜರ್ ಹೇಮಂತ ನೀನು ಇಲ್ಲಿಗೆ ಹೇಗೆ ಬಂದೆ?"

"ಮಿಸ್ಟರ್ ಕುಮುದನ್ ನಿನ್ನಾಟ ಇಂದಿಗೆ ಮುಗಿಯಿತು. ನಾವೆಲ್ಲಾ ತಿಳಿದುಕೊಂಡಿದ್ದೇವೆ. ನಿನ್ನೆಲ್ಲ ದಾರಿ ಮುಚ್ಚಿದ್ದೇವೆ. ಶರಣಾಗತನಾಗುವದೊಂದೇ ನಿನಗೆ ಉಳಿದಿರುವ ಮಾರ್ಗ."

ಕುಮುದನ್ ಹೇಮಂತನೆಡೆಗೆ ನೋಡಿದ. ಒಂದು ನಿಮಿಷ ಬಿಟ್ಟು ಅಟ್ಟ ಹಾಸ ಮಾಡಿ ನಕ್ಕು ಹೇಳಿದ. "ಮೇಜರ್ ಹೇಮಂತ ನಾನು ಶರಣಾಗತನಾಗು ವದು ಕನಸಿನ ಮಾತು. ಮೊದಲು ನೀವಿಲ್ಲಿಂದ ಜೀವ ಸಹಿತ ಹೋಗಿರಿ ನೋಡೋಣ"

ಹೇಮಂತ ತಾತ್ಸಾರದ ನಗೆ ನಗುತ್ತಿದ್ದಂತೆ ಕುಮುದನ್ ಆಜ್ಞೆ ನೀಡಿ ದರು. "ಅಟ್ಯಾಕ್....ಕ್ವಿಕ್...ಮೂವರಲ್ಲಿ ಯಾರೊಬ್ಬರೂ ಬದುಕಿ ಉಳಿಯ ಬಾರದು"

ಮೂವರು ಯಮದೂತರೂ ಹೇಮಂತನೆಡೆಗೆ ಹೊರಳುತ್ತಿದ್ದಂತೆ ಹೇಮಂತ ತನ್ನ ಸಂಗಡಿಗರಿಗೆ ಹೇಳಿದ. "ನಾನು ಹೇಳಿದ್ದು ನೆನಪಿದೆಯಲ್ಲವೇ"

ಅವರು ಇದೆ ಎನ್ನುತ್ತ ಗೋಣು ಹಾಕಿದರು. "ಸರಿ ಹಾಗಾದರೆ.... ಆ್ಯಕ್ಷನ್" ಹೇಮಂತನ ಆದೇಶ ಮೊಳಗಿತು.

ಮೂವರ ಕೈಯಲ್ಲಿ ರಿವಾಲ್ವರ್ ಕಾಣಿಸಿಕೊಂಡವು. ಯಮದೂತರು ಸನಿಹ ಬಂದಂತೆ ರಿವಾಲ್ವರ್‌ಗಳಿಂದ ಒಂದೊಂದೇ ಗುಂಡುಗಳು ಸಿಡಿಯಲಾರಂಭಿಸಿ ದವು. ಎಲ್ಲ ಗುರಿಗಳು ಒಂದೇ ಬದಿಗೆ; ಎದೆಯ ಬಲಭಾಗಕ್ಕೆ.

ಮೂರೂ ರಿವಾಲ್ವರುಗಳು ಗುಂಡಿನ ಮಳೆಗರೆದರೂ ಆ ಯಮದೂತರು

ವಿಚಲಿತರಾಗದೇ ಮುಂದಡಿಯಿಡುತ್ತಲೇ ಇದ್ದರು. ಅವರೀಗ ತೀರ ಸನಿಹಕ್ಕೆ ಬಂದರು. ಅವರನ್ನು ತಡೆಯುವದು ತೀರಾ ಅವಶ್ಯಕವಾಗಿತ್ತು. ಒಂದು ಬಾರಿ ಅವರ ಕೈಗೆ ಸಿಕ್ಕರೆ ಆಯ್ತು. ಇಹಲೋಕದ ಋಣ ಮುಗಿದಂತೆ ಎಂಬುದನ್ನು ಮನಗಂಡ ಮೂವರು ದೃಢನಿರ್ಧಾರದಿಂದ ನಿಶ್ಚಿತ ಗುರಿನೋಡಿ ಕುದುರೆ ಅದುಮತೊಡಗಿದರು. ಮೊದಲ ಯಶಸ್ಸು ದೊರೆತದ್ದು ಅಶೋಕನಿಗೆ. ಅವನೆದುರು ಕೇವಲ ಆರಡಿ ಅಂತರದಲ್ಲಿದ್ದ ಯಮದೂತನ ಬಾಯಿಯಿಂದ ವಿಚಿತ್ರ ಉದ್ಗಾರ ಹೊರಟಿತು. ಆತ ತನ್ನೆರಡೂ ಕೈಗಳಿಂದ ತನ್ನ ಬಲ ಎದೆ ಒತ್ತಿ ಹಿಡಿದುಕೊಂಡು ನೆಲಕ್ಕೆ ಕುಸಿಯುತ್ತಿದ್ದಂತೆ ತಲೆ ಮಧ್ಯಭಾಗದಲ್ಲಿ ಸಿಡಿದು ಮತಾಪಿನಂತೆ ಹಾರಿ ಪುರ ಪುರ ಸದ್ದಿನೊಂದಿಗೆ ಸುಡಲಾರಂಭಿಸಿತು. "ಶಭಾಶ್ ಅಶೋಕ್" ಎಂದು ಉದ್ಗರಿಸುತ್ತಿದ್ದಂತೆ ಮೇಜರ್....ಅವನ ಎದುರಾಳಿ ಯಮದೂತ ಸಹ ಚೀರಿಕೊಂಡ. ಈ ಬಾರಿ ಆತನ ರಿವಾಲ್ವರಿನಿಂದ ಸಿಡಿದ ಗುಂಡು ಗುರಿ ನಾಟಿತ್ತು. ಆತನೂ ಧರಾಶಾಹಿಯಾದ...ಉಳಿದವನೊಬ್ಬ ಯಮದೂತ ಸುಷಮಾಳತ್ತ ಹೆಜ್ಜೆ ಹಾಕಿದ. ಸುಷಮಾಳ ಮುಖದ ಮೇಲೆ ಬೆವರು ಮೂಡಿತು. ಒಂದು ಬಾರಿ ಯಮದೂತನ ಕೈಯಲ್ಲಿ ಸಿಲುಕಿ ಪುನರ್ಜನ್ಮ ಪಡೆದ ಆಕೆ ಮತ್ತೊಮ್ಮೆ ಆ ದುರ್ಗತಿಗೆ ಪಾತ್ರಳಾಗಲು ಬಯಸಲಿಲ್ಲ. ಬಲಗಣ್ಣು ಮುಚ್ಚಿ ಎಡಗಣ್ಣಿನಿಂದ ಗುರಿ ನೋಡಿ ರಿವಾಲ್ವರ್ ಸಿಡಿಸಿದಳು...ಸಿಡಿದ ಗುಂಡು ಯಮದೂತನನ್ನು ಯಮಲೋಕಕ್ಕೆ ಕಳಿಸಿತ್ತು. ಕುಮುದನ್ ಗಾಬರಿಯಾದರು. ಅಲ್ಲಿಂದ ಪಲಾಯನಗೈಯಲು ಕಾರು ಸ್ಟಾರ್ಟ್ ಮಾಡುತ್ತಿದ್ದಂತೆ ನಾಲ್ಕು ಕಡೆಯಿಂದ ಬಂದ ಪೊಲೀಸ್ ಗಾಡಿಗಳು ಅವರನ್ನು ಮುಂದಡಿಯಿಡದಂತೆ ಮಾಡಿದವು. ಎಸ್.ಪಿ.ರಾಮನಾಥ ಜೀಪಿನಿಂದಿಳಿದು ಕರ್ಪೂರದಂತೆ ಉರಿಯುತ್ತಿದ್ದ ಯಮದೂತರೆಡೆ ನೋಡಿ ದಂಗಾದರು. ಹೇಮಂತ ನಗುತ್ತ ಹೇಳಿದ...."ಇವರಲ್ಲಿ ಒಬ್ಬ ನಿಮ್ಮ ಮೇಲೆ ಆಕ್ರಮಣ ಮಾಡಿದ ಬಂಟಿ. ಇನ್ನೊಬ್ಬ ರೋಜಿ ಹಾಗೂ ತಿಮ್ಮಯ್ಯನವರನ್ನು ಕೊಂದು ಸುಷಮಾಳಿಗೆ ಆಸ್ಪತ್ರೆ ದರ್ಶನ ಮಾಡಿಸಿದವ. ಮೂರನೇ ವ್ಯಕ್ತಿ ನನ್ನ ಮನೆ ಹೊಕ್ಕು ಧ್ವಂಸ ಮಾಡಿದವ. ಮೂವರೂ ಯಮದೂತರ ಅವತಾರ ಇಂದು ಸಮಾಪ್ತಿಯಾಯಿತು. ಇವರೆಲ್ಲರ ನಾಯಕ ಹಾಗೂ ಸ್ಟೇಟ್ ಬ್ಯಾಂಕ್ ಆಫ್ ಮಾಡರ್ನ್ ಇಂಡಿಯಾದ ರಾಬರಿ ಮಾಡಲು ಉದ್ದೇಶಿಸಿದ ವ್ಯಕ್ತಿ. ಈತನೇ ಸೈಂಟಿಸ್ಟ್ ಕುಮುದನ್"

"ಮೇಜರ್ ನೀವು ಇದೇನನ್ನು ಹೇಳುತ್ತಿದ್ದೀರಿ"

"ನಾನು ನಿಜ ಹೇಳುತ್ತಿದ್ದೇನೆ. ನಾಲ್ಕು ತಿಂಗಳ ಹಿಂದೆ ನಡೆದ ಬೆಂಗಳೂರು ಬ್ಯಾಂಕ್ ದರೋಡೆ ಸಹ ಕುಮುದನ್ ಅವರೇ ಮಾಡಿಸಿದ್ದು. ಆಗ

ಇವರ ಕೈಗೆ ಹತ್ತಿದ್ದು ಎಂಭತ್ತೈದು ಲಕ್ಷ. ಇಂದೂ ಸಹ ಕಡಿಮೆ ಹಣ ದೋಚಿರಲಿಲ್ಲ. ಕನಿಷ್ಟ ಎಪ್ಪತ್ತು ಲಕ್ಷ ನಗದು ಹಣ, ಒಂದೂವರೆ ಕೋಟಿ ಬೆಲೆಯ ಚಿನ್ನ ಇವರು ಲಪಟಾಯಿಸಿದ್ದರು. ಆದರೆ ಅದೃಷ್ಟ ಕೈಕೊಟ್ಟಿತು. ನಾನಿವರನ್ನು ತಡೆದೆ....ನಾವು ನಾಲ್ಕು ಕಡೆ ಜೋಡಿಸಿದ ಕೆಮರಾಗಳು ದರೋಡೆಯ ದೃಶ್ಯವನ್ನೆಲ್ಲ ಸೆರೆ ಹಿಡಿದಿವೆ."

"ಹೌದು ಇದೆಲ್ಲಾ ನಿಜವೆಂದುಕೊಂಡರೂ ಒಂದು ಸಮಸ್ಯೆ ಕಾಡುತ್ತಿದೆ. ಇಷ್ಟು ಹಣ ಕುಮುದನ್‌ರಿಗೆ ಏಕೆ ಬೇಕಾಯಿತು? ಅವಶ್ಯಕತೆಯಾದರೂ ಏನಿತ್ತು?"

"ಅವರ ಪ್ರಳಯಾಂತಕ ಪ್ರಯೋಗಕ್ಕಾಗಿ ಹಣ ಬೇಕಿತ್ತು. ಪ್ರಯೋಗಾಲಯಕ್ಕಾಗಿ, ಅದರ ಸಲಕರಣೆಗಳಿಗಾಗಿ ಅವಶ್ಯಕ ವಸ್ತುಗಳಿಗಾಗಿ ಹಣ ಬೇಕಾಗಿತ್ತು. ಅದಕ್ಕಾಗಿ ದರೋಡೆ ಕಾರ್ಯಕ್ಕಿಳಿದರು."

"ತುಂಬಾ ವಿಚಿತ್ರವಾಗಿದೆಯಲ್ಲ... ಕುಮುದನ್‌ರಂಥ ಪ್ರತಿಭಾಶಾಲಿ ವಿಜ್ಞಾನಿಗಳು ಬಾಯ್ತೆರೆದು ಕೇಳಿದ್ದರೆ ಭಾರತ ಸರಕಾರ ತನ್ನ ಬೊಕ್ಕಸವನ್ನೇ ಸೂರೆ ಮಾಡುತ್ತಿತ್ತು."

"ನಿಜ ಕುಮುದನ್ ಕೇಳಿದ್ದರೆ... "

"ಅಂದರೆ....ಅಂದರೆ...ನಿಮ್ಮ ಮಾತಿನ ಅರ್ಥವೇನು?" ರಾಮನಾಥ ಅವಾಕ್ಕಾಗಿ ಕೇಳಿದರು.

"ತುಂಬಾ ಸರಳವಾಗಿದೆ ರಾಮನಾಥರವರೇ....ಕುಮುದನ್ ಕೇಳಿದ್ದರೆ ಭಾರತ ಸರಕಾರ ಎಲ್ಲ ಸಹಾಯ ನೀಡುತ್ತಿತ್ತು. ಆದರೆ ಕುಮುದನ್ ಬೇಡುವ ಪ್ರಸಂಗವೇ ಬರಲಿಲ್ಲ. ಭಾರತದ ಶತ್ರುರಾಷ್ಟ್ರವೊಂದು ಕುಮುದನ್‌ರಿಂದ ಈ ಕೆಲಸ ಮಾಡಿಸಿತು"

"ಭಾರತದ ಶತ್ರುರಾಷ್ಟ್ರವೇ?"

"ಹಾಂ....ಶತ್ರುರಾಷ್ಟ್ರ, ಅದೂ ನೆರೆಯ ರಾಷ್ಟ್ರ....ಭಾರತದ ಸದ್ಭಾವನೆ, ಸಚ್ಚಾರಿತ್ರ, ಅದರ ಉತ್ಕರ್ಷ, ಅದರ ಧರ್ಮರಾಯ ಪ್ರವೃತ್ತಿಯನ್ನು ಸಹಿಸಲಾಗದ ರಾಷ್ಟ್ರ ಕುಮುದನ್‌ರ ಮುಂದೆ ಸುಳ್ಳು ಆಶ್ವಾಸನೆ ಪೊಳ್ಳು ಭರವಸೆ ಮುಂತಾದವುಗಳನ್ನಿಟ್ಟು ನಿಜ ವಿಷಯವನ್ನು ಮರೆಮಾಚಿ ಅವರನ್ನು ಹಳ್ಳಕ್ಕೆಳೆಯಿತು. ನಿಜ ವಿಷಯ ಕುಮುದನ್‌ರ ಕಲ್ಪನೆಗೆ ಬಂದಾಗ ಅವರು ಮರಳಲಾರದಷ್ಟು ದೂರದ ದಾರಿ ಸವೆಸಿದ್ದರು. ಅವರು ಇಚ್ಛಿಸಿದರೂ ಮರಳಿ ಬರುವಂತಿರಲಿಲ್ಲ, ಆ ದಾರಿ ಅಷ್ಟು ಅಪಾಯಕಾರಿಯಾಗಿತ್ತು."

ರಾಮನಾಥರು ಕುಮುದನ್ ಕಡೆ ನೋಡಿದಾಗ ತಲೆತಗ್ಗಿಸಿಕೊಂಡು

ಕಣ್ತುಂಬ ನೀರು ತುಂಬಿಕೊಂಡು ಕುಳಿತುಕೊಂಡ ಮಹಾವಿಜ್ಞಾನಿಯನ್ನು ಕಂಡು ಅವರ ಮೇಲೆ ಕರುಣೆ ಉಕ್ಕಿ ಬಂದಿತು.

"ಈ ರೀತಿ ಇದೆ ಅಂತ ನಾನಂದುಕೊಂಡಿರಲಿಲ್ಲ. ಎಂಥ ವಿಜ್ಞಾನಿಗೆ ಎಂಥ ಸ್ಥಿತಿ?"

"ಅದನ್ನು ನಂತರ ಮಾತನಾಡೋಣವಂತೆ. ನಡೆಯಿರಿ, ಇನ್ನೂ ತುಂಬಾ ಕೆಲಸವಿದೆ, ಮೊದಲು ಕುಮುದನ್‌ರನ್ನು ಪೊಲೀಸ್ ರಕ್ಷಣೆಯಲ್ಲಿ ಸುರಕ್ಷಿತವಾದ ನೆಲೆಗೆ ಕಳಿಸಿಕೊಡಿ. ಅವರೆಲ್ಲಿದ್ದಾರೆ ಅಂತ ಯಾರಿಗೂ ತಿಳಿಯಕೂಡದು. ತಿಳಿದರೆ ಅನಾಹುತವಾಗುವದು".

ಎಸ್.ಪಿ. ರಾಮನಾಥರು ತಮ್ಮ ಸಿಬ್ಬಂದಿಯೊಂದಿಗೆ ಮುಂದಿನ ಕೆಲಸಕ್ಕೆ ಮುಂದಾದರು. ತಲೆಯೆಲ್ಲಾ ಸುಟ್ಟು ಅನಾರುಂಡವಾಗಿ ಬಿದ್ದಿದ್ದ ವಿಕಾರ ಶವಗಳನ್ನು ಒಂದು ಗಾಡಿಗೆ ಹೇರಲಾಯಿತು. ಇನ್ನೊಂದು ಜೀಪಿನಲ್ಲಿ ಕುಮುದನ್‌ರನ್ನು ಕೂಡಿಸಲಾಯಿತು. ಅವೆರಡೂ ಗಾಡಿ ಸಿದ್ಧವಾಗುತ್ತಿದ್ದಂತೆ ಹೇಮಂತ ನುಡಿದ.

"ರಾಮನಾಥರೆ ಒಂದು ತುಕಡಿ ಪೊಲೀಸರೊಂದಿಗೆ ನೀವು ನಮ್ಮ ಜೊತೆ ಬನ್ನಿ. ಅವರೆಲ್ಲ ನಾನು ಹೇಳಿದಂತೆ ಸಿದ್ಧರಾಗಿ ಬಂದಿದ್ದಾರಲ್ಲವೇ?"

"ಹೌದು, ಎಲ್ಲರೂ ಬುಲೆಟ್‌ಪ್ರೂಫ್ ತೊಟ್ಟು ಕುತ್ತಿಗೆವರೆಗೂ ಶಿರಸ್ತ್ರಾಣ ಧರಿಸಿದ್ದಾರೆ".

"ಗುಡ್. ಹೊರಡೋಣ....ಹಾಗಾದರೆ...."

ಅವರು ಜೀಪು ಏರುತ್ತಿದ್ದಂತೆ "ಸರ್, ಸರ್ ಸಾವು" ಎಂಬ ಕರೆ ಬಂದಿತು. ಹೇಮಂತ ಕರೆಬಂದ ಕಡೆ ನೋಡಿ ಕೆಳಗಿಳಿದ. ಅವನೆದುರು ಈ ಮೊದಲು ಕಾವಲಿದ್ದ "ಸ್ಟೇಟ್ ಬ್ಯಾಂಕ್ ಆಫ್ ಮಾಡರ್ನ್ ಇಂಡಿಯಾ"ದ ಮೂವರೂ ಕಾವಲುಗಾರರು ನಿಂತಿದ್ದರು.

ಅವರ ಬೆನ್ನು ತಟ್ಟಿ ಹೇಮಂತ ಹೇಳಿದ. "ಬೇಡ ನೀವಿಲ್ಲೇ ಇರಿ. ನಿಮ್ಮ ಸಹಕಾರದಿಂದ ದೇಶಕ್ಕೆ ದೊಡ್ಡ ಉಪಕಾರವಾಗಿದೆ. ನಾನು ಸರಕಾರದ ಪರವಾಗಿ ನಿಮಗೆ ಬಹುಮಾನ ದೊರೆಯುವಂತೆ ಮಾಡುತ್ತೇನೆ." ಮೂವರೂ ಕೃತಜ್ಞತೆಯಿಂದ ಅವನೆಡೆ ನೋಡಿ ಕೈಮುಗಿದರು.

ಹೇಮಂತನ ಹಿರಿತನದಲ್ಲಿ ಎಸ್. ಪಿ. ರಾಮನಾಥರವರು ಕುಮುದನ್ ಅವರ ಭೂಗರ್ಭದಲ್ಲಿದ್ದ ಪ್ರಯೋಗಶಾಲೆಯ ಮೇಲೆ ದಾಳಿ ಮಾಡಿದರು. ದಾಳಿ ಸುಲಭವಾಗಲಿಲ್ಲ. ಅವರ ಮನೆ 'ಮಧುಸಂಚಯ'ಕ್ಕೆ ಬರುತ್ತಿರಲು ಬಂಗಲೆಯ ಕಿಟಕಿಯಿಂದ ಗುಂಡಿನ ಸುರಿಮಳೆ ಪ್ರಾರಂಭವಾಯಿತು. ಹೇಮಂತ

ಅದನ್ನು ನಿರೀಕ್ಷಿಸಿಯೇ ಇದ್ದ. ಬುಲೆಟ್‌ಪ್ರೂಫ್ ಒಟ್ಟೆಯೊಂದಿಗೆ, ಮುಂದೆ ಗಾಜಿದ್ದ ಕುತ್ತಿಗೆಯ ವರೆಗೂ ಬರುವ ಶಿರಸ್ತ್ರಾಣ ಧರಿಸಿದ ಹತ್ತು ಜನ ಪೊಲೀಸರನ್ನು ಕಂಪೌಂಡ್ ಗೋಡೆಗೆ ಹೊಂದಿ ನಿಲ್ಲಿಸಿ ಒಂದು ನಿಮಿಷ ಬಿಡದೆ ಕಿಟಕಿಯೆಡೆ ಗುಂಡು ಹಾರಿಸುತ್ತಿರುವಂತೆ ಅವರಿಗೆ ಆದೇಶ ನೀಡಿ ಹದಿನೈದು ಪೊಲೀಸರೊಂದಿಗೆ ಮನೆ ಹಿಂಭಾಗದತ್ತ ನಡೆದ. ಅವನ ಹಿಂದೆ ಸುಷಮಾ, ಅಶೋಕ ಹಾಗೂ ರಾಮನಾಥರು.

ಹಿಂಭಾಗದ ಕಿಟಕಿಯಿಂದಲೂ ಗುಂಡಿನ ಮಳೆ ಸುರಿಯುತ್ತಿತ್ತು. ಅಲ್ಲಿಯೂ ಹತ್ತು ಜನ ಪೊಲೀಸರನ್ನು ನಿಲ್ಲಿಸಿ ಒಂದು ಸೆಕೆಂಡ್ ಸಹ ಬಿಡದೆ ಒಂದೇ ಸವನೆ ಗುಂಡಿನ ಮಳೆ ಕರೆಯುವಂತೆ ತಿಳಿಸಿ ತಾನು ತನ್ನ ಸಂಗಡಿಗರೊಂದಿಗೆ ಕಂಪೌಂಡ್ ಗೋಡೆ ಹಾರಿ ಅಂಬಿನಂತೆ ಮುನ್ನುಗ್ಗಿದ. ಒಂದೆರಡು ಸೆಕೆಂಡು ಯಾವ ಪರಿಣಾಮವೂ ಆಗಲಿಲ್ಲ. ಅದವನಿಗೆ ತಿಳಿದೂ ಇತ್ತು. ಅಷ್ಟೇ ಅವಧಿ ಅಪಾಯದಿಂದ ಪಾರಾಗಲು ಅವರಿಗೆ ಸಾಕಾಗಿತ್ತು. ಅರ್ಧ ದಾರಿ ಕ್ರಮಿಸಿದಾಗಲೇ ಅವರತ್ತ ಗುಂಡಿನ ಮಳೆ ಬೀಳಲಾರಂಭಿಸಿತು, ಕಿಟಕಿಯಿಂದ ಕಂಪೌಂಡಿನತ್ತ ಗುಂಡುಗಳು ಹಾರಲಿಲ್ಲ. ಆದರೆ ಅತ್ತ ಕಡೆಯಿಂದ ಪೊಲೀಸರು ಒಂದೆ ಸವನೆ ಗುಂಡು ಸುರಿಸತೊಡಗಿದ್ದರಿಂದ ಕಿಟಕಿ ಗ್ಲಾಸು ಒಡೆದು ಚೂರು ಚೂರಾದವು. ಮನೆಯ ಪ್ಲಾಸ್ಟರ್ ಹಾರಿ ಹೋಯಿತು. ಇಟ್ಟಿಗೆಗಳು ಕಣಕಣಗಳಾಗಿ ಬೀಳತೊಡಗಿದವು. ಆದರ ಹಿಂದೆ ಒಂದೇ ಸವನೆ ಮಶಿನ್‌ಗನ್‌ನಿಂದ ಗುಂಡುಗಳು ಬಂದು ಮೂವರಿಗೂ ತಾಗಿದವು. ಅವರ ದೇಹದ ತುಂಬೆಲ್ಲ ಗುಂಡುಗಳು ನಾಟಿಕೊಂಡರೂ ಅವರು ಕಿಮಕ್ ಅನ್ನಲಿಲ್ಲ. ಕೇವಲ ಒಂದೇ ಒಂದು ಗುಂಡು ಅವರ ಎದೆಯ ಬಲಭಾಗಕ್ಕೆ ನಾಟುತ್ತಿದ್ದಂತೆ ವಿಚಿತ್ರವಾಗಿ ಚೀರಿಕೊಂಡ ಮೂವರೂ ಕೆಳಗೆ ಕುಸಿದರು. ಅವರ ತಲೆಗಳು ಒಡೆದು ಮ:ತಾಪಿನಂತೆ ಉರಿಯತೊಡಗಿದವು. ಗುಂಡಿನ ದಾಳಿ ನಿಂತು ಹೋಯಿತು, ಹೇಮಂತ ಹರ್ಷಚಿತ್ತನಾದ.... ಮನೆ ಮುಂಭಾಗದಿಂದ ಮೊದಲು ಕೇಳಿಬರುತ್ತಿದ್ದ ಗುಂಡುಗಳ ಸಪ್ಪಳ ಈಗ ಕೇಳಿಬರುತ್ತಿರಲಿಲ್ಲ. ಎರಡೂ ಕಡೆ ಜಯ ಲಭಿಸಿತ್ತು.

ಉತ್ಸಾಹ ದ್ವಿಗುಣಿತವಾಗಿತ್ತು. ಮನೆ ಸುತ್ತುವರೆದು ಮುಂಬಾಗಿಲಿಗೆ ಬಂದಾಗ ಅವರಿಗಾಗಿ ಕಾಯುತ್ತಿದ್ದ ಎರಡು ನಾಯಿಗಳು ಭಯಂಕರವಾಗಿ ಗರ್ಜಿಸುತ್ತ ಬಂದಾಗ ಮೂರು ಗನ್‌ಗಳು ಅವುಗಳೆಡೆ ಮುಖ ಮಾಡಿದವು.

"ನೋ....ನೋ"–ಎಂದರಚಿಕೊಂಡ ಹೇಮಂತ. ಅಶೋಕ, ಸುಷಮಾ ರಾಮನಾಥ ಗಾಬರಿಯಾಗಿ ಅವನತ್ತ ನೋಡಿದರು. ಹೇಮಂತ ನಗುತ್ತ... ಸಿಳ್ಳು ಹಾಕಿದ. ಸಿಳ್ಳಿನ ದನಿ ಆಲಿಸುತ್ತಲೂ ಹುಲಿಯಂತೆ ಬಂದ ನಾಯಿ

ಗಳು, ಬೆಕ್ಕಿನ ಮರಿಗಳಾಗಿ ಅವನ ಕಾಲಬಳಿ ಬಂದವು. ಹೇಮಂತ ನಗುತ್ತ ನುಡಿದ. "ಹೂಂ.... ಮುನ್ನಡೆಯಿರಿ. ಇನ್ನು ನಮಗೆ ಯಾವ ಭಯವೂ ಇಲ್ಲ. ಹಾ.... ಹೊರಗಡೆ ಇಲ್ಲ, ಒಳಗೆ ಭೂಗರ್ಭದಲ್ಲಿ ಮಾತ್ರ ಸುತ್ತಲೂ ಭಯವಿದೆ. ನಾನು ಹೇಳಿದಂತೆ ಚಾಚೂ ತಪ್ಪದೇ ನಡೆಯಬೇಕು, ತಿಳಿಯಿತೇ?"

ಅವರ ಉತ್ತರಕ್ಕೂ ಕಾಯದೇ... ಮುಂಬಾಗಿಲಿಗೆ ಬಂದ. ಭದ್ರವಾಗಿ ಮುಚ್ಚಲಾಗಿತ್ತು. ನಾಲ್ಕು ಜನ ಭಾರೀ ಭಾರೀ ಪ್ರಹಾರ ಮಾಡುತ್ತಲೂ ಕೊಂಡಿ ಮುರಿದು ದ್ವಾರ ತೆರೆದುಕೊಂಡಿತು. ಹೊರಗಡೆ ಸಿಟೌಟ್‌ನಲ್ಲಿ ಇದ್ದ ಗುಪ್ತ ದ್ವಾರವನ್ನು ತೆರೆದ ಹೇಮಂತ ಮೊದಲು ತಾನು ಕೆಳಗಿಳಿದ. ನಂತರ ಮೂವರೂ ಅವನಹಿಂದೇ ಇಳಿದರು. ನಾಲ್ವರೂ ಕೈಯಲ್ಲಿ ಗನ್ ಹಿಡಿದು ಮೈಯೆಲ್ಲಾ ಕಿವಿಯಾಗಿ ಮುನ್ನಡೆಯತೊಡಗಿದರು. ಆರು ಮೆಟ್ಟಿಲು ಇಳಿದು ಹತ್ತು ಹೆಜ್ಜೆ ಹೋಗಿರಲಿಲ್ಲ. ಹೇಮಂತನನ್ನು ಬಿಟ್ಟು ಉಳಿದ ಮೂವರೂ ಗಕ್ ಎಂದು ನಿಂತುಬಿಟ್ಟರು. ಅವರೆದುರು ಆರು ಫೂಟಿಗೂ ಮೀರಿದ ಎತ್ತರದ ವಿಶಾಲ ಕಾಯದ ಯಮದೂತ ಕೈಯಲ್ಲೊಂದು ಗನ್ ಹಿಡಿದು ನಿಂತಿದ್ದ. ಅವರನ್ನು ಹೇಮಂತ ಗುರುತಿಸಿದ. ಕಾರವಾರದ ಬಳಿ ಇರುವ ಐಲೆಂಡ್ ಪ್ರವೇಶಿಸುವ ಮುನ್ನ ಇನ್ನೂರು ಅಡಿ ಎತ್ತರದಿಂದ ಸಮುದ್ರಕ್ಕೆ ಹಾರಿ ಪಾದಗಳಲ್ಲಿ ಕೂಡಿಸಿದ ವಿಶಿಷ್ಟ ಬಗೆಯ ಗನ್‌ನಿಂದ ಅವರ ಮೋಟರ್‌ಬೋಟ್ ಮೇಲೆ ದಾಳಿ ಮಾಡಿದ ಯಮದೂತ ಅವನೇ. ಓಲಂಪಿಕ್ ಕ್ರೀಡೆಯಲ್ಲಿ ಅತೀ ಎತ್ತರದಿಂದ ನೀರಿಗೆ ನೆಗೆದು ರೆಕಾರ್ಡ್ ಮಾಡಿದ ಈಜುಗಾರ. ಒಂದು ಅಪಘಾತದಲ್ಲಾತ ಸತ್ತಿದ್ದರೂ ಇಂದಾತ ಅವರ ಮುಂದೆ ಜೀವಂತವಾಗಿ ನಿಂತಿದ್ದ.

ಅವನನ್ನು ಸುಷಮಾ ಸಹ ಗುರ್ತಿಸಿ ಮಂದಹಾಸ ಬೀರಿದಳು.

"ಝುನ್ ಝುನ್..." ಆತ ಮುಂದಡಿಯಿಟ್ಟ. ಆದೇಶ ಮೊಳಗಿತು. "ಇವರು ನಿನ್ನ ಶತ್ರುಗಳು... ಇವರನ್ನು ಜೀವ ಸಹಿತ ಬಿಡಬೇಡ."

ಆದೇಶ ವ್ಯರ್ಥವಾಯಿತು. ಆತ ಆದೇಶ ಪಾಲನೆ ಮಾಡುವ ಮೊದಲೇ ನಾಲ್ಕು ಮಶಿನ್‌ಗನ್‌ಗಳು ಅವನೆಡೆ ಬೆಂಕಿ ಕಾರಿದ್ದವು. ನಾಲ್ಕು ಗನ್‌ಗಳ ಗುರಿ ಒಂದೇ ಕಡೆ: ಬಲಭಾಗದ ಎದೆಯ ಮೇಲೆ. ವಿಚಿತ್ರವಾಗಿ ಚೀರಿಕೊಂಡ ಆತನ ಕೈಯಲ್ಲಿದ್ದ ಗನ್ ನೆಲಕ್ಕೆ ಬಿತ್ತು. ತಲೆ ಮಧ್ಯಭಾಗಕ್ಕೆ ಸೀಳಿ ಮತಾಪಿನಂತೆ ಹೂ ಹಾರಿಸುತ್ತ ಕರ್ಪೂರದಂತೆ ಉರಿಯತೊಡಗಿತು.

"ಅಬ್ಬಾ ಎಂಥ ಭೀಭತ್ಸ್ಯ ದೃಶ್ಯ.... ಕೇವಲ ಒಂದಡಿ ಅಂತರದಲ್ಲಿ. "ಬನ್ನಿ ಎಡಬಲಕ್ಕೆ ರೂಮುಗಳಿವೆ. ಎಚ್ಚರಿಕೆಯಿಂದ ಮುಂದಡಿ ಇಡಿ, ನನಗೆ

ತಿಳಿದ ಮಟ್ಟಿಗೆ ನಾವು ಸ್ವಲ್ಪ ಶ್ರಮವಹಿಸಿ ಮೊಣಕಾಲುಗಳ ಮೇಲೆ ಮುಂದೆ ಸರಿಯಬೇಕು" ಎಂದ ಹೇಮಂತ.

ಎಲ್ಲರೂ ಒಪ್ಪಿಕೊಂಡು ಚಿಕ್ಕಮಕ್ಕಳಂತೆ ಮೊಣಕಾಲೂರಿ ಸಾಧ್ಯವಾದಷ್ಟು ವೇಗವಾಗಿ ಮುಂದೆ ಸರಿಯಲಾರಂಭಿಸಿದರು... ಅಭ್ಯಾಸವಿಲ್ಲದ್ದರಿಂದ ಒಂದೆರಡು ಬಾರಿ ಜೋಲಿ ಹೋಗಿ ಅಕ್ಕಿಮೂಟೆಯಂತೆ ಕೆಳಗುರುಳಿ ಮತ್ತೆ ಎದ್ದು ನಡೆಯುತ್ತಿದ್ದ ದೃಶ್ಯ ತುಂಬಾ ಮೋಜಿನದಾಗಿತ್ತು. ನಾಲ್ವರ ಮಧ್ಯ ನಿರ್ದಿಷ್ಟ ಅಂತರವಿತ್ತು. ಎಲ್ಲರಿಗಿಂತ ಮುಂದಿದ್ದಾತ ಹೇಮಂತ. ಅವನ ಹಿಂದೆ ರಾಮನಾಥ, ನಂತರ ಸುಷಮಾ, ಎಲ್ಲರಿಗಿಂತ ಹಿಂದೆ ಅಶೋಕ. ಹೇಮಂತ ನಾಲ್ಕನೇ ರೂಮಿನ ಮುಂದೆ ಬಂದಾಗ ಉಳಿದವರು ಕ್ರಮವಾಗಿ ಮೂರು, ಎರಡು ಹಾಗೂ ಒಂದನೇ ರೂಮಿನ ಮುಂದಿದ್ದರು ಪ್ಯಾಸೇಜ್‌ದಲ್ಲಿ ಇನ್ನೂ ಎರಡು ಮೂರು ಕಾವಲುಗಾರರಿದ್ದರು.

"ಧಡಕ್...ಧಡಕ್....ಧಡಕ್" ಎಂದು ಮೂರು ನಾಲ್ಕು ಕೋಣೆಗಳ ಬಾಗಿಲು ತೆರೆದುಕೊಂಡವು. ಪ್ರತಿಯೊಂದರ ಬಾಗಿಲ ಮುಂದೆ ಒಬ್ಬೊಬ್ಬ ಯಮದೂತ ಕೈಯಲ್ಲಿ ಅಸ್ತ್ರ ಹಿಡಿದು ಪ್ರತ್ಯಕ್ಷರಾದರು. ಅವರನ್ನು ನೋಡುತ್ತಲೇ ಎಲ್ಲರ ಉಸಿರೇ ನಿಂತುಹೋಯಿತು. ಹೇಮಂತ ಮಾತ್ರ ನಗುತ್ತಿದ್ದ.

ಒಂದೆಡೆ ಭಾರತದ ಪ್ರಧಾನಿ... ಗೃಹಮಂತ್ರಿ....ಮಹಾದಂಡನಾಯಕ, ಹಾಗೂ ವಿರೋಧಪಕ್ಷದ ನಾಯಕ....

"ಇವೆಲ್ಲಾ ಮಾಡೆಲ್‌ಗಳು ಯಾವ ಸಂಕೋಚವೂ ಇಲ್ಲದೇ ನಿರ್ನಾಮ ಮಾಡಿ" ಹೇಮಂತ ಗುಡುಗಿದ. ಅವನ ಗುಡುಗು ಮುಗಿಯುವ ಮುನ್ನ ಮತ್ತೊಂದು ಆದೇಶ ಮೊಳಗಿತು. "ಇದು ನಿಮ್ಮ ಜೀವನ ಮರಣದ ಪ್ರಶ್ನೆ. ಶತ್ರುಗಳನ್ನು ಮುಂದೆ ಬಿಡಬೇಡಿ."

ಪ್ರಧಾನಮಂತ್ರಿ, ಗೃಹಮಂತ್ರಿ, ಮಹಾದಂಡನಾಯಕ ಅಲ್ಲದೆ ವಿರೋಧ ಪಕ್ಷದ ನಾಯಕರು ತಮ್ಮ ತಮ್ಮ ಕೈಗಳಲ್ಲಿದ್ದ ಗನ್ ಎತ್ತುವ ಮುನ್ನವೇ ಹೇಮಂತ, ಅಶೋಕ ಹಾಗೂ ಸುಷಮಾ ಕೈಗಳಲ್ಲಿಯ ಮಶಿನ್‌ಗನ್ ಗರ್ಜಿಸಿದ್ದವು. ಮೊದಲ ಗುಂಡುಗಳಿಗೆ ಎದುರಾಳಿಗಳ ಕೈಗಳಲ್ಲಿಯ ಗನ್ ದೂರ ಸಿಡಿದು ಬಿದ್ದರೆ, ಮುಂದೆ ಸರಸರನೆ ಒಂದರ ಹಿಂದೆ ಒಂದರಂತೆ ಬಂದ ಗುಂಡುಗಳು ಅವರ ದೇಹದ ತುಂಬೆಲ್ಲ ಪಸರಿಸುವದರೊಂದಿಗೆ ಬಲ ಎದೆಯ ಮೇಲ್ಭಾಗದಲ್ಲಿ ನಾಟುತ್ತಿದ್ದಂತೆ ಅವರೆದುರು ಇದ್ದ ಪ್ರಧಾನಮಂತ್ರಿ, ಗೃಹಮಂತ್ರಿ, ಮಹಾದಂಡನಾಯಕ ಮೂವರೂ ವಿಚಿತ್ರವಾಗಿ ಕೂಗುತ್ತ ತಲೆಯೊಡೆದುಕೊಂಡು ನೆಲಕ್ಕೆ ಕುಸಿದರು.

ಆದರೆ...

ಆದರೆ... ಪೊಲೀಸ್ ಅಧಿಕಾರಿಗಳಾದ ರಾಮನಾಥ ಅವರು ತುಸು ಗೊಂದಲದಲ್ಲಿ ಬಿದ್ದುದರಿಂದಾಗಿ ಆಪತ್ತಿಗೆ ಆಹ್ವಾನ ನೀಡಬೇಕಾಯಿತು. ತಮ್ಮೆದುರಿಗಿದ್ದವರು ನಿಜವಾದ ಮಾನವರಾಗಿದ್ದರೆ ಮುಂದೆ ಗತಿ, ಎಂಬುದರ ಬಗ್ಗೆ ಕೇವಲ ಅರ್ಧ ನಿಮಿಷ ಯೋಚಿಸಿದ್ದೇ ತಪ್ಪಾಯಿತು. ಅಷ್ಟರಲ್ಲೇ ಅವರ ಎದುರಾಳಿ ವಿರೋಧ ಪಕ್ಷದ ನಾಯಕ ಅವರೆಡೆ ಗುಂಡು ಹಾರಿಸಿದ್ದರು. ರಾಮನಾಥರ ಅದೃಷ್ಟ ಚೆನ್ನಾಗಿದ್ದುರಿಂದ ಒಂದೇ ಒಂದು ಗುಂಡು ಅವರ ಬಲರಟ್ಟೆಯನ್ನು ಸೀಳಿಕೊಂಡು ಹೋಯಿತು. ಅವರು ವಿಕಾರವಾಗಿ ಕಿರುಚಿ ಕೊಂಡು ಕೆಳಗೆ ಕುಸಿಯುತ್ತಿದ್ದಂತೆ ಉಳಿದ ಗುಂಡುಗಳು ಅವರ ತಲೆ ಮೇಲೆ ಹಾಯ್ದು ಹಿಂದಿನ ಗಾಜುಗಳನ್ನು ಒಡೆದು ಹಾಕಿದವು. ಹೇಮಂತ ಎಚ್ಚೆತ್ತು ಮುಂದಾಗುವ ಅನಾಹುತಗಳಿಗೆ ಕಡಿವಾಣ ಹಾಕಿದ. ಅವನ ಕೈಯಲ್ಲಿಯ ಗನ್ ವಿರೋಧ ಪಕ್ಷದ ನಾಯಕನನ್ನು ಧರೆಗುರುಳಿಸಿತ್ತು. "ಅಶೋಕ ನೀನು ರಾಮನಾಥರನ್ನು ಮೇಲೆ ಕರೆದುಕೊಂಡು ಹೋಗು, ನಿನಗಲ್ಲಿ ಖಂಡಿತವಾಗಿ ಫಸ್ಟ್‌ಏಡ್ ಬಾಕ್ಸ್ ಸಿಕ್ಕಬಹುದು."

ಮರುಮಾತನಾಡದೆ ಅಶೋಕ ರಾಮನಾಥರಿಗೆ ಆಸರೆ ನೀಡಿ ಮೇಲೆ ಬ್ಬಿಸಿ ಮೆಟ್ಟಿಲುಗಳತ್ತ ನಡೆದ. ಹೇಮಂತ ಸುಷಮಾಳೆಡೆ ನೋಡಿ ಹೇಳಿದ. "ಇಲ್ಲೆಲ್ಲೋ ಮಿಸ್ ಮಧು ಇರಬೇಕು. ಅವಳನ್ನು ಶೋಧಿಸು."

ಸುಷಮಾ ಮಧುವಿನ ಶೋಧಕ್ಕೆ ಹೊರಡುತ್ತಿದ್ದಂತೆ ಹೇಮಂತ ಈ ಮೊದಲು ಕುಮುದನ್‌ರು ಪ್ರಯೋಗ ನಿರತರಾಗಿದ್ದ ಅವರ ಪ್ರಯೋಗ ಶಾಲೆಯತ್ತ ನಡೆದ. ಒಮ್ಮೆಂದೊಮ್ಮೆಲೆ ಉರಿಯುತ್ತಿದ್ದ ದೀಪಗಳು ಆರಿ ಎಲ್ಲೆಡೆ ಕತ್ತಲೆ ಆವರಿಸಿತು. ಯಾರೋ ಮೇನ್‌ಸ್ವಿಚ್ ಆಫ್ ಮಾಡಿದ್ದರು. ಆಗ ಅವರ ಬಳಿಯಿದ್ದ ಲೈಟರ್ ಅವರ ಸಹಾಯಕ್ಕೆ ಬಂದಿತು. ಅದರ ಬೆಳಕಿನಲ್ಲಿ ಅತ್ತಿತ್ತ ಅಡ್ಡಾಡಿ ಮೇಜಿನ ಮೇಲೆ ಪ್ರಯೋಗಕ್ಕೆಂದು ಇಟ್ಟಿದ್ದ ಸ್ಪಿರಿಟ್ ದೀಪ ಉರಿಸಿ ಸ್ವಿಚ್ ಬೋರ್ಡಿನತ್ತ ನಡೆದ. ಎಲ್ಲೋ ಒಂದೆಡೆ ಬಾಗಿಲು ಧಡಕ್ ಎಂದು ತೆರೆದು ಭರ್ರ್ ಎಂದು ಗಾಳಿ ಒಳಗೆ ಪ್ರವೇಶಿಸಿತು. ದೀಪ ಆರಬಾರದೆಂದು ಗಾಳಿಯೆಡೆ ಬೆನ್ನು ಮಾಡಿ ನಿಂತು ನಿಧಾನವಾಗಿ ಹಿಂದೆ ಸರಿಯುತ್ತ ಸ್ವಿಚ್ ಬೋರ್ಡ್ ಬಳಿ ಬಂದು ಗುಂಡಿ ಅದುಮಿದ. ಮತ್ತೆ ಎಲ್ಲೆಡೆ ಪ್ರಕಾಶ ಹರಡಿತು. ಕೂಡಲೇ ಹಿಂಭಾಗದಲ್ಲಿದ್ದ ಬಾಗಿಲು ನೆನಪಾಗಿ ಓಡುತ್ತ ಬಂದ. ಆಗಲೇ ಹಕ್ಕಿ ಹಾರಿಹೋಗಿತ್ತು. ಮರಳಿ ಮೇಜಿನ ಬಳಿ ಬಂದ. ಆ್ಯಶ್ ಟ್ರೇನಲ್ಲಿದ್ದ ಇನ್ನೂ ಉರಿಯುತ್ತಿದ್ದ ಸಿಗರೇಟು

ಇಲ್ಲಿ ಯಾರೋ ಇದ್ದರು ಎಂಬುದನ್ನು ಸ್ಥಿರಪಡಿಸಿತು.

"ಮೇಜರ್...." ಸುಷಮಾ ಕೂಗಿ ಕರೆದಾಗ ಹೇಮಂತ ಅತ್ತ ಧಾವಿಸಿದ. ಅಲ್ಲಿದ್ದ ಚಿಕ್ಕ ಬೆಡ್‌ರೂಮಿನ ಮಂಚದ ಮೇಲೆ ವಿವಸ್ತ್ರಳಾಗಿ ಮೂರ್ಛಾವಸ್ಥೆಯಲ್ಲಿದ್ದ ಮಧು ಅವನ ಕಣ್ಣಿಗೆ ಬಿದ್ದಳು.

## ೧೫

"ಮಾನ್ಯ ಸ್ನೇಹಿತರೆ, ನನ್ನ ಜೀವಮಾನದಲ್ಲೇ ನಾನೆದುರಿಸಿದ ವಿಚಿತ್ರ ಕೇಸಿದು. ನೆನೆಸಿಕೊಂಡರೆ ಮೈ ಈಗಲೂ ಜುಂ ಅನ್ನುತ್ತದೆ. ಇದೊಂದು ವಿಚಿತ್ರ... ವಿಜ್ಞಾನಕ್ಕೆ ಸಂಬಂಧಿಸಿದ, ಅಷ್ಟೇ ಅಲ್ಲ, ಅಂತರ್‌ರಾಷ್ಟ್ರೀಯ ರಾಜಕಾರಣಕ್ಕೆ ಸಂಬಂಧಿಸಿದ ಕೇಸು ಇದು ಎಂದು ನನಗೆ ಸಂಶಯವಾದದ್ದು ಎರಡು ಅನುಭವಗಳಿಂದ. ಬೆಂಗಳೂರಿನ ಬ್ಯಾಂಕ್ ದರೋಡೆಯಲ್ಲಿ ಭಾಗವಹಿಸಿದ ಕುಖ್ಯಾತ ಮಂಗಲದಾದಾನನ್ನು ಹುಡುಕಲು ಕಾರವಾರ ಸಮೀಪದ ಪ್ರದೇಶಕ್ಕೆ ಹೋದಾಗ ಮೋಟಾರ್ ಬೋಟಿನಲ್ಲಿದ್ದ ನಮ್ಮ ಮೇಲೆ ವಿಚಿತ್ರ ರೀತಿಯಿಂದ ದಾಳಿ ಮಾಡಿದ ಯಂತ್ರ ಮಾನವನಿಂದ. ನಂತರ "ಸೀಪರ್ಲ್" ಹೋಟೆಲ್ ನಲ್ಲಿಯ ಕ್ರೂರ ಮೃಗ ಜಂತುಗಳ ಕಣ್ಣುಗಳಲ್ಲಿ ಕೆಮರಾ ಜೋಡಿಸಿದ ಹಾಗೂ ಸೀಪರ್ಲ್‌ದ ಪ್ರತಿ ಸ್ಥಳದಲ್ಲೂ ಏನು ನಡೆದಿದೆ ಎಂಬುದನ್ನು ಕುಳಿತಲ್ಲೇ ನೋಡುವ ವ್ಯವಸ್ಥಿತ ಪ್ರಯೋಗಶಾಲೆ ನೋಡಿದಂದಿನಿಂದ ನನಗೆ ಸಂಶಯ ಮೂಡಿತ್ತು. ಆಮೇಲೆ ನಡೆದ ವಿಚಿತ್ರ ಘಟನೆಗಳು ಇದಕ್ಕೆ ಪುಷ್ಟಿ ನೀಡಿದವು. ಅದರ ಮೂಲದ ಶೋಧನೆಗೆ ತೊಡಗಿದಾಗ ಇಂದಿಗೆ ಮೂರುವರ್ಷಗಳ ಹಿಂದೆ ನಡೆದ ಘಟನೆ ನೆನಪಾಯಿತು. ಇದರ ವಿವರಗಳನ್ನು ಮೂರು ವರ್ಷಗಳ ಹಿಂದೆ ಇಂಗ್ಲಿಷ್ ಪತ್ರಿಕೆಗಳು ಹಾಗೂ ಮ್ಯಾಗಜಿನ್‌ಗಳು ವಿವರವಾಗಿ ಪ್ರಕಟಿಸಿವೆ.

"ಜರ್ಮನಿಯಲ್ಲಿ ನಡೆದ ವಿಜ್ಞಾನಿಗಳ ಸಮ್ಮೇಳನದಲ್ಲಿ ಭಾಗವಹಿಸಿದ ನಮ್ಮ ಭಾರತದ ಖ್ಯಾತ ವಿಜ್ಞಾನಿ ಕುಮುದನ್ ಅವರು ತಾವು ಕಂಡುಕೊಂಡ ಪ್ರಯೋಗದ ಸತ್ಯಾಂಶ ಅಲ್ಲಿ ಪ್ರಕಟಿಸಿದರು. ಹಿಂದೆ ಭಾರತದಲ್ಲಿ ಮೃತ ಸಂಜೀವಿನಿ ವಿದ್ಯೆ ಬಲ್ಲವರಿದ್ದರು. ಈ ವಿದ್ಯೆಯಿಂದಾಗಿ ಆಗ ದೊರೆಯುತ್ತಿದ್ದ ಕೆಲವೊಂದು ಗಿಡಮೂಲಿಕೆಗಳಿಂದಾಗಿ ಸತ್ತ

ಮನುಷ್ಯನ ದೇಹದಲ್ಲಿ ಪುನಃ ಜೀವಸಂಚಾರ ತರಬಹುದಿತ್ತು. ಆತನನ್ನು ಬದುಕಿಸಬಹುದಿತ್ತು. ಸದ್ಯದ ಪರಿಸ್ಥಿತಿಯಲ್ಲಿ ಅದು ಸಾಧ್ಯವಾಗದಿದ್ದರೂ ನಾವು ನಿರಾಶರಾಗಬೇಕಿಲ್ಲ. 'ಯಂತ್ರಮಾನವ' ಅರ್ಥಾತ್ 'ರೋಬೋಟ್' ಗಳಿಗಿಂತಲೂ ಚೆನ್ನಾಗಿ ಸೇವೆ ಕೊಡಬಲ್ಲ ಸಜೀವ ಶರೀರದ ನಿರ್ಜೀವ ಮಾನವನನ್ನು ಸೃಷ್ಟಿಸಬಹುದು ಎಂಬುದನ್ನವರು ಅಲ್ಲಿ ಮಂಡಿಸಿದರು. ಯಂತ್ರ ಮಾನವ ಹೇಗೆ ಆದೇಶ ಪಾಲಿಸುತ್ತಾನೋ ಹಾಗೆಯೇ ಆದೇಶ ನೀಡಿ ಸತ್ತ ಮನುಷ್ಯನಿಂದ ಅವನ ಶರೀರ ಹೊಂದಿರುವಂತೆಯೇ ನಾವು ಕೆಲಸ ಮಾಡಿಸಬಹುದು ಎಂದವರು ಒತ್ತಿ ಹೇಳಿದರು.

"ಅವರ ವಾದವನ್ನು ಅಲ್ಲಿ ಸೇರಿದ್ದ ಕೆಲವೊಂದು ಪ್ರಸಿದ್ಧ ವಿಜ್ಞಾನಿಗಳು ಒಪ್ಪಲಿಲ್ಲವಲ್ಲದೇ ಅಪಹಾಸ್ಯ ಮಾಡಿದ್ದು ಕುಮುದನ್ ಅವರಿಗೆ ತುಂಬಾ ನೋವನ್ನುಂಟು ಮಾಡಿತು. ಅವರ ಸಹಾಯಕ ಡಾಕ್ಟರರು ಸಮಾಧಾನ ಪಡಿಸದಿದ್ದರೆ ಅಲ್ಲೇ ಒಂದು ರಾದ್ಧಾಂತವಾಗುತ್ತಿತ್ತು. ಮರುದಿನ ಕುಮುದನ್ ತಮ್ಮ ಸಹಾಯಕನೊಂದಿಗೆ ಭಾರತಕ್ಕೆ ಮರಳುವವರಿದ್ದರು. ಅಂದೇ ಅವರನ್ನು ಭೇಟಿ ಮಾಡಿದ ಇಬ್ಬರು ಅಪರಿಚಿತರು ಕುಮುದನ್‌ರ ಪ್ರಯೋಗದಲ್ಲಿ ಅವರ ವಾದದಲ್ಲಿ ಆಸ್ತೆ ವ್ಯಕ್ತಪಡಿಸಿ ಅದನ್ನು ಸಾಕಾರಗೊಳಿಸುವಲ್ಲಿ ಹಣ ಕಾಸಿನ ನೆರವು ನೀಡಲು ಮುಂದೆ ಬಂದರು. ಅವರು ನಮ್ಮ ನೆರೆಯ ಶತ್ರುರಾಷ್ಟ್ರದವರು ಎಂಬ ಕಲ್ಪನೆ ಕುಮುದನ್‌ರಿಗೆ ಬಂದರೂ ಸಹಾ-ಯಕ ಡಾಕ್ಟರನ ಒತ್ತಾಯ ಮತ್ತು ತಮ್ಮ ಪ್ರಯೋಗದ ಸಾಫಲ್ಯವನ್ನು ದೃಷ್ಟಿಯಲ್ಲಿರಿಸಿಕೊಂಡು ಒಪ್ಪಿಕೊಂಡರು. ಭಾರತಕ್ಕೆ ಬರುತ್ತಲೂ "ಸೀಪರ್ಲ್"ದ ಮಾಲಿಕನಿಂದ ಹಣಕಾಸಿನ ನೆರವು ದೊರೆಯಿತು. ಸೈಟ್ ಕೊಂಡು ಭೂಗರ್ಭದಲ್ಲಿ ಪ್ರಯೋಗಶಾಲೆ, ಮೇಲೆ ತಮ್ಮ ಮನೆ 'ಮಧುಸಂಚಯ' ಕಟ್ಟಿಸಿಕೊಂಡರು. ಪ್ರಯೋಗ ಮುಂದುವರೆಯಿತು. ಅವರೊಂದಿಗೆ ಒಪ್ಪಂದ ಮಾಡಿಕೊಂಡವನೇ 'ಚಿನ್ ಲಿಯೋ ಲಿನ್' ಆತ ಸೀಪರ್ಲ್‌ದ ಸ್ಲೀಪಿಂಗ್ ಪಾರ್ಟ್‌ನರ್. ಅವನೇ ವೇಷ ಬದಲಿಸಿಕೊಂಡು ಮೇಲಿಂದ ಮೇಲೆಬರ ಎತ್ತಿದ್ದ ವಿಚಿತ್ರ ರೀತಿಯಲ್ಲಿ ಕೊಲೆಯಾದ ಕೆಲಿಯಾನ್ ಇವನೆ.

"ಮುಂದೆ ಸಮಯ ಕಳೆದಂತೆ ತಾವೊಂದು ಭಯಂಕರ ಜಾಲದಲ್ಲಿ ಸಿಲುಕಿಕೊಂಡಿದ್ದೇನೆ. ಶತ್ರುಗಳು ತಮ್ಮನ್ನು ದೇಶದ್ರೋಹದ ಕೆಲಸಕ್ಕೆ ಉಪ ಯೋಗಿಸಿಕೊಳ್ಳುತ್ತಿದ್ದಾರೆ ಎಂಬುದರ ಕಲ್ಪನೆ ಬಂದಾಗ ಕುಮುದನ್‌ರು ಹಿಂದೆ ಸರಿಯಲು ಪ್ರಯತ್ನಿಸಿದ್ದು ವ್ಯರ್ಥವಾಯಿತು. ಅವರ ಒಬ್ಬಳೇ ಮಗಳಾದ ಮಧುಪಸೆ ಪ್ರಾಣಭೀತಿ ಒಡ್ಡಿದ ಅವರು ನಿರಾತಂಕವಾಗಿ

ಕುಮುದನ್‌ರಿಂದ ಕೆಲಸ ಮಾಡಿಸತೊಡಗಿದರು.

"ಹೀಗಾಗಿ ಕುಮುದನ್ ಅವರ ಶತ್ರುಗಳು ಹೆಣೆದು ಅವರಿಗೆಂದೇ ಬೀಸಿದ ಬಲೆಯಲ್ಲಿ ಸಿಲುಕಿ ಅವರ ಕೈಗೊಂಬೆಗಳಾಗಬೇಕಾಯಿತು. ಮೇಲ್ನೋಟಕ್ಕೆ ಕುಮುದನ್ ಅವರೇ ಮೂಲ ಪುರುಷರೆಂದು ಕಂಡು ಬಂದರೂ ಅವರನ್ನಾಡಿಸುವ ಸೂತ್ರ ಬೇರೊಬ್ಬರ ಕೈಯಲ್ಲಿತ್ತು. ಕುಮುದನ್ ಅವರ ಮಿದುಳಿನಲ್ಲಿ ರೂಪುಗೊಂಡ ವಿಚಾರಗಳು ಪ್ರಯೋಗಗಳ ಮೂಲಕ ಒಡಮೂಡಬೇಕಾಗಿದ್ದವು. ಅದು ಒಂದೇ ಬಾರಿಗೆ ಪೂರ್ಣವಾಗುವಂತಿರಲಿಲ್ಲ. ಎರಡು ವರ್ಷಗಳ ವರೆಗೆ ಮುಂದುವರೆವ ಪ್ರಯೋಗಗಳಿಗಾಗಿ ಅಪಾರ ಧನದ ಅವಶ್ಯಕತೆ ಬಿದ್ದಿತು. ಅದನ್ನು ಪೂರೈಸಲು ಶತ್ರು ವಿಚಿತ್ರ ವಿಧಾನ ಕೈಕೊಂಡ. ನಮ್ಮ ದೇಶದ ವಿಜ್ಞಾನಿಯಿಂದ ನಮ್ಮ ದೇಶದಲ್ಲೇ ಪ್ರಯೋಗ ಮಾಡಲು ನಮ್ಮ ದೇಶದ ಬ್ಯಾಂಕನ್ನೇ ವಿಜ್ಞಾನಿಯಿಂದಲೇ ದರೋಡೆ ಮಾಡಿಸಿದ. ಸ್ವತಃ ಕುಮುದನ್‌ರೇ ನಾಲ್ಕು ತಿಂಗಳ ಹಿಂದೆ ನಡೆದ ಬೆಂಗಳೂರ ಬ್ಯಾಂಕ್ ದರೋಡೆಯಲ್ಲಿ ಭಾಗ ವಹಿಸಿದ್ದರು. ಮಂಗಲ್‌ದಾದಾ ಅವರಿಗೆ ಸಹಾಯಕನಾಗಿದ್ದ. ಆಗ ಎಂಭತ್ತೈದು ಲಕ್ಷ ರೂಪಾಯಿ ಇವರ ಕೈಗೆ ಬಂದಿತ್ತು. ನಿನ್ನೆ ಸಹ "ಸ್ಟೇಟ್ ಬ್ಯಾಂಕ್ ಆಫ್ ಮಾಡರ್ನ್ ಇಂಡಿಯಾ..." ಲೂಟಿ ಮಾಡಿ ಚಿನ್ನ ಹಾಗೂ ಹಣ ಅಪಹರಿಸುವ ಪ್ರಯತ್ನ ನಡೆಯಿತು. ಇದನ್ನು ಮೊದಲೇ ಅರಿತಿದ್ದ ನಾನು ವಿಫಲಗೊಳಿಸಿ ಮೂರು ಜನ ಯಮದೂತರನ್ನು ಯಮಾಲಯಕ್ಕಟ್ಟಿ ಕುಮುದನ್ ಅವರನ್ನು ಬಂಧಿಸಿದೆ... ಇದೋ ಇವರೆಲ್ಲರ ನಾಯಕ ವಿಜ್ಞಾನಿ ಕುಮುದನ್ ನಿಮ್ಮ ಮುಂದಿದ್ದಾರೆ!"

ನೂರಾರು ಕಣ್ಣುಗಳು ಹೇಮಂತನಿಂದ ತುಸು ಅಂತರದಲ್ಲಿ ಮುಖ ಕೆಳಗೆ ಹಾಕಿಕೊಂಡು ಕುಳಿತಿದ್ದ ಕುಮುದನ್‌ರತ್ತ ಹೊರಳಿದವು. ಆಮೇಲೆ ಮತ್ತೆ ಹೇಮಂತನತ್ತ. ಒಂದು ನಿಮಿಷ ವಿಶ್ರಾಂತಿ ಪಡೆಯಲಿಚ್ಛಿಸಿದ ಹೇಮಂತ ಒಂದೆರಡು ಗುಟುಕು ನೀರು ಕುಡಿದು ಪಕ್ಕದಲ್ಲಿದ್ದ ಎಸ್. ಪಿ. ರಾಮನಾಥರೊಂದಿಗೆ ತಗ್ಗಿದ ದನಿಯಲ್ಲಿ ಮಾತನಾಡತೊಡಗಿದ. ಅಶೋಕ ಹಾಗೂ ಸುಷಮಾ ಹೇಮಂತ ಸೂಚಿಸಿದ ಆಯಕಟ್ಟಿನ ಸ್ಥಳಗಳಲ್ಲಿ ಜಾಗ್ರತರಾಗಿ ಕಾವಲಿದ್ದರು.

ಅದೊಂದು ಚಿಕ್ಕ ಪ್ರೆಸ್‌ಕಾನ್‌ಫರೆನ್ಸ್ ಎಂದು ಹೇಳಿದರೆ ತಪ್ಪಾಗಲಾರದು. ಮೇಜರ್ ತನ್ನ ಪದ್ಧತಿಯಂತೆ ತನ್ನ ಕೇಸಿನ ಬಗ್ಗೆ ವಿವರ ನೀಡಲು ಎಲ್ಲರನ್ನು ಎಸ್. ಪಿ. ಆಫೀಸಿನಲ್ಲಿರುವ ಕಾನ್‌ಫರೆನ್ಸ್ ಹಾಲ್‌ಗೆ ಆಹ್ವಾನಿಸಿದ್ದ. ಸುಮಾರು ಮೂವತ್ತು ಜನ ಪತ್ರಕರ್ತರು, ಕೇಸಿಗೆ ಸಂಬಂಧ

ಪಟ್ಟ ಹತ್ತೆಂಟು ಜನ, ನಗರದ ಗಣ್ಯರು, ಪೋಲೀಸ್ ಅಧಿಕಾರಿಗಳು ಎಲ್ಲಾ ಸೇರಿದರೆ ಅರವತ್ತು ಎಪ್ಪತ್ತು ಜನರಿರಬಹುದು. ಮುಂದಿನ ಸಾಲಿನಲ್ಲೇ ಪೋಲೀಸ್ ಅಧಿಕಾರಿಗಳು, ಅವರ ಹಿಂದೆ ಇನ್ನಿತರರು ಕುಳಿತಿದ್ದರೆ ಎಡ ಭಾಗದಲ್ಲಿ ಪ್ರತ್ಯೇಕವಾಗಿ ನಿರ್ಮಿಸಲ್ಪಟ್ಟ ವೇದಿಕೆ ಮೇಲೆ ಡಾಕ್ಟರ್ ದಿವಾಕರ್, ಬ್ಯಾಂಕಿನ ಚೇರ್‌ಮನ್, ಸೀಪರ್ಲ್‌ನ ಸಿಬ್ಬಂದಿ ವರ್ಗ, ಪತ್ರಿಕಾ ಪ್ರತಿನಿಧಿಗಳು ಮಂಡಿಸಿದ್ದರು.

ಹೇಮಂತನ ಮೌನ ಓರ್ವ ಹಿರಿಪತ್ರಕರ್ತನಿಗೆ ಸಹನೆಯಾಗಲಿಲ್ಲವೆಂದು ಕಾಣುತ್ತದೆ. ಕೇಸಿನ ಬಗ್ಗೆ ಇನ್ನಿತರ ವಿಷಯ ತಿಳಿಯ ಬಯಸುವ ತವಕ ಅವರಲ್ಲಿ ಒಡಮೂಡಿತ್ತು. ಅವರು ಉತ್ಸುಕತೆಯಿಂದ ಏರಿದ ದನಿಯಲ್ಲಿ ಕೇಳಿಯೇ ಬಿಟ್ಟರು. "ಹೇಮಂತ್ ಅವರೆ, ನೀವು ತುಂಬಾ ಕೆಟ್ಟವರು. ಎಲ್ಲಾ ಹೇಳಿದರೂ ಏನೂ ಹೇಳಲಿಲ್ಲ. ಕೇವಲ ಕುಮುದನ್ ಅವರನ್ನು ಮಾತ್ರ ತೋರಿಸಿ ಉಳಿದೆಲ್ಲವನ್ನೂ ಪರದೆ ಹಿಂದೆ ಸರಿಸಿಬಿಟ್ಟಿರಿ."

ಅವರ ಮಾತಿಗೆ ಮುಗುಳು ನಗೆ ನಕ್ಕು ನುಡಿದ ಹೇಮಂತ, "ಅದು ನನ್ನ ಸ್ವಭಾವ ಮೂರ್ತಿಯವರೆ.... ಏನೇ ಹೇಳಿದರೂ ಸಸ್ಪೆನ್ಸ್‌ನಲ್ಲೇ ಹೇಳು ವದು ನನ್ನ ಜಾಯಮಾನ. ಅದು ತಮಗೆ ಗೊತ್ತು. ಕೇಳಿ, ಏನು ಬೇಕು ನಾನು ಸಿದ್ಧ....

"ಮೊದಲು ಪ್ರಳಯಾಂತಕ ಪ್ರಯೋಗ ಯಾವುದು ಎಂಬುದನ್ನು ಹೇಳಿ. ನಂತರ ಅದು ಹೇಗೆ ನಮ್ಮ ಅಂತರ್‌ರಾಷ್ಟ್ರೀಯ ರಾಜಕಾರಣಕ್ಕೆ ಸಂಬಂಧಿ ಸುತ್ತದೆ, ಇತ್ತೀಚೆಗೆ ನಡೆದ ಅಘಟಿತ ಘಟನೆಗಳೇನು, ಕಾರಣ ಮುಂತಾದ..."

ಕೈಯಿಂದ ಸನ್ನೆ ಮಾಡಿ ಅವರ ಮಾತನ್ನು ಅರ್ಧಕ್ಕೆ ತಡೆದ ಹೇಮಂತ ನುಡಿದ. "ಸ್ವಾಮಿ....ಸಾಕು....ಸಾಕು... ನಿಮಗೇನು ಬೇಕು ಎಂಬುದು ಎಲ್ಲಾ ಅರ್ಥವಾಯಿತು. ನಿಮಗೆ ಬೇಕಾದ ಎಲ್ಲ ವಿವರ ನಾನೀಗಲೇ ಕೊಡುವೆ. ಇದೋ ಟೇಪ್‌ರಿಕಾರ್ಡರ್ ಆನ್ ಆಯಿತು ಕೇಳಿ.'' ಹೇಮಂತನ ವಾಣಿ ಎಲ್ಲೆಡೆ ಪ್ರತಿಧ್ವನಿಸಲಾರಂಭಿಸಿತು.

"ಮಾನವ ಜೀವಂತವಾಗಿದ್ದಾಗ ಅವನ ಶರೀರದ ಸಕಲ ಕ್ರಿಯೆಗಳನ್ನು ಮೆದುಳು ನಿಯಂತ್ರಿಸುತ್ತದೆ. ಅಲ್ಲಿಂದ ಹೊರಡುವ ಪ್ರತಿಯೊಂದು ಆದೇ ಶವು ಪಾಲಿಸಲ್ಪಡುತ್ತದೆ. ಆದರೆ ಅದೇ ಮನುಷ್ಯ ಸಾವನ್ನಪ್ಪಿದರೆ ಅವನ ಶರೀರ ನಿರ್ಜೀವವಾಗುತ್ತದೆ. ನಿರುಪಯೋಗಿಯಾಗುತ್ತದೆ. ನಾಶ ಹೊಂದು ತ್ತದೆ... ಮನುಷ್ಯ ಸತ್ತಮೇಲೆ ಸಹಿತ ಅವನ ದೇಹದಲ್ಲಿ ಕೃತ್ರಿಮವಾಗಿ ಜೀವ ತುಂಬಿ ಅವನಿಂದ ಕೆಲಸ ಮಾಡಿಸುವ ವಿಚಾರ ಕುಮುದನ್ ಅವರ

ಮನದಲ್ಲಿ ಮೂಡಿತು. ಈಗಾಗಲೇ ನಾವು ಯಂತ್ರ ಮಾನವನನ್ನು ನಿರ್ಮಿಸಿ ಅವನಿಂದ ಇಚ್ಛಿತ ಕೆಲಸ ಮಾಡಿಸಿಕೊಳ್ಳುತ್ತಾ ಬಂದಿದ್ದೇವೆ. ಯಂತ್ರ ಮಾನವನ ಬದಲು ಮಾನವನಿಂದಲೇ ಈ ರೀತಿ ಕೆಲಸ ಮಾಡಿಸಿಕೊಳ್ಳಲು ಕುಮುದನ್ ಪ್ರಯೋಗ ನಡೆಸಿದರು. ಮಾನವನ ಮೆದುಳಿನಂತೆ ಕೆಲಸ ಮಾಡುವ ಯಂತ್ರವೊಂದನ್ನವರು ಶೋಧಿಸಿದರು. ಮಾನವನ ಸಾವಿನ ನಂತರ ಅವನ ತಲೆ ಕೊರೆದು ಅಲ್ಲಿಯ ಎಲ್ಲ ಭಾಗಗಳನ್ನು ತೆಗೆದು ಮೆದುಳಿನ ಭಾಗದಲ್ಲಿ ಪುಟ್ಟ ಯಂತ್ರವನ್ನು ಇಟ್ಟು ಅದರ ಸಂಪರ್ಕವನ್ನು ಶರೀರದ ಇನ್ನಿತರ ಭಾಗಗಳಿಗೆ ಜೋಡಿಸಲಾಗುತ್ತಿತ್ತು. ಹೀಗಾಗಿ ಕೃತ್ರಿಮ ಮಿದುಳೊಂದು ಸಿದ್ಧವಾಯಿತು. ಮಿದುಳಿಗೆ ನೀಡಿದ ಆದೇಶವನ್ನು ಅದು ಎಂಟು ಹತ್ತು ಸೆಕೆಂಡುಗಳ ನಂತರ ತನ್ನ ಶರೀರಕ್ಕೆ ಸಂಬಂಧಪಟ್ಟ ಅಂಗಗಳಿಗೆ ನೀಡುತ್ತಿತ್ತು. ಅದರ ಪಾಲನೆಯಾಗುತ್ತಿತ್ತು. ಇದರಿಂದಾಗಿ ಮಾನವ ಸತ್ತಿದ್ದರೂ ಅವನ ದೇಹ ಸಜೀವವಾಗಿ ನಮ್ಮೆದುರು ಬಂದು ನಿಲ್ಲುತ್ತಿದ್ದ. ಆತ ಸಜೀವವಾಗಿದ್ದಾಗ ಯಾವ ರೀತಿ ವರ್ತಿಸುತ್ತಿದ್ದನೋ ಅದೇ ರೀತಿ ವರ್ತಿಸುತ್ತಿದ್ದ. ಇವನು ಒಂದು ಯಂತ್ರ ಮಾನವನಾದರೂ ಅದಕ್ಕಿಂತ ಹೆಚ್ಚು ಚಟುವಟಿಕೆಯಿಂದ ವರ್ತಿಸುತ್ತಿದ್ದ. ಯಂತ್ರಮಾನವ ಎಂಬ ಕಲ್ಪನೆ ಸಹ ಮನದಲ್ಲಿ ಮೂಡುತ್ತಿರಲಿಲ್ಲ. ಅವನ ಶಕ್ತಿಯನ್ನು ಹೆಚ್ಚಿಸುವ ಕುಗ್ಗಿಸುವ ಅವನಿಂದ ಅತಿಮಾನವ ಶಕ್ತಿ ಹುಟ್ಟಿಸುವ ಅಪಾಯಕಾರಿ ಕೆಲಸ ಮಾಡಿಸಿಕೊಳ್ಳುವ ಎಲ್ಲಾ ವ್ಯವಸ್ಥೆ ವಿಜ್ಞಾನಿಯಿಂದ ನಿರ್ಮಿಸಲ್ಪಟ್ಟ ಪುಟ್ಟ ಯಂತ್ರದಲ್ಲಿತ್ತು."

"ಇದನ್ನೇ ಸ್ವಲ್ಪ ವಿಸ್ತರಿಸಿ ಹೇಳುತ್ತೀರಾ?...." ಓರ್ವ ವೈದ್ಯರು ಆಸಕ್ತಿಯಿಂದ ಕೇಳಿದರು.

"ಅವಶ್ಯವಾಗಿ ..." ಹೇಮಂತ ಮುಂದುವರೆಸಿದ. "ಸೃಷ್ಟಿಯಿಂದ ಹುಟ್ಟಲ್ಪಟ್ಟ ಮಾನವನ ಶಕ್ತಿ ಸೀಮಿತವಾಗಿದೆ. ಅವನ ದೇಹದಲ್ಲಿ ಉಸಿರು ಹರಿಯುವಂತೆ ಧಮನಿಗಳಲ್ಲಿ ರಕ್ತವು ಹರಿದಾಡುತ್ತದೆ. ಅವನ ದೇಹಕ್ಕೆ ಗಾಯವಾದರೆ ಅಲ್ಲಿಂದ ರಕ್ತ ಹೊರಬರುತ್ತದೆ. ಸತತ ಉಸಿರಾಟದಿಂದಾಗಿ ದೇಹ ಬಿಸಿಯಾಗಿರುತ್ತದೆ. ಅವನ ಹೃದಯ ಬಡಿತ, ನಾಡಿಮಿಡಿತ, ಸ್ಪಷ್ಟವಾಗಿ ಕೇಳಿಸುತ್ತದೆ. ಮನುಷ್ಯ ಜೀವಿತವಾಗಿರುವಷ್ಟು ಕಾಲ ಈ ಎಲ್ಲ ಕ್ರಿಯೆಗಳು ನಡೆಯುತ್ತವೆ. ಇದು ಪ್ರಕೃತಿ ಸಹಜವಾದ ಕ್ರಿಯೆ. ಇದಕ್ಕೆ ಆಹ್ವಾನ ಒಡ್ಡಿ ಪ್ರಳಯಾಂತಕ ಪ್ರಯೋಗ ಕೈಕೊಂಡರು ಕುಮುದನ್. ಪ್ರಕೃತಿ ನಿರ್ಮಿತ ಮಾನವ ಸತ್ತ ಮೇಲೂ ಅವನನ್ನು ಯಾಂತ್ರಿಕವಾಗಿ ಜೀವಿತಗೊಳಿಸಿ ಅವನಿಂದ ಅತಿ ಮಾನವ ಕೆಲಸ ತೆಗೆದುಕೊಳ್ಳುವಲ್ಲಿ ಅವರು ಯಶಸ್ವಿಯಾದರು.

ಮನುಷ್ಯನನ್ನು ಅವರು ಜೀವಿತಗೊಳಿಸಿದರೂ ದೇಹದಲ್ಲಿ ಸತತ ನಡೆಯುವ ರಕ್ತ ಸಂಚಾರ,ಉಸಿರಾಟ, ಯಾವದೂ ಈ ಕೃತ್ರಿಮ ಮಾನವನಲ್ಲಿ ನಡೆಸಲು ಅವರಿಂದಾಗಲಿಲ್ಲ.ಆದರಿಂದಾಗಿ ಈ ಯಂತ್ರ ಅಳವಡಿಸಿದ ಮಾನವನಿಗೆ ಗಾಯವಾದರೂ ಅಲ್ಲಿ ರಕ್ತ ಕಾಣಿಸಿಕೊಳ್ಳುತ್ತಿರಲಿಲ್ಲ. ಆತ ಗಾಯಗೊಳ್ಳುತ್ತಿರಲಿಲ್ಲ. ಅವನ ಮುಖದಿಂದ ಯಾವದೇ ರೀತಿಯ ಉದ್ಗಾರ, ಚೀತ್ಕಾರ, ಯಾವುದೂ ಹೊರ ಬರುತ್ತಿರಲಿಲ್ಲ. ಪೂರ್ತಿ ದೇಹವನ್ನು ನಿಯಂತ್ರಿಸುವ ಯಂತ್ರಕ್ಕೆ ಸಂಬಂಧಿಸಿದ ಒಂದೇ ಒಂದು ರಂದ್ರ ಎದೆಯ ಬಲಭಾಗದಲ್ಲಿದ್ದು ಆ ರಂಧ್ರಕ್ಕೆ ಪೆಟ್ಟು ತಗಲಿದರೆ ಮಾತ್ರ ಎರಡನೇ ಬಾರಿ ಆ ದೇಹಕ್ಕೆ ಮರಣ ಸಂಭವಿಸುತ್ತಿತ್ತು. ಮಿದುಳಿನ ಸ್ಥಳದಲ್ಲಿ ಜೋಡಿಸಿದ ಪುಟ್ಟ ಕೃತ್ರಿಮ ಮಿದುಳು ಸ್ಫೋಟಗೊಂಡು ಕರ್ಪೂರದಂತೆ ಉರಿಯುತ್ತಿತ್ತು. ಪುನಃ ಶರೀರ ನಿರ್ಜೀವವಾಗುತ್ತಿತ್ತು. ಇಂಥ ಯಂತ್ರ ಅಳವಡಿಸಿದ ವ್ಯಕ್ತಿಗಳಿಗೆ ನಾವು 'ಯಮದೂತ' ಎಂದು ಹೆಸರಿಟ್ಟಿದ್ದೆವು ಅಂಥ ಹದಿಮೂರು ಯಮದೂತರ ನಿರ್ಮಾಣವಾಗಿತ್ತೆಂದು ಹೇಳಿದರೆ ಖಂಡಿತವಾಗಿ ನೀವು ಬೆಚ್ಚಿ ಬೀಳುತ್ತೀರಿ."

"ಏನು? ಹದಿಮೂರು ಜನ ಯಮದೂತರೆ" ಅಚ್ಚರಿಮಿಶ್ರಿತ ಭಯದಿಂದ ಕೇಳಿದರು ಯಾರೋ ಒಬ್ಬ ಸಜ್ಜನರು.

"ಹೌದು.... ಆದಕ್ಕಾಗಿ ನೀವು ಭಯಪಡಬೇಕಾಗಿಲ್ಲ. ಅವರಲ್ಲಿ ಈಗಾಗಲೇ ಹನ್ನೊಂದು ಜನರು ಯಮಲೋಕ ಸೇರಿದ್ದಾರೆ"

"ಮತ್ತೇ ಉಳಿದ ಇಬ್ಬರು?"

"ಅವರಿಬ್ಬರೂ ನನ್ನ ಕಣ್ಣಳತೆಯಲ್ಲಿದ್ದಾರೆ. ಅವರಿಂದ ಯಾವ ಅಪಾಯವೂ ಇಲ್ಲ."

ಮುಂದಿನ ಸಾಲಿನಲ್ಲೇ ಕುಳಿತಿದ್ದ ದಿವಾಕರ ಇದನ್ನೆಲ್ಲ ಕೇಳುತ್ತಿದ್ದಂತೆ ಚಿಂತಿತರಾದರು. ಅವರು ತುಂಬಾ ಭಾವುಕ ಸ್ವಭಾವದವರೆಂದು ಕಾಣುತ್ತದೆ.... ಒಮ್ಮೆಲೇ ಎದ್ದು ನಿಂತು ಕೂಗಿದರು, "ಇದು ಅನ್ಯಾಯ, ಸಹಿಸಲಿಕ್ಕಾಗದು. ಒಬ್ಬ ಬುದ್ಧಿಜೀವಿ, ಪ್ರಜ್ಞಾವಂತ, ಮೇಧಾವಿ, ವಿಜ್ಞಾನಿಯಿಂದಾಗಿ ವಿನಾಶಕಾರಿ ಆವಿಶ್ಕಾರ. ಥೂ, ನಾಚಿಗ್ಗೇಡು. ಕುಮುದನ್‌ರಿಂದ ಅಪಚಾರವಾಗಿದೆ."

ಆತ ಇನ್ನೂ ಏನೇನೋ ಬಡಬಡಿಸುತ್ತಿದ್ದಂತೆ ಹೇಮಂತ ಸಮಾಧಾನಪಡಿಸಿದ, "ಡಾಕ್ಟರ್ ದಿವಾಕರ, ಸಮಾಧಾನ ತೆಗೆದುಕೊಳ್ಳಿ....ಕೇವಲ ನೀವಷ್ಟೇ ಅಲ್ಲ...ನಿಮ್ಮಂತೆ ನೂರು ಜನರು ಈ ಪ್ರಳಯಾಂತಕ ಪ್ರಯೋಗದಿಂದ ವಿಮಂಚನೆ ವ್ಯಕ್ತಪಡಿಸಿದ್ದಾರೆ. ಆಕ್ರೋಶ ತೋಡಿಕೊಂಡಿದ್ದಾರೆ. ಸ್ವತಃ ಕುಮುದನ್ ಸಹ ಇದನ್ನು ಮತ್ತೊಬ್ಬರ ಒತ್ತಾಯಕ್ಕೆ ಕಟ್ಟುಬಿದ್ದು ತಮ್ಮ

ಒಬ್ಬಳೇ ಮಗಳು ಮಧುವಿಗೋಸ್ಕರ ವಿವಶರಾಗಿ ಮಾಡಿದ್ದಾರೆ. ಅವರ ವಿಚಾರ ಈ ಪ್ರಯೋಗದಿಂದ ಕಲ್ಯಾಣಕಾರೀ ಯೋಜನೆ ಕೈಕೊಳ್ಳುವದಾಗಿತ್ತು. ವಿನಾಶಕಾರಿ ಯೋಜನೆ ಅಲ್ಲ.... ಕುಳಿತುಕೊಳ್ಳಿ."

ಕಷ್ಟಪಟ್ಟು ತಮ್ಮ ಮೇಲೆ ನಿಯಂತ್ರಣ ತಂದುಕೊಂಡ ದಿವಾಕರ ತಮ್ಮ ಜಾಗೆಯಲ್ಲಿ ಕುಳಿತುಕೊಂಡರು. ಆದರೂ ಸಮಾಧಾನವಾಗಲಿಲ್ಲವೆಂದು ಕಾಣುತ್ತದೆ. ಜೇಬಿನಿಂದ ಸಿಗರೇಟ್ ಪ್ಯಾಕ್‌ತೆಗೆದು, ಅದರಿಂದ ಒಂದು ಸಿಗರೇಟು ಎಳೆದು ಬಾಯಿಗಿಟ್ಟುಕೊಂಡರು. ಲೈಟರ್‌ದಿಂದ ಅದನ್ನುರಿಸಿ, ಬುಸ್ ಬುಸ್ ಹೊಗೆ ಬಿಟ್ಟು ಬಡಬಡನೆ ತಮ್ಮಷ್ಟಕ್ಕೆ ತಾವೇ ಮಾತಾಡಿಕೊಂಡರು ಹುಚ್ಚರಂತೆ. ನಿಧಾನವಾಗಿ ಕೋಪ ತಣ್ಣಗಾಗುತ್ತಿದ್ದಂತೆ ಬಡಬಡಿಸುವದು ನಿಂತಿತು.

ಹೇಮಂತ ಅವರನ್ನೇ ಗಮನಿಸುತ್ತಿದ್ದು ಅವರು ಶಾಂತರಾಗುತ್ತಿದ್ದಂತೆ ಸಮಾಧಾನದ ಉಸಿರು ಬಿಟ್ಟು ಮುಂದುವರೆಸಿದ. "ಸ್ನೇಹಿತರೆ ನಾನೀಗ ಕೊನೆಯ ಹಂತಕ್ಕೆ ಬರುತ್ತಿದ್ದೇನೆ. ಪ್ರಕೃತಿನಿರ್ಮಿತ ಮಾನವನಿಗೊಂದು ಮಿತಿ ಇರುತ್ತದೆ. ಆ ಮಿತಿಯಲ್ಲೇ ಆತ ಕೆಲಸ ಮಾಡುತ್ತಾನೆ, ತಿನ್ನುತ್ತಾನೆ, ಓಡುತ್ತಾನೆ, ನಡೆಯುತ್ತಾನೆ. ಅದನ್ನು ಮೀರಿ ಕೆಲಸ ಮಾಡಲು ಪ್ರಯತ್ನಿಸಿದರೆ ಅದರಿಂದ ಅವನ ಶರೀರಕ್ಕೆ ನೋವಾಗುತ್ತದೆ, ಅಪಾಯವಾಗುತ್ತದೆ. ಆದರೆ ಶರೀರದ ಮೇಲೆ ಪ್ರಕೃತಿಯ ಹಿಡಿತ ತಪ್ಪಿ ಕೃತ್ರಿಮ ಯಂತ್ರದ ನಿಯಂತ್ರಣ ಬಂದರೆ? ಆತ ಒಂದು ಅತಿಮಾನವನ ರೂಪ ಧಾರಣ ಮಾಡುತ್ತಾನೆ. ಅವನಿಂದ ಕೆಲಸ ತೆಗೆದುಕೊಳ್ಳುವವರ ಕೈಗೊಂಬೆಯಾಗುತ್ತಾನೆ. ಅವನ ಶಕ್ತಿ ಹತ್ತು ಹದಿನೈದು ಪಟ್ಟು ಹೆಚ್ಚುತ್ತದೆ. ಅದನ್ನೆ ಯಮದೂತರು ಮಾಡುತ್ತಿದ್ದರು. ಅವರ ಶಕ್ತಿ ಅಪಾರ. ಅವರಿಗೆ ಸಾವು ನೋವು ಭೀತಿ ಇರಲಿಲ್ಲ. ಅದರ ಅನುಭೂತಿಯೂ ಇರಲಿಲ್ಲ. ಕೇವಲ ಆದೇಶ ಪಾಲಿಸುವದಷ್ಟೇ ಅವರ ಕೆಲಸವಾಗಿತ್ತು. ಅವರು ಜಿಗಿಯುತ್ತಿದ್ದರು, ಬೇಕಾದಷ್ಟು ಎತ್ತರದಿಂದ ಹಾರುತ್ತಿದ್ದರು, ಓಡುತ್ತಿದ್ದರು. ಗಂಟೆಗೆ ಎಪ್ಪತ್ತು ಎಂಭತ್ತು ಕಿಲೋಮೀಟರ್ ವೇಗದಲ್ಲಿ ಓಡುವ ಕಾರನ್ನು ಅವರು ಹಿಂದಕ್ಕೆ ಹಾಕುತ್ತಿದ್ದರು. ಅದಕ್ಕೆ ಕಾರಣ ಅವರಿಗೆ ಯಾವದೇ ರೀತಿಯ ಶಾರೀರಿಕ ವೇದನೆಯಾಗುತ್ತಿದ್ದಿಲ್ಲ. ಶರೀರಕ್ಕೆ ಬಾಧೆಯಾಗುತ್ತಿರಲಿಲ್ಲ"

"ಅಸಾಧ್ಯ....ನಂಬಲಿಕ್ಕಾಗದು...."

"ಹೌದು ಇದು ವಿಜ್ಞಾನ ಯುಗ....ನಂಬಲಿಕ್ಕಾಗದ ಕೆಲಸಗಳನ್ನು ನಾವು ವಿಜ್ಞಾನದಿಂದ ಸಾಧಿಸಬಹುದು. ಅದಕ್ಕೆ ಕುಮುದನ್‌ರೇ ಸಾಕ್ಷಿ."

"ಅದು ಸರಿ...ಮಾನವನಿಗೂ ಈ ಯಮದೂತರಿಗೂ ವ್ಯತ್ಯಾಸ ನೀವು

ಹೇಗೆ ಕಂಡು ಹಿಡಿಯುತ್ತೀರಿ?"

"ಇದನ್ನು ನಾನು ಮೊದಲೇ ಸ್ಪಷ್ಟಪಡಿಸಿರುವೆ. ಯಮದೂತರಿಗೆ ಪ್ರಕೃತಿ ಸಹಜ ಕ್ರಿಯೆಗಳು ಯಾವವೂ ಇಲ್ಲ; ಉಸಿರಾಟ, ರಕ್ತಸಂಚಾರ, ಪ್ರಾಣಭಯ ಮುಂತಾದವು. ಅವರು ಮೇಲ್ನೋಟಕ್ಕೆ ಮಾನವರಂತೆ ಕಂಡು, ಮಾನವರ ಚಟುವಟಿಕೆ ನಡೆಸಿದರೂ ಇದಾವದೂ ಇಲ್ಲದಿದ್ದುದೇ ಒಂದು ವಿಶೇಷ ಅಂತರ, ಅಸಮಾನತೆ. ಪೊಲೀಸರಿಗೆ ಬೇಕಾದ ಅಪರಾಧಿ ಬಂಟಿ ಅಪಘಾತ ದಲ್ಲಿ ಸತ್ತ. ಅವನ ಶವಸಂಸ್ಕಾರವೂ ಆಯಿತು. ಆಮೇಲೆ ಅವನ ಶವವನ್ನು ಹೊರತೆಗೆದ ಕುಮುದನ್ ತಮ್ಮ ಪ್ರಯೋಗಕ್ಕೆ ಒಳಪಡಿಸಿದರು. ಮಿದುಳಿನ ಬದಲಾಗಿ ಅವರ ಪುಟ್ಟ ಯಂತ್ರ ಅಳವಡಿಸಲ್ಪಟ್ಟು ಆತ ಮತ್ತೆ ಜೀವಿತನಾಗಿ ಎಸ್.ಪಿ. ಅವರ ಮುಂದೆ ಬಂದ. ಬ್ಯಾಂಕ್ ದರೋಡೆಗೆ ಸಂಬಂಧಿಸಿದಂತೆ ವಿಚಾರಣೆ ಮಾಡಿದ ಇನಸ್ಪೆಕ್ಟರ್ ಚವ್ಹಾಣರವರು ತಯಾರಿಸಿದ ಹಸಿರು ಬಣ್ಣದ, ಫೈಲ್ ನಾಶಪಡಿಸಿದ. ಅವನ ಮೇಲೆ ಯಾವ ಗುಂಡಿನ ಪರಿಣಾಮ ಆಗಲಿಲ್ಲ. ರಕ್ತಸ್ರಾವವೂ ಆಗಲಿಲ್ಲ. ಆತನಿಗೆ ಪ್ರಾಣಭಯವೂ ಇರಲಿಲ್ಲ. ಅವನ ತಲೆಯಲ್ಲಿ ಇರುವದು ಕೇವಲ ಆದೇಶ ಪಾಲನೆ ಮಾತ್ರ. ಯಂತ್ರದಿಂದ 'ಝುನ್ ಝುನ್' ಎಂದು ಸಂಗೀತದ ಅಲೆಯೊಂದಿಗೆ ಆದೇಶ ಹೊರಬರುತ್ತಿತ್ತು. ಅದನ್ನಾತ ಪಾಲಿಸುತ್ತಿದ್ದ."

"ಹಸಿರು ಫೈಲಿನಲ್ಲಿ ಏನಿತ್ತು?"

"ಬ್ಯಾಂಕ್ ದರೋಡೆಯ ಹಿಂದೆ, ಅತಿಮಾನವ ಶಕ್ತಿಯ ಹಿಂದೆ, ಓರ್ವ ವಿಜ್ಞಾನಿಯ ಕೈವಾಡ ಇದೆ ಎಂಬುದನ್ನು ಚವ್ಹಾಣ ಕಂಡುಕೊಂಡಿದ್ದರು. ಅಷ್ಟೇ ಅಲ್ಲ, ಅವರು ಬಂಟಿಯನ್ನು ಜೀವಂತ ನೋಡಿ ಅವನನ್ನು ಮಾತನಾಡಿಸಲು ಪ್ರಯತ್ನಿಸಿದ್ದರು. ಬಂಟಿಗೆ ಮೇಲಿಂದ ಆದೇಶ ಬರದಿದ್ದುದರಿಂದ ಆತ ಮಾತ ನಾಡಲಿಲ್ಲ. ಇದರ ಬಗ್ಗೆಯೂ ಆತ ಫೈಲಿನಲ್ಲಿ ಉಲ್ಲೇಖಿಸಿದ್ದ. ಅದಕ್ಕಾಗಿಯೇ ಅವರ ಮೇಲೆ ಯಮದೂತ ದಾಳಿ ಮಾಡಿ ಆಸ್ಪತ್ರೆ ಸೇರುವಂತೆ ಮಾಡಿದ. ಸುದೈವದಿಂದ ಅವರಿಗೆ ಪ್ರಾಣಾಪಾಯ ಒದಗಲಿಲ್ಲ... ಬಂಟಿ ಎಲ್ಲಾ ಕಾಗದ ಪತ್ರ ಫೈಲ್ ಸುಟ್ಟಿದ್ದರೂ ಉಳಿದ ಕೆಲವೊಂದು ಕಾಗದಗಳ ಅವಶೇಷಗಳಿಂದ ನಾನಿದನ್ನು ಕಂಡುಕೊಂಡೆ."

ಸ್ವಲ್ಪ ಸಮಯ ಬಿಟ್ಟು ಉಸಿರು ತೆಗೆದುಕೊಂಡ ಹೇಮಂತ ಮುಂದು ವರೆಸಿದ

"ಈಗ ನಾನು ಮುಖ್ಯ ವಿಷಯಕ್ಕೆ ಬರುತ್ತೇನೆ. ಈ ವಿನಾಶಕಾರಿ ಪ್ರಳ ಯಾಂತಕ ಪ್ರಯೋಗಕ್ಕೂ ನಮ್ಮ ದೇಶದ ಭದ್ರತೆಗೂ ಮತ್ತು ಅಂತರ್‌ರಾಷ್ಟ್ರ

ರಾಜಕಾರಣಕ್ಕೂ ಏನು ಸಂಬಂಧ ಎಂಬುದನ್ನು ತಮ್ಮ ಮುಂದೆ ಇಡುತ್ತೇನೆ."

ಅಲ್ಲಿಯವರೆಗೂ ಅಧೋಮುಖಿಯಾಗಿ ಕುಳಿತು ಪ್ರತಿಯೊಂದನ್ನು ಮೌನವಾಗಿ ಆಲಿಸುತ್ತಿದ್ದ ಕುಮುದನ್ ಅವರು ವಿಚಲಿತರಾದರು. ಅವರು ತಲೆಎತ್ತಿ ಒಂದು ಬಾರಿ ಮೇಜರನ ಕಡೆ ನೋಡಿ ಕೇಳಿದರು ಶಾಂತ ಭಾವದಿಂದ. "ಮೇಜರ್....ಇಲ್ಲಿಯ ವರೆಗೂ ನೀವು ಹೇಳಿದ್ದನ್ನು ನಾನು ಸಂಪೂರ್ಣವಾಗಿ ಒಪ್ಪಿಕೊಳ್ಳುತ್ತೇನೆ. ಆದರೆ ಅಂತರ್ರಾಷ್ಟ್ರ ರಾಜಕಾರಣಕ್ಕೆ ಸಂಬಂಧಿಸಿದ ವಿಷಯವಾಗಲಿ, ದೇಶದ್ರೋಹಕ್ಕೆ ಸಂಬಂಧಿಸಿದ ವಿಷಯಕ್ಕಾಗಲೀ ನಾನು ಒಪ್ಪಿಕೊಳ್ಳುವದಿಲ್ಲ."

ಹೇಮಂತ ಮಂದಹಾಸ ಬೀರಿ ಅವರಿಗೆ ಉತ್ತರಿಸಿದ. "ಕುಮುದನ್ ಅವರೆ ನೀವಂಥ ಮನುಷ್ಯರಲ್ಲ ಅಂತ ನನಗಷ್ಟೇ ಅಲ್ಲ; ನಿಮ್ಮನ್ನು ಸೂತ್ರದ ಬೊಂಬೆಯಂತೆ ಉಪಯೋಗಿಸಿದವರಿಗೂ ಚೆನ್ನಾಗಿ ಗೊತ್ತು. ಅದಕ್ಕೆಂದೇ ನಿಮ್ಮನ್ನು ಮುಖ್ಯ ವಿಷಯದಿಂದ ದೂರವಿಟ್ಟಿದ್ದರಿಂದ ನಿಮ್ಮ ಹಿಂದೆ ನಡೆದ ಷಡ್ಯಂತ್ರದ ಕಲ್ಪನೆ ನಿಮಗಾಗಲಿಲ್ಲ"

"ಓಹ್.... ನನಗಿದು ಗೊತ್ತಿಲ್ಲ"

"ಗೊತ್ತಾಗುವಂತೆಯೂ ಇರಲಿಲ್ಲ"

"ದಯವಿಟ್ಟು ವಿಷಯವೇನು ಅಂತ ಹೇಳ್ತಿರಾ?" ಕುಮುದನ್ ವಿನಂತಿಸಿಕೊಂಡರು.

"ಹೇಳುತ್ತೇನೆ ಕುಮುದನ್ ಅವರೆ, ನನ್ನ ಉದ್ದೇಶವೂ ನಿಮ್ಮಂಥ ವಿಜ್ಞಾನಿಗಳನ್ನು ನೀವು ಮಾಡುವ ಪ್ರಳಯಾಂತಕ ಪ್ರಯೋಗಗಳಿಂದಾಗುವ ಅನಾಹುತಗಳ ಬಗ್ಗೆ ಎಚ್ಚರಿಸುವದಾಗಿದೆ. ಪ್ರಕೃತಿ ವಿರುದ್ಧವಾಗಿ ಮನುಷ್ಯ ಹೆಜ್ಜೆ ಇಟ್ಟರೆ ಏನಾಗುತ್ತದೆ ಎಂಬುದನ್ನು ನಿಮ್ಮಂಥ ಮೇಧಾವಿಗಳು ಯೋಚಿಸುವದು ಅವಶ್ಯಕವಾಗಿರುವದರಿಂದಲೇ ನಾನು ಇದರ ಬಗ್ಗೆ ವಿವರವಾಗಿ ಮಾತನಾಡುತ್ತಲಿದ್ದೇನೆ, ಕೇಳಿ."

ಹೇಮಂತ ಮತ್ತೇ ಎಲ್ಲರತ್ತ ಆಕರ್ಷಿತನಾದ. "ಮುಂದಿನ ತಿಂಗಳು ಪ್ರಧಾನ ಮಂತ್ರಿಗಳು ವಿದೇಶಯಾತ್ರೆಗೆ ಹೊರಟಿರುವದು ತಮಗೆಲ್ಲ ತಿಳಿದದ್ದೆ. ಅವರ ಜೊತೆ ಗೃಹಶಾಖೆ ಸಚಿವರು, ಮಹಾದಂಡನಾಯಕ ಹಾಗೂ ವಿರೋಧ ಪಕ್ಷದ ನಾಯಕರು ಹೋಗುವವರಿದ್ದಾರೆ. ಇಲ್ಲಿಯವರೆಗೂ ನಮ್ಮ ದೇಶದ ಜೊತೆ ಅಷ್ಟು ವಿಶೇಷ ರೀತಿಯ ಒಳ್ಳೆಯ ಸಂಬಂಧವಿಲ್ಲದ.... ಮೇಲಿಂದ ಮೇಲೆ ನಮ್ಮ ದೇಶದ ಆಂತರಿಕ ವಿಷಯದಲ್ಲಿ ಕೈಹಾಕಿ ತಂಟೆ ಮಾಡುತ್ತಿರುವ ದೇಶಗಳೊಡನೆ ಮಿತ್ರತ್ವದ ಮಾತುಕತೆ ನಡೆಸುವವರಿದ್ದಾರೆ. ಅವರು ವಿದೇಶ

ದಲ್ಲಿರುವಾಗಲೇ ಅವರಿಗೆ ತಿಳಿಯದಂತೆ ತಮಗೆ ಅನುಕೂಲವಾಗುವಂತೆ ಸಿದ್ಧಪಡಿಸಿದ ಕಾಗದಪತ್ರಗಳಿಗೆ ಅವರೆಲ್ಲರ ಸಹಿ ಮಾಡಿಸುವ ಯೋಜನೆ ಸಿದ್ಧವಾಗಿತ್ತು. ಜಗತ್ತಿನಾದ್ಯಂತ ಕೋಟಿ ಕೋಟಿ ಜನ ತಮ್ಮ ತಮ್ಮ ಮನೆಗಳಲ್ಲಿ ಕುಳಿತು ಟಿ.ವಿ. ಯಲ್ಲಿ ನಿರೀಕ್ಷಿಸುತ್ತಿದ್ದಂತೆ ನಾಲ್ಕು ಜನರು ಗಡಿಸಮಸ್ಯೆ.... ಕೆಲವೊಂದು ಆರ್ಥಿಕ ಸಮಸ್ಯೆ ಹಾಗೂ ಆಂತರಿಕ ವಿಷಯಕ್ಕೆ ಸಂಬಂಧಿಸಿದ ಅತೀ ಸೂಕ್ಷ್ಮ ಅಷ್ಟೇ ಮಹತ್ವದ ಕಾಗದಗಳಿಗೆ ಅವರು ಸಹಿ ಹಾಕುವವರಿದ್ದರು."

"ಅದು ಹೇಗೆ ಸಾಧ್ಯ?"

"ಏಕೆ ಸಾಧ್ಯವಿಲ್ಲ? ಈ ರೀತಿ ಸಿದ್ಧಪಡಿಸಿದ ಕಾಗದಗಳಿಗೆ ಸಹಿ ಮಾಡುವವರೆ ಬೇರೆಯಾಗಿದ್ದರೇ?"

"ಹೇಮಂತ್ ಅವರೆ ನೀವೇನು ಹೇಳ್ತಿದ್ದೀರಿ ಅನ್ನೋದೆ ನಮಗರ್ಥವಾಗ್ತಿಲ್ಲ. ಸ್ವಲ್ಪ ಬಿಡಿಸಿ ಹೇಳಿ" ನಾಗರಿಕರೊಬ್ಬರು ವಿನಂತಿಸಿಕೊಂಡರು.

"ಸರಿ ಪ್ರಯತ್ನಿಸುತ್ತೇನೆ. ಪ್ರಧಾನಮಂತ್ರಿ, ಗೃಹ ಶಾಖೆ ಸಚಿವರು, ಮಹಾದಂಡನಾಯಕರೂ ಹಾಗೂ ವಿರೋಧಪಕ್ಷದ ನಾಯಕರು ವಿದೇಶಕ್ಕೆ ಹೋಗಿ ಒಂದೆರಡು ದಿನ ಅಲ್ಲಿಯ ಕಾರ್ಯಕ್ರಮಗಳಲ್ಲಿ ಭಾಗವಹಿಸುತ್ತಿದ್ದರು. ಆವಾಗಲೇ ಕೆಲವೊಂದು ವಿಷಯಗಳ ಬಗ್ಗೆ ಚರ್ಚೆ ನಡೆಯುತ್ತಿತ್ತು. ಅವರು ಮರಳಿ ಬರುವ ಹಿಂದಿನ ದಿವಸ ಅವರನ್ನು ವಿಹಾರಕ್ಕೆಂದು ಬೇರೆ ಗುಪ್ತ ಪ್ರದೇಶಕ್ಕೆ ಕರೆದೊಯ್ಯಲು ಯೋಜಿಸಲಾಗಿತ್ತು. ಅದಾಗಲೇ ಅವರಂತೆಯೇ ಸಿದ್ಧಪಡಿಸಲ್ಪಟ್ಟ ಬೇರೆ ನಾಲ್ವರೆದುರು ಚರ್ಚಿಸಿ ಕಾಗದಗಳಗೆ ಸಹಿ ಹಾಕುತ್ತಿದ್ದರು.

"ಬೇರೆ ಜನರೆಂದರೆ........"

"ಅವರೇ ಯಮದೂತರು, ಕುಮುದನ್ ಅವರ ಪ್ರಯೋಗದಿಂದ ನಿರ್ಮಿಸಲ್ಪಟ್ಟ ಕೃತ್ರಿಮ ಮನುಷ್ಯರು. ಕೆಲವೊಂದು ರಾಸಾಯನಿಕ ವಸ್ತುಗಳನ್ನು ಉಪಯೋಗಿಸಿ ಮೃತ ಶರೀರಕ್ಕೆ ನಮ್ಮ ದೇಶದ ನಾಲ್ವರು ಪ್ರಭಾವಿ ವ್ಯಕ್ತಿಗಳ ರೂಪ ಬರುವಂತೆ ನಿರ್ಮಿಸಿದ ನಾಲ್ವರು ಯಮದೂತರು ಅಲ್ಲಿ ಪ್ರಕಟವಾಗುತ್ತಿದ್ದರು. ಅವರು ಹಿಂದೆ ಮುಂದೆ ನೋಡದೆ ತಮ್ಮ ಮುಂದಿಟ್ಟ ಎಲ್ಲ ಕಾಗದಗಳಿಗೂ ಸಹಿ ಹಾಕುತ್ತಿದ್ದರು. ಮರುದಿನ ನಿಜವಾದ ನಮ್ಮ ಧುರೀಣರು ವಿಮಾನ ಮೂಲಕ ಮರಳುತ್ತಿದ್ದಾಗ ವಿಮಾನದಲ್ಲೇ ಅವರ ಕಗ್ಗೊಲೆಯಾಗಿ ವಿಮಾನ ದುರಂತಕ್ಕೊಳಗಾಗುತ್ತಿತ್ತು. ಕೆಲಸಮಯ ಮೌನ

ವಹಿಸಿದ್ದ ವಿದೇಶಿಯರು ನಮ್ಮ ಈ ಹೊಸ ನಾಯಕ, ಹೊಸ ಸರಕಾರ ಬಂದ ಮೇಲೆ ತಾವು ಸಹಿ ಮಾಡಿಸಿಕೊಂಡ ಒಪ್ಪಂದ ಪತ್ರ ಬಹಿರಂಗಗೊಳಿಸಿ ಅದನ್ನು ಜಾರಿ ಮಾಡುವಂತೆ ಕೋರುತ್ತಿದ್ದರು. ಆಗಲೇ ಅಂತರ್ ರಾಷ್ಟ್ರೀಯ ಸಮಸ್ಯೆ ತಲೆದೋರುತ್ತಿತ್ತು, ಒಂದು ದೇಶದ ಪ್ರಧಾನಿ, ಗೃಹಸಚಿವ, ದಂಡನಾಯಕ, ವಿರೋಧಪಕ್ಷದ ನಾಯಕ ಈ ರೀತಿ ನಾಲ್ವರೂ ಒಪ್ಪಿ ಸಹಿ ಮಾಡಿದ ಒಪ್ಪಂದ ಜಾರಿಯಾಗದಿದ್ದರೆ ಹೇಗೆ?"

"ನಂಬಲಿಕ್ಕಾಗದು, ಸಾಧ್ಯವಾಗದ ಮಾತು. ಇದೊಂದು ದುಷ್ಟ ಯೋಜನೆ." ಕುಳಿತವರೆಲ್ಲ ಈ ಆಘಾತಕಾರಿ ಯೋಜನೆ ಕೇಳಿ ತಮಗೆ ತಿಳಿದಂತೆ ಮಾತನಾಡತೊಡಗಿದರು.

"ಇದು ನನಗೆ ಗೊತ್ತಿರಲಿಲ್ಲ" ತಟಕ್ಕನೆ ನುಡಿದರು ಕುಮುದನ್.

"ನನಗೆ ಚೆನ್ನಾಗಿ ಗೊತ್ತಿತ್ತು" ಹೇಮಂತ ಉತ್ತರಿಸಿದ.

"ಹೇಗೆ ನನಗೇ ತಿಳಿಯದ್ದು ನಿಮಗೆ ಹೇಗೆ ತಿಳಿದಿತ್ತು?"

"ಏಕೆಂದರೆ ಆ ನಾಲ್ವರನ್ನು ಕೊಲೆ ಮಾಡುವವ ನಾನೇ ಆಗಿದ್ದರಿಂದ!"

ನಾಟಕೀಯವಾಗಿ ಮೇಜರ್ ಹೇಮಂತ ಘೋಷಿಸಿದಾಗ ಎಲ್ಲರೂ ಬೆಚ್ಚಿಬಿದ್ದರು. ಕಟ್ಟಾ ದೇಶಭಕ್ತ, ಪ್ರಾಮಾಣಿಕ ಮೇಜರ್ ಹೇಮಂತ ... ದೇಶದ ಪ್ರಧಾನಿಯವರೂ ಸೇರಿದಂತೆ ಇತರ ಮೂವರ ಕೊಲೆ ಮಾಡುವವದೆ?

"ಏಕೆ ನಂಬಿಕೆಯಾಗಲಿಲ್ಲವೇ.... ಪ್ರಶ್ನಿಸಿದ ಹೇಮಂತ. ಯಾರಿಂದಲೂ ಉತ್ತರ ಬರಲಿಲ್ಲ. ಅವನೇ ನುಡಿದ "ಹಾಗಾದರೆ ನೋಡಿರಿಲ್ಲಿ." ಅವನ ಹಿಂದಿದ್ದ ಕಪ್ಪು ಪರದೆ ಸರಿಯುತ್ತಲೂ ಎಲ್ಲರ ಉಸಿರು ಬಿಗಿದಂತಾಯಿತು. ನಂಬಲಾಗದ ಸತ್ಯ. ಎಲ್ಲರೆದುರು ಪರದೆ ಹಿಂದೆ ಮೇಜರ್ ಹೇಮಂತ ನಿಂತಿದ್ದ. ಪಿಳಿ ಪಿಳಿ ಕಣ್ಣು ಬಿಡುತ್ತ ಬೊಂಬೆಯಂತೆ ಕುಳಿತಿದ್ದರು ಎಲ್ಲರೂ.

"ನಿಮ್ಮ ಮುಂದೆ ನಿಂತು ಇಲ್ಲಿಯವರೆಗೂ ಮಾತನಾಡಿದವ ನಾನಾದರೆ.... ಪರದೆ ಹಿಂದೆ ಇರುವ ಇನ್ನೊಬ್ಬ ಹೇಮಂತ ನನ್ನ ಪ್ರತಿರೂಪ. ಇವನೂ ಒಬ್ಬ ಯಮದೂತ. ಈತನೇ ಭಾರತದ ಪ್ರಧಾನಿಯನ್ನೊಳಗೊಂಡ ಇತರ ಮೂವರನ್ನೂ ಕೊಲೆ ಮಾಡುವವ."

ಗಂಟಲು ಸರಿಪಡಿಸಿಕೊಂಡು ಕೇಳಿದರು ರಾಮನಾಥ. "ನೀವಾಡುವ ಮಾತಿನಿಂದ ನೀವೂ ಸಹ ವಿದೇಶಕ್ಕೆ ಹೋಗುವವರಿದ್ದಿರಿ ಎಂದಾಯ್ತು...."

"ನಿಮ್ಮ ಮಾತು ಸತ್ಯ ರಾಮನಾಥರೆ.... ಅವರ ಬೆಂಗಾವಲಿಗಾಗಿ ನಾನೂ ಹೋಗಬೇಕಾಗಿತ್ತು. ಇದು ಕೇವಲ ಕೆಲವೇ ಜನರಿಗೆ ಮಾತ್ರ

ತಿಳಿದಿತ್ತು. ಅವರನ್ನು ಸೀಪರ್ಲ್‌ಗೆ ಆಹ್ವಾನಿಸಿ ಅವರಿಗೆ ಗುಪ್ತ ವಿಷಯ ಹೊರಗೆಡವುವಂತೆ ಮಾಡಿದವರೇ ನಮ್ಮವರೊಬ್ಬರು. ನಮ್ಮ ದೇಶದ ಪ್ರಜ್ಞಾವಂತ ನಾಗರಿಕರು.... ಪ್ರಭಾವಿ ವ್ಯಕ್ತಿಗಳು.

"ಯಾರವರು?"

"ಅವರೇ.... ಕುಮುದನ್‌ರ ಹಿಂದಿದ್ದುಕೊಂಡು ಅವರನ್ನು ಸೂತ್ರದ ಬೊಂಬೆಯಂತೆ ಆಡಿಸಿದ ಚಾಣಾಕ್ಷ ವ್ಯಕ್ತಿಗಳು. ಕುಮುದನ್‌ರಿಗೂ ತಿಳಿಯದಂತೆ ಅವರ ಬೆನ್ನಹಿಂದೆ ಅವರ ಪ್ರಯೋಗಶಾಲೆಯಲ್ಲಿ ಅವರೇ ಸಿದ್ಧಪಡಿಸಿದ ಸತ್ಯಾಂಶಗಳ ಆಧಾರದ ಮೇಲೆ ಈ ಯಮದೂತರನ್ನು ಸಿದ್ಧಪಡಿಸಿದರು. ವಿದೇಶೀ ಶಕ್ತಿಗಳೊಡನೆ ಕೂಡಿಕೊಂಡು ಭಾರತದ ಸತ್ತೆಯನ್ನು ಬುಡಮೇಲು ಮಾಡಲು ಯೋಚಿಸಿದವರು."

"ಯಾರು?... ಯಾರಾತ.... ದೇಶದ್ರೋಹಿ? ಅವನ ಹೆಸರು ಹೇಳಿ. ನಾನವನನ್ನು ಜೀವಸಹಿತ ಬಿಡುವದಿಲ್ಲ" ಕುಮುದನ್ ಕುಳಿತಲ್ಲಿಂದಲೇ ಗರ್ಜಿಸಿ ಕೇಳಿದರು.

"ಅವರು ಬೇರೆ ಯಾರೂ ಅಲ್ಲ ಕುಮುದನ್ ಅವರೇ, ನಿಮ್ಮ ಸಹಾಯಕರಾಗಿದ್ದ ಡಾಕ್ಟರ್ ದಿವಾಕರ್ ಅವರೇ ನಿಮ್ಮನ್ನಾಡಿಸಿದ ಸೂತ್ರಧಾರರು. ಇಲ್ಲಿಯವರೆಗೂ ನಡೆದ ಪ್ರತಿಯೊಂದು ಅನಾಹುತಗಳ ಹಿಂದೆಯೂ ಅವರದೇ ಕೈವಾಡವಿದೆ. ನೀವು ವಿಜ್ಞಾನ ಹಾಗೂ ಜಗತ್ ಕಲ್ಯಾಣವನ್ನೇ ಪ್ರಧಾನವಾಗಿಟ್ಟುಕೊಂಡು ಸಿದ್ಧಪಡಿಸುವ ಪ್ರತಿಯೊಂದು ಪ್ರಯೋಗಗಳನ್ನು ಅವರು ವಿನಾಶಕಾರೀ ಕೆಲಸಗಳಿಗೆ ಉಪಯೋಗಿಸಿಕೊಂಡರು. ಒಂದು ದಿನ ತಾವೂ ಜಗತ್ತನ್ನು ಪಾದಾಕ್ರಾಂತ ಮಾಡಿಕೊಳ್ಳುವ ಕನಸು ಕಂಡವರೇ ಡಾಕ್ಟರ್ ದಿವಾಕರ್. ನಿಮ್ಮ ಮಗಳನ್ನು ಮೋಹಿಸಿ, ಆಕೆ ಅವರನ್ನು ಮದುವೆಯಾಗಲು ನಿರಾಕರಿಸಿದಾಗ ಮತ್ತೊಂದು ದಿಶೆಯಲ್ಲಿ ನಿಮ್ಮ ಮೇಲೆ ಒತ್ತಾಯ ತಂದು ಅವಳನ್ನು ಮದುವೆಯಾಗುವ ದುರುದ್ದೇಶವೂ ಅವರಲ್ಲಿತ್ತು. ನಿಮ್ಮ ಕಣ್ಣ ಹಿಂದೆ ಅವರು ಮಧುವಿನ ಜೊತೆ ಅಕ್ರಮ ಸಂಬಂಧವನ್ನು ಹೊಂದಿದ್ದರು."

"ಸುಳ್ಳು.... ಇದು ಅಪ್ಪಟ ಸುಳ್ಳು.... ನಾನೆಂದೂ ದಿವಾಕರನ ಜೊತೆ...." ಮುಂದೆ ಮಾತನಾಡಲಾಗದೇ ಬಿಕ್ಕುತ್ತ ಕೆಳಗೆ ಕುಸಿದಳು ತಂದೆಯ ಜೊತೆ ಕುಳಿತಿದ್ದ ಮಧು.

ಅವಳೆಡೆ ಎಲ್ಲರೂ ಕರುಣಾಪೂರಿತ ದೃಷ್ಟಿ ಬೀರಿದರು.

"ಮಧು...."

ಆಪ್ಯಾಯಮಾನವಾದ ಪ್ರೀತಿಯ ಕರೆ. ಸುಷಮಾಳ ದೇಹದಲ್ಲಿ ವಿದ್ಯುತ್ ಅಲೆಯೊಂದು ಹರಿದುಹೋದಂತಾಯಿತು. ಇದೆಂಥ ಕರೆ 'ಮಧು... ಮಧು....' ಸಾಧ್ಯವಿಲ್ಲ. ಇಂಥ ಕರೆ ಕೇವಲ ನನಗಷ್ಟೇ ಮೀಸಲಾಗಿತ್ತು. ಸುಷಮಾ ಎಂದು ಕರೆಯ ಹೋಗಿ ಹೇಮಂತ 'ಮಧು' ಎಂದು ಕರೆದನೆ?

"ಮಧು" ಮತ್ತೊಮ್ಮೆ ಕರೆಬಂದಾಗ ಸುಷಮಾ ತನ್ನ ಯೋಚನೆ ಸುಳ್ಳು, ಹೇಮಂತ ಕರೆದದ್ದು ತನಗಲ್ಲ, ಮಧುವಿಗೇ ಎಂಬ ಕಲ್ಪನೆ ಬಂದಾಗ ಆಕೆ ಮತ್ಸರ ದಿಂದ ಕುದ್ದು ಹೋದಳು. ಅಸೂಯೆಯ ದಳ್ಳುರಿ ಅವಳ ದೇಹವನ್ನು ವ್ಯಾಪಿ ಸಿತು. ಅವಳು ನಖಶಿಖಾಂತ ಉರಿದು ಹೋದರೆ.... ಬಾಡಿ ಬತ್ತಿ ಕಮರಿ ಹೋಗಿದ್ದ ಬಳ್ಳಿ ವಸಂತನ ಸುಳಿಗಾಳಿಗೆ ಮತ್ತೆ ಚಿಗುರುವಂತೆ ಪೂರ್ತಿ ಧರೆಗಿಳಿದು ಹೋಗಿದ್ದ ಮಧು, ಆ ಕರೆಗೆ ಚೇತರಿಸಿಕೊಂಡಂತೆ ತಲೆ ಎತ್ತಿದಳು.

"ಜಗತ್ತೇ ಎದುರಾದರೂ ನಾ ನಿನ್ನ ಬೆಂಗಾವಲಾಗಿರುವೆ ಹೆದರದಿರು ನೀರೇ...."ಎಂದು ಹೇಳುವಂತೆ ಮೇಜರನ ವಿಶಾಲ ಕಣ್ಣುಗಳು ಅವಳಿಗೆ ಧೈರ್ಯ ನೀಡಿದವು.

"ಮಧು, ನಿನಗೆ ತಿಳಿಯದು... ನಿನಗರಿಯದಂತೆ ನೀನು ದಿವಾಕರನಿಗೆ ದಾಸಿಯಾದೆ. ಆತ ನಿನ್ನನ್ನು ಆಕ್ರಮಿಸಿದ, ಆದರೂ ನೀನು ಶೀಲವಂತೆ, ನಿನ್ನ ಶೀಲಕ್ಕಾವ ಧಕ್ಕೆಯೂ ಆಗಿಲ್ಲ."

ಇದೆಂಥ ವಿಚಿತ್ರ ಮಾತು, ಹೇಮಂತನ ತಲೆ ಕೆಟ್ಟಿದೆಯೇ ಎಂದು ಅಲ್ಲಿ ನೆರೆದವರೆಲ್ಲ ಒಂದು ಕ್ಷಣ ಯೋಚಿಸುವಂತಾಯಿತು. ದಿವಾಕರ ನಿನಗರಿಯ ದಂತೆ ನಿನ್ನ ದಾಸಿ ಮಾಡಿಕೊಂಡ, ನಿನಗೆ ನೀನೇ ತಿಳಿಯದಂತೆ ನೀನವನಿಗೆ ದಾಸಿ ಯಾದೆ, ಎಂದು ಒಂದೆಡೆ ಹೇಳಿ ಇನ್ನೊಂದೆಡೆ ನೀನು ಶೀಲವಂತೆ, ನಿನ್ನ ಶೀಲ ಕ್ಕಾವ ಧಕ್ಕೆ ಆಗಿಲ್ಲ ಎನ್ನುತ್ತಾನಲ್ಲ.

ನೂರಾರು ಕಣ್ಣುಗಳು ಬೆಂಕಿ ಕಿಡಿಕಾರುತ್ತ ತನ್ನನ್ನು ಸುಡಲು ಬರುತ್ತಿವೆ ಎಂದೆನಿಸಿ ತನ್ನ ದೇಹದ ಸುತ್ತಲೂ ವಾಯುವಿನ ವಾತಾವರಣ ಬೆಂಕಿಯಂತೆ ಕಾಯ್ದು ತನ್ನನ್ನು ಸುಡುತ್ತಿದೆ, ಅದರಲ್ಲಿ ತಾನೂ ದಹಿಸಿಹೋಗಿದ್ದೇನೆ ಎಂಬ ಭಾವನೆಯೊಂದಿಗೆ ಕೆಟ್ಟ ಧ್ವನಿಯಲ್ಲಿ "ಮೇಜರ್"ಎಂದುಚೀರಿಕೊಂಡು ಎದ್ದು ನಿಂತ ಡಾಕ್ಟರ್ ದಿವಾಕರ್. ಆತ ಕೋಪ, ತಾಪ ಅಪಮಾನಗಳಿಂದ ಗಡಗಡ ನಡುಗುತ್ತಿದ್ದ. ಹೇಮಂತ ನಗುತ್ತಲೇ ಅವನತ್ತ ನೋಡುತ್ತ ಕೇಳಿದ, "ಹೇಳಿ ಮಿಸ್ಟರ್ ದಿವಾಕರ ಅವರೆ."

"ಮೇಜರ್ ನೀವು ನನ್ನ ಮೇಲೆ ದೋಷಾರೋಪಣೆ ಮಾಡಿ ನನ್ನನ್ನು ಅವಮಾನ ಪಡಿಸುತ್ತಿದ್ದೀರಿ. ಇದಕ್ಕಾಗಿ ನಾನು ನಿಮ್ಮನ್ನು ನ್ಯಾಯಾಲಯದ

ಕಟ್ಟೆ ಹತ್ತಿಸಬೇಕಾಗುತ್ತದೆ....ಎಚ್ಚರ...."

"ಅವಸರ ಪಡಬೇಡಿ ದಿವಾಕರ ಅವರೆ....ಹೇಗಿದ್ದರೂ ನೀವೂ ನ್ಯಾಯಾಲಯದ ಕಟ್ಟೆ ಹತ್ತಿ ಕಟಕಟೆ ಹಿಡಿದು ದೋಷಿಗಳಾಗಿ ನಿಂತು ಜಗತ್ತಿನಿಂದಲೇ ನಿಂದೆ ಅನುಭವಿಸಬೇಕಾಗಿದೆ. ಕೇವಲ ಹತ್ತೇ ನಿಮಿಷಗಳಲ್ಲಿ ಮಿಸ್ಟರ್ ರಾಮನಾಥ ಅವರು ನಿಮ್ಮ ಕೈಗೆ ಕೋಳಗಳನ್ನು ತೊಡಿಸಿ ಕರೆದೊಯ್ಯುತ್ತಾರೆ ಶ್ರೀ ಕೃಷ್ಣ ಜನ್ಮಸ್ಥಾನಕ್ಕೆ...."

"ಹೇಮಂತ ನೀವು ಹದ್ದು ಮೀರಿ ವರ್ತಿಸುತ್ತಿದ್ದೀರಿ....ಅದಕ್ಕಾಗಿ ಮುಂದೆ ಪಶ್ಚಾತ್ತಾಪ ಪಡಬೇಕಾಗುತ್ತದೆ"

"ನಾನೆಲ್ಲದಕ್ಕೂ ಸಿದ್ಧವಾಗೇ ಇದ್ದೇನೆ ದಿವಾಕರ್. ಸದ್ಯ ಮುಂದೆನಾಗುತ್ತದೆ, ಯಾರು ಪಶ್ಚಾತ್ತಾಪ ಪಡಬೇಕಾಗುತ್ತದೆ ಎಂದು ಯೋಚಿಸಬೇಡ ಕುಳಿತುಕೋ..."

ಅಪರಾಧಿ ಸ್ಥಾನಕ್ಕೆ ತಂದಿಳಿಸಿದ ದಿವಾಕರನನ್ನು ಡಾಕ್ಟರ್ ದಿವಾಕರ್ ಎಂದು ಸಂಬೋಧಿಸದೆ ಓರ್ವ ಅಪರಾಧಿಯನ್ನು ಕರೆಯುವಂತೆ....ಏಕವಚನದಲ್ಲಿ ಕರೆದಾಗ ಬಾಯಿಯಿಂದ ಮಾತು ಹೊರಡದೆ... ಕತಕತ ಕುದ್ದ ದಿವಾಕರ "ಥೂ" ಎಂದುಗುಳಿದ.

"ನಿಮ್ಮಂಥವರೆದುರು ಕುಳಿತು ನಿಮ್ಮಿಂದ ನಿಂದೆಯ ಮಾತು ಕೇಳುವದಕ್ಕಿಂತ ಹೊರಟು ಹೋಗುವದೇ ಲೇಸು."

ಧಪ್...ಧಪ್... ಹೆಜ್ಜೆ ಹಾಕುತ್ತ ಆತ ಬಾಗಿಲತ್ತ ನಡೆಯುತ್ತಿದ್ದಂತೆ ಕೈಯಲ್ಲಿ ರಿವಾಲ್ವರ್ ಹಿಡಿದು ನಗುತ್ತ ಅವನೆದುರು ಗೋಡೆಯಂತೆ ಬಂದು ನಿಂತ ಅಶೋಕ. ಮತ್ತೊಂದೆಡೆ ದಿವಾಕರ ಸರಿಯುತ್ತಿದ್ದಂತೆ ಅಲ್ಲಿದ್ದ ಸುಷಮಾ ಅವರಿಗೆದುರಾದಳು.... ಹಿಂದಿನಿಂದಲೇ ಬಂದ ಎಸ್.ಪಿ. ಅವರು ಅವನಿಗೆ ಎಚ್ಚರಿಕೆ ನೀಡಿದರು.

"ದಿವಾಕರ....ಮೇಜರ್ ಹೇಮಂತರ ಮಾತಿನ್ನೂ ಮುಗಿದಿಲ್ಲ. ಮೊದಲು ಅವರ ಪೂರ್ಣ ಮಾತು ಕೇಳಿ. ನಂತರ ಅವರ ಮೇಲೆ ಕಾನೂನು ರೀತ್ಯ ಕ್ರಮ ತೆಗೆದುಕೊಳ್ಳಲು ನೀವು ಬಯಸಿದರೆ ನಾನು ನಿಮ್ಮ ಸಹಾಯಕ್ಕೆ ಅವಶ್ಯವಾಗಿ ಬರುತ್ತೇನೆ. ಈಗ ಮೊದಲು ನೀವು ನಿಮ್ಮ ಸ್ಥಾನ ಅಲಂಕರಿಸಿರಿ...ಸಾಕು." ರಾಮನಾಥರ ಕಣ್ಣುಗಳಲ್ಲಿ ವ್ಯಥತೆ, ಚೂರಿಯ ಅಲಗಿನಂಥ ತೀಕ್ಷ್ಣತೆ ಕಂಡುಕೊಂಡ ದಿವಾಕರ ತೆಪ್ಪಗೆ ತನ್ನ ಜಾಗೆಯತ್ತ ನಡೆದು ಕುರ್ಚಿಯಲ್ಲಿ ಕುಸಿದ.

ಹೇಮಂತ ಮುಗುಳು ನಗೆ ನಗುತ್ತ ಮುಂದುವರೆಸಿದ. "ಕುಮುದನ್ ಅವರೆ ನೀವು ಮೂರು ವರ್ಷಗಳ ಹಿಂದೆ ಜರ್ಮನಿಯಲ್ಲಿ ನಡೆದ ಅಂತರ್

ರಾಷ್ಟ್ರಮಟ್ಟದ ವೈಜ್ಞಾನಿಕ ಸಮ್ಮೇಳನಕ್ಕೆ ಒಬ್ಬರೇ ಹೋಗಿದ್ದಿರಾ?"

"ಇಲ್ಲ....ನಾ ಒಬ್ಬನೇ ಹೋಗಿರಲಿಲ್ಲ."

"ಓಹೋ...ಹಾಗಾದರೆ ನಿಮ್ಮ ಜೊತೆ ಮಧು ಇರಬೇಕಲ್ಲ?"

"ಇಲ್ಲ....ಅವಳಿರಲಿಲ್ಲ. ನನ್ನ ಜೊತೆ ನನ್ನ ಸಹಾಯಕರಾಗಿ ಡಾಕ್ಟರ ದಿವಾಕರ ಇದ್ದರು."

"ದಿವಾಕರಗೂ ನಿಮಗೂ ಪರಿಚಯವಾದದ್ದು ಹೇಗೆ?"

"ನಾನು ಕಾಲೇಜಿನಲ್ಲಿ ಪ್ರಾಧ್ಯಾಪಕನಾಗಿದ್ದಾಗಿನಿಂದ...ಮುಂದೆ ಆತ ಡಾಕ್ಟರೇಟ್ ಮಾಡುವಾಗಲೂ ನಾನು ಮಾರ್ಗದರ್ಶನ ಮಾಡಿದ್ದೆ. ಅವನಲ್ಲಿಯ ಅಗಾಧ ಪ್ರತಿಭೆ ಗುರುತಿಸಿ ನಾನು ನನ್ನ ಸಹಾಯಕನೆಂದು ತೆಗೆದುಕೊಂಡಿದ್ದೆ."

"ದಿವಾಕರ ಡಾಕ್ಟರೇಟ್ ಮಾಡುವಾಗ ಆಯ್ದ ವಿಷಯ ಯಾವದು?"

"ಮಾನವ ಶರೀರ, ಶರೀರದ ಮೇಲೆ ಮಿದುಳಿನ ಪ್ರಭುತ್ವ".

"ಸರಿ, ಜರ್ಮನಿಗೆ ಹೊರಡುವ ಮುನ್ನ ನೀವು ಮಂಡಿಸಲಿರುವ ವಿಷಯದ ಬಗ್ಗೆ ದಿವಾಕರನಿಗೆ ತಿಳಿದಿತ್ತೆ?"

"ಓಹೋ, ತಿಳಿದಿತ್ತು. ಆರು ತಿಂಗಳಿಂದ ಇದರ ಬಗ್ಗೆ ಎಲ್ಲಾ ಪೇಪರ್ ತಯಾರಿಸಿದವರು ಅವರೇ. ಅವರಿಲ್ಲದೇ ನನ್ನ ಕಾರ್ಯ ಪೂರ್ತಿಯಾಗುವಂತಿರ ಲಿಲ್ಲ. ನನಗೆ ಸರ್ವ ವಿಧದಿಂದಲೂ ಅವರ ಸಹಕಾರ ದೊರೆತಿದೆ.

"ಇನ್ನೊಂದು ವಿಷಯ ಚೆನ್ನಾಗಿ ನೆನಪು ಮಾಡಿಕೊಂಡು ಉತ್ತರಿಸಿರಿ. ನೀವು ಜರ್ಮನಿಗೆ ಹೊರಡುವ ಮುನ್ನ ದಿವಾಕರನ ಜೊತೆ "ಸೀಪರ್ಲ್"ಗೆ ಎಂದಾದರೂ ಹೋಗಿದ್ದಿರಾ? ಹೋಗಿದ್ದರೆ ಅಲ್ಲಿ ನಿಮ್ಮ ವಿಷಯದ ಬಗ್ಗೆ ಚರ್ಚಿಸಿದ್ದಿರಾ?"

"ಎರಡು ಮೂರು ಬಾರಿ ಹೋಗಿದ್ದೆ. ಅಲ್ಲಿ ಒಂದು ವಾರದಷ್ಟು ಸಮಯ ರೂಮು ಮಾಡಿ ಅಲ್ಲೇ ತಂಗಿದ್ದೆ".

"ಸೀಪರ್ಲ್‌ದ ವಿಚಾರ ನಿಮ್ಮಿಂದ ಬಂತೋ ಅಥವಾ ದಿವಾಕರ ಸೂಚಿ ಸಿದರೋ?"

"ಸೀಪರ್ಲ್ ಹೆಸರೇ ನನಗೆ ತಿಳಿದಿರಲಿಲ್ಲ. ದಿವಾಕರನೇ ಹೇಳಿದ್ದು. 'ಅದು ನನ್ನ ಸ್ನೇಹಿತರದು. ತುಂಬಾ ಪ್ರಶಾಂತವಾದ ಸ್ಥಳವದು. ಒಂದು ವಾರ ನಾವಲ್ಲೇ ತಂಗಿ ಎಲ್ಲಾ ಪೇಪರ್ಸ್ ಸಿದ್ಧಪಡಿಸೋಣ' ಎಂದ. ನಾನೊಪ್ಪಿ ಕೊಂಡೆ. ಮೊದಲು ಹಾಗೇ ಒಂದೆರಡು ಬಾರಿ ಹೋಗಿ ಊಟ ಮಾಡಿಕೊಂಡು ಬಂದೆವು. ಅಲ್ಲಿ ದಿವಾಕರ ತನ್ನ ಮಿತ್ರ ಮ್ಯಾನೇಜರ್ ಹಾಗೂ ಇನ್ನೊಬ್ಬರ ಪರಿಚಯ ಮಾಡಿಕೊಟ್ಟ."

"ಗುಡ್.... ಆ ಮೇಲೆ ನೀವು ಜರ್ಮನಿಗೆ ಹೋದ ಮೇಲೆ ಏನಾಯ್ತು ತಿಳಿಸಿ."

"ಮೂರು ದಿನ ಕಾನ್‌ಫರನ್ಸಿನಲ್ಲಿ ಭಾಗವಹಿಸಿದೆ. ನನ್ನ ವಿಷಯ ಮಂಡಿಸಿದೆ. ಮೃತ ಸಂಜೀವಿನಿ ಬಗ್ಗೆ ಎಲ್ಲರೂ ಆಸಕ್ತಿ ವಹಿಸಿದರೂ ನನ್ನ ತಲೆಯಲ್ಲಿದ್ದ 'ಮಾನವನ' ಬಗ್ಗೆ ಅಪಹಾಸ್ಯ ಮಾಡಿದರು ಇದರಿಂದಾಗಿ ಅಸಮಾಧಾನಗೊಂಡೆ."

"ಕೂಡಲೇ ಭಾರತಕ್ಕೆ ಹೊರಟಿರಾ?

"ಹೊರಟೆನಾದರೂ.... ಹೊರಡಲಾಗಲಿಲ್ಲ."

"ಏಕೆ? ಏನಾಯ್ತು? ಅಸ್ವಸ್ಥರಾದಿರಾ?

"ಹಾಗೇನೂ ಇಲ್ಲ, ದಿವಾಕರ ಯಾರೋ ತನ್ನ ಇಬ್ಬರು ಮಿತ್ರರನ್ನು ಕರೆತಂದು ಭೆಟ್ಟಿ ಮಾಡಿಸಿ, 'ನನ್ನ ವಿಚಾರದಲ್ಲಿ ಅವರು ಸಹಮತರಿದ್ದಾರೆ. ವಿಸ್ತ್ರತವಾಗಿ ಮಾತನಾಡಲು ಬಯಸುತ್ತಾರೆ. ತಾವು ಇಷ್ಟಪಟ್ಟರೆ ಕೋಟಿ ಕೋಟಿ ಹಣ ತಮ್ಮ ಪ್ರಯೋಗಕ್ಕಾಗಿ ವಿನಿಯೋಗಿಸಲಿದ್ದಾರೆ' ಎಂದಾಗ.... ಸಹಜವಾಗಿ ನಾನು ಸೋತು ಅಲ್ಲೇ ಉಳಿದೆ."

"ಆ ಇಬ್ಬರೂ ನಿಮಗೆ ಪರಿಚಿತರಾಗಿದ್ದರೇ"

"ಹೌದು ಇಬ್ಬರೂ ಪರಿಚಿತರೆ, ಆದರೆ ಅವರಲ್ಲಿ ಒಬ್ಬ ಮಾತ್ರ ಧ್ವನಿಯಿಂದ ಪರಿಚಿತನಂತೆ ಕಂಡ... ಮುಖಲಕ್ಷಣಗಳಿಂದಲ್ಲ."

"ನನ್ನದೊಂದು ಸಂಶಯ.... ಆತ 'ಸೀಪರ್ಲ್'ದ ದಿವಾಕರ ಭೆಟ್ಟಿ ಮಾಡಿಸಿದ ಮತ್ತೊಬ್ಬ ವ್ಯಕ್ತಿಯಾಗಿರಬಹುದೆ..."

"ಕರೆಕ್ಟ್...ಆತನೇ ಆಗಿರಬಹುದು ಎಂದು ನನಗೀಗ ಅನಿಸ್ತಿದೆ".

"ಗುಡ್...ಆ ಮೇಲೆ ಏನಾಯ್ತು?"

"ಆಗುವದೇನು? ಅವರ ಮಾತಿಗೆ ನಾನು ಒಪ್ಪಿಕೊಂಡೆ. ನನ್ನ ಪ್ರಯೋಗಕ್ಕೆ ಅವರು ಹಣಕಾಸಿನ ನೆರವು ನೀಡಲು ಸಿದ್ಧರಾದರು. ನನ್ನ 'ಮಧುಸಂಚಯ' ಬಂಗಲೆ ಹಾಗೂ ಭೂಗರ್ಭದ ಪ್ರಯೋಗ ಶಾಲೆ ಸಿದ್ಧವಾಯಿತು. ನಾನು ನಿಶ್ಚಿಂತೆಯಿಂದ ನನ್ನ ಕಾರ್ಯ ಮುಂದುವರೆಸಿದೆ".

"ಒಂದು ನಿಮಿಷ ಕುಮುದನ್ ಅವರೇ, ಮಧುಸಂಚಯವನ್ನು ನೀವೇ ಕಟ್ಟಿಸಿದಿರಾ? ಸೈಟ್ ನೀವೇ ಕೊಂಡಿರಾ?"

"ಇಲ್ಲ ನಾನದರ ಹೆಸರೇ ಕೇಳಿರಲಿಲ್ಲ. ಆ ಜಾಗೆ ಸಹ ನೋಡಿರಲಿಲ್ಲ. ಎಲ್ಲಾ ದಿವಾಕರ ಅವರೇ ಮಾಡಿದ್ದು. ಎಲ್ಲಾ ಕಟ್ಟಿ ಸಿದ್ಧವಾದ ಮೇಲೆಯೇ ನಾನಲ್ಲಿಗೆ ಹೋದದ್ದು".

"ಹಾಂ....ನನಗಿದೇ ಬೇಕಾಗಿತ್ತು. ದಯವಿಟ್ಟು ಮುಂದುವರೆಸಿ."

"ಪ್ರತಿನಿತ್ಯ ಬಂದು ದಿವಾಕರ ಜೊತೆ ಚರ್ಚಿಸುತ್ತಿದ್ದ. ಪ್ರಯೋಗ ಮಾಡುತ್ತಿದ್ದೆವು. ಆತ ಯಾವಾಗಾದರೊಮ್ಮೆ ಸೀಪರ್ಲ್‌ಗೆ ಕರೆದೊಯ್ಯುತ್ತಿದ್ದ. ಅಲ್ಲಿಯ ಮ್ಯಾನೇಜಿಂಗ್ ಪಾರ್ಟ್‌ನರನನ್ನು ಭೇಟಿ ಮಾಡಿಸಿದ. ಆತ ಬರುವಾಗ ಅವರಿಂದಲೇ ಹಣ ತರುತ್ತಿದ್ದ. ನನ್ನಿಂದ ಒಂದು ಬಿಡಿಕಾಸೂ ಆತ ಖರ್ಚು ಮಾಡಿಸಲಿಲ್ಲ, ಎರಡು ವರ್ಷಗಳಿಂದ ಎಲ್ಲಾ ಆತನೇ ನೋಡಿಕೊಂಡ. 'ಮಧು'ವಿನ ಬಗ್ಗೆ ಸಹ ಆತ ಹೆಚ್ಚು ಆಕರ್ಷಿತನಾಗಿದ್ದ. ನಾಲ್ಕೈದು ತಿಂಗಳ ಹಿಂದೆ...."

"ಏನಾಯ್ತು ಹೇಳಿ".

"ಒಮ್ಮಿಂದೊಮ್ಮೆಲೆ ಹಣದ ನೆರವು ನಿಂತು ಹೋಯಿತು. ಪ್ರಯೋಗ ಸಫಲವಾಗುವ ಕೊನೇ ಹಂತಕ್ಕೆ ನಾನು ಬಂದಿದ್ದೆ. ಹೀಗಾಗಿ ಚಡಪಡಿಸಿದೆ. ದಿವಾಕರ ಕೈ ಚೆಲ್ಲಿದ. ಸಹಾಯ ನಿಂತು ಹೋಯಿತು ಎಂದ. ಯಾರೊಂದಿಗೋ ಫೋನ್ ಸಂಪರ್ಕ ಪಡೆದ. ಆಗಲೇ ಬ್ಯಾಂಕ್ ಲೂಟಿ ಮಾಡುವ ವಿಚಾರ ಬಂದಿದ್ದು.... ನನ್ನ ಸಹಾಯ ಕೇಳಿದರು. ನಾನು ಸ್ಟೀಲ್ ಪದರನ್ನು ಕರಗಿಸುವ ಬೀಗವನ್ನು ಒಳಗಿನಿಂದೊಳಗೆ ಕರಗಿಸುವ ಮುಂತಾದ ಕೆಲವೊಂದು ರಾಸಾಯನಿಕ ದ್ರವ ತಯಾರಿಸಿ ಕೊಟ್ಟೆ. ಅಷ್ಟೇಅಲ್ಲ, ಅವರೊಡನೆ ನಾನೂ ಬ್ಯಾಂಕ್ ಲೂಟಿ ಮಾಡುವಾಗ ಭಾಗವಹಿಸಿದೆ. ಎಂಭತ್ತೈದು ಲಕ್ಷ ರೂಪಾಯಿ ದೊರೆಯಿತು ಎಂಬ ಮಾತು ನನಗೆ ತಿಳಿದಿರಲಿಲ್ಲ. ನನ್ನ ಪ್ರಯೋಗ ಸುಸೂತ್ರ ನಡೆಯಿತು ಎಂಬ ಮಾತು ನಿಜ. ಈ ವಿಷಯ ನನ್ನ ಮಗಳು ಮಧುಗೆ ತಿಳಿಯಿತು. ಆಕೆ ವಿವಂಚನೆ ವ್ಯಕ್ತಪಡಿಸಿದಳು. ಅಪಾಯದ ದಾರಿ ಇದು ಎಂದು ಎಚ್ಚರಿಸಿದಳು. ನಾನು ಹಿಂದೆ ಸರಿಯಲು ಪ್ರಯತ್ನಿಸಿದೆ. ಸೀಪರ್ಲ್‌ದ ಯಜಮಾನ ಎಚ್ಚರಿಕೆ ನೀಡಿದ... 'ಮಧು'ಳಿಗೆ ಅಪಾಯ ತರುವ ಬೆದರಿಕೆ ಹಾಕಿದ. ನಾನು ಮಧುಃಳಿಗಾಗಿ ಅವರು ಹೇಳಿದಂತೆ ಕೇಳಲಾರಂಭಿಸಿದೆ."

"ಮುಂದೆ..."

"ಇಲ್ಲಿಯವರೆಗೂ ನೀವು ಹೇಳಿದ್ದೆಲ್ಲ ಸತ್ಯ ಎಂದು ಒಪ್ಪಿಕೊಳ್ಳುವೆ. ಯಮದೂತರ ಬಗ್ಗೆ ಮಾತ್ರ ನನಗೇನು ತಿಳಿಯದು."

"ವಂದನೆಗಳು ಕುಮುದನ್ ಅವರೆ...."ಹೇಮಂತ ಈಗ ಸಭಿಕರತ್ತ ಹೊರಳಿದ. "ಮುಂದೆ ಹೇಳುವದೇನೂ ಉಳಿದಿಲ್ಲ ಸ್ನೇಹಿತರೆ. ಇದೀಗ ನೀವು ಕೇಳಿದಂತೆ ದಿವಾಕರ ಹೇಗೆ ಕುಮುದನ್‌ರನ್ನು ತನ್ನ ಪ್ರಭಾವಕ್ಕೆ ತೆಗೆದುಕೊಂಡ ಎಂಬುದನ್ನು ನೀವು ಅರಿತಿರಿ. ಮಧುಸಂಚಯದ ಕೆಳಗಿರುವ ಕುಮುದನ್'ರ

ಪ್ರಯೋಗ ಶಾಲೆ ಕೆಳಗಡೆ ಇನ್ನೊಂದು ಚಿಕ್ಕ ಪ್ರಯೋಗ ಶಾಲೆ ಇದೆ. ಅದು ದಿವಾಕರನದು. ಅಲ್ಲಿಯೇ ಆತ ಗುಪ್ತವಾಗಿ ಕೆಲಸ ಮಾಡಿ ಈ ಯಮದೂತರನ್ನು ಸೃಷ್ಟಿಸಿದ."

"ಸುಳ್ಳು, ಸುಳ್ಳು.... ಹೇಮಂತ ನೀವು ಕೇವಲ ಆಪಾದನೆ ಮಾಡುತ್ತಿದ್ದೀರಿ. ಅದನ್ನು ಸಿದ್ಧಪಡಿಸಲು ನಿಮ್ಮ ಬಳಿ ಒಂದೂ ಆಧಾರವಿಲ್ಲ."

"ಒಂದು ವೇಳೆ ಇದ್ದರೆ..."

"ಇದ್ದರೆ ನೀವು ಸಿದ್ಧಪಡಿಸಿರಿ. ನಾನು ಸಂತೋಷದಿಂದ ನೀವು ಹೇಳಿದ್ದೆಲ್ಲ ನಿಜ, ನಾನೇ ಇದಕ್ಕೆಲ್ಲ ಕಾರಣ ಎಂದು ಒಪ್ಪಿಕೊಳ್ಳುವೆ."

"ನಿನ್ನ ಈ ಉದಾರತನಕ್ಕೆ ವಂದನೆಗಳು ದಿವಾಕರ. ನೋಡು ಹಾಗಾದರೆ, ನಿನಗೆ ಸಾಕ್ಷ್ಯಾಧಾರ ಬೇಕು ತಾನೇ?"

"ಹಾಂ, ಬೇಕೇಬೇಕು".

"ಅದು ನಿನ್ನ ಬಳಿಯೇ ಇದೆ. ನಿನ್ನ ಕೋಟಿನ ಜೇಬಿನಲ್ಲಿ... ಅದನ್ನು ಹೊರತೆಗೆ."

"ನನ್ನ ಕೋಟಿನ ಜೇಬಿನಲ್ಲೇನಿದೆ. ಇದೇ ಸಿಗರೇಟ್ ಪ್ಯಾಕ್.... ಲೈಟರ್"

"ಅವನ್ನೆ ಹೊರತೆಗೆ ಮತ್ತು ಆ ಲೈಟರನ್ನೇ ನನ್ನ ಬಳಿ ತೆಗೆದುಕೊಂಡು ಬಾ"

ದಿವಾಕರ ದಂಗು ಬಡಿದು ಕುಳಿತುಬಿಟ್ಟ. ಯಾವ ಚಲನೆಯೂ ಇಲ್ಲದೆ.

"ಏಕೆ ? ಏನಾಯ್ತು ದಿವಾಕರ.... ಹೃದಯಾಘಾತವೇನಾದರೂ ಆಯಿತೇನು ? ಏಳು ಮೇಲೆ...." ಹೇಮಂತ ಆದೇಶ ನೀಡಿದ. ಎಸ್. ಪಿ. ರಾಮನಾಥ ದಿವಾಕರನೆಡೆ ದುರುಗುಟ್ಟಿ ನೋಡಿದರು. ಗಡಗಡ ನಡುಗಿದ ದಿವಾಕರ ಬೇರೆ ದಾರಿ ಕಾಣದೆ ಮೇಲೆದ್ದು ಹೇಮಂತನ ಕೈಗೆ ಸಿಗರೇಟ್ ಪ್ಯಾಕ್ ಮತ್ತು ಲೈಟರ್ ನೀಡಿ ಮತ್ತೆ ತನ್ನ ಜಾಗೆಗೆ ಬಂದ.

ಹೇಮಂತನ ಧ್ವನಿ ಪ್ರತಿಧ್ವನಿಸಿತು. "ಸ್ನೇಹಿತರೇ... ನೋಡಲು ಇದು ಲೈಟರ್. ಇದನ್ನು ಲೈಟರ್‌ನಂತೆ ಸಿಗರೇಟ್ ಉರಿಸಲೂ ಸಹ ಉಪಯೋಗಿಸಬಹುದು, ಈ ರೀತಿ" ಹೇಮಂತ ಲೈಟರ್‌ನಿಂದ ಸಿಗರೇಟೊಂದನ್ನು ಉರಿಸಿ ತೋರಿಸಿ ಎರಡು ಮೂರು ಬಾರಿ ಎಳೆದು ನೋಡಿದ ನಗುತ್ತ "ನನಗೂ ಸಿಗರೇಟ್ ಸೇದುವ ಇಚ್ಛೆ, ತುಂಬಾ ಹೊತ್ತಿನಿಂದಿತ್ತು. ಈ ನೆವದಿಂದಲಾದರೂ...." ಸೀರಿಯಸ್ಸಾಗಿ ಕೇಳುತ್ತ ಕುಳಿತಿದ್ದವರೆಲ್ಲ ಹೇಮಂತನ ಹಾಸ್ಯಕ್ಕೆ ನಕ್ಕು ಹಗುರಾದರು.

"ತಮಗೆಲ್ಲಾ ನಾನು ಈ ಲೈಟರ್ ಬಗ್ಗೆ ತಿಳಿಸಬಯಸಿದ ಮುಖ್ಯ ವಿಷಯವೇನೆಂದರೆ...." ಮಾತನ್ನು ಅರ್ಧಕ್ಕೆ ನಿಲ್ಲಿಸಿ ಹೇಮಂತ ದಿವಾಕರ ಕಡೆ ನೋಡಿದ. ದಿವಾಕರ ಕಣ್ಣರಳಿಸಿ ಬಾಯ್ತೆರೆದು ಅವನತ್ತಲೇ ನೋಡುತ್ತಲಿದ್ದುದು ಗಮನಕ್ಕೆ ಬಂದು ಮುಗುಳು ನಗೆ ನಕ್ಕ. "ಇದು ಕೇವಲ ಲೈಟರ್ ಮಾತ್ರವಲ್ಲ. ಹಾಡುವ ಹಕ್ಕಿಯೂ ಕೂಡ ಆಗಿದೆ."

'ಹಾಡುವ ಹಕ್ಕಿ' ಎಂಬ ಶಬ್ದ ಕಿವಿಗೆ ಬೀಳುತ್ತಲೇ ಜನರೆಲ್ಲ ಅಚ್ಚರಿ ಸೂಚಿಸಿದರೆ ದಿವಾಕರ ಬೆಚ್ಚಿಬಿದ್ದ. ಅವನ ಮುಖ ಬಿಳುಪೇರಿತು.

"ಹಾಡುವ ಹಕ್ಕಿ ಎಂದರೇನು ಮೇಜರ್?" ನಾಗರಿಕರೊಬ್ಬರು ಕೇಳಿದರು.

"ಇದು ಲೈಟರ್ ಜೊತೆ ಹಾಡುವ ಹಕ್ಕಿಯೂ ಆಗಿದೆ. ಇದಕ್ಕಾಗಿಯೇ ಕೆಲಿಯಾನ್ ಕೊಲೆಯಾದ. ಕೆಲಿಯಾನ್ ಕುಮುದನ್‌ರ ಸಹಾಯ ಪಡೆಯಲು ದಿವಾಕರನ ಜೊತೆ ಪಾರ್ಟನರ್ ಆದ. ದಿವಾಕರ ಅವನಿಗೆ ತಿಳಿಯದಂತೆಯೇ ಅವನಿಂದ ಹಾಂಕಾಂಗ್‌ನಿಂದ ತರಿಸಿದ ಕೆಲವೊಂದು ಕಂಪ್ಯೂಟರ್ ಯಂತ್ರ, ಸೂಕ್ಷ್ಮದರ್ಶಕ ಯಂತ್ರ, ಕೆಮರಾ, ಧ್ವನಿವರ್ಧಕ ಕೂಡಿಸಿ ಸೀಪರ್ಲ್‌ದ ಗೋಡೆಗಳಿಗೆಲ್ಲ ಕಿವಿ, ಕಣ್ಣು ಜೋಡಿಸಿದ. ತನಗಾಗಿರಿಸಿದ್ದ ರೂಮಿನ ಕೆಳಭಾಗದಲ್ಲೇ ಒಂದು ಪ್ರಯೋಗ ಶಾಲೆ ಮಾಡಿಕೊಂಡು ಅಲ್ಲಿಂದ ಕೆಲಿಯಾನ್‌ನ ಗತಿವಿಧಿ ಪರೀಕ್ಷಿಸತೊಡಗಿದ. ಇನ್ನೊಂದು ವಿಷಯ ಹೇಳಲು ನಾನು ಮರೆತೆ, ಕ್ಷಮಿಸಿ. ಜರ್ಮನಿಯಲ್ಲಿಯೇ ದಿವಾಕರ ಕೆಲಿಯಾನ್ ಜೊತೆ ವ್ಯವಹಾರ ಮಾತನಾಡಿದ್ದ. ಕುಮುದನ್ ಅವರನ್ನು ಒಪ್ಪಿಸಿ ಅವರ ಜೊತೆ ಕೂಡಿ ಪ್ರಯೋಗ ಮಾಡುವ ಹಾಗೂ ಅದರಲ್ಲಿ ಯಶಸ್ವಿಯಾಗಲು ನಾನು ಸಹಕಾರ ನೀಡುತ್ತೇನೆ. ಅದರ ಬದಲು ನನಗೆ ಒಂದು ಹೋಟೆಲ್ ಕಟ್ಟಿಕೊಡಿ ಎಂದಿದ್ದ. ಅದೇ ಅವನ ಕರಾರಾಗಿತ್ತು.ಆ ಕರಾರಿನಿಂದಾಗಿಯೇ "ಸೀಪರ್ಲ್" ತಲೆ ಎತ್ತಿತು.ಅದರ ನಿಜವಾದ ಯಜಮಾನ ದಿವಾಕರ. ಆತ ಅದನ್ನು ಗುಪ್ತವಾಗಿಟ್ಟು, ಕೆಲಿಯಾನ್‌ನನ್ನು ಹಾಗೂ ಮ್ಯಾನೇಜರ್‌ನನ್ನು ಮುಂದೆ ಮಾಡಿದ್ದ. ಆತನೇ ಯಜಮಾನನಾಗಿದ್ದುದರಿಂದ ಆತ ಕೆಲಿಯಾನ್‌ನನ್ನು ಪರಿಚಯಿಸುತ್ತಿದ್ದಾಗ ಆತ ರೋಜೀ ಜೊತೆ ಕೂಡಿಕೊಂಡಿದ್ದು. ರಾತ್ರಿ ತನಗೆ ತಿಳಿಯದಂತೆ ಆತ ಕೆಲವೊಂದು ವಿಷಯ ಅವಳ ಮುಂದೆ ಬಾಯಿ ಬಿಟ್ಟಿದ್ದನ್ನು ದಿವಾಕರ ತನ್ನ ಹೊಟೆಲ್ ರೂಮಿನಲ್ಲಿ ಕುಳಿತು ಕೇಳಿದ. ಇನ್‌ಸ್ಪೆಕ್ಟರ್ ಶೇಖರ ಕೆಲಯಾನ್‌ನ ಹಿಂದೆ ಬಿದ್ದದ್ದು ತಿಳಿದು ಚಿಂತಿತನಾದ ಆಗಲೇ ರೋಜಿ ಕೆಲಿಯಾನ್‌ನ ಬಳಿ ಇದ್ದ ಲೈಟರ್ ಈ ಹಾಡುವ ಹಕ್ಕಿಯನ್ನು ಅಪಹರಿಸಿದಳು. ಅದನ್ನು ನೋಡಿ ದಿವಾಕರ ಕಂಗಾ

ಲಾದ. ರೋಜಿ ಹಿಂದೆ ಜನರನ್ನು ಅಟ್ಟಿದ. ತಾನು ಕೆಲಿಯಾನ್‌ನನ್ನು ಅವನ ರೂಮಿನಲ್ಲೇ ಸರ್ಪದಿಂದ ಕಚ್ಚಿಸಿ ಕೊಂದ. ನಾಯಿ, ದನ, ಕರು, ಪಕ್ಷಿ ಮುಂತಾದವು ಮನುಷ್ಯನ ಆಜ್ಞೆ ಹೇಗೆ ಪಾಲಿಸುತ್ತವೆಯೋ ಅದೇ ರೀತಿ ಆಜ್ಞೆ ಪಾಲಿಸುವಂತೆ ಆತ ಕ್ರೂರ ಮೃಗ, ವಿಷ ಸರ್ಪ ಮುಂತಾದವುಗಳನ್ನು ಸಿದ್ಧಪಡಿಸಿದ್ದ. ಕುಮುದನ್ ತಮ್ಮ ಪ್ರಯೋಗದಲ್ಲಿ ಸಫಲರಾಗುವ ಹಂತದಲ್ಲಿದ್ದರು. ಇಂಥ ಸಂದರ್ಭದಲ್ಲಿ ಕೆಲಿಯಾನ್ ಸಿಕ್ಕಿಹಾಕಿಕೊಂಡರೆ ಮುಂದೆ ಗತಿ? ಅದಕ್ಕೆಂದೇ ಅವನನ್ನು ಮುಗಿಸಿ ರೋಜಿ ಹಿಂದೆ ಬಿದ್ದ. ಅವಳನ್ನುಳಿಸಲು ನಾನು ಸಾಕಷ್ಟು ಪ್ರಯತ್ನಿಸಿದೆ. ಆದರೆ ಅವಳ ಮೂರ್ಖತನದಿಂದಾಗಿ ಆಕೆ ತಾನೂ ಸತ್ತಳಲ್ಲದೆ ತನ್ನ ಜೊತೆ ತನ್ನ ಇನಿಯ ತಿಮ್ಮಯ್ಯನನ್ನೂ ಒಯ್ದಳು. ರೋಜಿಯನ್ನು ಮುಗಿಸಿದರೂ ಹಾಡುವ ಹಕ್ಕಿ ಮಾತ್ರ ದೊರೆಯದಾಯಿತು. ಅದು ನಮ್ಮ ಮನೆಯಲ್ಲಿರಬಹುದೆಂಬ ಸಂಶಯದಿಂದ ನನ್ನ ಮನೆ ಧ್ವಂಸ ಮಾಡಲಾಯಿತು. ಅವರಿಗೆ ದೊರೆಯದ ಹಾಡುವ ಹಕ್ಕಿ ನನಗೆ ದೊರೆಯಿತು. ಅದಕ್ಕೂ ಮೊದಲು ಖ್ಯಾತ ಅಪರಾಧಿ ಬಂಟಿ ಸತ್ತು ಸಮಾಧಿ ಕಂಡವ ಪುನಃ ಜೀವಿತನಾಗಿ ಎಸ್. ಪಿ. ಅವರ ಮನೆಗೆ ನುಗ್ಗಿ ಅವಾಂತರ ನಡೆಸಿದ. ಹಸಿರು ಫೈಲು ಸುಟ್ಟು ಹಾಕಿದ. ಅಲ್ಲಿಂದಲೇ ದೊರೆತ ಕಾಗದಗಳಿಂದ ನನಗೆ ಕುಮುದನ್ ಹಾಗೂ ದಿವಾಕರರ ಹೆಸರುಗಳು ದೊರೆತವು. 'ಸೀಪರ್ಲ್'ದಿಂದ ದೊರೆತ ಕಾಗದಗಳು, ಅವುಗಳ ಜೊತೆ ಮೂರು ವರ್ಷಗಳ ಹಿಂದಿನ ಎಲ್ಲ ಪತ್ರಿಕೆ ತಿರುವಿ ಹಾಕಿದೆ. ಅದೇ ಸಮಯಕ್ಕೆ ಸರಿಯಾಗಿ ನಾನು ಇಂಟರ್ ಪೋಲ್, ಸ್ಕಾಟ್‌ಲಂಡ್‌ಯಾರ್ಡ್ ಹಾಗೂ ಭಾರತೀಯ ಪೋಲೀಸ್‌ರಿಗೆ ಟೆಲಿಗ್ರಾಂ ಮೂಲಕ ಕೇಳಿಕೊಂಡ ಮಾಹಿತಿಯು ದೊರೆಯಿತು. ಇದರಿಂದಾಗಿ ಕುಮುದನ್ ಹಾಗೂ ದಿವಾಕರ ಜರ್ಮನಿಗೆ ಹೋದ, ಅಲ್ಲಿ ಅವರು ಮಂಡಿಸಿದ ಪ್ರಯೋಗಗಳ ವಿಷಯದ ಬಗ್ಗೆ ಮತ್ತು ಅಲ್ಲಿ ಅವರು ಯಾರೊಂದಿಗೆ ಮಾತಾಡಿದರು, ಎಲ್ಲೆಲ್ಲಿ ಹೋಗಿದ್ದರು ಎಲ್ಲಾ ತಿಳಿದು ಬಂದಿತು. ದಿವಾಕರಗೆ ಒಂದು ವಿಷಯದ ಜ್ಞಾನವಿದ್ದಂತೆ ಕಾಣುವದಿಲ್ಲ. ಅಂತರ್‌ರಾಷ್ಟ್ರೀಯ ಮಟ್ಟದಲ್ಲಿ ನಡೆಯುವ ಪ್ರತಿಯೊಂದು ಸಮ್ಮೇಳನದಲ್ಲಿ ಭದ್ರತಾ ವ್ಯವಸ್ಥೆ ಶ್ರೇಷ್ಠದರ್ಜೆಯದಾಗಿರುತ್ತದೆ. ಯಾರಿಗೂ ಅರಿವಾಗದಂತೆ ಅದರಲ್ಲಿ ಭಾಗವಹಿಸಿದ ಪ್ರತಿಯೊಬ್ಬ ಸದಸ್ಯರನ್ನು ಗುಪ್ತಚಾರ ಪಡೆಯವರು ಹಿಂಬಾಲಿಸಿ ಅವರ ಪ್ರತಿಯೊಂದು ಚಟುವಟಿಕೆ ಪರಿಶೀಲಿಸಿ ವರದಿ ಒಪ್ಪಿಸಿರುತ್ತಾರೆ. ಇದೆಲ್ಲಾ ಭದ್ರತಾ ದೃಷ್ಟಿಯಿಂದಷ್ಟೇ ಅಲ್ಲದೇ ಪ್ರತಿಯೊಬ್ಬ ಸದಸ್ಯನ ಸುರಕ್ಷತೆಯ ದೃಷ್ಟಿಯಿಂದಲೂ ಅವಶ್ಯ. ಆದರಂತೆ ಸೈಂಟಿಸ್ಟ್ ಕುಮುದನ್, ಡಾಕ್ಟರ್ ದಿವಾಕರ ಅವರು

ಸಹ ಜರ್ಮನಿಗೆ ಹೋದಾಗ ಅಲ್ಲಿಯ ಗುಪ್ತಚಾರ ಪಡೆಯವರು ಅವರ ಬಗ್ಗೆ ಗುಪ್ತ ವರದಿ ಸಿದ್ಧಪಡಿಸಿದ್ದು ಅದರಿಂದಲೂ ನನಗೆ ಬೇಕಾದ ಮಾಹಿತಿ ದೊರೆಯಿತು.

"ಎಲ್ಲಕ್ಕಿಂತ ಹೆಚ್ಚಾಗಿ, ಯಮದೂತನ ಮೇಲೆ ನಿಯಂತ್ರಣ, ಅವರಿಗೆ ನೀಡುವ ಆದೇಶ, ಅದರಿಂದ ತೆಗೆದುಕೊಳ್ಳಬೇಕಾದ ಕೆಲಸದ ವಿಧಾನ, ಒಟ್ಟು ಎಷ್ಟು ಜನ ಯಮದೂತರ ನಿರ್ಮಾಣವಾಗಿದೆ, ಅವರವರ ಹೆಸರು ಕ್ರಮಾಂಕ ಏನು, ಮುಂತಾದ ಎಲ್ಲ ವಿಷಯ ನನಗೆ ತಿಳಿದದ್ದು ರೋಜಿ ಅಪಹರಿಸಿದ ಹಾಡುವ ಹಕ್ಕಿಯಿಂದ. ದಿವಾಕರ ಮತ್ತು ಕೆಲಿಯಾನ್ ಉರ್ಫ್ ಚಿನ್ ಲಿಯೋಲಿನ್ ಇಬ್ಬರ ಬಳಿಯೂ ಇಂಥ ಹಾಡುವ ಹಕ್ಕಿಗಳಿದ್ದವು. ಆ ಹಾಡುವ ಹಕ್ಕಿಗಳಲ್ಲೇ ಪ್ರತಿಯೊಂದು ವಿಷಯವನ್ನು ಮೈಕ್ರೋಟೇಪ್‌ನಲ್ಲಿ ರಿಕಾರ್ಡ್ ಮಾಡಿ ಇಡಲಾಗಿತ್ತು. ಹಾಡುವ ಹಕ್ಕಿಯಿಂದಲೇ ಯಮದೂತರ ಮೇಲೆ ಕಂಟ್ರೋಲ್ ತರಬಹುದಿತ್ತು. ಹೀಗಾಗಿ ಕೆಲಿಯಾನ್‌ನನ್ನು ದಾರಿಯಿಂದ ಸರಿಸಿದ ಮೇಲೆ ದಿವಾಕರ ಹಾಡುವ ಹಕ್ಕಿಯ ಹಿಂದೆ ಹುಚ್ಚನಂತೆ ಬಿದ್ದ. ಆದರೂ ಅವನಿಗೆ ಫಲ ದೊರೆಯಲಿಲ್ಲ. ಅವನಿಗೆ ಹಾಡುವ ಹಕ್ಕಿ ದೊರೆಯಲೇ ಇಲ್ಲ."

"ಇದೆಲ್ಲಾ ಕಟ್ಟು ಕಥೆ, ನಾ ನಂಬಲಾರೆ. ನೀವು ದೊಡ್ಡ ಸ್ಥಾನದಲ್ಲಿದ್ದು ಪ್ರತಿಯೊಬ್ಬರನ್ನೂ ನಂಬಿಸಬಹುದು ಎಂದು ತಿಳಿದಿದ್ದರೆ, ಅದು ಮೂರ್ಖತನವಾದೀತು" ಕುಳಿತಲ್ಲಿಂದಲೇ ದಿವಾಕರ ಕಿರುಚಿಕೊಂಡ.

"ನಾನು ಸುಳ್ಳು ಹೇಳಬಹುದು ದಿವಾಕರ. ಆದರೆ ಫೋಟೋಗಳು, ಇಂಟರ್‌ಪೋಲ್ ಪೊಲೀಸ್‌ರ ವರದಿಗಳು ಸುಳ್ಳು ಹೇಳಲಾರವು. ತಿಳಿಯಿತೆ? ಅವೆಲ್ಲವೂ ನನ್ನ ಬ್ಯಾಗಿನಲ್ಲಿ ಭದ್ರವಾಗಿವೆ. ನಾನಿದನ್ನು ಪೊಲೀಸ್ ಇಲಾಖೆಗೆ ಒಪ್ಪಿಸುವೆ. ಅದರೊಂದಿಗೆ ನೀನು ಇನ್ನೊಂದು ತಪ್ಪು ಮಾಡಿದೆ. ಒಂದು ದೃಷ್ಟಿಯಿಂದ ಮುಠ್ಠಾಳತನವೆಂದು ಹೇಳಬಹುದು. ನಾನು ಕುಮುದನ್‌ರ ಮಗಳು ಮಧು ಹಾಗೂ ಕುಮುದನ್‌ರನ್ನು ಭೇಟ್ಟಿ ಮಾಡಿದ ಮೇಲೆ ನೀನು ಭೀತಿಗೊಂಡು ಕುಮುದನ್‌ರನ್ನು ಹೆದರಿಸಿದೆ. ಮಧುಳನ್ನು ಅಪಹರಿಸಿ ನಿನ್ನ ಸ್ವಂತ ಪ್ರಯೋಗ ಶಾಲೆಯಲ್ಲಿ ಬಂಧಿಸಿಟ್ಟೆ. ನಿನ್ನೆ ನಾನು ಪೊಲೀಸ್ ಇಲಾಖೆಯ ಸಹಾಯದಿಂದ 'ಮಧುಸಂಚಯ'ದ ಮೇಲೆ ದಾಳಿ ಮಾಡಿದಾಗ ಸರ್ವ ದೃಷ್ಟಿಯಿಂದಲೂ ಎದುರಿಸಿ ವಿಫಲನಾದ ನೀನು ಅಲ್ಲಿಂದ ಪಲಾಯನ ಮಾಡಿದೆ. ನಿನ್ನ ಇರುವು ನಿನ್ನ ಉಪಸ್ಥಿತಿ ಈ ಕೇಸಿನಲ್ಲಿ ನಿನ್ನ ಪಾತ್ರ ಎಲ್ಲಾ ನನಗೆ ನಿನ್ನೆಯೇ ತಿಳಿಯಿತು. ನೀನೇನೋ ಓಡಿಹೋದೆ. ಹೋಗುವ ಮುನ್ನ ಮಧುಳನ್ನು

ಅಲ್ಲೇ ಬಿಟ್ಟು ಹೋದದ್ದು ಮತ್ತೊಂದು ಅಪರಾಧವಾಯಿತು. ಅವಳನ್ನು ಸುಷಮಾ ಹುಡುಕಿ ತಂದಳು. ಮಧುವಿನ ಜೊತೆಗೇ ನಿನ್ನ ಪ್ರಯೋಗಶಾಲೆಯ ಡೈರಿ, ಪ್ಲಾನಿಂಗ್ ಮುಂತಾದವುಗಳೆಲ್ಲಾ ನನ್ನ ಕೈಗೆ ದೊರೆತವು. ಇದಕ್ಕೂ ಮೊದಲು ನಿನ್ನ ಬಗ್ಗೆ ಸಂಶಯ ಬಂದಿತ್ತಾದರೂ ಸಾಕ್ಷಿ, ಆಧಾರಗಳು ದೊರೆಯದ್ದರಿಂದ ಸುಮ್ಮನಾಗಿದ್ದೆ. ಇವೆಲ್ಲ ದೊರೆತ ಮೇಲೆ ಸೂತ್ರಧಾರ ನೀನೇ ಎಂದು ನಿರ್ಧರಿತವಾಯಿತು."

"ಅದೆಲ್ಲಾ ಸರಿ ಮೇಜರ್ ಸಾಹೇಬ್.... ಆದರೆ ನಿಮಗೆ ದಿವಾಕರನ ಮೇಲೆ ಸಂಶಯ ಬಂದಿದ್ದು ಎಂದೆಂದೂ ಹೇಳಲೇ ಇಲ್ಲವಲ್ಲ?" ಒಬ್ಬ ಪೊಲೀಸ್ ಅಧಿಕಾರಿ ಪ್ರಶ್ನಿಸಿದಾಗ ಹೇಮಂತ್ ಮಂದಹಾಸ ಬೀರಿದ.

"ಸದ್ಯದ ಪರಿಸ್ಥಿತಿಯಲ್ಲಿ ಈ ಕೇಸಿಗೆ ಸಂಬಂಧಿಸಿದಂತೆ ಸ್ಪಷ್ಟೀಕರಣ ಉಳಿದದ್ದು ತಾವು ಕೇಳಿದ ಪ್ರಶ್ನೆಗೆ ಉತ್ತರ ಕೊಡುವದೊಂದೇ ಆಗಿದೆ. ಅದರೊಂದಿಗೆ ದಿವಾಕರ ಪ್ರಮುಖ ಪಾತ್ರ ವಹಿಸಿ ಕುಮುದನ್‌ರನ್ನು ಬಲಿಪಶು ಮಾಡಿದ 'ಯಮದೂತ'ರ ಈ ಹತ್ಯಾಕಾಂಡವೂ ಇತಿಶ್ರೀ ಹೊಂದುತ್ತದೆ. ಹಾಂ ಕೇಳಿ, ನನಗೆ ದಿವಾಕರರ ಮೇಲೆ ಸಂಶಯ ಬಂದದ್ದು ಕೆಲಿಯಾನ್‌ನ ಸಾವಿನ ನಂತರ. ಅವನ ಶವ ಪರೀಕ್ಷೆ ಮಾಡಿದವ ದಿವಾಕರ. ಕೆಲಿಯಾನ್‌ನ ಸಾವು ಹೇಗೆ ಸಂಭವಿಸಿದೆ ಎಂದು ಅವನಿಗೆ ಚೆನ್ನಾಗಿ ತಿಳಿದಿತ್ತು. ಅದಕ್ಕೆ ತಾನೇ ಕಾರಣ ಎಂದು ಗೊತ್ತಿದ್ದರೂ ಸಹಿತ ದಿವಾಕರ ತೀರಾ ಅನಭಿಜ್ಞತೆ ವ್ಯಕ್ತಪಡಿಸಿದ. ಅಲ್ಲದೇ ಕೆಲಿಯಾನ್‌ನ ಮುಖ ಹಾಗೂ ದೇಹದ ಮೇಲೆ ಲೇಪಿಸಿಕೊಂಡ ದ್ರಾವಣದ ಬಗ್ಗೆ ಅವನ ಬಹುರೂಪದ ಬಗ್ಗೆ ಚಕಾರ ಶಬ್ದ ಸಹ ಎತ್ತಿರಲಿಲ್ಲ. ದೇಹ ಪರೀಕ್ಷೆಯ ಕಾಲಕ್ಕೆ ಇವನ್ನೆಲ್ಲ ಸುಲಭವಾಗಿ ಗುರುತಿಸಬೇಕಾಗಿತ್ತು. ಇವನ್ನೆಲ್ಲ ನಾನು ಕಂಡು ಅವನ ಮುಂದಿಟ್ಟಾಗ ಆತ ಚಡಪಡಿಸಿದ. ಮೇಲೆ ನನ್ನ ಬಗ್ಗೆ ಒಳ್ಳೆಯ ಮಾತ ನಾಡಿದ. ಆಗಲೇ ನಾನು ದಿವಾಕರನನ್ನು ಸಂದೇಹಿಸಿದ್ದೆ."

"ಟಪ್....ಟಪ್....ಟಪ್...."

ಹಿಂದೆ ಕುಳಿತ ಯಾರೋ ಒಬ್ಬರು ಚಪ್ಪಾಳೆ ತಟ್ಟಿದರು. ಅದಕ್ಕೆ ಉತ್ತರವಾಗಿ ಮತ್ತೆ ಇಬ್ಬರು, ಅದರ ನಂತರ ಒಮ್ಮೆಂದೊಮ್ಮೆಲೆ ಎಲ್ಲೆಡೆ ಯಿಂದ ಬಂದ ಚಪ್ಪಾಳೆಗಳಿಂದಾಗಿ ಎಸ್.ಪಿ. ಅವರ ಕಾನ್‌ಫರೆನ್ಸ್ ಹಾಲ್ ಪ್ರತಿಧ್ವನಿಸತೊಡಗಿತು... ಹೇಮಂತ ವಂದಿಸುತ್ತಿದ್ದಂತೆ ಎಸ್.ಪಿ. ರಾವನಾಥ್ ಅವರು ದಿವಾಕರನ ಕೈಗೆ ಕೋಳಗಳನ್ನು ತೊಡಿಸಿದರು. ಕುಮುದನ್‌ರ ಸನಿಹ ಬಂದು ನುಡಿದರು ವಿನಯದಿಂದ. "ನಿಮಗೆ ಸಂಕೋಲೆ ತೊಡಿಸುವ ಉದ್ಧಟ

ನಾನಲ್ಲ. ನಿಮ್ಮ ಘನತೆ ಹಾಗೂ ವಿದ್ವತೆಗೆ ನಾನು ಅವಮಾನವನ್ನು ಮಾಡಲಾರೆ. ಆದರೂ ಕಾನೂನಿನ ದೃಷ್ಟಿಯಲ್ಲಿ ನೀವು ಅಪರಾಧಿಯೇ. ನೀವು ಅಪರಾಧಿಯ ಜಾಲದಲ್ಲಿ ಸಿಲುಕಿ ನಿಮಗೆ ಅರಿವಾಗದಂತೆ ಅಪರಾಧಿಗೆ ಸಹಾಯ ಮಾಡಿದಿರಿ. ವಿಜ್ಞಾನದಿಂದ ಜಗತ್ ಕಲ್ಯಾಣದ ಕೆಲಸ ಮಾಡದೇ ಅದರ ದುರುಪಯೋಗ ತೆಗೆದುಕೊಳ್ಳುವದರ ಜೊತೆಗೆ ಸೃಷ್ಟಿಗೆ ಸವಾಲಾಗಿ ನಿಂತಿರಿ. ಇದಕ್ಕಾಗಿ ನೀವು ಶಿಕ್ಷಿತರು."

"ನಿಮ್ಮ ಉದಾರತೆ ಹಾಗೂ ನನ್ನ ಬಗೆಗೆ ಇಟ್ಟುಕೊಂಡಿರುವ ಗೌರವಕ್ಕಾಗಿ ವಂದನೆಗಳು ರಾಮನಾಥ ಅವರೆ. ನಾನು ಸತ್ಯದಿಂದ ದೂರ ಓಡಲಾರೆ, ಸತ್ಯವಿದ್ದದ್ದನ್ನೆಲ್ಲ ನ್ಯಾಯಾಲಯದಲ್ಲಿ ಒಪ್ಪಿಕೊಳ್ಳುತ್ತೇನೆ. ನೀಡಿದ ಶಿಕ್ಷೆಯನ್ನು ಸಂತೋಷದಿಂದ ಸ್ವೀಕರಿಸುತ್ತೇನೆ." ಕಣ್ಣಲ್ಲೇ ಕೃತಜ್ಞತೆ ಅರ್ಪಿಸುತ್ತ ನುಡಿದರು ಕುಮುದನ್.

"ತುಂಬಾ ಸಂತೋಷ. ನ್ಯಾಯವು ಎಂದೂ ನಿಷ್ಕರುಣೆಯಲ್ಲ. ಶರಣು ಬಂದವರನ್ನು ಕಾರುಣ್ಯದಿಂದ ನೋಡುತ್ತದೆ ಎಂಬ ಮಾತನ್ನು ನಾನು ತಮಗೆ ನೆನಪು ಮಾಡಿಕೊಡುತ್ತೇನೆ." ರಾಮನಾಥರು ಕುಮುದನ್‌ರಿಗೆ ಗೌರವದಿಂದ ತಲೆಬಾಗಿಸಿ ದಿವಾಕರನ ಕಡೆ ಹೊರಳಿದರು. ಅದರರ್ಥ ತಿಳಿದುಕೊಂಡ ದಿವಾಕರ ಮೇಲೆದ್ದ. ಹೇಮಂತ ಅವರನ್ನು ಸಮೀಪಿಸುತ್ತಿದ್ದಂತೆ ಜನ ಅವನ ಸುತ್ತ ಮುತ್ತತೊಡಗಿದರು. ಅವನೆಡೆ ಕ್ಷುದ್ರ ದೃಷ್ಟಿಬೀರಿ ಕರಕರ ಹಲ್ಲು ಕಡಿದ ದಿವಾಕರ ಎಚ್ಚರಿಕೆ ನೀಡಿದ. "ಹೇಮಂತ ನೀನು ಗೆದ್ದೆ ಎಂದು ಹೆಮ್ಮೆಯಿಂದ ಬೀಗಬೇಡ. ನಾ ಸೋತೆ ಎಂದು ಅವಹೇಳನ ಮಾಡಬೇಡ. ನಾ ಕೈದಿಯಾಗಿ ಜೈಲು ಸೇರಿದರೂ ನಿನ್ನ ಸಾವಿಗೆ ಸಿದ್ಧತೆ ಮಾಡಿಯೇ ಇರುವೆ. ಎಂದಿದ್ದರೂ ನೀ ಮಸಣ ಸೇರಬೇಕಾದವ ಎಂಬುದನ್ನು ನೆನಪಿಸಿಕೊ."

ದಿವಾಕರನ ದುಷ್ಟ ಮಾತು ಕೇಳಿ ಕುಪಿತನಾದ ಅಶೋಕ ಅವನೆಡೆ ನುಗ್ಗುತ್ತಿರುವಂತೆ ಹೇಮಂತ ಅವನನ್ನು ತಡೆದ. "ದಿವಾಕರ ನನಗೇನೂ ಗೊತ್ತಿಲ್ಲ ಎಂದು ನೀನು ತಿಳಿಯಬೇಡ. ನನಗೆಲ್ಲಾ ಗೊತ್ತಿದೆ. ನೀನು ನಿನ್ನ ಕೊನೆಯ ಅಸ್ತ್ರ ಹದಿಮೂರನೇ ಕ್ರಮಾಂಕದ ಯಮದೂತನನ್ನು ಆಹ್ವಾನಿಸಿರುವೆ. ಈಗಲೋ ಇನ್ನೊಂದು ಗಳಿಗೆಗೋ ನಿನ್ನ ಕೊನೆಯ ಅಸ್ತ್ರ ಇಲ್ಲಿ ಬರಬಹುದು. ಒಂದು ಮಾತು ಮಾತ್ರ ಖಂಡಿತ ನೆನಪಿಟ್ಟುಕೊ. ಹದಿಮೂರನೇ ಯಮದೂತನಿಗೂ ಅದೇ ಸ್ಥಿತಿಯಾಗುತ್ತದೆ ಈ ಮೊದಲು ಆದವರಿಗೆ ಆದಂತೆ."

ಹದಿಮೂರನೇ ಯಮದೂತ, ಕೊನೆ ಅಸ್ತ್ರ, ಈ ಎಲ್ಲ ಮಾತುಗಳನ್ನು ಕೇಳಿ ಸಂತಸದಿಂದ ಬೀಗಿದ ಜನ ಮತ್ತೆ ಬೆದರಿದರು. ಅವರನ್ನುದ್ದೇಶಿಸಿ ನುಡಿದ ಹೇಮಂತ. "ನೀವೆಲ್ಲ ಹದಿಮೂರನೇ ಯಮದೂತನನ್ನು ಮರೆತಿರಿ. ನಾನು ಈ ಮೊದಲೇ ಹೇಳಿರುವೆ. ದಿವಾಕರ ಒಟ್ಟು ಹದಿಮೂರು ಯಮ ದೂತರನ್ನು ಸೃಷ್ಟಿಸಿದ್ದ. ಅವುಗಳಲ್ಲಿ ಹನ್ನೊಂದು ಜನ ಸತ್ತುಹೋದರು. ಹನ್ನೆರಡನೆಯವ ನನ್ನ ಪ್ರತಿರೂಪ. ನಿಮ್ಮ ಕಣ್ಣೆದುರೇ ಇರುವವ. ನಾನು ಅವನನ್ನು ನಿಷ್ಕ್ರಿಯಗೊಳಿಸಿರುವೆ. ಈಗ ಉಳಿದದ್ದು ಹದಿಮೂರನೇ ಹಾಗೂ ಕೊನೆಯ ಯಮದೂತ. ನೀವಾರೂ ಮಧ್ಯ ಬರಬೇಡಿ. ದಯವಿಟ್ಟು ಎಲ್ಲರೂ ಇಲ್ಲಿಂದ ಜಾಗ ಖಾಲಿ ಮಾಡಿ. ಹದಿಮೂರನೇ ಯಮದೂತ ಭಯಾನಕ ಕೋಪದೊಂದಿಗೆ ಬರಲಿದ್ದಾನೆ. ನಾನೊಬ್ಬನೇ ಅವನನ್ನು ಎದು ರಿಸಿ ಒಂದು ಗತಿ ಕಾಣಿಸುತ್ತೇನೆ."

ಎಲ್ಲರೂ ಎಸ್.ಪಿ. ಅವರ ಆಫೀಸಿನೊಳಗೆ ನುಗ್ಗಿದರು.

ಅಲ್ಲಿ ಉಳಿದವರೆಂದರೆ ಕೇವಲ ನಾಲ್ಕಾರು ಜನ. ಅಶೋಕ, ಸುಷಮಾ ರಾಮನಾಥ, ಹೇಮಂತ. ಅವರ ಜೊತೆ ಕುಮುದನ್, ಮಧು, ದಿವಾಕರ.

"ಹೇಮಂತ ಅವರೆ ಹದಿಮೂರನೆ ಯಮದೂತ ಯಾವ ರೂಪದಲ್ಲಿ ದ್ದಾರೆ?" ಎಸ್.ಪಿ. ರಾಮನಾಥರು ಪ್ರಶ್ನಿಸಿದಾಗ ಹೇಮಂತ ಮುಗುಳು ನಗೆಯೊಂದಿಗೆ ಉತ್ತರಿಸಿದ.

"ಹದಿಮೂರನೇ ಯಮದೂತ ಪುರುಷನಲ್ಲ.... ಮಹಿಳೆ....ಮಧುವಿನ ಪ್ರತಿರೂಪ." ಮಧು ಬೆಚ್ಚಿಬಿದ್ದಳು. ಹೇಮಂತನೆಡೆ ನೋಡಿದಳು ಅವಿಶ್ವಾಸದ ದೃಷ್ಟಿಯಿಂದ.

"ಮಧು, ನಾನು ಹೇಳಿದ್ದು ನಿಜ. ನಿನ್ನನ್ನು ಪಡೆಯಲು ಪ್ರಯತ್ನಿಸಿ ವಿಫಲನಾದ ದಿವಾಕರ ನಿನ್ನ ಪ್ರತಿರೂಪ ತಯಾರಿಸಿ ಪ್ರತಿ ದಿವಸ ಅವ ಳೊಂದಿಗೆ ಸುಖಿಸಿ ತೃಪ್ತಿಪಡುತ್ತಿದ್ದ. ಇದನ್ನೇ ನಾನು ಹೇಳಿದ್ದು, ನೀನು ಪತಿತೆಯಾದರೂ ಪತಿತೆಯಲ್ಲ; ಪವಿತ್ರಳು ಎಂದು. ಮೊದಲಬಾರಿ ಮಧು ಸಂಚಯಕ್ಕೆ ಬಂದಾಗ ನನ್ನ ಸಂಧಿಸಿದೆ. ಎರಡನೇ ಬಾರಿ ಬಂದಾಗ ದಿವಾಕರ ನಿನ್ನನ್ನು ನೆಲಮನೆಯಲ್ಲಿ ಬಂಧಿಸಿಟ್ಟು ನಿನ್ನ ಜಾಗೆಯಲ್ಲಿ ನಿನ್ನ ಪ್ರತಿರೂಪ ಹದಿಮೂರನೆ ಯಮದೂತನನ್ನಿರಿಸಿದ. ನಾನವಳನ್ನೇ ನೀನೆಂದು ತಿಳಿದು ಸಮೀಪಿಸಿದೆ. ಕೂಡಲೇ ನನಗೆ ಸಂಶಯ ಬಂದಿತು. ಮಾನವ ಸಹಜವಾದ ಚಟುವಟಿಕೆ ನನಗೆ ಕಂಡುಬರಲಿಲ್ಲ. ದೇಹಕ್ಕೆ ಶಾಖವಿರಲಿಲ್ಲ. ಎದೆಬಡಿತ,

ನಾಡಿ ಮಿಡಿತವಿರಲಿಲ್ಲ. ಚೇತನವಿರದೇ ಗೊಂಬೆಯಂತೆನಿಸಿತು. ಪ್ರತಿಯೊಂದು ಮಾತಿಗೂ ತಡೆ ತಡೆದು ಉತ್ತರ ಬರುತ್ತಿತ್ತು. ನನ್ನ ಭಯಕ್ಕೆ ತಿಂಡಿ ತಿಂದು ಕಾಫಿ ಕುಡಿದದ್ದು ಪ್ರಕೃತಿ ಸಹಜ ಹೊಟ್ಟೆ ಸೇರಲಿಲ್ಲ. ಅದನ್ನೆಲ್ಲ ಬಾತ್‌ರೂಮಿನಲ್ಲಿ ಹೋಗಿ ಕಕ್ಕಿಕೊಂಡಳು. ಅದನ್ನೆಲ್ಲ ಗಮನಿಸಿದ ನಾನು ತೋರ್ಪಡಿಸದೆ ಮರಳಿ ಬಂದೆ. ಅದೇ ಯಮದೂತ ಸದ್ಯ ಬರಲಿದ್ದಾಳೆ.... ನನ್ನ ನಾಶಕ್ಕೆ. ದಿವಾಕರ್ ಸಿಗರೇಟ್ ಉರಿಸುವ ನೆವದಲ್ಲಿ ಹಾಡುವ ಹಕ್ಕಿ ಹೊರತೆಗೆದು ಆದೇಶ ನೀಡಿದ್ದಾನೆ. ಎಲ್ಲರೂ ಸಿಟ್ಟಿನಿಂದ ಈತ ಏನೇನೋ ವಟಗುಡುತ್ತಿದ್ದಾನೆ ಎಂದು ತಿಳಿದಿದ್ದರು. ಅದು ತಪ್ಪು, ಆತ ಒಡಬಡಿಸುತ್ತ ಯಮದೂತನಿಗೆ ಹೊರಟು ಬರಲು, ನನ್ನ ನಾಶ ಮಾಡಲು ಆದೇಶ ನೀಡಿದ್ದ. ಇದು ದಿವಾಕರನ ಕೊನೇ ಅಸ್ತ್ರ....ಹಾಂ.... ಅವಳು ಬಂದಳು.... ನೋಡಿ...."

ಹೊರಗಡೆ ವೇಗವಾಗಿ ಬಂದು ಒಮ್ಮೆಲೇ ಬ್ರೆಕ್ ಹಾಕಿ ನಿಲ್ಲಿಸಿದ ಕಿರ್ರ್ ಎಂಬ ವಾಹನದ ಸದ್ದು ಕೇಳಿಸಿತು. ಎಲ್ಲರೂ ಕಿಟಕಿ ಬಳಿ ಬಂದು ನೋಡಿದರು. ಕಣ್ಣಲ್ಲಿ ಕೆಂಡದ ಮಳೆ ಸುರಿಸುತ್ತ ಕೆಳಗಿಳಿದಳು....ಮಧು. ಅವಳನ್ನು ಕಾಣುತ್ತಿರಲು ಕುಮುದನ್‌ರ ಬಳಿ ಇದ್ದ ಮಧು ಬೆಚ್ಚಿಬಿದ್ದಳು. ಕೂದಲೆಳೆಯಷ್ಟೂ ಅಂತರವಿಲ್ಲ!

"ದಿವಾಕರನನ್ನು ಒಂದು ದೃಷ್ಟಿಯಿಂದ ನಾನು ಅಭಿನಂದಿಸುತ್ತೇನೆ. ಈತ ಪ್ರತಿಭಾವಂತ. ಆದರೆ ಪ್ರತಿಭೆಯ ದುರುಪಯೋಗಪಡಿಸಿಕೊಂಡ. ನಾನು ವಿಜ್ಞಾನದ ಬಗ್ಗೆ ಸಂಶಯಪಟ್ಟು ಸೈಂಟಿಸ್ಟ್ ಬಗ್ಗೆ ವಿಚಾರಿಸಿದಾಗ ಈತ ಗಾಬರಿಯಾಗಿ ಅಂದು ಫೋನ್ ಮೇಲೆ ಕುಮುದನ್‌ರ ಹೆಸರು ಹೇಳಿ ಮತ್ತೊಂದು ತಪ್ಪು ಮಾಡಿ ಸಿಕ್ಕಿಹಾಕಿಕೊಂಡ. ಒಂದು ದೃಷ್ಟಿಯಿಂದ ತನ್ನ ಗೋರಿ ತಾನೇ ತೋಡಿಕೊಂಡ. ಕುಮುದನ್‌ರ ಹೆಸರು ಹೇಳದಿದ್ದರೆ ನಾನು ಮಧುಸಂಚಯಕ್ಕೆ ಹೋಗುತ್ತಲೇ ಇರಲಿಲ್ಲ. ನೀವೆಲ್ಲ ದೂರ ಸರಿಯಿರಿ... ಅಶೋಕ, ಸುಷಮಾ ನೀವೂ ಸಹ. ಇದು ನನ್ನ ಹಾಗೂ ಹದಿಮೂರನೇ ಯಮದೂತಳ ಮಧ್ಯದ ಧರ್ಮಯುದ್ಧ."

"ಖಂಡಿತ ನಿನಗಿಂದು ಸೋಲು ಹೇಮಂತ....ನನ್ನ ಸ್ವಪ್ನಸುಂದರಿ'ಮಧು' ನನಗೆ ಲಭಿಸಲು ಸಾಧ್ಯವಿಲ್ಲ ಎಂಬ ಶಂಕೆ ಮನದಲ್ಲಿ ಮೂಡಿದಾಗ ನಾನು ಇವಳನ್ನು ಸೃಷ್ಟಿಸಿದೆ. ಈಕೆ ಕೇವಲ ಸೌಂದರ್ಯ ಪುತ್ಥಳಿ ಅಲ್ಲ. ನಿನ್ನನ್ನು ಜೀವಂತವಾಗಿ ದಹಿಸಲು ಬರುತ್ತಿರುವ ಜ್ವಾಲಾಮುಖಿ ಅವಳು."

"ಬರಲಿ ದಿವಾಕರ್...ಆ ಜ್ವಾಲಾಪುತ್ರಿಯನ್ನು ಭೂಪುತ್ರಿಯನ್ನಾಗಿ

ಸುವೆ'' ಅವನ ಮಾತಿನ್ನೂ ಮುಗಿದಿರಲಿಲ್ಲ. ಬಿರುಗಾಳಿಯಂತೆ ಒಳ ಪ್ರವೇಶಿಸಿದಳು ಮಧು.

"ಬಾ ಮಧು ...ನಾನು ನಿನ್ನ ದಾರಿಯನ್ನೇ ನೋಡುತ್ತಾ ಇದ್ದೆ.'' ಮಧು ಯಾವ ಉತ್ತರವನ್ನೂ ಕೊಡದೆ ಬೆಂಕಿಯ ಮಡಿಲಾಗಿ ಹೇಮಂತ ನೆಡೆ ಧಾವಿಸಿದಳು.

ಅಶೋಕ, ಸುಷಮಾ, ರಾಮನಾಥ ಮೂವರೂ ಒಂದೇ ಬಾರಿ ರಿವಾಲ್ವರ್‌ನಿಂದ ಅವಳ ಮೇಲೆ ಗುಂಡಿನ ಮಳೆ ಕರೆದರೂ ಅದರಿಂದಾವ ಪರಿಣಾಮವಾಗಲಿಲ್ಲ. ಸುಷಮಾ ರಿವಾಲ್ವರಿನಿಂದ ಸಿಡಿದ ಪ್ರತಿಯೊಂದೂ ಗುಂಡುಗಳು ಅವಳ ಬಲ ಎದೆಯ ಮೇಲ್ಭಾಗದಲ್ಲಿ ನಾಟಿದರೂ ಅವಳ ಮೇಲೆ ಯಾವ ಪರಿಣಾಮವೂ ಆಗದಿದ್ದಾಗ ಆಕೆ ಅಪ್ರತಿಭಳಾಗಿ ಹೇಮಂತನೆಡೆ ನೋಡಿದಳು. ಹೇಮಂತ ಸಹ ವಿಚಲಿತನಾದ. ಅವನಿಗೆ ತಿಳಿದಂತೆ ಯಮದೂತರ ಜೀವ ಅವರ ಬಲ ಎದೆಯ ಮೇಲ್ಭಾಗದಲ್ಲಿದ್ದ ರಂಧ್ರದಲ್ಲಿತ್ತು. ಅದರಂತೆಯೇ ಅಲ್ಲಿ ಗುಂಡು ತಾಗುತ್ತಲೂ ಅವರು ತಮ್ಮ ಅಸ್ತಿತ್ವ ಕಳೆದುಕೊಂಡು ಸಾವಿನ ಮಡಿಲಲ್ಲಿ ಹಾಯಾಗಿ ನಿದ್ರಿಸುತ್ತಿದ್ದರು. ಆದರೆ ಈಗ? ಮಧುವಿನ ಪ್ರತಿರೂಪದ ಮೇಲೆ, ಅದೇ ಸ್ಥಳದಲ್ಲಿ ನಾಟಿದ ಗುಂಡುಗಳು ಯಾವ ಪರಿಣಾಮವನ್ನೂ ಮಾಡದೇ ಉಸುಕಿನಂತೆ ಕೆಳಗುರುಳತೊಡಗಿದ್ದವು.

ದಿವಾಕರ ಅಟ್ಟಹಾಸಮಾಡಿ ನಕ್ಕು ನುಡಿದ, "ಹೇಮಂತ ನಾನು ನಿನಗೆ ಮೊದಲೇ ಹೇಳಿರಲಿಲ್ಲವೇ ? ಇವಳು ಜ್ವಾಲಾಪುತ್ರಿ. ನಿನ್ನನ್ನು ಭಸ್ಮ ಮಾಡಲು ಬರುತ್ತಾಳೆಂದು. ಅನುಭವಿಸು. ಚೆನ್ನಾಗಿ ಅನುಭವಿಸು..."

''ಎಲ್ಲರೂ ದೂರ ಸರಿಯಿರಿ, ಮರೆಯಾಗಿ ನಿಲ್ಲಿ, ನನ್ನ ಇವಳ ಮಧ್ಯ ಯಾರೂ ಬರಬೇಡಿ....ಬೇಗ"

"ಮೇಜರ್...." ಸುಷಮಾ ಕೂಗಿಕೊಂಡಳು ಗಾಯಗೊಂಡ ಪಕ್ಷಿಯಂತೆ.

"ಸುಷಮಾ, ದಯವಿಟ್ಟು ಎಲ್ಲರನ್ನೂ ಸುರಕ್ಷಿತ ಸ್ಥಾನ ಸೇರಿಸು. ನನ್ನಿಂದಾಗಿ ಇವರಾರ ಪ್ರಾಣಕ್ಕೂ ಹಾನಿಯಾಗಬಾರದು...ನೀನೂ ಸಹ ಮರೆಯಾಗು....ಬೇಗ...."

ವಿವಶಳಾದ ಸುಷಮಾ ಅಶೋಕನ ಸಹಾಯದೊಂದಿಗೆ ಎಲ್ಲರನ್ನೂ ಹಿಂದೆ ಸರಿಸಿದಳು. ಅವರೆಲ್ಲ ಸುರಕ್ಷಿತ ಸ್ಥಾನ ಸೇರಿ ಅಲ್ಲಿಂದಲೇ ಇವರು

ತಮ್ಮ ಮುಂದೆ ನಡೆಯುತ್ತಿದ್ದ ಭೀಕರ ಕಾಂಡ ನಿರೀಕ್ಷಿಸತೊಡಗಿದರು.

ರಿವಾಲ್ವರ್ ಹಿಡಿದ ಹೇಮಂತನ ಬಲ ಹಸ್ತ ಮೇಲೆದ್ದಿತು. ಆತ ಗುರಿ ನೋಡಿ ಅವಳ ಬಲ ಎದೆಯ ಮೇಲೆ ಎರಡು ಬೆರಳು ಅಂತರದಲ್ಲಿ ರಿವಾಲ್ವರ್‌ನಲ್ಲಿದ್ದ ಎಂಟೂ ಗುಂಡುಗಳನ್ನು ಒಂದರ ಹಿಂದೆ ಒಂದರಂತೆ ಹಾರಿಸಿದ. ಆ ಎಲ್ಲ ಗುಂಡುಗಳು ಆತ್ಮ ಸಮರ್ಪಣೆ ಮಾಡಿಕೊಂಡರೂ ಮಧು ಹಾಗೇ ನಿಂತಿದ್ದಳು ಕಣ್ಣಲ್ಲಿ ಬೆಂಕಿ ಕಾರುತ್ತ.

ಹೇಮಂತನ ರಿವಾಲ್ವರ್ ಖಾಲಿಯಾಗಿತ್ತು. ಖಾಲಿಯಾಗದಿದ್ದರೂ.... ಇನ್ನೂ ಗುಂಡುಗಳಿದ್ದರೂ ಏನೂ ಮಾಡುವಂತಿರಲಿಲ್ಲ. ರಿವಾಲ್ವರ್ ಚೆಲ್ಲಿ ಆತ ಒಂದು ಕ್ಷಣ ಯೋಚಿಸಿದ. ಇವಳ ಜೀವನ್ಮರಣದ ರಂಧ್ರ ಬೇರೆಲ್ಲೋ ಇರಬೇಕು. ಅದನ್ನು ಶೋಧಿಸಿದರೆ ಮಾತ್ರ ಈಕೆಗೆ ಸಾವು. ಇಲ್ಲದಿದ್ದರೆ ಇವಳೆದುರು ಇದ್ದವರಿಗೆ ಸಾವು....

ಮಧು ತನ್ನ ಬಲಗೈಯನ್ನು ತನ್ನ ಎಡಸ್ತನವಿರುವ ಕುಪ್ಪಸದ ಭಾಗ ದಲ್ಲಿ ಕೈಹಾಕಿ ಅಲ್ಲಿದ್ದ ಪುಟ್ಟ ವಿಚಿತ್ರವಾದ ರಿವಾಲ್ವರ್ ಹೊರತೆಗೆದಳು. ಹೇಮಂತ ಎಚ್ಚೆತ್ತು ಅವಳನ್ನೆ ಏಕಾಗ್ರತೆಯಿಂದ ದಿಟ್ಟಿಸತೊಡಗಿದ. ಅವನೆಡೆ ನೆಟ್ಟ ದೃಷ್ಟಿ ಬೀರಿದ ಆಕೆ ರಿವಾಲ್ವರ್‌ದ ಮೇಲಿದ್ದ ಬಿಳಿ ಗುಂಡಿ ಅದುಮಿ ದಳು. ಭಗ್...ಬಗ್.... ಬುರ್ ಎಂದು ನೀಲವರ್ಣದ ಜ್ವಾಲೆಯೊಂದು ಅವನೆಡೆ ಹಾರಿ ಬಂದಿತು. ಅದು ಸಮೀಪಿಸುತ್ತಿರುವಂತೆಯೇ ಮೇಜರ್ ಎಡಕ್ಕೆ ನೆಗೆದಿದ್ದ. ಅವನ ಪಕ್ಕದಲ್ಲೇ ಹಾಯ್ದು ಹೋದ ಬೆಂಕಿಯುಂಡೆ ಮೇಜಿಗೆ ತಾಗಿ ಅದು ಪುರಪುರನೆ ಸುಡಲಾರಂಭಿಸಿತು. ಹೀಗೆಯೇ ಮೂರು ನಾಲ್ಕು ಜ್ವಾಲೆಯ ಗುಂಡುಗಳು ಹೇಮಂತನನ್ನು ದಹಿಸಲು ಬಂದು ಬೇರೆ ಬೇರೆ ಕಡೆ ಬೆಂಕಿಯುಗುಳಲಾರಂಭಿಸಿದವು. ಹೇಮಂತ ಅತ್ತಿತ್ತ ನೆಗೆಯುತ್ತ ಅವಳ ಹಿಂದೆ ಬಂದವನು ಅವಳು ಹೊರಳುವ ಮೊದಲೇ ಅವಳ ಮೇಲೆ ಹಿಂದಿನಿಂದ ಆಕ್ರಮಣ ಮಾಡಿದ. ಅವಳ ನೀಳವಾದ ಕುತ್ತಿಗೆ ಅವನ ಬಲಗೈ ಇಕ್ಕಳದಲ್ಲಿ ಸಿಲುಕಿದರೆ ಎಡಗೈ ಹೊಟ್ಟೆಯನ್ನು ಸುತ್ತುವರೆದು ಕಂಕುಳ ಭದ್ರವಾಗಿ ಹಿಡಿಯಿತು. ಅವಳಿಗೆ ಉಸಿರು ಸಿಕ್ಕಿಸಿ ಸಾಯುವಂತೆ ಮಾಡಬೇಕೆಂದಾತ ಯೋಚಿಸಿದ್ದ. ಮರುಕ್ಷಣ ನೆನಪಾಯಿತು. ಅವಳಿಗೆ ಉಸಿ ರಾಟದ ಅವಶ್ಯಕತೆಯೇ ಇಲ್ಲವೆಂದು. ಸರಿ ಹಾಗಾದರೆ ಗೋಣನ್ನೇ ಮುರಿದು ಚೆಲ್ಲಿದರಾಯ್ತು ಎಂದು ಯೋಚಿಸುತ್ತಿದ್ದಂತೆ ಆಕೆ ಬಿಕ್ಕ ತೊಡಗಿದಳು. ನರಳತೊಡಗಿದಳು. ಅವನಿನ್ನೂ ಕುತ್ತಿಗೆ ಹಿಚುಕಿರಲಿಲ್ಲ. ಈ ರೀತಿ ಆಗಬೇಕಾದರೆ ಬೇರೇನೋ ಕಾರಣ ಎಂದಾತ ಯೋಚಿಸುತ್ತಿರುವಂತೆ

ನೆನಪಾಯಿತು. ಅವನ ಎಡಗೈ ಅವಳ ಹೊಕ್ಕುಳನ್ನು ಬಲವಾಗಿ ಅಮುಕಿ ಹಿಡಿದಿತ್ತು. ಹಾಗಾದರೆ....ಹಾಗಾದರೆ ... ಅವಳ ಜೀವವಿರುವದು ಹೊಕ್ಕುಳಲ್ಲಿ ಬಲಎದೆಯ ಮೇಲ್ಭಾಗದಲ್ಲಲ್ಲ. ಆನಂದದಿಂದ ಅವನ ಕಣ್ಣುಗಳರಳಿದವು. ಅವಳು ನಿಶ್ಶಕ್ತಿಯಿಂದ ಬಳಲುತ್ತಿರುವಾಗಲೇ ಅವಳ ಕೈಯಲ್ಲಿದ್ದ ರಿವಾಲ್ವರ್ ಕಸಿದುಕೊಂಡ ಹೇಮಂತ ಅವಳನ್ನು ದೂರ ತಳ್ಳಿದ. ಆಕೆ ಹೆಣ್ಣು ಸಿಂಹದಂತೆ ಕೆರಳಿ ಅವನತ್ತ ಹೊರಳಿದಳು. ಅದೇ ಸುಅವಸರಕ್ಕಾಗಿ ಕಾಯ್ದಿದ್ದ ಹೇಮಂತ ಅವಳದೇ ರಿವಾಲ್ವರ್‌ನ ಮುಖವನ್ನು ಅವಳ ಹೊಕ್ಕುಳಿನತ್ತ ಹೊರಳಿಸಿದ.

"ಗುಡ್‌ಬಾಯ್ ನಂಬರ್ ಫರ್ಟೀನ್....ಮಧು ..."

"ನೋ....ನೋ.... ಹೇಮಂತ್ ಬೇಡ ನನ್ನ ತಪಸ್ಸನ್ನು ಈ ರೀತಿ ಹಾಳುಮಾಡಬೇಡ" ಕೂಗಿಕೊಂಡ ದಿವಾಕರ.

ಅವನೆಡೆ ನೋಡಿ ತಾತ್ಸಾರದ ದೃಷ್ಟಿ ಬೀರಿದ ಹೇಮಂತ. "ದಿವಾಕರ ನಿನ್ನಂಥ ಪ್ರತಿಭಾನ್ವಿತ ವಿಜ್ಞಾನಿಗಳ ತಪ್ಪುಹೆಜ್ಜೆಯನ್ನು ಸರಿಪಡಿಸಲು ನನ್ನಂಥ ಹೇಮಂತ ಯಾವಾಗಲೂ ಸಿದ್ಧ ಎಂಬುದನ್ನು ಮರೆಯದಿರು. ಇಂದು ನಿನ್ನೆದುರಿಗೆ ನಿನ್ನಂಥ ದೇಶದ್ರೋಹಿಯ ತಪಸ್ಸನ್ನು ಭಂಗಗೊಳಿಸಿ ಮತ್ತೊಮ್ಮೆ ನಿಮ್ಮಂಥ ದೇಶದ್ರೋಹಿಗಳ, ಸ್ವಾರ್ಥ ಸಾಧಕರ ಕಪಿಮುಷ್ಟಿಯಿಂದ ಭಾರತವನ್ನುಳಿಸುತ್ತೇನೆ. ಅದರೊಂದಿಗೆ ಭಾರತದತ್ತ ತಮ್ಮ ಕಲುಷಿತ ದೃಷ್ಟಿಬೀರಿ ಈ ಪವಿತ್ರ ನಾಡನ್ನು ತಮ್ಮ ಪಾದಾಕ್ರಾಂತ ಮಾಡಿಕೊಳ್ಳಬೇಕೆಂದು ಯೋಚಿಸುವ ದುಷ್ಟಶಕ್ತಿಗಳನ್ನು ಎಚ್ಚರಿಸುತ್ತೇನೆ."

ವಿಕಾರ ಕಂಠದಲ್ಲಿ ಕಿರುಚುತ್ತಾ ತನ್ನತ್ತ ಬಂದ ಮಧುವಿನೆಡೆ ಏಕಾಗ್ರತೆಯಿಂದ ನೋಡಿದ ಹೇಮಂತ. ಅವನ ಬೆರಳು ಬಿಳಿ ಗುಂಡಿ ಅದುಮುತ್ತಿದ್ದಂತೆ ಘೋಷಣೆ ಮಾಡಿದ. "ಜೈ ಭಾರತ....ನನ್ನ ಭಾರತ ಮಹಾನ್ ದೇಶ"

ರಿವಾಲ್ವರಿನಿಂದ ಹೊರಟ ಬೆಂಕಿ ಗುಂಡು ಮಧುವಿನ ಹೊಕ್ಕುಳಿಗೆ ತಾಗುತ್ತಿದ್ದಂತೆ ಚೀತ್ಕರಿಸಿದಳು. ಎಲ್ಲರೂ ನೋಡನೋಡುತ್ತಿದ್ದಂತೆ ಅವಳ ತಲೆ ಮಧ್ಯಭಾಗದಲ್ಲಿ ಹೂಬತ್ತಿಯ ಮದ್ದಿನಂತೆ ಸೀಳಿ ಅದರಿಂದ ಬೆಂಕಿ ಜ್ವಾಲೆ ಹೊರಬಂದಿತು. ತಲೆ, ಮುಖ, ದೇಹ ಕರ್ಪೂರದಂತೆ ಸುಡಲಾರಂಭಿಸಿದಾಗ ದಿವಾಕರ ನೆಲಕ್ಕೆ ಕುಸಿದ.

ಅಡಗಿ ಕುಳಿತವರೆಲ್ಲ ಹೇಮಂತನೆಡೆ ಧಾವಿಸಿ ಅಭಿನಂದನೆ ಸಲ್ಲಿಸಿದರು.

ಹೇಮಂತ ಸುಷಮಾಳತ್ತ ನೋಡಿದಾಗ ಅವಳ ಕಣ್ಣುಗಳು ಅವರೆಲ್ಲರಿಗಿಂತ ಮೊದಲೇ ಅವನನ್ನು ಅಭಿನಂದಿಸಿದವು.

೧೬

ಕೌಮುದನ್‌ರಿಗೆ ಎಚ್ಚರಿಕೆಯೊಂದಿಗೆ ಕ್ಷಮಾಧಾನ ದೊರೆಯಿತು. ಹೇಮಂತ ಅವರ ಬಗ್ಗೆ ಬಲವಾಗಿ ವಾದಿಸಿದ್ದ. ಅವನ ಹೇಳಿಕೆಯೇ ಅವರಿಗೆ ಜೀವದಾನ ನೀಡಿತು. ಕುಮುದನ್ ಮಧುವಿನೊಂದಿಗೆ ಹೇಮಂತನನ್ನು ಕಾಣಲು ಬಂದಾಗ ಅವರ ಬಾಯಿಯಿಂದ ಮಾತೇ ಹೊರಡಲಿಲ್ಲ. ಹೃದಯ ಭಾರವಾಗಿತ್ತು, ಮನ ಮೂಕವಾಗಿತ್ತು.

ಮಧುವಿನ ಕಣ್ಣುಗಳಂತೂ ನೀರಿನ ಕೊಡಗಳಾಗಿದ್ದವು.

"ಮೇಜರ್ ನಿಮ್ಮ ಉಪಕಾರ ನಾನೆಂದೂ ಮರೆಯಲಾರೆ. ದಾರಿ ತಪ್ಪಿದ ನನ್ನನ್ನು ನೀವು ಪುನಃ ಸರಿ ದಾರಿಗೆ ತಂದಿರಿ."

ಹೇಮಂತ ಯಾವ ಮಾತೂ ಆಡಲಿಲ್ಲ.

ಮಧು ಕೇವಲ ಅವನೆಡೆ ಒಂದು ದೃಷ್ಟಿಬೀರಿ ನುಡಿದಳು. ''ಹೇಮಂತ ನಿಮ್ಮಿಂದ ನಾನೇನು ಪಡೆದೆ.... ನೀವು ನನಗೇನು ನೀಡಿದಿರಿ ಎಂಬುದು ನಮ್ಮಿಬ್ಬರಿಗೇ ಗೊತ್ತು. ಅದೇ ನನ್ನ ಜೀವನದ ಸರ್ವಸ್ವ. ನನ್ನ ದೇಹದಲ್ಲಿ ಕೊನೆ ಉಸಿರಿರುವ ವರೆಗೂ ನಾನದನ್ನು ಮತ್ತೊಬ್ಬರ ನೆರಳು ಸಹ ಸೋಂಕದಂತೆ ಭದ್ರವಾಗಿ ನೋಡಿಕೊಳ್ಳುತ್ತೇನೆ... ವಂದನೆಗಳು."

ಅವರಿಬ್ಬರ ಮಾತು ಕೇಳುತ್ತಿದ್ದಂತೆ ಸುಷಮಾ ಹೇಮಂತನೆಡೆ ನೋಡಿದಳು.

ಆತ ತಲೆ ಬಾಗಿಸಿ ಅವಳನ್ನು ನೋಡಿ ನಿಧಾನವಾಗಿ ನುಡಿದ, "ಸುಷಮಾ... ನನ್ನ ಕ್ಷಮಿಸು... ನಾ ನಿನ್ನ ಅಪರಾಧಿ"

"ಹಾಗೆನ್ನಬೇಡಿ ಹೇಮಂತ್.... ನೀವು ವಿಷಯಲಂಪಟರಲ್ಲ. ಅಹಲ್ಯೆಯನ್ನು ಉದ್ಧರಿಸುವ ರಾಮನಂತೆ ನೀವು ದುಃಖಿತರನ್ನು ಉದ್ಧರಿಸಿದಾಗ ನನಗೆ ನಿಮ್ಮ ಬಗ್ಗೆ ಹೆಮ್ಮೆ ಎನಿಸುತ್ತಲಿದೆ. ನಿಮ್ಮನ್ನು ಪಡೆದ ನಾನು ನಿಜವಾಗಿಯೂ ಭಾಗ್ಯಶಾಲಿ."

ಭಾರತೀಯ ನಾರಿಯನ್ನು ಪ್ರತಿನಿಧಿಸುವಂಥ ಮಾತು ಸುಷಮಾಳ ಬಾಯಿಂದ ಬಂದಾಗ ಹೇಮಂತ ಪುಲಕಿತನಾದ. ತಾನೆಂಥ ಭಾಗ್ಯಶಾಲಿ ಎಂದು...

○

## ಸಾಹಿತ್ಯ ಪ್ರಕಾಶನದ ಪ್ರಕಟನೆಗಳು

### ಯಂಡಮೂರಿ ವೀರೇಂದ್ರನಾಥ (ಅನು: ಸರಿತಾ ಜ್ಞಾನಾನಂದ)

ಥ್ರಿಲ್ಲರ್
ಕರಿಗಂಬಳಿಯಲ್ಲಿ ಮಿಡಿನಾಗ
ಅಷ್ಟಾವಕ್ರ-I
ಅಷ್ಟಾವಕ್ರ-II
ಮರಣ ಮೃದಂಗ
ಸ್ವರಬೇತಾಳ
ರಾಕ್ಷಸ
ಬೇಡ ಕೃಷ್ಣ ರಂಗಿನಾಟ (ಅನು: ರಾಜಾ ಚೆಂಡೂರ್)
ಅಂತಿಮ ಹೋರಾಟ " "

### ಕೆ. ಟಿ. ಗಟ್ಟಿ

ಅಭಿಚಾರ
ಸುಖಾಂತ
ಕರ್ಮಣ್ಯೇವಾಧಿಕಾರಸ್ತೇ
ಅಬ್ರಾಹ್ಮಣ
ಗ್ಲಾನಿ

### ವಿ. ಸ. ಖಾಂಡೇಕರ್ (ಅನು: ಸುಶೀಲಾ ಕೊಪ್ಪರ್)

ಅಶ್ರು

### ಸುದರ್ಶನ ದೇಸಾಯಿ

ಬೆಂಕಿಯ ಮಡಿಲಲ್ಲಿ ಮೇಜರ್ ಹೇಮಂತ
ಯಮದೂತರು
ಎಂಟೆದೆ ಬಂಟ
ವಿಚಿತ್ರ ಅಪರಾಧಿ

### ವಿಜಯ ಸಾಸನೂರ

ಇಂದ್ರಜಾಲ
ಶಬ್ದವೇಧಿ

### ಮಲ್ಲಾದಿ ವೆಂಕಟಕೃಷ್ಣಮೂರ್ತಿ (ಅನು: ರಾಜಾ ಚೆಂಡೂರ್)

ಪ್ರೇಮ ಸಂದೇಶ

### ಶಂ. ಬಾ. ಜೋಶಿ

ಮಹಾರಾಷ್ಟ್ರದ ಮೂಲ
ಕಣ್ಮರೆಯಾದ ಕನ್ನಡ
ಸಾಂಸ್ಕೃತಿಕ ಮೂಲದಲ್ಲಿನ ತಾತ್ತ್ವಿಕ ಚಿಂತನಗಳು

### ಜನಪ್ರಿಯ ಕೃತಿ

ಸುಂದರ ರಾಮಾಯಣ

"ಮೇಜರ್ ಹೇಮಂತ ಬಂಗಲೆಯ ಗೇಟು ತೆರೆದು ಒಳಗೆ ಕಾಲಿಡುತ್ತಿದ್ದಂತೆ, ಭಯಂಕರವಾಗಿ ಗರ್ಜಿಸುತ್ತ ಅವನ ಮೇಲೆ ಎರಡು ಭಯಾನಕ ನಾಯಿಗಳು ಎರಗಿದವು. ಒಂದೇ ಒಂದು ನಿಮಿಷ ಸಾಕು; ಆ ನಾಯಿಗಳಿಗೆ ಮೇಜರ್‌ನನ್ನು ಸೀಳಿ ಒಗೆಯಲು ...

"ಹೇಮಂತನ ತುಟಿಗಳು ಗೋಲವಾದವು. ಮಧುರವಾದ ಸಿಳ್ಳು ಹೊರಡುತ್ತಿದ್ದಂತೆ ರಾಕ್ಷಸಾಕಾರದ ನಾಯಿಗಳು ಬೆಕ್ಕಿನ ಮರಿಗಳಂತಾಗಿ ಅವನ ಕಾಲ ಬಳಿ ಸುಳಿದಾಡತೊಡಗಿದವು.

"ಹೇಮಂತ ತಲೆಯೆತ್ತಿ ಬಂಗಲೆಯ ಮಹಡಿಯೆಡೆ ನೋಡಿದ. ರೇಶಿಮೆಯ ಪರದೆಯ ಹಿಂದಿದ್ದ ಕಪ್ಪು ಚಿಗರೆ ಕಣ್‌ಗಳು ಸರಕ್‌ನೆ ಮರೆಯಾದವು......"

ಕನ್ನಡದ ಇಯಾನ್ ಫ್ಲೆಮಿಂಗ್ ಸುದರ್ಶನ್ ದೇಸಾಯಿ ಅವರಿಂದ ಮೂಡಿ ಬಂದ ಕನ್ನಡದ ಜೇಮ್ಸ್ ಬಾಂಡ್ ಮೇಜರ್ ಹೇಮಂತನ:

# "ಯಮದೂತರು"

**ನಿಮ್ಮ ಉಸಿರು ಬಿಗಿ ಹಿಡಿಸಿ ಓದಿಸಿಕೊಳ್ಳುವದರಲ್ಲಿ ಸಂದೇಹವಿಲ್ಲ!**